ದೇವರ ಹೆಂಡತಿ

ಸೂರ್ಯನಾರಾಯಣ ಚಡಗ

ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟೆ ಚೌಕ, ಬೆಂಗಳೂರು-560053

ಯಣ ಚಡಗ

DEVARA HENDAHTI–A Novel by Suryanarayana Chadaga, Rublished by Rajalakshmi Prakashana, Balepet Square, Bangalore-560053. Second Edition 1975, Pages 264, Price 6-00

ಮೊದಲ ಮುದ್ರಣ ೧೯೬೫
ಎರಡನೆಯ ಮುದ್ರಣ ೧೯೭೫

ಬೆಲೆ 6.00

ಅಧಿಕೃತ ಮಾರಾಟಗಾರರು

ಗೀತಾ ಏಜನ್ಸೀಸ್

ಬಳೇಪೇಟೆ ಚೌಕ, ಬೆಂಗಳೂರು–560053

ಮುದ್ರಣ
ಡಿ. ಎಸ್. ಜಿ. ಗುಪ್ತ
ದವಲತ್ ಪ್ರಿಂಟರ್ಸ್,
ಮಲ್ಲೇಶ್ವರಂ ಬೆಂಗಳೂರು-೩
ದೂರವಾಣಿ ೩೬೪೫೦

೧೯೬೫ ರಲ್ಲಿ ದೇವರ ಹೆಂಡತಿ ಕಾದಂಬರಿಯನ್ನು ಪ್ರಕಟಿಸಿದ ಗೀತಾ ಪ್ರಕಾಶನದ ಒಡೆಯರಾದ ಶ್ರೀ ಕೆ. ರಾಮಚಂದ್ರಯ್ಯ ಅವರಿಗೆ....

ಇದೀಗ ಈ ಕಾದಂಬರಿಯ ಎರಡನೆಯ ಆವೃತ್ತಿಯನ್ನು ಪ್ರಕಟಿಸಿದ ರಾಜಲಕ್ಷ್ಮೀ ಪ್ರಕಾಶನದ ಶ್ರೀ ಕೆ. ಆರ್. ಶ್ರೀನಿವಾಸಮೂರ್ತಿ ಅವರಿಗೆ....

ಗ್ರಂಥವನ್ನು ಮುದ್ರಿಸಿದ ದವಲತ್ ಪ್ರಿಂಟರ್ಸ್‌ನ ಶ್ರೀ ಡಿ. ಎಸ್. ಜೆ. ಗುಪ್ತ ಅವರಿಗೆ....

ಕನ್ನಡ ಸಹೃದಯ ಓದುಗರಿಗೆ

ನಾನು ಋಣಿಯಾಗಿದ್ದೇನೆ.

ಸೂರ್ಯನಾರಾಯಣ ಚಡಗ

ಅರ್ಪಣೆ

ನನ್ನ ತಂದೆಗೆ

೧

ಶ್ರಾವಣ ಸೋಮವಾರ....ಸಂಕ್ರಮಣದ ಪುಣ್ಯಕಾಲವಾದ್ದರಿಂದ ಶಿವ ದೇವಾಲಯದ ಮಹಾಮಂಗಳಾರತಿ ಬೇಗ ಮುಗಿದಿತ್ತು...ನೀಲಾಂಜನದ ಪವಿತ್ರ ಧೂಮದಲ್ಲಿ ಭಕ್ತರು ಅಂಗೈ ಆಡಿಸಿದರು....ಅರ್ಚಕ ಉದ್ಧರಣೆಯಿಂದ ತೀರ್ಥವನ್ನು ಹಂಚಿ....ಪಂಚಕಜ್ಜಾಯದ ವಿನಿಯೋಗ ಆಗುವಾಗಲೇ ರಾತ್ರಿ ನಾಲ್ಕುಗಳಿಗೆ ಕಳೆದುಹೋಗಿತ್ತು. ಆರಂಭದ ಸೋಣೆ ಆರತಿಯ ವೈಭವವನ್ನು ನೋಡಲು ಕ್ಷೇತ್ರದ ಸುತ್ತಿನ ಬ್ರಾಹ್ಮಣರೆಲ್ಲರೂ ದೇವಾಲಯಕ್ಕೆ ಬಂದಿದ್ದರು. ಬಸವನ ಕಲ್ಲಿನ ಹಿಂದಿದ್ದ ನಗಾರಿಯ ಸದ್ದು ಜನರ ಕಿವಿ ಮುಟ್ಟುತ್ತಿದ್ದಂತೆಯೇ ಧ್ವಜ ಕಟ್ಟೆಯ ಮೂಲೆಯಿಂದ ಶ್ರುತಿವಾದ್ಯದ ನಾದದೊಂದಿಗೆ ಬಲಿವಿಹಗ್ರದ ಮುಂದಿದ್ದ ಗಂಟೆ ಬಾರಿಸತೊಡಗಿತು. ಮಧ್ಯಾಹ್ನ ರುದ್ರಾಭಿಷೇಕ, ಹೋಮ ಪಾರಾಯಣಗಳಲ್ಲದೆ ಐತಾಳರ ಸಾವಿರ ಎಳೆನೀರಿನ ಅಭಿಷೇಕ....ಮಂಜರ ಬ್ರಾಹ್ಮಣ ಅನ್ನಸಂತರ್ಪಣೆ.... ಅಚ್ಚುಯ್ಯನ ಕರ್ಪೂರ ಸೇವೆ....ಸಂಜೆ ದೇವಡಿಗ ಸಂಕನ ಹಳಗಸೇವೆ....ವಿಶೇಷ ಬಲಿಪೂಜೆ....ನೂರೆಂಟು ಆರತಿಯ ರಂಗಪೂಜೆ ....ದೇವರ ಪೀಠದಿಂದ ಧ್ವಜಕಟ್ಟೆಯತನಕ ಸಾಲಾಗಿ ಇಟ್ಟ ತೊಳೆದ ಹೊಳೆಯುವ ಹರಿವಾಣದಲ್ಲಿ ತುಂಬಿದ ಅರಳು ಪಂಚಕಜ್ಜಾಯದ ನೈವೇದ್ಯ.... ನಡುವೆ ಬಂಗಾರ ಬಣ್ಣದ ಬಾಳೆಯ ಹಣ್ಣುಗಳು....ಮೇಲೆ ಒಪ್ಪವಾಗಿ ಅಲಂಕರಿಸಿದ ಮಲ್ಲಿಗೆಯ ದಿಂಡೆಗಳು.... ಅಲ್ಲೊಂದು ಇಲ್ಲೊಂದು ಹಚ್ಚಿಟ್ಟ ಗಂಧದ ಕಡ್ಡಿಗಳು.... ಇವುಗಳ ಶೃಂಗಾರ ಸಡಗರವನ್ನು ನೋಡಿ, ಶಿವ

ಅನುಗ್ರಹಕ್ಕೆ ಪಾತ್ರರಾಗಿ... ಕಣ್ತುಂಬ ನೀಲಾಂಜನದ ಹೊಗೆಯಲ್ಲಿ ಆಡಿಸಿದ ಅಂಗೈ ಒತ್ತಿಕೊಂಡು, ತೀರ್ಥ ಸ್ವೀಕರಿಸಿ, ಶ್ರೀಗಂಧವನ್ನು ಹಣೆಗೆ ತೀಡಿ, ಬೊಗಸೆ ತುಂಬಾ ಪಂಚಕಜ್ಜಾಯವನ್ನು ಹಿಡಿದು ಭಕ್ತರು ಗುಡಿಯಿಂದ ಮನೆಗೆ ಹೊರಟಿದ್ದರು. ಅಂದಿನ ಪೂಜೆಯಲ್ಲಿ ಹೆಚ್ಚಿನ ಆಕರ್ಷಣೆಯಿತ್ತು. ಆ ದಿನದ ಪೂಜೆಯ ಹಕ್ಕು ನರಸನಿಗೆ ಸೇರಿತ್ತು. ಶ್ರಾವಣ ಸೋಮವಾರ ಎಂದೇ ಲಕ್ಷಣವಾಗಿ ವಿಭೂತಿ ಹಚ್ಚಿ.... ಹಣೆಯಲ್ಲಿ ಶ್ರೀಗಂಧದ ಅರ್ಧಚಂದ್ರ ವನ್ನಿಟ್ಟು....... ಕೊರಳಲ್ಲಿ ರುದ್ರಾಕ್ಷಿ ಮಾಲೆ ಹಾಕಿಕೊಂಡು ... ಹೊಸ ಯಜ್ಞೋಪವೀತದ ಮೇಲೆ ಅರೆ ಎದೆ ಕಾಣುವಂತೆ ಉತ್ತರೀಯವನ್ನು ಇಳಿಯ ಬಿಟ್ಟು.. ಗಂಭೀರ ಮುಖಮುದ್ರೆಯಿಂದ ನೂರೆಂಟು ಆರತಿಯನ್ನೆತ್ತಿದ್ದ. ಯದ್ವಾತದ್ವಾ ಮಂತ್ರ ಉಚ್ಚರಿಸುವ ಅವನ ವೈದಿಕ ವೃತಿಗೆ ಕ್ಷೇತ್ರದ ಬ್ರಾಹ್ಮಣರೇ ಅಸಮಾಧಾನ ತಾಳಿದ್ದರು. ವೇದಾಂತ ಸೂತ್ರದ ಬಗ್ಗೆ ಅವನಿ ಗೆಷ್ಟು ತಿಳಿದಿದೆಯೋ....ಬ್ರಹ್ಮಜ್ಞಾನ, ವಿಶ್ವದ ಮೂಲ, ನಾಶ, ಆತ್ಮ, ಅನಾತ್ಮ ಜ್ಞಾನದ ಬಗ್ಗೆ ತನಗೆ ಸಂಪೂರ್ಣ ಪರಿಜ್ಞಾನ ಇರುವುದಾಗಿಯೂ, ವೇದದ ಕೆಲವು ಅಧ್ಯಾಯಗಳು ತನಗೆ ಕಂಠಪಾಠ ಎಂದು ಅವನೇ ಹೇಳಿಕೊಳ್ಳುತ್ತಾನೆ. ತಂತ್ರಿಯವರು ಅವನ ಮಂತ್ರಕ್ಕೆ ಬೆರಗಾಗಿ ಕಿವಿ ಮುಚ್ಚಿಕೊಂಡಿದ್ದಾರೆ. ಬ್ರಹ್ಮ ಸೂತ್ರ, ಉಪನಿಷತ್ತಿನ ಬಗ್ಗೆ ಸಿಕ್ಕಾಪಟ್ಟೆ ವ್ಯಾಖ್ಯಾನಮಾಡಿದ ಸಂದರ್ಭಉಂಟು. ಅವನಿಗೆ ಸರಿಯಾಗಿ ಅಕ್ಷರಗಳ ಗುರುತು ಇರುವ ಬಗ್ಗೆ ಮಂಜರು ಸಂದೇಹ ವ್ಯಕ್ತಪಡಿಸಿದ್ದಾರೆ. ಆದರೆ ಆ ದಿನ ನರಸನನ್ನು ಕಂಡವರು 'ಪ್ರತ್ಯಕ್ಷ ಬ್ರಹ್ಮ ಸ್ವರೂಪಿ' ಎಂದೇ ಅವನ ಮುಂದೆ ನಿಂತು, ತೀರ್ಥಪ್ರಸಾದಕ್ಕಾಗಿ ಅಂಗೈ ಚಾಚಿ ದ್ದರು. ಅರ್ಚಕನ ಹಿಂದೆ ನಿಂತು, ಬೆಳ್ಳಿಕಟ್ಟಿನ ಚಾಮರ ಹಿಡಿದಿದ್ದ ಪದ್ಮಾ ವತಿಗೂ ದೇವರ ಸೇವೆಯಲ್ಲಿ ಅಧಿಕ ಬಕ್ತಿ. ದಿನವೆಲ್ಲಾ ಉಪೋಷಣ ಇದ್ದು... ಕಾಡವರ ಮನೆಯ ತೋಟದಿಂದ ಹೂಗಳನ್ನು ಕೊಯ್ದು ತಂದು....ನೂರೆಂಟು ಹೂಮಾಲೆ ಕಟ್ಟಿ.... ನೂರೆಂಟು ಆರತಿಗೆ ಬತ್ತಿ ಹೊಸೆದು ತನ್ನ ಪಾಲಿನ ಕರ್ತವ್ಯ ವನ್ನು ನೆರವೇರಿಸಿದ್ದಳು. ಮಹಾಮಂಗಳಾರತಿಗೆ ಕತ್ತಲಾಗುವ ಮುಂಚೆಯೇ ಚಾಮರವನ್ನು ಹಿಡಿದು ಗರ್ಭಗುಡಿಯ ಒಳ ಬಂದಳು. ಧರ್ಮಾವರದ ಸೀರೆ ಉಟ್ಟು ...ಅಂಗೈ ಅಗಲದ ಜರತಾರಿ ಪಟ್ಟಿಯಿರುವ ಕುಪ್ಪಸ ಹಾಕಿಕೊಂಡು.... ಕೊರಳಲ್ಲಿರುವ ಪವನು ಸರವನ್ನು ಸೆರಗಿನಮೇಲೆ ಇಳಿಸಿ.... ಸೊಂಟಕ್ಕೆ ಬೆಳ್ಳಿಯ

ಕಡಗ ಸುತ್ತಿ.... ಮುಡಿ ತುಂಬ ಹೂ ಮುಡಿದು.... ಕಿವಿಗೆ ಮುತ್ತಿನ ಮುಗುಳನ್ನು ಅಂದವಾಗಿ ಜೋಡಿಸಿ.. ದೇವರಿಗೆ ಕೈ ಮುಗಿದು ಚಾಮರ ಸೇವೆಗೆ ಆರಂಭಿಸಿದಳು. ನರಸನ ಕಣ್ಣು ಒಮ್ಮೆ ಪದ್ಮಾವತಿಯ ಮುಖವನ್ನೇ ದಿಟ್ಟಿಸಿತು. ಅವನ ಹೃದಯದಲ್ಲಿ ಹೊತ್ತಿಕೊಂಡಿದ್ದ ಮತ್ಸರದ ಕಿಚ್ಚು ದೇವರನ್ನು ಕಡೆಗಣಿಸಿತು. ಆರತಿಯ ಬೆಳಕಿನಲ್ಲಿ ಅವನು ಕಂಡದ್ದು ಪದ್ಮಾವತಿಯ ಸುಂದರ ರೂಪವನ್ನು. ಭಕ್ತರಿಗೆ ಕಂಡದ್ದು ಮಾತ್ರ ಶಿವಗ್ರಹ. ಆಡಳಿತ ಮೊಕ್ತೇಸರರಾದ ಕೋಟಿ ಐತಾಳರು ಯಥಾರ್ಥ ಭಕ್ತಿಯಿಂದ ಬಾಂಡದ ಎಣ್ಣೆಯನ್ನು ತೂಗು ದೀಪಗಳಿಗೆ ಸುರಿದು ಬೆರಳಿನಿಂದ ಬತ್ತಿಗಳನ್ನು ಮುಂದೆಮಾಡಿ ಪ್ರಕಾಶವನ್ನು ಹೆಚ್ಚಿಸುವುದರಲ್ಲಿ ಗಮನವಿಟ್ಟಿದ್ದರು.

ಪೂಜೆ ಮುಗಿಯಿತು. ನೀಲಾಂಜನವನ್ನೇ ಕಣ್ತುಂಬ ನೋಡಿದ ಪದ್ಮಾವತಿ ಚಾಮರವನ್ನು ಹಲಗೆಯ ಮೇಲಿಟ್ಟು. ಬಾಳೆಯ ಎಲೆ ಸರದಲ್ಲಿ ಪಂಚಕಜ್ಜಾಯವನ್ನು ಕಟ್ಟಿ ಸೆರಗಿನ ಮರೆಯಲ್ಲಿ ಸರಿಸಿ ಉಗ್ರಾಣಕ್ಕೆ ಬಂದು ಕೋಟಿ ಐತಾಳರಲ್ಲಿ "ಅಯ್ಯ... ನಾನು ಹೋಗುತ್ತೇನೆ" ಎಂದು ತನ್ನ ಮನೆಗೆ ಹೊರಟಳು. "ಆಗಲಿ... ಅರ್ಧ ಗಂಟೆ ಬಿಟ್ಟು ನಾನು ಬರುತ್ತೇನೆ. ಸಾಧ್ಯವಾದರೆ ಒಂದು ಲೋಟ ಹುಳಿಮಜ್ಜಿಗೆಗೆ ಉಪ್ಪು ಹಾಕಿ, ಇಂಗು ಸೇರಿಸಿ ನಿಂಬೆಹಣ್ಣು ಹಿಂಡಿ ಇಡು" ಎಂದರು ಐತಾಳರು.

ಎರಡು ಗಳಿಗೆಯ ಅನಂತರ ದೇವಾಲಯದಿಂದ ಭಕ್ತರೆಲ್ಲರೂ ನಿರ್ಗಮಿಸಿದ್ದರು.

ದೇವರ ನಂದಾದೀಪಕ್ಕೆ ಗಿಂಡಿಯ ಎಣ್ಣೆ ಸುರಿದು.... ಬತ್ತಿಯನ್ನು ಮುಂದೆ ಮಾಡಿ.... ಕೈಯಲ್ಲಿ ಪಂಚಪಾತ್ರೆ, ತೀರ್ಥದ ಕವಳಿಗೆ ಹಿಡಿದು ಅರ್ಚಕ ನರಸಪ್ಪಯ್ಯ ಗುಡಿಯ ಬಾಗಿಲನ್ನು ಮುಂದಕ್ಕೆಳೆದು, ಸುತ್ತಿನ ಕ್ಷೇತ್ರಪಾಲನ ದಾರಿಯಲ್ಲೇ ಮೂಡು ಬಾಗಿಲಿನಿಂದ ಮನೆಯ ಹಾದಿ ಹಿಡಿದ. ಕೊರಕಲಿನ ಹೊಂಡದಲ್ಲಿ ನರಸನ ಕಾಲು ಎಡವಿದರೂ ದಿಬ್ಬದ ಮರೆಯಲ್ಲಿ ನಿಂತು ಹತ್ತು ನಿಮಿಷ ಕಾಲ ಪದ್ಮಾವತಿಯ ಮನೆಯನ್ನೇ ನೋಡುತ್ತಾ ನಿಂತ. ಏನು ಕಂಡಿತೋ.... ಸರಸರ ಎಂದು ಸದ್ದು ಹುಟ್ಟಿಸುವ ದರಳೆಯ ಮೇಲೆ ಮೆಲ್ಲನೆ ಹೆಜ್ಜೆಯಿಡುತ್ತಾ ಪದ್ದಕ್ಕನ ಮನೆಗೆ ಎರಡು ಸುತ್ತು ಬಂದು ತರುವಾಯ ಬರಾಕಿನಿಂದ ಮನೆಗೆ ಹೋದ.

ಕೋಟೆ ಐತಾಳರು ಅಲಂಕರಿಸಿದ್ದ ದೇವರ ಒಡವೆಗಳನ್ನು ಉಗ್ರಾಣದ ಪೆಟ್ಟಿಗೆಯ ಒಳ ಸೇರಿಸಿ....ಕಾಣಿಕೆಯ ಡಬ್ಬದ ಬೀಗವನ್ನು ಒಮ್ಮೆ ಎಳೆದು ನೋಡಿ....ನಂದಾದೀಪದಲ್ಲಿರುವ ಎಣ್ಣೆಯನ್ನು ಗಮನಿಸಿ... ನಾಲ್ಕು ದಿಕ್ಕಿನ ಬಾಗಿಲನ್ನು ತಾವೇ ಮುಚ್ಚಿ....ಬೀಗದ ಕೈಗೊಂಚಲನ್ನು ಸೊಂಟದಲ್ಲಿ ಸಿಕ್ಕಿಸಿ, ಪದ್ಮಾವತಿಯ ಮನೆಗೆ ಬಂದರು.

"ಇಂದು ಶ್ರಾವಣ ಸೋಮವಾರ...ಉಪವಾಸ ವ್ರತ ಆಚರಿಸಿದ್ದೇನೆ. ದಿನವಿಡಿ ತೀರ್ಥ ಪ್ರಸಾದವನ್ನೇ ಆಹಾರವಾಗಿ ಸ್ವೀಕರಿಸಿದ್ದೇನೆ. ನನ್ನ ಕೊರಳಲ್ಲಿರುವ ಮಾಂಗಲ್ಯವನ್ನು ಕಟ್ಟಿದವನು ಶಿವ. ಈ ಒಂದು ದಿನ ಅವನ ಚಿಂತನೆಯಲ್ಲಿ ಕಳೆಯುತ್ತೇನೆ. ಅವನ ಸಾನ್ನಿಧ್ಯದಿಂದಲಾದರೂ ಈ ಜೀವ ಪುನಿತವಾಗಲಿ" ಎಂದು ಪದ್ಮಾವತಿ ತನ್ನ ಸ್ವಾಮಿಯ ಕಾಲಿಗೆ ಬಿದ್ದು ಕೇಳಿ ಕೊಂಡಳು. ಐತಾಳರಿಗೂ ಅದು ಸರಿಕಂಡಿತು. ಆ ಒಂದು ದಿನ ಪದ್ದುವಿನ ಸಂಪರ್ಕದಿಂದ ದೂರವಿರುವುದು ಯಥೋಚಿತವೆಂದು ಭಾವಿಸಿದರು. ಎರಡು ಲೋಟ ಹುಳಿಮಜ್ಜಿಗೆ ಕುಡಿದು ಪತ್ತಾಸಿನ ಮೇಲೆ ಕುಳಿತು ಒಂದು ಗಂಟೆ ಪಟ್ಟಾಂಗ ಹೊಡೆದು "ಬರುತ್ತೇನೆ ಪದ್ದಾ... ಬಾಗಿಲ ಅಗಣಿ ಹಾಕು" ಎಂದು ತಮ್ಮ ಮನೆಗೆ ಹೊರಟರು. ಆಗ ಗಂಟೆ ಹನ್ನೊಂದಾಗಿತ್ತು. ಪದ್ಮಾವತಿ ಚಿಮಣಿಯನ್ನು ಹಿಡಿದು ಮಲಗುವ ಕೋಣೆಗೆ ಬಂದಾಗ ಗೋಡೆಯಲ್ಲಿದ್ದ ಗವುಳಿ ಲೊಚಗುಟ್ಟಿತು. ಆಕೆಗೆ ನಿದ್ದೆಯ ಜೊಂಪು ಹಿಡಿದಿದ್ದರಿಂದ ಅಷ್ಟೊಂದು ಮನಸ್ಸಿಗೆ ತಂದುಕೊಂಡಿರಲಿಲ್ಲ. ಕಾರಣ ದೇಹ ಬಳಲಿತ್ತು. ಮನಸ್ಸು ಜಡವಾಗಿತ್ತು. ನೂರೆಂಟು ಆರತಿಗೆ ಬತ್ತಿ ಹೊಸೆದಿದ್ದಳು. ಹೊರೆ ಹೊರೆ ಹೂಮಾಲೆ ಕಟ್ಟಿದ್ದಳು. ದೀರ್ಘಕಾಲದ ತನಕ ಚಾಮರ ಬೀಸಿ ರಟ್ಟೆ ಸೋತಿದ್ದುವು. ಅರಳು ಪಂಚಕಜ್ಜಾಯವನ್ನೇ ತಿಂದು....ಐತಾಳರು ಕೊಟ್ಟಿದ್ದ ಬಾಳೆಯ ಹಣ್ಣನ್ನು ಹಾಗೇ ನುಂಗಿ ಹಾಸಿಗೆ ಬಿಡಿಸಿದಳು. ದೀಪ ಆರಿಸಿ ದಾವಳಿಯನ್ನು ಮೈಮೇಲೆ ಎಳೆದುಕೊಂಡಾಗ ತುಂಬಾ ಹಿತವೆನಿಸಿತು.

ಕೆರೆಕಟ್ಟೆಯ ಗಣಪತಿ ಗುಡಿಯ ಎಡದಲ್ಲೆ ಸುಬ್ರಾಯ ಅಡಿಗಳ ಮನೆ. ಅಂದು ಆಣೆಗುಡ್ಡೆಗೆ ದೇವರ ದರ್ಶನಕ್ಕೆ ಹೋಗಿದ್ದವರು, ಬರುವಾಗಲೇ ತುಂಬಾ ಹೊತ್ತಾಗಿತ್ತು. ಹಣ್ಣುಕಾಯಿ ಮಾಡಿಸಿಕೊಂಡು ಮೆಟ್ಟಲು ಇಳಿಯುತ್ತಿದ್ದಾಗ ಮಾಗಣೆ ವೆಂಕಟರಾಯರು ಅಡಿಗಳನ್ನು ಕಂಡು "ಇಂದು ನನ್ನ ನೂರು

ಕಾಯಿ ಗಣಪತಿಯ ಮುಂದೆ ಮುಡಿ ಅಕ್ಕಿ ಕಡುಬು ಮಾಡಿಸಿದ್ದೇನೆ. ತಾವು ರಾತ್ರಿ ಇದ್ದು ಹೋಗಬೇಕು" ಎಂದು ಒತ್ತಾಯಿಸಿದ್ದರಿಂದ ಅಡಿಗರು ಅದನ್ನೆಲ್ಲಾ ಪೂರೈಸಿಯೇ ಮನೆಗೆ ಬಂದಿದ್ದರು. ದೇವಾಲಯದ ಪೂಜೆ ಮುಗಿದು ಗರ್ಭ ಗುಡಿಯ ಬಾಗಿಲು ಹಾಕಿರುವುದನ್ನು ಕಂಡು ಧ್ವಜ ಮರದ ಬಳಿ ನಿಂತೇ ದೇವರಿಗೆ ಕೈಮುಗಿದರು. ಕ್ಷೇತ್ರದ ಯಾವ ಮನೆಯಲ್ಲೂ ದೀಪ ಕಾಣಿಸಲಿಲ್ಲ. ಮನೆಗೆ ಬಂದರು. ಕೈ ಕಾಲು ಮುಖ ತೊಳೆದು ಬಟ್ಟೆ ಬದಲಾಯಿಸುವಾಗ ಗಂಟೆ ಹನ್ನೆರಡಾಗಿತ್ತು. ಸಿಂಗಾರದ ಎಲೆಯನ್ನು ಹೆಂಡತಿಯ ಕೈಮೇಲೆ ಹಾಕಿ "ವೆಂಕಟರಾಯರು ಬಿಡಲೇ ಇಲ್ಲ. ಭಾರೀ ಮೂಡು ಗಣಪತಿಯದು. ಒಂದು ಪಾವಲಿ ದಕ್ಷಿಣೆ ಬೇರೆ, ಹಾಗಾಗಿ ತಡವಾಯ್ತು" ಎಂದರು. "ದೇವರ ಕಂಡಿಯಲ್ಲಿ ಪ್ರಸಾದ ಇದೆ ನೋಡಿ. ಎಷ್ಟಾದರೂ ನಾವು ಬಡ್ಕ್ಯಯವರು. ಶ್ರಾವಣ ಸೋಮವಾರದ ಸೋಣೆ ಆರತಿಗೆ ಇಲ್ಲೇ ಇದ್ದಿದ್ದರೆ ಒಳ್ಳೆಯದಿತ್ತು" ಎಂದಳು ಅಡಿಗರ ಹೆಂಡತಿ. ಒಂದು ಮುಷ್ಟಿ ಪಂಚಕಜ್ಜಾಯವನ್ನು ಬಾಯಲ್ಲಿ ತುಂಬಿಸಿಕೊಂಡರು ಅಡಿಗರು.

ಅವರು ಹಾಸಿಗೆ ಕಂಡು ಎಷ್ಟು ಹೊತ್ತಾಗಿತ್ತೋ. ದೀರ್ಘಕಾಲದ ತನಕ ನಿದ್ದೆಯಿಲ್ಲದೆ ಒದ್ದಾಡಿದರು. ಕಡುಬು ತಿಂದದ್ದೇ ಜಾಸ್ತಿಯಾಗಿತ್ತು. ಹೊಟ್ಟೆಯಲ್ಲಿ ವಾಯು ಸೇರಿಕೊಂಡು ಬಹಳ ತೊಂದರೆ ಕೊಡುತ್ತಿತ್ತು, ಅದರ ಮೇಲೆ ಬಾಳೆ ಹಣ್ಣಿನ ರಸಾಯನ ಸುರಿದಿದ್ದರು. ಅರ್ಧ ಗಳಿಗೆ ತೊಟ್ಟಿಲು ತೂಗಿದ ಮೇಲೆ ಹೆಂಡತಿ ಮಲಗಿಕೊಂಡರೂ ಅಡಿಗರಿಗೆ ನಿದ್ದೆ ಬರಲಿಲ್ಲ. ಕಡಲಿನ ತೆರೆಗಳ ಗಾವಳ, ಕರೆ ಏರಿಯ ಮೇಲಿನ ಸಾಲುಮರಗಳು ಗಾಳಿಯ ಬೀಸಾಟಕ್ಕೆ ಅಲುಗುವ ಸದ್ದು ಮಾತ್ರ ಕೇಳಿಸುತ್ತಿತ್ತು. ಯಾವುದೋ ಒಂದು ಹಕ್ಕಿ ಮನೆಯ ಹಿಂದಿನ ಮರದಮೇಲೆ ಕೂತು ಆಗಾಗ ರೆಕ್ಕೆ ಬಡಿಯುವ ಗದ್ದಲವನ್ನು ಗಮನಿಸಿದರೂ ಅದು ನಿತ್ಯಕ್ರಮವಾದ್ದರಿಂದ ಅಡಿಗರು ಕಣ್ಣು ಮುಚ್ಚಿ ಮಗ್ಗಲು ಹೊರಳಿಸಿದರು. ಕೊಟ್ಟಿಗೆಯ ಹಂದರ ಅಟ್ಟಣಿಗೆಯ ಬದಿಕಿಗೆ, ಆಗಾಗ ಕೊರಳನ್ನು ನೂರಜಾಚಿ ಮೇವಿಗಾಗಿ ದಂಡೆಯ ಮೇಲಿದ್ದ ಒಣ ಹುಲ್ಲನ್ನು ಎಳೆಯುವಾಗ ಕಪಿಲೆಯ ಕೋಡು ತಾಗುವ ಸಪ್ಪಳ ಮಾತ್ರ ಚೆನ್ನಾಗಿ ಕೇಳಿಸುತ್ತಿತ್ತು. ಚಾವಡಿಯಲ್ಲಿ ಬಾವಲಿಯ ಹಾರಾಟ ನಿರಾತಂಕವಾಗಿ ಸಾಗಿತ್ತು. ಎಲ್ಲಿಂದಲೋ ಅದು ಮರಿಕಪ್ಪೆಯನ್ನು ಹಿಡಿದು ತಂದಿರಬೇಕು.. ಅದರ ಚೀರಾಟವನ್ನು ಕೇಳಲಾರದೆ ಅಡಿಗರು ಮುಸು

ಕಳೆದವು. ಜೊಂಪು ಹಿಡಿಯಿತು. ನಿದ್ದೆಯ ಅಮಲು ಕಣ್ಣು ಬಾಡಿಸಿದ್ದರಿಂದ ಮತ್ತೆ ಅಡಿಗಳಿಗೆ ಒಂದೂ ತಿಳಿಯಲಿಲ್ಲ. ಎಷ್ಟು ಹೊತ್ತಾಗಿತ್ತೋ .. ಯಾವ ಗದ್ದಲ ಅವರನ್ನು ಎಚ್ಚರಿಸಿತ್ತೋ ... ಮುಸುಕಿನ ಮರೆಯಲ್ಲಿ ಮುಖವಿದ್ದರೂ ಇದ್ದಕ್ಕಿದ್ದಂತೆ ಅಡಿಗಳಿಗೆ ಎಚ್ಚರವಾದಾಗ "ಅಯ್ಯೋ .. ಬೆಂಕಿ" ಎಂಬ ಕೂಗು ಕೇಳಿಸಿತು. ಕ್ಷಣಕಾಲ ಅವರ ಎದೆ ಗಡಗುಟ್ಟಿತು. ರಾತ್ರಿ ಹೊತ್ತು. ಕನಸಿನಲ್ಲಿ ಕೇಳಿಸಿದಂತೆ ಅರಿವಾಗಿದ್ದರೂ ತನಗೆ ಸಂಪೂರ್ಣ ಎಚ್ಚರವಾಗಿದೆ ಎಂಬ ನಂಬಿಕೆ ಬಂದಮೇಲೆ ಮತ್ತಷ್ಟು ಹೆದರಿದರು. ಮರುಕ್ಷಣದಲ್ಲಿ ಮತ್ತೆ ಅದೇ ಕೂಗು. ಚಟಲ್ಲನೆ ಬಿದಿರೆಳೆಯೊಂದು ಸಿಡಿದ ಸಪ್ಪಳ ಕೇಳಿದಾಗ ಅಡಿಗಳ ಮೈ ಬೆವರಿತು. ಕೂಗು ಕೇಳಿದ್ದು ನಿಜವಾಗಿತ್ತು. ಅದೂ ಪಡುವಿನಿಂದಲೇ ಕೇಳಿಸಿತ್ತು. ಬೇರೆ ಯಾವ ಗದ್ದಲವೂ ಇರಲಿಲ್ಲ. ಆದರೆ ಉಪ್ಪಿನ ಹರಳನ್ನು ಕೆಂಡದ ಮೇಲೆ ಸುರಿದಾಗ ಆಗುವ ಶಬ್ದವೇ ಅವರನ್ನು ಬಡಿದೆಬ್ಬಿಸಿತು. ಬಾಗಿಲ ತೆರೆದು ಹೊರ ಬರುವುದಕ್ಕೆ ಅವರಿಗೆ ಭಯ. ಹೆಂಡತಿಯನ್ನು ಕರೆದರು. "ಮಗು ಎದ್ದಿದ್ದರೆ ಹಾಗೆ ತೊಟ್ಟಿಲು ತೂಗಬಿಡಿ.... ಸಂಜೆ ಎಲ್ಲಾ ನನಗೆ ತಲೆನೋವು" ಎನ್ನುತ್ತಾ ಆಕೆ ಪಕ್ಕಕ್ಕೆ ಹೊರಳಿದಳು. ಅಡಿಗಳು ಎಷ್ಟೇ ಒದರಿಕೊಂಡರೂ ಆಕೆಗೆ ಮತ್ತೆ ಎಚ್ಚರವಾಗುವ ಸೂಚನೆಯೇ ಕಾಣಲಿಲ್ಲ. ಮೊದಲೇ ಅವರದು ಸಣಕಲು ದೇಹ. ಎದೆಗುಂಡಿಯಲ್ಲಿ ದಿಟ್ಟತನವೇ ಇರಲಿಲ್ಲ. ಆದರೆ ಮತ್ತೆ ಮತ್ತೆ ಚೀತ್ಕಾರದ ಧ್ವನಿ ಕೇಳಿದಾಗ ಚಕ್ಕನೆ ಎದ್ದು ಕುಳಿತರು. ಬಿದಿರೆಳೆ ಸಿಡಿಯುವ ಸಪ್ಪಳ ಕೇಳಿದಾಗ ಮಾತ್ರ "ಏನೋ ಅನಾಹುತವಾಗಿದೆ" ಎಂದು ಅಡಿಗಳು ಹಾಸಿಗೆ ಬಿಟ್ಟಿದ್ದರು. "ಶಿವನೆ . ಇಂದು ಶ್ರಾವಣ ಸೋಮವಾರವಾಗಿ ಯಾರ ಮನೆ ಉರಿಯುವುದನ್ನು ನೋಡಬೇಕಾಗಿದೆಯೋ ..." ಎಂದು ಹೆದರಿಕೊಂಡೇ ಬಾಗಿಲ ಬಳಿ ಬಂದರು. ಅವರಿಗೂ ಭಯ. ಕೇರಿಯಲ್ಲಿ ಆಗ ಗದ್ದಲವೇ ಇರಲಿಲ್ಲ. ಬಿದಿರು ಚಟಚಟ ಎಂದು ಉರಿಯುವ ಶಬ್ದ ಮಾತ್ರ .. ಕಿಟಕಿಯ ಬಾಗಿಲು ತೆರೆದು ನೋಡಿದರು. ಗುಡಿಯ ಮುಂದಿನ ತೇರುಕಟ್ಟೆಯ ಎಡದಲ್ಲಿರುವ ಪದ್ಮಾವತಿಯ ಮನೆಗೆ ಬೆಂಕಿ ಬಿದ್ದಿತ್ತು. ಎಷ್ಟು ಹೊತ್ತಾಗಿತ್ತೋ.... ಬೆಂಕಿ ಆಗಲೇ ಮನೆಯ ಸುತ್ತ ಹೊತ್ತಿಕೊಂಡಿತ್ತು. ಹುಲ್ಲುಮಾಡು.... ಒಣಗಿದ ಗರಿಗಳ ಕಡ್ಡಿಗಳು.... ಹಳೆಯ ತೊಲೆ ಪಕಾಸಿಗಳು.... ಕಿಚ್ಚು ಬಹು ಬೇಗ

ಹೊತ್ತಿಕೊಂಡಿತ್ತು. ಸರ್ರನೆ ಕಿಟಕಿಯ ಬಾಗಿಲು ಮುಚ್ಚಿದರು ಅಡಿಗಳು. "ಪದ್ಮಾವತಿಯ ಮನೆಗೆ ಬೆಂಕಿ ಬಿತ್ತೇ...ಬೀಳಲಿ - ಎಂದೋ ಬೀಳಬೇಕಾಗಿತ್ತು. ಕೋಟಿ ಐತಾಳರು ಅವಳ ಹಾಸಿಗೆಯಲ್ಲಿ ಇದ್ದಾಗಲೇ ಬಿದ್ದಿದ್ದರೆ...ಎಷ್ಟು ಸುಖವಾಗುತ್ತಿತ್ತು." ಎಂದಿತು ಅವರ ಮನಸ್ಸು. ಮನೆ ಉರಿಯಲಿ ಎನ್ನುವಷ್ಟು ಅವರ ಹೃದಯ ಕಲ್ಲಾಗಿತ್ತು. ಆದರೆ ಹೊರಬರುವುದಕ್ಕೆ ಒಂದಿಷ್ಟೂ ಮನಸ್ಸು ಮಾಡಲಿಲ್ಲ. ಕದ ಮುಚ್ಚಿದಾಗಲೇ ನೆರೆಮನೆಯ ಮಂಜರು 'ಬೆಂಕಿ ಬೆಂಕಿ' ಎಂದು ಕೂಗಿಕ್ಕೇ ಕೂಗಿದ್ದು. ಶಿವಗುಡಿಯ ಹತ್ತಿರ ನಿಂತಿದ್ದ ಪರಶುರಾಮ ಕ್ಷೇತ್ರದ ಬ್ರಾಹ್ಮಣರ ಕೇರಿಯೇ ಎಚ್ಚರಗೊಂಡಿತ್ತು. ಮನೆ ಉರಿದು ಪದ್ಮಾವತಿಯ ದೇಹ ಬೆಂದುಹೋದ ಮೇಲೆ ಅಡಿಗಳು ಹೊರಬಂದರು. "ಶಿವನಿಗೆ ನೂರೆಂಟು ಆರತಿಯನ್ನು ಬೆಳಗಿಸಿದೆ...ಅದೂ ಸಾಲದೆ ಪದ್ಮಾವತಿಯ ಮನೆ ಉರಿಯುವ ಬೆಳಕು ಅವನಿಗೆ ಬೇಕಾಯ್ತೇ ?" ಎಂದು ಅರ್ಚಕ ನರಸಪ್ಪಯ್ಯ ಬಹುವಾಗಿ ನೊಂದುಕೊಂಡು ಹೇಳಿದ. ಆದರೆ ಗುಡಿ ಮಧ್ಯೆ ನಿಂತಿದ್ದ ಲೋಕರಕ್ಷಕನಾದ ಶಿವನ ಕಣ್ಣು ಇನ್ನೂ ತೆರೆದಿರಲಿಲ್ಲ. ಪದ್ಮಾವತಿಗಾಗಿ ಕಂಬನಿ ಸುರಿಯುವ ಕೋಟಿ ಐತಾಳರಿಗೆ ಇನ್ನೂ ಸುದ್ದಿ ಮುಟ್ಟಿರಲಿಲ್ಲ. ಬೆಂಕಿ ಮುಗಿಲೆತ್ತರದವರೆಗೆ ತನ್ನ ನಾಲಿಗೆ ಚಾಚಿತ್ತು. ಪಟೇಲರ ಮನೆ ನಾಯಿ ಬೊಗಳುವುದಕ್ಕೆ ತೊಡಗಿತ್ತು. ಮಂಜರು ದಿಕ್ಕೆಟ್ಟರು. ಮನೆಯ ಚಾವಡಿಯ ಬಾಗಿಲ ಅಗಣೆಯನ್ನು ಹಾಕಿರುವುದನ್ನು ಕಂಡಾಗ ಅವರಿಗೆ ಅನುಮಾನವಾಯ್ತು. ಮನೆಗೆ ಬೆಂಕಿ ಬಿದ್ದಾಗ ಪದ್ಮಾವತಿ ಜೀವರಕ್ಷಣೆ ಮಾಡಿಕೊಳ್ಳುವ ಮಾರ್ಗವೇ ಇರಲಿಲ್ಲ. ಹೊರಗಿನಿಂದ ಚಿಲಕ ಹಾಕಿ ನಾಲ್ಕು ಕಡೆಯಿಂದ ಒಂದೇ ಬಾರಿಗೆ ಬೆಂಕಿಯಿಟ್ಟು ಗಳಿಗೆ ಕಾಲದಲ್ಲಿ ಪದ್ಮಾವತಿಯನ್ನು ಆಹುತಿ ತೆಗೆದುಕೊಳ್ಳುವಂತೆ ಯಾರೋ ದುರಾತ್ಮರು ಮಾಡಿದ ಪ್ರಯತ್ನ ಎಂದು ಮಂಜರ ಗಮನಕ್ಕೆ ಬಂದಾಗ ಕಂಗಾಲಾದರು. "ಹೌದು ಇದು ಯಾರೋ ಪಾಪಿಗಳು ಮಾಡಿದ ಕೆಲಸ. ಪದ್ಮಾವತಿ ಒಳಗಿದ್ದಾಗಲೇ ಹೊರಗಿನಿಂದ ಅಗಣೆ ಹಾಕಿ ಮೊದಲು ಆಕೆ ಮಲಗಿರುವ ಕೋಣೆಯ ಚಾವಣಿಗೆ ಬೆಂಕಿ ಹಾಕಿರಬೇಕು. ಯಾರಿಗೆ ಬಂತಪ್ಪ ಹೆಣ್ಣು ಹೆಂಗಸನ್ನು ಸಾಯಿಸುವ ಬುದ್ಧಿ....ಯಾರ ಸಂಸಾರಕ್ಕೆ ಕಲ್ಲು ಹಾಕಿದ್ದಳು ಆಕೆ....ಈಗ ಶ್ರಾವಣ ಸೋಮವಾರ ಸಾಯುವುದಕ್ಕೆ....ದೇವರಿಗೇ ಬೇಡವಾಗಿತ್ತೋ ಏನೋ, ಆಕೆ ಬದುಕಿರುವುದು...

ಚಾವಣಿ ಕುಸಿದಮೇಲೆ ತಾನೆ ಕೇರಿಯವರಿಗೆ ತಿಳಿದದ್ದು...." ಎಂದು ಮಂಜರು ಒಂದೇ ಸಮನೆ ರೋದಿಸತೊಡಗಿದರು. "ಹೌದು ಹೊರಬಾಗಿಲ ಚಿಲಕವನ್ನು ಹಾಕಿದ್ದರಿಂದಲೇ ಪದ್ಮಾವತಿಗೆ ಪ್ರಾಣ ಉಳಿಸಿಕೊಳ್ಳುವುದಾಗಲಿಲ್ಲ. ಅವಳ ಗತಿ ಏನಾಗಿದೆಯೋ.. ಬಾಗಿಲನ್ನು ತೆರೆದು ಒಳ ಹೋಗುವ ಸೆಡಗುತನ ಯಾರಿಗಿದೆ? ಚಾವಣಿಯೇ ಕುಸಿದು ಬಿದ್ದರೆ. ಮೇಲಿನಿಂದ ಕೆಂಡವೇ ಉದುರಿದರೆ....ತೊಲೆಗಳು ಅರ್ಧ ಸುಟ್ಟು ತಲೆಯಮೇಲೆ ಬಿದ್ದರೆ. ಮನೆಗೆ ಯಾವಾಗ ಬೆಂಕಿ ಬಿತ್ತು....ಪೂಜೆ ಮುಗಿಯುವಾಗಲೇ ಗಂಟೆ ಹತ್ತಾಗಿತ್ತು. ಕೋಟಿ ಐತಾಳರು ನಿತ್ಯ ಅವಳ ಮನೆಯಲ್ಲಿನಡುರಾತ್ರಿಯವರೆಗೆ ಇರುತ್ತಾರೆ. ನಾನು ಮಡಿಗಿಕೊಂಡದ್ದೆ ಅರೆತಾಸಿನ ಹಿಂದೆ. ಅಷ್ಟು ಬೇಗ ಈ ಕಾರ್ಯ ನಡೆಯ ಬೇಕಾದರೆ...." ಎಂದು ಕುಪ್ಪಯ್ಯ ಹಾಗೆ ತಮ್ಮ ಸಂತಾಪ ವ್ಯಕ್ತಪಡಿಸಿದರು. "ಆಕೆಯ ಸಂಬಂಧಿಕರು ಯಾರು ಇಲ್ಲವೇನು ?" ಎಂದು ಯಾರೋ ಕೇಳಿದ್ದಕ್ಕೆ ಯಾರೋ ಉತ್ತರಿಸಿದರು. "ಆಕೆಯ ಸಂಬಂಧವಿರುವುದು ಮೊಕ್ತೇಸರರಿಗೆ ಮಾತ್ರ. ಆಕೆಯ ಊರು ಮೊಗಬೆಟ್ಟು. ತಾಯಿ ಅಲ್ಲಿನ ದೇವಾಲಯದಲ್ಲಿ ಚಾಮರ ಬೀಸಿಕೊಂಡು ಸೋಮಯಾಜರ ಆಶ್ರಯದಲ್ಲಿ ಇದ್ದಾಳಂತೆ. ಕೋಟೀಶ್ವರ ಜಾತ್ರೆಯ ದಿನ ತಾಯಿ ಕೂಡಾ ನಾಲ್ಕುದಿನ ಬಂದುಹೋದದ್ದು ನನಗೆ ಗೊತ್ತು." ಇಷ್ಟೆಲ್ಲಾ ಮಾತುಕತೆ ನಡೆಯುತ್ತಿದ್ದರೂ....ಮನೆ ಪೂರ್ತಿ ಉರಿಯುತ್ತಿದ್ದರೂ, ಕೋಟಿ ಐತಾಳರನ್ನು ಕರೆದುಕೊಂಡು ಬರುವ ವಿಚಾರ ಯಾರ ತಲೆಗೂ ಹೊಳೆದಿರಲಿಲ್ಲ. "ಯಾರಾದರೂ ಹೋಗಿ ಐತಾಳರನ್ನು ಕರೆದುಕೊಂಡು ಬನ್ನಿ" ಎಂದು ಅರ್ಚಕ ನರಸಪ್ಪಯ್ಯ ಹೇಳಿದ ಮೇಲೆ ಮಂಜರೇ ಹೊರಟರು.

ದೇವರನ್ನೇ ಮದುವೆಯಾಗಿ .. ಮೊದಲರಾತ್ರಿ ದೇವರ ಸೇವೆಯಲ್ಲಿಯೇ ಮೈಮರೆತು....ದೇಗುಲದ ಅಂಗಣದ ಶಿಲಾ ವೇದಿಕೆಯಲ್ಲಿ ಕುಳಿತು ನಿತ್ಯ ಹೂ ಕಟ್ಟಿಗುಡಿಯ ಹೊಸ್ತಿಲ ಅಂಚಿಗೆ ಮೈ ಆನಿಸಿಯೇ ಬತ್ತಿ ಹೊಸೆದು....ಬೆಳ್ಳಿ ಕಟ್ಟಿನ ಚಾಮರ ಹಿಡಿದು ಶಿವನ ಅನುಗ್ರಹಕ್ಕೆ ಪಾತ್ರಳಾಗಿ....ದೇವಾಲಯದ ಆಡಳಿತ ಮೊಕ್ತೇಸರರ ಪ್ರೀತಿಯನ್ನು ಗಳಿಸಿದ್ದ ಪದ್ಮಾವತಿ ಶಿವಗುಡಿಯಿಂದ ಮರೆಯಾಗಿದ್ದಳು. ಪದ್ಮಾವತಿಗಾಗಿ ಅತ್ತವರು ಯಾರು ? ಆ ಕತ್ತಲೆಯಲ್ಲಿ ಯಾರ ಕಣ್ಣು ಒದ್ದೆಯಾಗಿದೆ ಎಂದು ತಿಳಿಯುವಂತೇ ಇರಲಿಲ್ಲ. , ಅಂತೂ

ಕೋಟಿ ಐತಾಳರು ಆಳುವುದು ಖಂಡಿತ. ಶಿವನಿಗೆ ಚಾಮರ ಸೇವೆಯ ಭಾಗ್ಯ ತಪ್ಪಿತೆಂದು ಅವನು ಕಂಬನಿಗರೆದರೂ ಆಮ ಹೆಚ್ಚಲ್ಲ.

ಆಕೆಯ ತಾಯಿ ಇಟ್ಟ ಹೆಸರು ಪದ್ಮಾವತಿ ಎಂದು. ಸೋಮಯಾಜರು ಪದ್ಮಾ ಎಂದೇ ಕರೆಯುತ್ತಿದ್ದರು. ಮೊಗೆಬೆಟ್ಟಿನಿಂದ ಕೋಟಿ ಐತಾಳರು ಆಕೆಯನ್ನು ಕೋಟೇಶ್ವರಕ್ಕೆ ಕರೆದುಕೊಂಡು ಬಂದಾಗ ಕೇರಿಯವರು 'ಪದ್ಮಕ್ಕ' ಎಂದು ಕರೆಯುವುದಕ್ಕೆ ಆರಂಭಿಸಿದರು. ಐತಾಳರು ಇಂದಿಗೂ 'ಪದ್ಮಾ' ಎಂದೇ ಎಲ್ಲರ ಮುಂದೆ ಸಂಬೋಧಿಸುತ್ತಿದ್ದರು. ಎಲ್ಲರಿಗೂ ಬೇಕೆನಿಸಿಕೊಂಡಿದ್ದಳು. ಕಂಡವರನ್ನೆಲ್ಲ ಮಾತನಾಡಿಸುತ್ತಿದ್ದಳು. ಎಲ್ಲರ ಯೋಗಕ್ಷೇಮ ವಿಚಾರಿಸಿ ಸಂಸಾರದ ಸುಖಕಷ್ಟ ಕೇಳುವುದೆಂದರೆ ಅವಳಿಗೆ ಆಸೆ. ಎಲ್ಲರ ಮನೆಯೂ ಆಕೆಗೆ ಪರಿಚಿತ. ಹಪ್ಪಳ ಸಂಡಿಗೆ ಮಾಡುವುದಕ್ಕೆ ತಯಾರು. ಮದುವೆ ಮನೆಯಲ್ಲಿ ಹೂಕಟ್ಟುವುದಕ್ಕೂ ಹೋಗುತ್ತಿದ್ದಳು. ವಿಶೇಷ ಕಾರ್ಯವಾದಲ್ಲಿ ಊಟದ ಎಲೆ ತೆಗೆದು ಸಾರಿಸಿ ಒರಸುವುದಕ್ಕೂ ಸಿದ್ಧ. ಹತ್ತು ಜನ ಸೇರಿದಲ್ಲಿ ಪದ್ಮಕ್ಕ ಇರುವುದೇ ಒಂದು ಚಂದ. ದೇವಾಲಯದಲ್ಲಿ ಆಕೆ ಚಾಮರ ಬೀಸುವುದೇ ತುಂಬಾ ಸೊಗಸು.

ಹತ್ತು ನಿಮಿಷ ಕಳೆದಿತ್ತು. ಕೋಟಿ ಐತಾಳರು ಕೈಯಲ್ಲಿ ಲಾಟೀನು ಹಿಡಿದು ಧಾವಿಸಿ ಬಂದರು. "ಐತಾಳರು ಬಂದರು " ಎಂದು ಜನರು ತಮ್ಮಲ್ಲಿ ಅಂದುಕೊಂಡರು. ಐತಾಳರ ಆಗಿನ ಸ್ಥಿತಿ ನೋಡುವಂತಿರಲಿಲ್ಲ. ಆವರಿ ಉರಿಯುವ ಬೆಂಕಿಯ ಬೆಳಕಿನಲ್ಲಿ ಅವರು ಬಿಕ್ಕಿ ಬಿಕ್ಕಿ ಅಳುವುದು ಮಾತ್ರ ಕಾಣುತ್ತಿತ್ತು. ಐತಾಳರ ದುಃಖಕ್ಕೆ ಕಾರಣ..."ನನ್ನ ಪದ್ಮಳ ಮನೆಗೆ ಬೆಂಕಿಯಿಟ್ಟು ಆಕೆಯನ್ನು ಜೀವಂತ ಸುಟ್ಟು ಕೊಂದರಲ್ಲ" ಎಂದು. ಮೆಟ್ಟಿಲ ಬಳಿ ಬಂದರು. ಮೈ ಸುಡುವಷ್ಟು ಬೆಂಕಿಯ ಕಾವು. ಜಗಲಿ ಹತ್ತಿದರು. ನಾಲ್ಕು ಬಾರಿ 'ಪದ್ಮಾ' ಎಂದು ಕರೆದರು. ಆಕೆಯ ಉತ್ತರವಿಲ್ಲ. ಪಟಕ್ಕನೆ ಪಕಾಶಿಯೊಂದು ಹಿಂದಿನಿಂದಲೇ ಕೆಳಗೆ ಬಿತ್ತು. ಪಂಚೆಯನ್ನು ಸೊಂಟಕ್ಕೆ ಬಿಗಿದರು....ಬೇಡಬೇಡವೆಂದರೂ ಬಾಗಿಲನ್ನು ಬಲವಾಗಿ ಒದ್ದು ಕೆಳಗುರುಳಿಸಿದರು. 'ಪದ್ಮಾ' ಎನ್ನುತ್ತಾ ಆಗಲೇ ಒಳ ನಡೆದಿದ್ದರು ಕೋಟಿ ಐತಾಳರು.

ಪದ್ಮಾವತಿ ಮಲಗಿದ್ದ ಪಡಸಾಲೆಯ ಚಾವಣಿಯೇ ಕುಸಿದುಬಿದ್ದಿತ್ತು. ಎರಡು ತಾಸಿನ ಹಿಂದೆ ಪತ್ತಾಸಿನ ಮೇಲೆ ಕುಳಿತು ಪದ್ಮಕ್ಕನೊಂದಿಗೆ ಸರಸವಾಗಿ

ಮಾತನಾಡಿದ್ದರು....ಐತಾಳರು. ಆ ಪತ್ತಾಸಿನ ಬಲ ಬದಿಗೆ ಆಗಲೇ ಕಿಚ್ಚು ಹೊತ್ತಿಕೊಂಡಿತ್ತು. ಐತಾಳರಿಗೆ ಹೆಚ್ಚು ಪ್ರಿಯವಾಗಿದ್ದ ಗೇಣು ದಪ್ಪದ ದಾವಣಗೆರೆಯ ಹಾಸಿಗೆಯ ಕುರುಹು ಕೂಡಾ ಇರಲಿಲ್ಲ. ಎರಡು ಹೆಜ್ಜೆ ಒಳ ಬಂದಿದ್ದರು....ಮುಂದೆಯೇ ಹೊಸಿಲ ಮೇಲೆ ಪದ್ಮಾವತಿ ಮಗ್ಗುಲಾಗಿ ಬಿದ್ದಿದ್ದಳು. ಉಟ್ಟಿದ್ದ ಸೀರೆ ಸಂಪೂರ್ಣ ಸುಟ್ಟುಹೋಗಿತ್ತು. ಬಾಗಿಲ ಮೇಲಿನ ನಾರಂದದ ಅರ್ಧ ಸುಟ್ಟ ಹಲಗೆ ಅವಳ ಬೆನ್ನ ಮೇಲೆ ಬಿದ್ದು ಇನ್ನೂ ಉರಿಯುತ್ತಲೇ ಇತ್ತು. ಅದನ್ನು ಕಂಡಾಗ ಐತಾಳರು ಬಿಕ್ಕಿ ಬಿಕ್ಕಿ ಅಳುವುದಕ್ಕೆ ಆರಂಭಿಸಿದರು. ಆ ಸ್ಥಿತಿಯಲ್ಲಿ ಪದ್ದಕ್ಕನನ್ನು ನೋಡುವಷ್ಟು ಸಹನೆ ಅವರಿಗಿದ್ದಿರಲಿಲ್ಲ. ಎಲ್ಲವೂ ಮುಗಿದಿತ್ತು. ಸುಟ್ಟ ಹಲಗೆಯನ್ನ ಪಕ್ಕಕ್ಕ ತಳ್ಳಿ.... ತಾವು ಉಟ್ಟಿದ್ದ ಪಂಚೆಯಿಂದ ಆಕೆಯ ಮೈ ಮುಚ್ಚಿ ಹೊರ ಬಂದರು. ಮೆಟ್ಟಿಲಮೇಲೆ ತಲೆಗೆ ಕೈಕೊಟ್ಟು ಕುಳಿತುಬಿಟ್ಟರು. ಅವರ ಗಂಡು ಹೃದಯವೇ ಹಿಂಡಿ ಹಿಪ್ಪೆಯಾಗಿತ್ತು. ಪದ್ಮಾವತಿ ಸತ್ತ ದುಃಖಕ್ಕಿಂತಲೂ ಅವಳನ್ನು ಹೀಗೆ ಜೀವಂತ ಸುಟ್ಟು ಕೊಂದವರು ಯಾರು ಎಂಬುದೇ ಐತಾಳರ ಮನಸ್ಸನ್ನು ಹದಗೆಡಿಸಿದ ವಿಚಾರವಾಗಿತ್ತು. ಮನೆಗೆ ಬೆಂಕಿ ಬಿದ್ದಾಗ ಪದ್ದ ಕೂಗಲಿಲ್ಲವೆ? ಆಕೆ ಒಮ್ಮೆಯಾದರೂ ಕೂಗಿದ್ದರೆ ಹತ್ತಿರದ ಮನೆಯವರಿಗೆ ಕೇಳಿಸಿಲ್ಲವೆ? ಐವತ್ತು ಮಾರು ದೂರದಲ್ಲಿರುವ ಅಡಿಗಳಿಗೇಕೆ ಎಚ್ಚರವಾಗಲಿಲ್ಲ? ಅಷ್ಟು ಬೇಗ ಆಕೆಯ ಸೀರೆಗೆ ಬೆಂಕಿ ತಗುಲಿ ಪ್ರಾಣ ಬಿಡುವುದು ಹೇಗೆ ಸಾಧ್ಯ? ಪದ್ಮಾವತಿಯನ್ನು ಸಾಯಿಸುವ ಉದ್ದೇಶವೇ ಇರುವುದಾದರೆ ಈ ಕಾರ್ಯ ಯಾರಿಂದ ನಡೆಯಿತು? ಇದೇ ವಿಚಾರ ಐತಾಳರ ತಲೆ ತಿನ್ನತೊಡಗಿತು. ಮತ್ತೆ ಮತ್ತೆ ಅದನ್ನೇ ಯೋಚಿಸುತ್ತಾ ಕಂಬನಿ ಸುರಿಸಿದರು ಐತಾಳರು. ಮೊಗೆಬೆಟ್ಟಿನಿಂದ ಆಕೆಯನ್ನು ಕರೆದುಕೊಂಡು ಬರಲು ಅವರಿಗೆಷ್ಟು ಕಷ್ಟವಾಗಿತ್ತು? ಪಟೇಲ ಮುತ್ತಯ್ಯ ಹೆಗಡೆಯ ಕಣ್ಣು ತಪ್ಪಿಸಿ ರಾತ್ರಿ ರಾತ್ರಿಯೇ ಪದ್ಮಾವತಿಯನ್ನು ದರೆಬೈಲಿಗೆ ಕರೆದುಕೊಂಡು ಹೋಗಿ ಅಲ್ಲಿಂದ ಜೋಡೆತ್ತಿನ ಗಾಡಿಯಲ್ಲಿ ಬಾಳಬರೆ ಮಾರ್ಗವಾಗಿ ಆಕೆಯನ್ನು ಕರೆದುಕೊಂಡು ಬಂದ ಸಾಹಸ....ಐತಾಳರ ಜೀವನದಲ್ಲಿ ಅದೊಂದು ಮಹತ್ವದ ಘಟನೆ. ಅದನ್ನು ನೆನಸಿಕೊಂಡಾಗ ಮತ್ತೆ ಅಳು ಬಂತು. ಮಂಜರು ಎಷ್ಟೇ ಸಮಾಧಾನಿಸಿದರೂ ಪ್ರಯೋಜನ

ವಾಗಲಿಲ್ಲ. "ನನ್ನ ಪದ್ದುಗೆ ಈ ಗತಿ ಬಂತೆ ? ಶ್ರಾವಣ ಸೋಮವಾರ ಇದ್ದರೂ ಹೀಗೆ ಕೆಟ್ಟ ಸಾವು ಆಕೆಗೆ ಬಂತೆ ? ಸಾಯುವ ಎರಡು ದಿನದ ಮೊದಲು ಕೂಡಾ ಹೇಳಿದ್ದಳು ಮಂಜರೆ. ನನ್ನ ಜೊತೆ ತಿರುಪತಿ ಯಾತ್ರೆ ಮಾಡುವ ಆಸೆಯಿದೆ ಎಂದು. ಇನ್ನೆಲ್ಲಿಯ ಯಾತ್ರೆ ಹೇಳಿ. ನನ್ನ ಪದ್ದು ಈ ಊರಲ್ಲಿರುವುದು ಯಾರಿಗೆ ಬೇಡವಾಗಿತ್ತೋ ?....ಯಾವ ಪಾಪಿ ಹೀಗೆ ನಡುರಾತ್ರಿಯಲ್ಲಿ ಬೆಂಕಿಯಿಟ್ಟನೋ... ಅದು ಗೊತ್ತಾದರೆ ಸಿಗಿದು ತೋರಣ ಕಟ್ಟುತ್ತೇನೆ" ಎಂದು ಗಟ್ಟಿಯಾಗಿ ಹೇಳಿದರು ಐತಾಳರು. ಆಗಲೇ ಜನಗಳೆಲ್ಲ ಕಡಿಮೆಯಾಗಿತ್ತು. ತಮ್ಮ ತಮ್ಮ ದುಃಖವನ್ನು ಐತಾಳರಲ್ಲಿ ವ್ಯಕ್ತಪಡಿಸಿದವರು ತಮ್ಮ ತಮ್ಮ ಮನೆಗಳಿಗೆ ಹೋಗಿದ್ದರು.

ಪೂರ್ವದಲ್ಲಿ ಬೆಳಕು ಕಾಣಿಸಿತು. ಕ್ಷೇತ್ರದ ಸುತ್ತಿನಲ್ಲಿ ಶವವಿರುವಾಗ ಗುಡಿಯಲ್ಲಿ ಪೂಜೆ ಆಗುವಂತಿಲ್ಲ. ಪದ್ದಕ್ಕನ ಶವವನ್ನು ತಾವೇ ಹೊರ ತಂದರು. ಮನೆಯ ಹಿಂದಿನ ದಿಬ್ಬದಲ್ಲಿ ಕಟ್ಟಿಗೆಯನ್ನು ಕೂಡಿಸಿದರು. ರಾತ್ರಿಗಿಂತ ಹೆಚ್ಚಿನ ಜನ ಸೇರಿತ್ತು. ಪದ್ಮಾವತಿಯ ಹಣೆ ತುಂಬ ಕುಂಕುಮ ಹಚ್ಚಿ ಒಂದು ಹೆಡಿಗೆ ಸಂಪಿಗೆಯ ಹೂವಿನಿಂದ ಮೈ ಮುಚ್ಚಿದರು. ಮುತ್ತೈದೆಯರೆಲ್ಲರೂ ಶವದ ಮೇಲೆ ಅರಿಸಿನ ಕುಂಕುಮ ಚೆಲ್ಲಿದರು. ಮಂಜರು ಶ್ರೀಗಂಧದ ಕೊರಡನ್ನು ತಂದು ತಾವೇ ಚಿತೆಯ ಮೇಲೆ ಹಾಕಿದರು. ಪದ್ದಕ್ಕನ ಕೊರಳಲ್ಲಿದ್ದ ಕರಿಮಣಿಯಿಂದ ಒಂದು ತಾಳಿಯನ್ನು ತೆಗೆದು ತಾವೇ ಚಿತೆಗೆ ಬೆಂಕಿ ಹಚ್ಚಿದರು. ಹತ್ತು ಜನ ಬ್ರಾಹ್ಮಣರಿಗೆ ದಾನ ಕೊಟ್ಟು, ಮೈ ತೊಳೆದು ಐತಾಳರು ಮನೆಗೆ ಹೋದರು.

ಅರ್ಚಕ ನರಸಪ್ಪಯ್ಯ ಸ್ನಾನ ಮುಗಿಸಿ ಗುಡಿಯ ಒಳ ಹೋದ.

ನಗಾರಿಯು ಸಮಸ್ತ ಕ್ಷೇತ್ರದವರನ್ನು ಎಚ್ಚರಿಸಿತು. ಬಲಿ ಆರಂಭವಾಗಿರಬೇಕು. ಜಾಗಟೆಯ ಸದ್ದಿಗೆ ಅರ್ಚಕನ ಕೈಬೆರಳು ಕಂಪಿಸತೊಡಗಿತ್ತು. ಬಲಿಕಲ್ಲುಗಳನ್ನು ನೋಡಿ ತಂತ್ರ ಹಾಕುವುದಕ್ಕೆ ನರಸಪ್ಪಯ್ಯನ ಸ್ಥಿತಿ ಚಿಂತಾಜನಕವಾಗಿತ್ತು. "ಏಕೋ ತಲೆ ತಿರುಗುತ್ತದೆ, .." ಎಂದನು ಪಾಟಾಳಿಯಲ್ಲಿ. "ಬೇಗ ಮಂಗಳಾರತಿ ಮುಗಿಸಿಬಿಡಿ ..." ಎಂದ ಪಾಟಾಳಿ.

ಪಾಟಾಳಿ ಪುಟ್ಟಯ್ಯನಿಗೆ ಒಂದೂ ಅರ್ಥವಾಗಲಿಲ್ಲ. ಆರತಿಯ ಬತ್ತಿಗೆ ತೂಗುದೀಪದ ಬತ್ತಿಯಿಂದ ದೀಪ ಹಚ್ಚಿ ಎರಡು ಆರತಿಯನ್ನು ಮಾತ್ರ

ಮಾತನ್ನಾಡ. ನರಸಪ್ಪಯ್ಯ ಆರತಿ ಎತ್ತಿದ್ದ ಮಾತ್ರ. ಗುಡಿಯ ತೂಗು ಹೊಡ್ದಿರಲ್ಲಿದ್ದ ಬೆಳ್ಳಿ ಕಟ್ಟಿನ ಚಾಮರವನ್ನು ಕಂಡಾಗ ಕೈಯಲ್ಲಿದ್ದ ಆರತಿ ಕೆಳಬಿತ್ತು.

"ಏನು ಸ್ವಾಮಿ... ಆರತಿಯೇ ಕೆಳಗೆ ಬಿತ್ತಲ್ಲ" ಎಂದು ಕೂಗಿದ ಪಾಟಾಳಿ. ಪುಟ್ಟಯ್ಯನ ಮುಖ ನೋಡುತ್ತಾ ಕುಳಿತಿದ್ದ ನರಸಪ್ಪಯ್ಯ.

೨

ಕೋಟಿ ಐತಾಳರು ಸ್ನಾನ ಮುಗಿಸಿ ಮೈ ಒರೆಸಿಕೊಳ್ಳುತ್ತಾ ಚಂದ್ರು ಕಂಬದ ಬಳಿ ನಿಂತಿದ್ದರು. ಏಕೋ ತುಂಬಾ ಹೆದರಿಕೊಂಡಿದ್ದರು. ರಾತ್ರಿ ಮಲಗಿದಾಗಲೇ ಒಂದು ಮನೆಗೆ ಬೆಂಕಿಯಿಟ್ಟು ಒಂದು ಜೀವವನ್ನು ಸುಲಭವಾಗಿ ಕೊಲ್ಲುವುದು ಸಾಧ್ಯವೆಂದಾದರೆ ನಾಳೆ ಈ ಊರಲ್ಲಿ ನಿಶ್ಚಿಂತೆಯಿಂದ ಬದುಕುವುದಾದರೂ ಹೇಗೆ?....ಅದೇ ಅವರ ಮನಸ್ಸನ್ನು ಕೆಡಿಸಿದ ವಿಚಾರ. ಗಂಡ ಮನೆಗೆ ಬಂದಾಗ ಕಾಮಾಕ್ಷಿ ವ್ಯಾವಹಾರಿಕವಾಗಿ ಮಾತ್ರ ಒಂದೆರಡು ಪ್ರಶ್ನೆ ಕೇಳಿದ್ದಳು. ಆದರೆ ಪಾತ್ರಿಗಳ ಹೆಂಡತಿ ಕೆರೆ ಸ್ನಾನಕ್ಕೆ ಹೋದವರು ಮರಳಿ ಬಂದಾಗ ಓಣಿಯಲ್ಲಿ ನಿಂತೇ "ನಿಮ್ಮ ಯಜಮಾನರೇ ಚಿತೆಗೆ ಬೆಂಕಿಯಿಟ್ಟರು" ಎಂದು ಹೇಳಿದ್ದರು. ಆ ಬಗ್ಗೆ ಹೆಚ್ಚಿನ ಸಮಾಚಾರ ಕಾಮಾಕ್ಷಿಗೆ ಬೇಕಿರಲಿಲ್ಲ. ಐತಾಳರು ಹೆಬ್ಬಾಗಿಲ ನಡೆಗೆ ಬಂದಾಗಲೇ "ಸ್ನಾನ ಮಾಡಿಯೇ ತಿಂಡಿ ತಿನ್ನುವುದು ಒಳ್ಳೆಯದು .. ಎಷ್ಟಾದರೂ ಹೆಣ ಸುಟ್ಟು ಬಂದದ್ದು ನೋಡಿ" ಎಂದಾಗ ಐತಾಳರಿಗೆ ಅದು ಸರಿಕಂಡಿತು. ಹಗ್ಗದಲ್ಲಿದ್ದ ಪಂಚೆಯನ್ನು ತಾನೇ ಎಳೆದು ಗಂಡನ ಕೈಯಲ್ಲಿಟ್ಟು "ಆ ಬಟ್ಟೆಯನ್ನೆಲ್ಲಾ ಒಗೆದು ಹಾಕುತ್ತೇನೆ. ಕಟ್ಟೆಯ ಕಲ್ಲಿನ ಮೇಲೆ ಹಾಕಿ" ಎಂದಳು. ಸ್ನಾನದ ಮನೆಯ ಒಳಹೊಕ್ಕು ಅರೆತಾಸಾದರೂ ಐತಾಳರ ಸ್ನಾನ ಮುಗಿದಿರಲಿಲ್ಲ. ಒಂದು ಚೆಂಬು ನೀರನ್ನು ತಲೆಯಮೇಲೆ ಹಾಕಿಕೊಂಡು ಹಾಗೇ ನಿಂತಿದ್ದರು. ಮತ್ತೆ ದಿನ್ನೆಯ ಬಳಿ ನಿಂತು ಕಾಮಾಕ್ಷಿಯೇ ಎಚ್ಚರಿಸಿದಳು. "ಮೊದಲು ಸ್ನಾನ ಮುಗಿಸಿ ದೇವರಿಗೆ ಒಂದು ಕವಳಿಗೆ ನೀರು ಹಾಕಿ. ಆಮೇಲೆ ತಿಂಡಿ ತಿಂದು ವಿಶ್ರಾಂತಿ ಪಡೆದ

ಮಾತನ್ನಾ. ನರಸಪ್ಪಯ್ಯ ಆರತಿ ಎತ್ತಿದ್ದ ನೆಳ್ಳುವುದು ? ಸತ್ತವರು ಮತ್ತೆ ಹೊದಿರಲ್ಲಿದ್ದ ಬೆಳ್ಳಿ ಕಟ್ಟಿನ ಚಾಮರವನು ಕೊಳ್ಳುವುದು ನಮ್ಮ ಕೈಯಲ್ಲಿ ಕೆಳಬಿತ್ತು. ತ್ತ ಅಸ್ಸಿ... ಆದರೆ ಅವಳ ಹಣೆಯಲ್ಲಿ

"ಏನು ಸ್ವಾಮಿ... ಆರತಿಯೆಟು ಸುತ್ತಿನಲ್ಲಿ ಸಾಯುವ ಯೋಗ ಅವಳದ್ದು. ಪುಟ್ಟಯ್ಯನ ಮುಖ ನೋಡುತ್ತಾವರು ಆಕೆಯನ್ನು ತನ್ನ ಬಳಿ ಕರೆಸಿಕೊಂಡ ತ್ತಳು" ಎಂದಳು ಕಾಮಾಕ್ಷಿ. ಕಾಟಾಚಾರದ ತಾಳರು "ಪದ್ಮಾವತಿ ಸತ್ತ ದುಃಖವೇನೂ ಹೆಚ್ಚಿಲ್ಲ ಮಾಗೆಬೆಟ್ಟಿಗೆ ಸುದ್ದಿ ಕಳುಹಿಸಿದ್ದೇನೆ–ಆ ಮುದುಕಿ ಎಲ್ಲಿ ಎದೆ ಸಾಯುತ್ತಾಳೋ ? ಎಂದು ಭಯ. ಅದೂ ಕೂಡಾ ದೊಡ್ಡ ರವೇ ಅಲ್ಲ. ಆಕೆ ಸತ್ತರೂ ಪ್ರಾಯದ ಹುಡುಗಿಯಲ್ಲ. ಇಂದೋ ನಾಳೆಯೋ ಸಾಯುವ ಮುದುಕಿ ಅನ್ನು. ಆದರೆ ಪದ್ಮನನ್ನು ಸಾಯಿಸುವಷ್ಟು ಮತ್ಸರ ಯಾರಿಗಿತ್ತು ? ಕೇರಿಯ ತುಂಬ ಮನೆಗಳಿದ್ದಾಗಲೂ ನನ್ನ ಪದ್ಮಾವತಿಯನ್ನು ಉಳಿಸಿಕೊಳ್ಳುವುದು ನನ್ನಿಂದಾಗಲಿಲ್ಲ... ಅದೇ ನನಗೆ ದುಃಖ. ಬದುಕಿನ ಪ್ರಶ್ನೆ ಬಿಡು... ಈ ಜೀವ ಯಾರಿಗೂ ಶಾಶ್ವತವಲ್ಲ. ಮುಂದಾಗಿ ಪವಕ್ಕ ಸ್ವರ್ಗದಲ್ಲಿ ಕುಳಿತಿರುತ್ತಾಳೆ. ನಾಳೆ ನಾನು ಕೂಡಾ ಆದೇ ಜಾಗಕ್ಕೆ ಹೋಗುವವನು. ಎರಡು ದಿನ ಬಿಟ್ಟರೆ ನೀನು ಕೂಡಾ ಬಂದು ನಮ್ಮ ಜೊತೆ ಸೇರುತ್ತಿ. ಆ ಸಾವಿನ ಬಗ್ಗೆ ನನಗೆ ಯೋಚನೆಯೇ ಇಲ್ಲ. ಆದರೆ ಈ ಕೆಲಸ ...ಇದರ ರಹಸ್ಯವೇ ನನಗೆ ಅರ್ಥವಾಗಲಿಲ್ಲ ನೋಡು" ಎಂದು ಐತಾಳರು ತಮ್ಮ ಹೆಂಡತಿಯಲ್ಲಿ ಹೇಳಿದರು. "ದೇವರಿಗೆ ನಾಲ್ಕು ಶಂಖ ನೀರು ಹಾಕಿ.... ಮನಸ್ಸು ನೆಮ್ಮದಿಯಾಗುತ್ತದೆ. ಆಮೇಲೆ ಉಪ್ಪಿಟ್ಟು ತಿಂದು ಸ್ವಲ್ಪ ಮಲಗಿಕೊಳ್ಳಿ" ಎಂದಳು ಕಾಮಾಕ್ಷಿ.

ಪೂಜೆಗೆ ಕಟ್ಟೆಯಿಂದ ತಾವೇ ತಂಬಿಗೆಯಲ್ಲಿ ನೀರು ತಂದರು. ಒಂದು ಮುಷ್ಠಿ ತುಳಸಿ ಕುಡಿಯನ್ನು ಹರಿವಾಣದಲ್ಲಿಟ್ಟು ...ಗಂಧದ ಕೊರಡನ್ನು ಚೆನ್ನಾಗಿ ತೊಳೆದರು. ಆಗ ಗಂಟೆ ಹನ್ನೆರಡಾಗಿತ್ತು. ಐತಾಳರು ತಡವಾಗಿ ಬಂದದ್ದರಿಂದ ಇನ್ನೂ ತಿಂಡಿ ಸೇವೆ ಆಗಿರಲಿಲ್ಲ. ಅನ್ನಕ್ಕೆ ನೀರಿಟ್ಟಿದ್ದಳು ಕಾಮಾಕ್ಷಿ. ನಿತ್ಯ ಗುಡಿಯ ಮಂಗಳಾರತಿಯ ಸಮಯ ನಗಾರಿಯ ಸದ್ದು ಆಕೆಗೆ ಕೇಳಿಸುತ್ತಿತ್ತು. ಆದರೆ ಅಂದೇಕೋ ಮಂಗಳಾರತಿಯ ಪೂಜಾ

ಗದ್ದಲವೂ ಆಕೆಗೆ ಕೇಳಿಸಲಿಲ್ಲ. ಬಹಳ ಹೊತ್ತು ಪಾಗಾರದ ಬಳಿ ನಿಂತಿದ್ದರೂ ಗುಡಿಯ ಒಳಗೆ ಸೇವೆಯ ಸದ್ದು ಕೂಡಾ ಇರಲಿಲ್ಲ.

ದೇವರ ಮನೆಯ ಬಾಗಿಲ ಬಳಿ ನಿಂತು ಕೇಳಿದಳು,

"ಹೌದೆ... ಗಂಟೆ ಹನ್ನೆರಡಾಯ್ತು... ಗುಡಿಯಿಂದ ಮಂಗಳಾರತಿಯ ಗದ್ದಲವೇ ಕೇಳುವುದಿಲ್ಲವಲ್ಲ ?"

"ಬಲಿಪೂಜೆಯ ಜಾಗಟೆಯ ಸದ್ದಾದರೂ ಕೇಳಬೇಕಿತ್ತು... ಹೌದು.... ಇನ್ನೂ ಗಂಟೆ ಹನ್ನೆರಡಾಗಿಲ್ಲವೋ ಏನೋ" ಎಂದರು ಐತಾಳರು.

"ಸೂರ್ಯನ ನೆರಳು ಚಾವಡಿಯ ಕಂಬ ಮುಟ್ಟಿತು ನೋಡಿ. ನಿತ್ಯ ಆ ಹೊತ್ತಿಗೆಲ್ಲಾ ಪೂಜೆ ಮುಗಿಯುತ್ತಿತ್ತು."

"ಹಾಗಿದ್ದರೆ ಇನ್ನು ತಡವೇಕೆ ? ಸಕಾಲದಲ್ಲಿ ಪೂಜೆಯಾಗಬೇಕೆಂದು ಅರ್ಚಕನಿಗೆ ನೂರು ಬಾರಿ ಹೇಳಿದ್ದೆ. ಆ ಮನುಷ್ಯನಿಗೆ ದೈವೀಕ ಶಕ್ತಿಯಲ್ಲಿ ನಂಬಿಕೆಯಿಲ್ಲ ಕಾಮಾಕ್ಷಿ. ಆ ವೆಂಕಟಪ್ಪಯ್ಯ ತನ್ನ ಪೂಜೆಯ ಹಕ್ಕನ್ನು ಈ ಮೂರ್ಖನಿಗೆ ಕೊಟ್ಟು ಮಲೆನಾಡಿಗೆ ಹೋಗಿ ಕುಳಿತಿದ್ದಾರೆ. ಒಂದು ಗಳಿಗೆ ನಾನು ಗುಡಿಯಲ್ಲಿ ಇಲ್ಲದಿದ್ದರೆ ಒಂದಲ್ಲ ಒಂದು ತೊಂದರೆ" ಎಂದರು ಐತಾಳರು.

ಅಂಗೈ ಮೇಲೆ ವಿಭೂತಿ ಹಾಕಿಕೊಂಡರು. ಹಣೆಯ ಮೇಲೆ ಕೈಯಾಡಿಸುತ್ತಿದ್ದಂತೆ ಪಾಟಾಳಿ ಪುಟ್ಟಯ್ಯ "ಅಯ್ಯ" ಎಂದು ಹೊರ ಬಾಗಿಲಲ್ಲಿ ನಿಂತು ಕೂಗಿದ. ಆಗ ಮಾತ್ರ ಐತಾಳರು ಹೆದರಿದರು. ಆ ಸಮಯದಲ್ಲಿ ಪಾಟಾಳಿ ದೇವಾಲಯದಲ್ಲಿ ಇರಲೇಬೇಕು. ಅವರಿಗೆ ಒಂದೂ ತಿಳಿಯಲಿಲ್ಲ.

"ಏನು .. ಈ ಹೊತ್ತಿನಲ್ಲಿ .. ಮಂಗಳಾರತಿ ಮುಗಿಯಿತೆ ?" ಎಂದರು.

"ಒಂದು ಕೆಲಸ ಆಗಿಹೋಯ್ತು ಸ್ವಾಮಿ .."

"ಏನದು ... ಪೂಜೆಗೆ ಅಡ್ಡಿ ಬಂತೆ ?"

"ಹೌದು ..."

"ಯಾರು ಬರಲಿಲ್ಲ . ನಸಸ ನಾನು ಬರುವಾಗ ಸ್ನಾನಮಾಡಿ ಗುಡಿಗೆ ಹೋದದ್ದನ್ನು ಕಂಡಿದ್ದೇನೆ. ನಗಾರಿ ಬಡಿಯುವವನು ಇದ್ದೇ ಇರುತ್ತಾನೆ. ವಾದ್ಯದವರು ಬಾರದಿದ್ದರೂ ಪೂಜೆ ನಡೆಯುವುದಕ್ಕೆ ಅಡ್ಡಿಯಿಲ್ಲ. ನಿನ್ನ

ಮುಖ ನೋಡಿದರೆ ಹೆದರಿಕೊಂಡಂತಿದೆ. ಒಟ್ಟಿನಲ್ಲಿ ಇನ್ನು ಯಾವ ಅಶುಭ ವಾರ್ತೆಯನ್ನು ನಿನ್ನ ಬಾಯಿಂದ ಕೇಳಬೇಕೋ....ಬೇಗ ಹೇಳಿಬಿಡು."

"ಅರ್ಚಕರಿಗೆ ಏಕೋ ಮೈ ಸರಿಯಿಲ್ಲ...ಎರಡನೆಯ ಆರತಿ ಅವರ ಕೈಯಿಂದ ಕೆಳಬಿತ್ತು."

ಸಿಡಿಲು ಬಡಿದವರಂತೆ ದಂಗಾಗಿ ಹೋದರು ಐತಾಳರು. ಬೆಳಿಗ್ಗೆ ಪದ್ಮಾವತಿಯ ಸಾವು....ನಡುವೆ ಮಂಗಳಾರತಿಯೇ ಕೆಳಬಿದ್ದ ಮಹಾಪಾಪ. ಏನಿದು ? ಯಾರ ಪಾಪಕಾರ್ಯದಿಂದ ಹೀಗಾಯ್ತು ? ನನ್ನಿಂದಲೇ ಏನಾದರೂ ಅಪರಾಧ ನಡೆಯಿತೆ ?

"ಪುಟ್ಟಯ್ಯ... ಆರತಿ ಕೆಳಬಿದ್ದಾಗ ದೇವಾಲಯದಲ್ಲಿ ಯಾರಿದ್ದರು ?"

"ಸುತ್ತಿನ ಬ್ರಾಹ್ಮಣರೆಲ್ಲರೂ ಬಂದಿದ್ದರು."

"ಯಾವ ಮಾತು ನಿನ್ನ ಕಿವಿಗೆ ಬಿತ್ತು ?"

"ಏನೋ ಅಶುಭ ಕಾದಿದೆ ಎಂದು ಮಂಜರು ಹೇಳುತ್ತಾರೆ."

"ನರಸನ ಬಗ್ಗೆ ನೀನು ನೀನು ಏನು ಹೇಳುತ್ತಿ ?"

"ನನಗೆ ಒಂದೂ ಅರ್ಥವಾಗಲಿಲ್ಲ ..."

"ನಿನ್ನೆ ಸಂಜೆ ಚೆನ್ನಾಗಿಯೇ ಇದ್ದನಲ್ಲ... !"

"ಬಲಿ ಪೂಜೆ ಆಗುವಾಗ ಅವರ ಕೈ ಏಕೋ ನಡುಗುತ್ತಿತ್ತು. ಮಂಗಳಾರತಿಗೆ ಕುಳಿತರು ನೋಡಿ. ಬೆಳ್ಳಿಕಟ್ಟಿನ ಚಾಮರ ಕಂಡದ್ದೇ ನೆಪವಾಯ್ತು. ಮೈ ತುಂಬಾ ಬೆವರು. ಇದ್ದಕ್ಕಿದ್ದಂತೆ ಅವರ ಮುಖ ಕೆಂಪಾಯ್ತು. ಕೈ ನಡುಗುವುದಂತೂ ವಿಪರೀತ. ಎರಡನೆಯ ಆರತಿ ಎತ್ತಿದ್ದರು ..ಕೈಯಿಂದ ಜಾರಿ ಕೆಳಬಿತ್ತು." ಎಂದ ಪುಟ್ಟಯ್ಯ

ಯೋಚಿಸಿದರು ಐತಾಳರು. ನರಸ ಬೆಳ್ಳಿ ಕಟ್ಟಿನ ಚಾಮರ ಕಂಡಾಗ ಹೆದರಿದ್ದೇಕೆ ? ಆರತಿಯನ್ನು ಎತ್ತಿ ಹಿಡಿಯುವಷ್ಟು ಶಕ್ತಿ ಕೂಡಾ ಇಂದು ಅವನಿಗೇಕೆ ಇಲ್ಲವಾಯ್ತು ? ಅಷ್ಟು ಮಂದಿ ಭಕ್ತರ ಮುಂದೆ ಆರತಿಯೇ ಕೈಯಿಂದ ಜಾರುವುದಕ್ಕೆ ಕಾರಣವೇನು ? ಇದರಲ್ಲಿ ಏನೋ ರಹಸ್ಯ ಇದೆ ಎಂದು ಐತಾಳರಿಗೆ ತಟ್ಟನೆ ಹೊಳೆಯಿತು. ಒಂದನ್ನೂ ಬಹಿರಂಗಪಡಿಸದೆ ವ್ಯವಹಾರ ನಿಪುಣರಾದರು.

“ನೋಡು .. ಆರತಿ ಬಿಳುವುದು ತುಂಬಾ ದೋಷ. ಮಾತ್ರ ಎಲ್ಲರಿಗೂ ಪರಿಹಾರ ಹೇಳಿದ್ದಾರೋ....ಅಂತೂ ಮತ್ತೆ ಪೂಜೇ ಕತ್ತಲೆಯ ಜೈಲು ಗೊತ್ತು. ನನ್ನ ಅನುಭವದಲ್ಲಿ ಇದು ನಡೆದಿಲ್ಲ. ಶಿವರು ಕಂಡದ್ದು.... ... ರುದ್ರಾಭಿಷೇಕ ಆಗಬೇಕಿದ್ದರೆ ತಂತ್ರಿಯವರನ್ನ ಯನ್ನು. ಅವನೂ ಕೊಲೆ ಹೇಳಿದ ವಿಚಾರ ತಿಳಿಸಿ ಬಲಿಪೂಜೆ ಮಂಗಳಾರತಿಯ ನಗುವಿನಿಂದ ಜೆನ್ನು ಗಳಿಗೆ ಹೆಚ್ಚು ಕಡಿಮೆಯಾದರೂ ಚಿಂತೆಯಿಲ್ಲ ...ಮಾತ್ರಾಗೆ ಅರ್ಥವಾಗಲಿಲ್ಲ. ಲೋಪವಾಗಬಾರದು. ಈಗ ನರಸ ಎಲ್ಲಿದ್ದಾನೆ ?” ಇಲ್ಲೆ” ಎಂದರು.

“ಮನೆಗೆ ಹೋದರು ಸ್ವಾಮಿ ...” ೧ನವ.

“ಏನು ಹೇಳಿದ....”

“ಅನ್ನವ್ರದಕ್ಕೆ ಅವರ ದೇಹಸ್ಥಿತಿಯೇ ಸರಿಯಿಲ್ಲ....ಗುಡಿಯ ೭. ಬಾಗಿಲಿಪೆ ನೋಡಿ .. ಅಲ್ಲಿಂದಲೇ ಮನೆಗೆ ಹೋದರು.”

“ಈಗ ಗುಡಿಯಲ್ಲಿ ಯಾರಿದ್ದಾರೆ....?”

“ಮಂಜರು ನಿಮ್ಮನ್ನು ಕರೆದುಕೊಂಡು ಬಾ ಅಂದರು ..”

“ಈ ವಿಚಾರ ಕೇರಿ ತುಂಬ ಹರಡಿದ್ದಾಯ್ತು ? ಆಗಲಿ... ಹೋಗಿ ತಂತ್ರಿಯವರಲ್ಲಿ ಹೇಳು. ನಾನು ಅರ್ಧ ಗಂಟೆಯಲ್ಲಿ ಬಂದು ಬಿಡುತ್ತೇನೆ” ಎಂದು ಐತಾಳರು ಪೂಜೆಗೆ ಕುಳಿತರು.

ಪುಟ್ಟಯ್ಯ ತಂತ್ರಿಯವರ ಮನೆಗೆ ಬಂದಾಗ ಅವರು ಸ್ನಾನ ಮುಗಿಸಿ ಪಾರಾಯಣ ಆರಂಭಿಸಿದ್ದರು. ಕೋಟಿ ಐತಾಳರ ಪರಮ ಸ್ನೇಹಿತರಾದ ತಂತ್ರಿಯವರು ಮತ್ತೆ ತಡಮಾಡಲಿಲ್ಲ. “ಹೌದು ಪುಟ್ಟಯ್ಯ .. ಪದ್ಮಾವತಿಯ ಮನೆ ಉರಿದು ಆಕೆ ಸತ್ತ ದಿನವೇ ಇದು ನಡೆಯಬೇಕಾದರೆ....ಇರಲಿ ಏನಿದ್ದರೂ ಹೊರಬರುತ್ತದೆ. ಮೊದಲು ದೇವರಪೂಜೆ. ಕ್ಷೇತ್ರದ ಕೆರೆಯಲ್ಲಿ ಮಿಂದು ಬರುತ್ತೇನೆ” ಎಂದು ತಂತ್ರಿಯವರು ಕವೇಗೆ ಹಿಡಿದುಕೊಂಡು ಕೆರೆಯ ದಾರಿಯಲ್ಲಿ ನಡೆದರು.

ತಂತ್ರಿಯವರಿಗೂ ಶಿವ ದೇವಾಲಯದ ಪೂಜೆಯ ಹಕ್ಕಿತ್ತು. ಆದರೆ ಅದು ಬೇಸಿಗೆಯ ಎರಡು ತಿಂಗಳು ಮಾತ್ರ. ದೇವಾಲಯದ ತಸ್ತೀಕಿನ ಆರು ಭಾಗದಲ್ಲಿ ತಂತ್ರಿಯವರದು ಒಂದು ಭಾಗ. ಹಾಗೆ ವಿಮರ್ಶಿಸುವುದಾದರೆ

ಮುಖ ನೋಡಿದರೆ ...ಜೆಯ ಹಕ್ಕೇ ಇರಲಿಲ್ಲ. ಕೋಟೇಶ್ವರ ಕ್ಷೇತ್ರದ
ವಾರ್ತೆಯನ್ನು ನಿನ್ನ ...ಸ್ಯನಲ್ಲ. ಅವನು ಬಂದ್ದುದು ಕಕ್ಕುಂಜೆ ಗ್ರಾಮದಿಂದ.
"ಅರ್ಚಕರಿಗೆ ವೆ...ಸ್ಯಯ್ಯನಿಗೆ ಮಲೆನಾಡಿಗೆ ಹೋಗುವ ಮನಸ್ಸಾಯಿತು.
ಕೈಯಿಂದ ಕೆಳಬಿತ್ತು." ಜಗಳಿಸುವ ಆಸೆ ಬಲವಾದ್ದರಿಂದ ತಮ್ಮ ಪೂಜೆಯ
ಸಿಡಿಲು ಬಡಿದವರ...ರಿ ಎಂದು ಚಿಂತಿಸಿದರು. ಅದೇ ಸಮಯಕ್ಕೆ ಸರಿ
ವತಿಯ ಸಾವು....ನ...ಕರ ಅಡಿಗಳು ತಮ್ಮ ಸಂಸಾರದೊಂದಿಗೆ ಕೋಟೇಶ್ವರಕ್ಕೆ
ಏನಿದು ? ಯಾರ ... ಅವರು ಊರು ಬಿಡುವುದಕ್ಕೂ ಒಂದು ಕಾರಣವಿತ್ತು.
ಅಪರಾಧ ನಡೆ...ದುದರಿಂದಲ್ಲಿ ಇನ್ನು ತಾನು ಬದುಕಿರುವುದು ಸರಿಯಲ್ಲವೆಂದು ಯೋಚಿ
"...ಾಗೆ ಹೊರಟಿದ್ದರು. ಶಂಕರ ಅಡಿಗಳ ಕತೆಯೇ ಒಂದು ವಿಚಿತ್ರ.
...ವರ್ಷ ಅಂಡಮಾನಿನಲ್ಲಿ ಇದ್ದು ಬಂದವರು. ಒಂದು ಮಹಾಪರಾಧಕ್ಕಾಗಿ
...ಡಿಗಳು ಶಿಕ್ಷೆ ಅನುಭವಿಸಬೇಕಾಯ್ತು. ಅಂಡಮಾನಿಗೆ ಹೋದ ನಾಲ್ಕು
ವರ್ಷದಲ್ಲೇ ಅಡಿಗಳು ಸತ್ತರೆಂದು ಸುದ್ದಿ ಬಂತು. ಹೆಂಡತಿ ರಂಗಮ್ಮ ವಿಧವೆ
ಯಾದರು. ಮಗ ನರಸ ತಂದೆಯ ಉತ್ತರಕ್ರಿಯೆ ಪೂರೈಸಿದ. ಆದರೆ ಎರಡು
ವರ್ಷದ ತರುವಾಯ ಸತ್ತ ಅಡಿಗಳು ಮತ್ತೆ ಕಕ್ಕುಂಜೆಗೆ ಬಂದ ಸಂಗತಿಯೇ
ತೀರಾ ಸೋಜಿಗ.

ಕೆಳಮನೆಯ ಕೊಲೆ ಪ್ರಕರಣದಲ್ಲಿ ಅಡಿಗಳ ಕೈವಾಡವಿತ್ತೆಂಬುದಕ್ಕೆ ಹಲವು ನಿದರ್ಶನಗಳು ದೊರಕಿತು. ಬಯಲಾಟ ನೋಡುತ್ತಿದ್ದ ಮುಂಡಾಸು ದಾರನನ್ನು ಕೊಂದದ್ದು ಬೇರೆಯವರಾದರೂ ಅವನ್ನು ಮಾಡಿಸಿದವರು ಶಂಕರ ಅಡಿಗಳು ಎಂದು ಸರಕಾರ ಅವರನ್ನು ಅಂಡಮಾನಿಗೆ ಕಳುಹಿಸಿತು.

ಅಡಿಗಳು ಮತ್ತು ಮುಂಡಾಸು ದಾರನಲ್ಲಿ ಗುಡ್ಡದ ತಪ್ಪಲಿನ ಒಂದು ತೋಟಕ್ಕಾಗಿ ವಾದ ವಿವಾದ ನಡೆದು ಕೋರ್ಟು ಮನೆ ಎಂದು ತಿರುಗಿ ತಿರುಗಿ ಇಬ್ಬರಿಗೂ ಸಾಕಾಗಿತ್ತು. ಒಮ್ಮೆ ಅಡಿಗಳಿಗೆ ವ್ಯವಹಾರ ಅನುಕೂಲವಾಗುವ ಪರಿಸ್ಥಿತಿ ಕಂಡಾಗ ಕೋರ್ಟಿನ ಜಗಲಿಯಲ್ಲಿ ನಿಂತು ದಾರ ಹೇಳಿದ್ದನಂತೆ "ಈ ಬ್ರಾಹ್ಮಣನ ಜೀವ ತೆಗೆದು ಹೊಂಡದಲ್ಲಿ ಹಾಕುತ್ತೇನೆ" ಎಂದು. ಆದರೆ ಅಡಿಗಳು ಒಂದು ವಾರದಲ್ಲೇ ಮುಂಡಾಸು ದಾರನ ಕೊಲೆ ಮಾಡಿಸಿದ್ದರು. ಕೊಂದವರು ಹಾಡಿಮನೆ ಬಿಲ್ಲವರು. ದಾರ ಸತ್ತದ್ದು ಗೋಳಿಮರದಡಿಯ ಬಯಲಾಟದ ದಿನ. ನಾಲ್ಕು ದಿನದಲ್ಲಿ ಕೆಂಪಿನ ವ್ಯಾನು ಬಂತು ಕಕ್ಕುಂಜೆಗೆ.

"ಅಡಿಗಳಿಗೆ ಅಂದಮಾನದ ಶಿಕ್ಷೆಯಾಯಿತು" ಎಂಬುದು ಮಾತ್ರ ಎಲ್ಲರಿಗೂ ತಿಳಿದ ವಿಚಾರ. ಅಡಿಗಳು ಅಂದಮಾನಿಗೆ ಬಂದರು. ಕತ್ತಲೆಯ ಜೈಲು ಕೋಣೆಯೊಂದರ ಬಾಗಿಲು ತೆರೆದು ಒಳ ದಬ್ಬಿದಾಗ ಅವರು ಕಂಡದ್ದು.... ... ಕಠ್ರಗಿನ ಚುಟ್ಟಾ ಏಳೆಯುತ್ತಿದ್ದ ಇನ್ನೊಂದು ವ್ಯಕ್ತಿಯನ್ನು. ಅವನೂ ಕೊಲೆ ಮಾಡಿ ಬಂದವನು. ಅಡಿಗಳನ್ನು ಕಂಡು ಸಂಭ್ರಮದ ನಗುವಿನಿಂದ ಬೆನ್ನು ನೇವರಿಸುತ್ತಾ ಏನೋ ಹೇಳಿದ. ಅವನ ಭಾಷೆ ಅಡಿಗಳಿಗೆ ಅರ್ಥವಾಗಲಿಲ್ಲ.

"ನಿನ್ನ ಭಾಷೆ ನನಗೆ ತಿಳಿಯದು ...ನನ್ನದು ಕನ್ನಡಜಿಲ್ಲೆ" ಎಂದರು.

"ಹೋ....ಕನ್ನಡವೆ ? ಬೆಂಗಳೂರಿನವರೇ ?" ಎಂದ ತೆಲುಗಿನವ.

"ಅಲ್ಲ .. ದಕ್ಷಿಣ....ಕನ್ನಡ ಗೊತ್ತೆ ?"

"ಕೇಳಿದ್ದೇನೆ...."

"ಯಾವೂರು ನಿನ್ನದು....

"ಹುಟ್ಟಿದ್ದು ವಿಜಯವಾಡದಲ್ಲಿ....ಬೆಳೆದದ್ದು ತೆನ್ನಾಲಿಯ ಗಲ್ಲಿಯೊಂದ ದಲ್ಲಿ....ಕಳ್ಳತನ ಆರಂಭಿಸಿದ್ದು ರೇಪಲ್ಲಿಯ ರೆಡ್ಡಿಯವರ ಮನೆಯಲ್ಲಿ."

"ಕದ್ದು ಅಂದಮಾನಿಗೆ ಬಂದೆಯಾ ?"

"ಕಳ್ಳತನ, ಮೋಸ, ಕೊಲೆ ಎಲ್ಲವನ್ನೂ ದೇವರು ನನ್ನಿಂದ ಮಾಡಿಸಿದ"

"ಕನ್ನಡ ಹೇಗೆ ಕಲಿತೆ ?"

"ಬೆಂಗಳೂರಿನಲ್ಲಿ ನಾಲ್ಕು ವರ್ಷಕಾಲ ಇದ್ದೆ...." ಎಂದು ಒಂದೇ ಸಮನೆ ಕೆಮ್ಮ ತೊಡಗಿದ.

"ಹೆದರಬೇಡಿ.. ನನಗೆ ಕ್ಷಯರೋಗವಿದೆ" ಎಂದ.

ಅಡಿಗಳ ಎದೆ 'ಜುಂ' ಎಂದಿತು. ಎಂತಹ ವಾತಾವರಣ ? ಇದೆಂತಹ ಸೆರೆ ಎಂದುಕೊಂಡರು. ಕೆಮ್ಮಿ ಕೆಮ್ಮಿ ಸುಸ್ತಾದ ತೆಲುಗಿನವ ಗಪ್ಪೆಂದು ಪಕ್ಕ ದಲ್ಲೆ ಬಳಿಯ ಕಫವನ್ನು ಉಗುಳಿದಾಗ ಅಡಿಗಳಿಗೆ ಅಸಹ್ಯವೆನಿಸಿತು.

"ಹೂಂ....ನನಗೂ ಜೊತೆ....ನೀನಾದರೂ ಬಂದೆಯಲ್ಲ ...ನೀನು ಕೊಲೆ ಮಾಡಿದ್ದಿಯಾ ?"

"ಹಾಗೆಂದು ಅಪವಾದ ಬಂದಿದೆ...."

"ಎಷ್ಟು ವರ್ಷ ಶಿಕ್ಷೆ....?"

"ಆರು ವರ್ಷ....ನಿನ್ನದು"

"ಹತ್ತು ವರ್ಷ....ಬಿಡು ನಾನೆಲ್ಲಿ ಬದುಕುತ್ತೇನೆ....ಈ ಕ್ಷಯರೋಗ ದಿಂದ ಒಂದು ದಿನ ಸಾಯುತ್ತೇನೆ. ನಿನ್ನ ಹೆಸರು "

"ಶಂಕರ ಎಂದು ಮನೆತನದ ಹೆಸರು ಅಡಿಗ"

"ಹೋ .. ನನ್ನ ಹೆಸರು ಶಂಕರ ನಾಯ್ಡು ಎಂದು. ಇಬ್ಬರದೂ ಒಂದೇ ಹೆಸರು."

ಸೆರೆಯ ವಾಸದ ಬೇಸರವನ್ನು ಕಳೆಯಲು ಅಡಿಗಳು ಶಂಕರ ನಾಯ್ಡು ವಿನ ಗೆಳೆತನ ಮಾಡಿಕೊಂಡರು. ಹೆಚ್ಚಿನ ರೊಟ್ಟಿ ಅನ್ನವನ್ನೆಲ್ಲಾ ನಾಯ್ಡು ಅಡಿ ಗಳಿಗೆ ಕೊಡುತ್ತಿದ್ದ. ಕ್ಷಯರೋಗದಿಂದ ಎದೆ ಹರಿಯುವಂತೆ ಕೆಮ್ಮುವುದೊಂದೇ ನಾಯ್ಡುವಿನ ನಿತ್ಯ ಕ್ರಮವಾಗಿತ್ತು. ಚುಟ್ಟ ಕುಡಿಯುವುದು. ಬೇಸರ ವಾದರೆ ತೆಲುಗು ಜನಪದ ಗೀತೆಗಳನ್ನು ಹಾಡುವುದು ನಾಯ್ಡುವಿನ ರೀತಿ. ಮನಸ್ಸಾದರೆ ಯಕ್ಷಗಾನದ ಹಾಡನ್ನು ಅಡಿಗಳು ಆಗಾಗ ಹೇಳುವುದುಂಟು.

ಶಂಕರ ನಾಯ್ಡು ಬಹುದಿನ ಬದುಕಲಿಲ್ಲ. ಇದ್ದಕ್ಕಿದ್ದಂತೆ ಒಂದು ರಾತ್ರಿ ಸತ್ತುಹೋದ. ಶವವನ್ನು ಮಣ್ಣುಪಾಲು ಮಾಡಿದ ಅಡಿಗಳು ಅಧಿಕಾರಿಗೆ ತಿಳಿಸಿದರು.

"ನೂರ ಇಪ್ಪತ್ತನೆಯ ನಂಬರಿನ ಕೋಣೆ" ಎಂದ ಕಾವಲುಗಾರ.

"ಹೆಸರು .."

"ಶಂಕರ ನಾಯುಡು"

ಅಧಿಕಾರಿಗಳು ನೂರ ಇಪ್ಪತ್ತನೆಯ ನಂಬರಿನ ಕೋಣೆಯ ಪಟ್ಟಿಯನ್ನು ನೋಡಿದರು. ಇರುವುದು ಇಬ್ಬರು ಮಾತ್ರ. ಶಂಕರನಾಯ್ಡು ಮತ್ತು ಶಂಕರ ಅಡಿಗಳು. ಅಧಿಕಾರಿ ತಪ್ಪಾಗಿ ಕೇಳಿಸಿಕೊಂಡ. ಇನ್ನೊಮ್ಮೆ ವಿಚಾರಿಸುವ ಗೋಜಿಗೂ ಹೋಗಲಿಲ್ಲ. ಶಂಕರ ಅಡಿಗರ ಹೆಸರನ್ನು ಸತ್ತವರ ಪಟ್ಟಿಯಲ್ಲಿ ಸೇರಿಸಿ ಅವರ ವಿಳಾಸಕ್ಕಾಗಿ ಶೋಧಿಸಿದ.

ಅಧಿಕಾರಿ ಅಡಿಗಳ ವಿಳಾಸಕ್ಕೆ ತಂತಿ ಬರೆದ. ದಕ್ಷಿಣ ಕನ್ನಡ ಜಿಲ್ಲೆಯ ಕಕ್ಕುಂಜೆ ಗ್ರಾಮಕ್ಕೆ ತಂತಿ ಬಂತು. "ಅಪ್ಪ ಸತ್ತರು" ಎಂದು ನರಸ ಅಳತೊಡ ಗಿದ. "ನನ್ನ ಕರಿಮಣಿ" ಕಡಿಯಿತೆಂದು ಗೋಳೋ ಅತ್ತಳು ರಂಗಮ್ಮ. ರಂಗಮ್ಮ ವಿಧವೆಯಾದಳು. ಕೆಂಪಿನ ಸೀರೆಯ ಸೆರಗನ್ನು ಬೋಳು ತಲೆಯ ಮೇಲೆ ಎಳೆದುಕೊಂಡರು. ಹದಿನಾಲ್ಕು ದಿನ ನಿರಾಂತಕನಾಗಿ ಕ್ರಿಯೆ ನಡೆಯಿತು.

ಪರಲೋಕಕ್ಕೆ ತೆರಳಿದ್ದ ಶಂಕರ ಅಡಿಗಳ ಆತ್ಮಕ್ಕೆ ಶಾಂತಿ ದೊರಕಲೆಂದು ಉಂಡು ತೃಪ್ತಿಗೊಂಡ ಎಲ್ಲಾ ಬ್ರಾಹ್ಮಣರೂ ನರಸನನ್ನು ಆಶೀರ್ವದಿಸಿದರು.

ಶಂಕರ ಅಡಿಗಳ ಎರಡು ಶ್ರಾದ್ಧ ನಡೆದಿತ್ತು. ಆದರೆ ಕಾರು ತಿಂಗಳಿನ ರಾತ್ರಿ.. ಜಡಿ ಮಳೆ ಸುರಿಯುತ್ತಿದ್ದಾಗಲೇ ಅಡಿಗಳು ಅಂದಮಾನಿನಿಂದ ಕಕ್ಕುಂಜೆಗೆ ಬಂದಿದ್ದರು. ಅವರಿಗೆ ಯಾವ ವಿಚಾರವೂ ತಿಳಿದಿರಲಿಲ್ಲ. ತನ್ನ ಹೆಂಡತಿಯನ್ನು ವಿಧವಾ ಸ್ಥಿತಿಯಲ್ಲಿ ನೋಡುವ ಕಲ್ಪನೆಯ ಸುಳಿವೂ ಅವರಿಗಿರಲಿಲ್ಲ. ಆರುವರ್ಷವಾಗಿತ್ತು ಅಂದಮಾನಿಗೆ ಹೋಗಿ.. ಅಡಿಗಳ ರೂಪವೂ ಹದಗೆಟ್ಟು ಹೋಗಿತ್ತು. ಮುಖದಲ್ಲಿ ವರ್ಚಸ್ಸೇ ಇರಲಿಲ್ಲ. ಹೆಂಡತಿ ಮಗನನ್ನು ನೋಡುವ ಆಸೆಯಿಂದ ಜಡಿ ಮಳೆಯಲ್ಲಿಯೇ ಬಂದರು. ಉಂಡು ಮಲಗಿದ್ದರು ನರಸ ಮತ್ತು ರಂಗಮ್ಮ. ನರಸನಿಗೆ ಜೊಂಪು ಹಿಡಿದಿತ್ತು. ರಂಗಮ್ಮನಿಗೆ ಇನ್ನು ನಿದ್ದೆ ಬರಲಿಲ್ಲ.

"ನರಸಾ.." ಎಂದು ಕರೆದಂತಾಯಿತ್ತು. ನಿಮಿಷ ಕಾಲ ರಂಗಮ್ಮನ ಬಾಯಿ ಕಟ್ಟಿಹೋಗಿತ್ತು. ತುಂಬಾ ಪರಿಚಿತವಾಗಿದ್ದಂಥ ಕೊರಳ ಧ್ವನಿ ಎಲ್ಲಿಯೋ ಕೇಳಿದಂತಾಗಿತ್ತು. "ಯಾರದು" ಎಂದು ಕೇಳಿದಳು ಗಟ್ಟಿಯಾಗಿ. ಹೆಂಡತಿಯ ಮಾತಿನ ಸ್ವರ ಕೇಳಿ ಅಡಿಗರಿಗೆ ಉತ್ಸಾಹ ಬಂತು. "ನಾನು ರಂಗಾ ಬಾಗಿಲು ತೆರೆ" ಎಂದರು ಅಡಿಗಳು.

"ಮಗು .. ಯಾರೋ ಕರೆಯುತ್ತಿದ್ದಾರೆ ನೋಡು" ಎಂದು ರಂಗಮ್ಮ ಹೇಳಿದರೂ ನರಸನ ಉತ್ತರವೇ ಇಲ್ಲ. ಯಾರೋ ಗಂಡಸರು ಬಂದಿದ್ದಾರೆಂದು ತಲೆಯ ಮೇಲೆ ಸೆರಗು ಸರಿಸಿ .. ಹಾಸಿಗೆಯ ಅಡಿ ಇಟ್ಟಿದ್ದ ಬೆಂಕಿಪೆಟ್ಟಿಗೆಯನ್ನು ಹೊರತೆಗೆದು ಕಲೆಹಿಡಿಯುತ್ತಿದ್ದ ಚಿಮಣಿಯ ದೀಪ ಹಚ್ಚಿದಳು. ಬಾಗಿಲು ತೆರೆದಾಗ ಮಳೆ ಸುರಿಯುತ್ತಲೇ ಇತ್ತು. "ಯಾರು ಈ ಮಳೆಯಲ್ಲಿ" ಎನ್ನುತ್ತಾ ರಂಗ ಚಿಮಣಿ ಮೇಲೆತ್ತಿ ನೋಡುತ್ತಾಳೆ... ಗಂಡ ನಿಂತಿದ್ದಾರೆ. ಅಡಿಗಳಿಗೆ ಮಾತ್ರ ಅದು ತನ್ನ ಹೆಂಡತಿ ಎಂಬುದು ಆ ಹೊತ್ತಿನಲ್ಲಿ ತಿಳಿಯದೇ ಹೋಯಿತು. ಆ ರೂಪ ಕಂಡದ್ದೇ ತಡ "ಅಯ್ಯೋ ಭೂತ" ಎನ್ನುತ್ತಾ ಚಿಟ್ಟನೆ ಚೀರಿ ನಡುಮನೆಯಲ್ಲಿ ಬಿದ್ದಳು ರಂಗ. ಚಿಮಣಿಯ ದೀಪ ಆರಿತ್ತು. "ಅಮ್ಮ ಏನು... ಏನು ?" ಎನ್ನುತ್ತಾ ನರಸ ಹಾಸಿಗೆ ಬಿಟ್ಟೆದ್ದ. "ಅಯ್ಯೋ ನರಸಾ... ಅವರ ಭೂತ" ಎಂದು ರಂಗಮ್ಮ ಬೊಬ್ಬೆ ಹಾಕಿದಳು.

"ನರಸಾ....ಏನಿದು ? ನಾನು ನಿನ್ನ ತಂದೆ....ರಂಗ ಎಲ್ಲಿದ್ದಾಳೆ ? ನನ್ನನ್ನು ಕಂಡು ಭೂತ ಎಂದ ಈ ಗಂಡ ಸತ್ತ ಹೆಂಗಸು ಯಾರು ?" ಎಂದು ಅಡಿಗಳು ಎಷ್ಟೇ ಹೇಳಿದರೂ ಹೆದರಿಕೊಂಡ ನರಸ ಗಟ್ಟಿಯಾಗಿ ಅರಚಿದ. ಪಕ್ಕದ ಮನೆಯ ಕಮ್ತಿಯವರು ದೀಪ ಹಿಡಿದು ಓಡಿಬಂದರು.

"ಕಮ್ತಿಯವರೆ....ನಾನು ಬಂದಿದ್ದೇನೆ ಏನಿದು ಹುಡುಗಾಟ...." ಎಂದು ಅಡಿಗಳು ಕಮ್ತಿಯವರ ಮುಖ ನೋಡಿದರು.

"ಯಾರು ಅಡಿಗಳೇ ...."

"ಹೌದು ಸ್ವಾಮಿ ...ಹೌದು"

"ನೀವು ಸತ್ತಿಲ್ಲವೆ ?"

"ಯಾರು ಹೇಳಿದರು...."

"ಎರಡು ವರ್ಷವಾಯ್ತು ತಂತಿ ಬಂದು ..."

"ಅಯ್ಯೋ....ನಾನು ಸತ್ತೇನೆಂದು ತಂತಿ ಬಂತೆ "?

"ಹೌದು ಅಡಿಗಳೆ....ಆ ವಿಧವೆಯೇ ನಿಮ್ಮ ಹೆಂಡತಿ. ಎರಡು ಶ್ರಾದ್ಧ ಮುಗಿದಿದೆ."

ಅತ್ತೇ ಬಿಟ್ಟರು ಅಡಿಗಳು. ರಂಗಮ್ಮನಿಗೆ ಎಲ್ಲಿಲ್ಲದ ದುಃಖ. ನರಸನನ್ನು ತಬ್ಬಿಕೊಂಡ ಅಡಿಗಳು "ಪಾಪಿಗಳು....ಎಂತಹ ಕೆಲಸ ಮಾಡಿದರು" ಎಂದು ಕಂಬನಿ ಸುರಿಸಿದರು. ರಂಗಮ್ಮನಂತೂ ಬಿಕ್ಕಿ ಬಿಕ್ಕಿ ಅಳುವುದಕ್ಕೆ ಆರಂಭಿಸಿದಳು. "ನಿಮ್ಮನ್ನು ನಾನು ಈ ಸ್ಥಿತಿಯಲ್ಲಿ ನೋಡುವುದೆ ? ದೇವರೇಕೆ ನನಗೆ ಆಯುಷ್ಯ ಕೊಟ್ಟ....ಯಾವ ಪಾಪ ಮಾಡಿದ್ದೆ ಎಂದು ಈ ಶಿಕ್ಷೆ " ಎಂದು ಗಂಡನ ಕಾಲಿಗೆ ಬಿದ್ದಳು. ಸತ್ತ ಅಡಿಗಳು ಮತ್ತೆ ಬಂದಿದ್ದರು. ರಂಗಮ್ಮನ ಮುಡಿ ಕಟ್ಟುವ ಕೇಶ ಮತ್ತೆ ಬೆಳೆಯತೊಡಗಿತು. ಈ ಅವಮಾನವನ್ನು ಸಹಿಸುವುದು ಅವರಿಂದಾಗಲಿಲ್ಲ. "ಈ ಊರು ನಮಗೆ ಬೇಡ....ಕರಾವಳಿ ತೀರಕ್ಕೆ ಹೋಗುವುದು ಒಳ್ಳೆಯದು" ಎಂದು ಅಡಿಗಳು ಇದ್ದ ಆಸ್ತಿಯನ್ನೆಲ್ಲ ಮಾರಿ ಆರು ತಿಂಗಳಲ್ಲೆ ಕಕ್ಕುಂಜೆ ಗ್ರಾಮ ಬಿಟ್ಟು ಕೋಟೇಶ್ವರಕ್ಕೆ ಬಂದರು. ವೆಂಕಪ್ಪಯ್ಯನ ಸೋದರತ್ತೆಯ ಸಂಬಂಧಿಕರಾದ್ದರಿಂದ ಅಡಿಗಳಿಗೆ ತಮ್ಮ ಪೂಜೆಯ ಹಕ್ಕನ್ನು ಮತ್ತು ಕ್ಷೇತ್ರದ ತೆಂಕುದಿಕ್ಕಿನಲ್ಲಿರುವ ಐದಂಕಣದ ಮನೆಯನ್ನು ಅವರಿಗೆ ಕೊಟ್ಟು ತಾವು ಮಲೆನಾಡಿಗೆ ಹೊರಟು ಹೋಗಿದ್ದರು.

ಆದರೆ ಶಂಕರ ಅಡಿಗಳು ಹೆಚ್ಚು ಕಾಲ ಬದುಕಲಿಲ್ಲ. ಅವರ ಪತ್ನಿ ಮಾರನೆಯ ವರ್ಷವೇ ರಂಗಮ್ಮನೂ ನಿಧನ ಹೊಂದಿದಳು. ಮಗ ನರಸ ಮಾತ್ರ ತನ್ನ ಸಂಸಾರದೊಂದಿಗೆ ದೇವಾಲಯದ ಪೂಜೆ ಮಾಡಿಕೊಂಡು ಹತ್ತು ಮನೆಯ ಪುರೋಹಿತನಾಗಿ ಕೋಟೇಶ್ವರದಲ್ಲಿ ವೈದಿಕ ಬ್ರಾಹ್ಮಣನಾಗಿ ಬಾಳಿದ. ಹಾಗೆ ಬಂದವನು ನರಸಪ್ಪಯ್ಯ. ಕೋಟೇಶ್ವರದ ಕ್ಷೇತ್ರ ಪಾಲಿಯಾಗಿ ಅಂದಿಗೆ ಹನ್ನೆರಡು ವರ್ಷ ಕಳೆದಿತ್ತು.

ಕಾಮಾಕ್ಷಿ ಎಷ್ಟೇ ಹೇಳಿದರೂ "ದೇವರಿಗೆ ಪೂಜೆಯಾಗದೆ ನಾನು ಊಟ ಮಾಡುವುದಿಲ್ಲ. ಕ್ಷೇತ್ರದ ಜನರ ಬಗ್ಗೆ ಶಿವನಿಗೆ ಬೇಸರವಾಗಿರಬೇಕು. ಪದ್ಮಾವತಿ ಸತ್ತದ್ದೇ ಆರತಿ ನಂದುವುದಕ್ಕೆ ಕಾರಣವಾಯ್ತು. ಮೊದಲು ಗುಡಿಗೆ ಹೋಗಿ ಬರುತ್ತೇನೆ. ಅಲ್ಲಿ ಏನಾಗಿದೆಯೋ..." ಎಂದು ಐತಾಳರು ಗುಡಿಯತ್ತ ಧಾವಿಸಿದರು. ಅರ್ಧ ದಾರಿಗೆ ಬಂದಾಗ ಜಾಗಟೆಯ ಸದ್ದು ಕೇಳಿಸಿತು. "ಅಂತೂ ಪೂಜೆ ನಡೆದಿದೆ" ಎಂಬ ಸಮಾಧಾನದಿಂದಲೇ ದೇವಾಲಯಕ್ಕೆ ಬಂದರು. ಕೇರಿ ತುಂಬಾ ಅದೇ ಮಾತು. "ಪದ್ಮಕ್ಕ ಸತ್ತಳು.... ನರಸಪ್ಪಯ್ಯ ಹಾಸಿಗೆ ಹಿಡಿದರು... ಮಂಗಳಾರತಿ ಕೆಳಗೆ ಬಿತ್ತು" ಎಂದು. ಅವರು ಗುಡಿಯ ಒಳ ಬಂದಾಗ ಬಲಿಪೂಜೆಯಾಗುತ್ತಿತ್ತು. ಮಂಜನನ್ನು ವಿಚಾರಿಸಿದಾಗ ಅವನು "ಇದರಲ್ಲಿ ಏನೋ ರಹಸ್ಯವಿದೆ ಐತಾಳರೆ....ನರಸನ ಮೇಲೆ ಅನುಮಾನ... ನೀವು ಹೋಗಿ ಅವನನ್ನು ಕಂಡುಬನ್ನಿ" ಎಂದರು.

ಕೋಟಿ ಐತಾಳರು ಬಂದರು ಎಂದಾಗ ನರಸನ ಮುಖ ಬಿಂಡಿ ಬಿಪ್ಪೆಯಾಗಿತ್ತು. ಬೆಳಗಿನಿಂದಲೂ ಅವನ ಕಣ್ಣಿಗೆ ಕಾಣುತ್ತಿದ್ದ ರೂಪ.... ಅದು ಪದ್ಮಾವತಿಯದು. ಆಕೆಯೇ ಪಿಶಾಚಿಯಾಗಿ ಬಂದು ಅವನನ್ನು ಹಿಡಿದುಕೊಂಡಳೋ ಏನೋ....ಐತಾಳರನ್ನು ಕಂಡಾಗ ಮತ್ತೆ ಹೆದರಿ ನಡುಗುವುದಕ್ಕೆ ಆರಂಭಿಸಿದ. ಅವನ ಹಾಸಿಗೆಯ ಬಳಿ ಬಂದರು ಐತಾಳರು.

"ನಾನು....ಕೋಟಿ ಐತಾಳ...."

ಪಿಳಿಪಿಳಿ ನೋಡಿದ ನರಸ.

"ಹೇಳು ನರಸಾ...ನಿನಗೇನಾಯ್ತು, ಪ್ರಾಯದ ಕಾಲದಲ್ಲಿ ಪದ್ಮನ

ಚಾಮರ ಕಂಡೆಯಾ ? ಸತ್ಯ ಹೇಳು. ನಿನಗೆ ಈ ಗತಿ ಬರುವುದಕ್ಕೆ ಒಂದು ಕಾರಣವಿದೆ ? ಅದನ್ನು ನಾನೇ ಊಹಿಸಿದ್ದೇನೆ. ಅದು ನಿಜವೆ ?"

"ಅಯ್ಯೋ....ನಾನೆಂತಹ ಕೆಲಸ ಮಾಡಿದೆ...." ಎನ್ನುತ್ತಾ ನರಸ ಐತಾಳರ ಪಾದದ ಮೇಲೆ ತಲೆಯಿಟ್ಟು.... "ಹೌದು....ಪದ್ಮಾವತಿಯ ಪ್ರೇತವೇ ನನ್ನ ಮುಂದೆ ನಿಂತಿದೆ...." ಎಂದು ಗೋಳಾಡಿದ.

ಮತ್ತೆ ಐತಾಳರು ಏನನ್ನೂ ಹೇಳಲಿಲ್ಲ. ಹೊರಬಂದರು.

ನರಸ ಚಿಟ್ಟನೆ ಚೀರಿದ. ಅವನ ಹೆಂಡತಿ ಧಾವಿಸಿ ಬಂದಳು ಹೊರಗೆ.

"ಐತಾಳರೆ....ಪ್ರೇತ ಎಂದು ಹೆದರಿಕೊಂಡು ಕೂಗುತ್ತಾರೆ. ನನಗೇಕೋ ಭಯವಾಗುತ್ತದೆ" ಎಂದಳು.

"ಅವನು ಮಾಡಿದ ಪಾಪಕರ್ಮ....ಈಗ ಅನುಭವಿಸುತ್ತಿದ್ದಾನೆ.... ನಾನೇನು ಮಾಡುವುದು ? ಎಲ್ಲವೂ ಶಿವನ ಆಟ" ಎನ್ನುತ್ತಾ ಐತಾಳರು ಗುಡಿಗೆ ಬಂದರು.

೩

ಪಡಸಾಲೆಯ ಬಾಗಿಲು ದಢಾರನೆ ಹೊರಗೋಡೆಗೆ ಅಪ್ಪಳಿಸಿದ ಸದ್ದು ಕೇಳಿ ಅಡಿಗೆ ಮನೆಯಲ್ಲಿದ್ದ ಶಾರದೆ ಹೆದರಿದಳು. ಇದ್ದಕ್ಕಿದ್ದಂತೆ ನಂದ ಗಟ್ಟಿಯಾಗಿ ಒಮ್ಮೆ ಒದರಿಕೊಂಡು "ಭೂತ ಬಂತು .." ಎನ್ನುತ್ತ ಅಡಿಗೆ ಮನೆಯ ಒಳನುಗ್ಗಿ ಶಾರದೆಯ ಹಿಂದೆ ನಿಂತಾಗ ಆಕೆಯ ಕೈಯಲ್ಲಿದ್ದ ಒಗ್ಗರಣೆಯ ಸೌಟು ಒಲೆಗೆ ಬಿದ್ದು ಬೆಂಕಿ ಧಗ್ಗನೆ ಹೊತ್ತಿಕೊಂಡಿತು. ಅನಿರೀಕ್ಷಿತ ಘಟನೆಯಿಂದ ಅವಳ ಹೆಣ್ಣು ಹೃದಯ ಹಿಂಡಿ ಹಿಪ್ಪೆಯಾಗಿಹೋಗಿತ್ತು. ಭೂತ ಎಂಬ ಮಾತು ಕಿವಿಗೆ ಬಿದ್ದಾಗ ಮಾತನಾಡುವುದಕ್ಕೆ ಉಸಿರೇ ಇಲ್ಲವಾಗಿದ್ದರೂ ಅತಿ ಪ್ರಯಾಸದಿಂದ ಗಂಡನ ತೋಳು ಹಿಡಿದು "ಏನಾಯ್ತು ? ಅಷ್ಟೇಕೆ ಹೆದರಿಕೊಂಡದ್ದು ?" ಎಂದು ಕೇಳಿದಳು. ಗಂಡನ ಮುಖ ನೋಡುವುದಕ್ಕೆ ಆಕೆಗೆ ಕಷ್ಟವಾಗಿತ್ತು. ಹಿಂದಿನ ವರ್ಚಸ್ಸೇ ಇರಲಿಲ್ಲ. ಪ್ರೇತಕಳೆ ತುಂಬಿಕೊಂಡಂತೆ ಕಂಡಿತು. ಹೆಂಡತಿಯ ಮಾತಿಗೆ ಯಾವ ಉತ್ತರವನ್ನೂ ಕೊಡದ ನಂದ ಮತ್ತೆ ಅಳುವುದಕ್ಕೆ ಆರಂಭಿಸಿದ. ಬಿಕ್ಕಿದ. [illegible] ಹೇಳಿದ "ಪದ್ಮನ ಪ್ರೇತ ಬಂತು — ಪ್ರೇತ" ಎಂದು. ಶಾರದೆಯ ಆ[illegible]ಗಾಯ್ತು. ಪಡಸಾಲೆಯಲ್ಲಿ ಪದ್ಮಾವತಿಯ ಪ್ರೇತ ಬಂದಿದೆ ಎಂದಾಗ ಆಕೆಯ ಸ್ಥಿತಿ ಏನಾಗಿತ್ತೋ! ನಾಲಗೆ ಒಣಗಿ ಗಂಟಲು ಆರಿಬಂತು. [illegible]ಯನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಎರಡು ದಿನದ ಹಿಂದೆ ನಡುರಾತ್ರಿಯ ಹೊತ್ತು ಮನೆಯ ತೆಂಕುದಿಕ್ಕಿನಿಂದ ಹೆಣ್ಣಿನ ಅಳುವ ಧ್ವನಿಯನ್ನು ಅವಳು

ಕೇಳಿದ್ದಳು. ಕತ್ತಲೆಯಲ್ಲಿ ಹೆದರಿಕೊಂಡಿದ್ದ ಶಾರದೆಗೆ ಅಳುವ ಧ್ವನಿ ಕೇಳಿಸಿತ್ತೇ ಹೊರತು–ಚಿಮಣಿಯ ದೀಪ ಇಟ್ಟುಕೊಂಡು ರಾತ್ರಿ ಎಲ್ಲಾ ದೇವರ ಸ್ಮರಣೆ ಮಾಡುತ್ತಾ ಗಂಡನ ಹಾಸಿಗೆಯಲ್ಲಿ ಕುಳಿತಿದ್ದರೂ ಆಕೆಯ ಕಣ್ಣಿಗೆ ಭೂತ ಕಾಣಿಸಿರಲಿಲ್ಲ. ರಾತ್ರಿ ಪಡಸಾಲೆಯಲ್ಲಿ ಯಾರೋ ನಡೆದು ಬರುತ್ತಿರುವಂತೆ ಕಾಲಿನ ಸಪ್ಪಳ... ಆಗಾಗ ಕೈಬಳೆಗಳ ಅಲುಗಾಡಿದ ಸದ್ದು....ನಡುವೆ ಅಳುವ ಧ್ವನಿ ...ಎಲ್ಲವನ್ನೂ ಕೇಳಿಸಿಕೊಂಡಳು. ಆಕೆಗೆ ಪದ್ದನ ಪ್ರೇತದಿಂದ ಯಾವ ತೊಂದರೆಯಾಗದಿದ್ದರೂ ಗಂಡನ ಸ್ಥಿತಿ ಕಂಡೇ ಕಂಗಾಲಾಗಿದ್ದಳು. ಪ್ರೇತ ಬಂತು ಎಂದು ನರಸ ಭಯದಿಂದ ಕೂಗಿ ನೆಲದ ಮೇಲೆ ಬಿದ್ದು ಹೊರಳಾಡುವುದನ್ನು ಕಂಡೇ "ದೇವರೆ ನನಗೇಕೆ ಈ ಶಿಕ್ಷೆ" ಎಂದು ಬಹುವಾಗಿ ಅತ್ತಿದ್ದಳು. ಪ್ರೇತವನ್ನು ತೃಪ್ತಿಪಡಿಸಲು ಸಂಜೆಯಾದೊಡನೆ ಹರಿವಾಣದಲ್ಲಿ ಅರಸಿನ ಕುಂಕುಮವಿಟ್ಟು... ತೊಳೆದ ಲೋಟದಲ್ಲಿ ನೊರೆಹಾಲನ್ನಿಟ್ಟು.... ಮಲ್ಲಿಗೆಯ ದಿಂಡೆಯೊಂದನ್ನು ನಡುವೆ ಇಟ್ಟು ಎರಡು ದಿನ ಪಡಸಾಲೆಯಲ್ಲಿ ಇಟ್ಟು ಕೈ ಮುಗಿದಳು. ಮೊದಲನೆಯ ದಿನ ಇಟ್ಟದ್ದು ಬೆಳಗಿನ ತನಕ ಹಾಗೇ ಇತ್ತು. ಆದರೆ ಎರಡನೆಯ ರಾತ್ರಿ ಪರಿಸ್ಥಿತಿ ಕೊಂಚ ದುಗುಡಾಯಿಸಿತು. ಹತ್ತುಗಂಟೆಯಾಗಿರಬೇಕು .. ಪಡಸಾಲೆಯಲ್ಲಿ ಹಾಲಿನ ಲೋಟ ಉರುಳಿದ ಸದ್ದು ಕೇಳಿಸಿತು. ಅರೆಕ್ಷಣದಲ್ಲೇ ಅರಸಿನ ಕುಂಕುಮ ಇಟ್ಟ ಹರಿವಾಣವನ್ನು ಜಗಲಿಯತ್ತ ಬಿಸಾಡಿದ್ದನ್ನು ಶಾರದೆಯೇ ಕಂಡಳು. ಪಡಸಾಲೆಗೆ ಹೋಗುವುದಕ್ಕೆ ಭಯ. ಬೆಳ್ಳಗೆ ಬೆಳಕು ಹರಿದ ಮೇಲೆ ಪಡಸಾಲೆಯ ಹೊರನಿಂತು ಒಳ ನೋಡುತ್ತಾಳೆ... ಪದ್ದನ ಪ್ರೇತ ಹಾಲನ್ನು ಕೆಳಚೆಲ್ಲಿ ..ಹೂವನ್ನು ಸಿಕ್ಕಾಪಟ್ಟೆ ಪಡಸಾಲೆ ತುಂಬ ಕಿತ್ತು ಕಿತ್ತು ಬಿಸಾಡಿತ್ತು. ಆ ಮನೆಯ ಹಾಲು ಕುಡಿಯುವುದು ಆಕೆಗೆ ಬೇಡವಾಗಿತ್ತೋ ಏನೋ.... ಹರಿವಾಣ ಕಸದ ತಿಪ್ಪೆಯ ಬಳಿ ಉರುಳಿತ್ತು ಹಾಲಿನ ಲೋಟ ತಲೆಕೆಳಗಾಗಿ ಮೂಲೆಯಲ್ಲಿ ಬಿದ್ದಿತ್ತು. ಹನ್ನೊಂದನೆಯ ದಿನ ಹೊತ್ತು ಕಂತುವ ಹೊತ್ತಿಗೆ ಗಂಡನನ್ನು ಪಡಸಾಲೆಯಲ್ಲಿ ಕುಳ್ಳಿರಿಸಿ ವಿಭೂತಿ ಕರಡಿಕೆಯನ್ನು ಮುಂದಿಟ್ಟು ಪಂಚಪಾತ್ರೆಯಲ್ಲಿ ನೀರು ತುಂಬಿಸಿ, ಗಂಡನ ಅಂಗೈ ಮೇಲೆ ಮಡಿವಸ್ತ್ರ ಹಾಕಿ "ನೋಡಿ ಸಂಧ್ಯಾವಂದನೆ ಮಾಡಿ. ನೂರೆಂಟು ಗಾಯತ್ರಿ ಮಂತ್ರ ಹೇಳಿ ..ಏನೂ ಆಗುವುದಿಲ್ಲ" ಎಂದು ಹೇಳಿದ್ದಳು. ನರಸ ಸಂಧ್ಯಾವಂದನೆಗೆ ಕುಳಿತ ಮೇಲೆ ಅಡಿಗೆ

ಮನೆಗೆ ಬಂದಿದ್ದಳು. ಪಡುವಲ ಕಾಯಿಯ ಸಾಸಿವೆಗೆ ಒಗ್ಗರಣೆ ಹಾಕುವುದಿತ್ತು. ಅಷ್ಟರಲ್ಲಿ ನರಸ "ಭೂತ" ಎಂದು ಓಡಿಬಂದಾಗ ಶಾರದೆಗೆ ದುಃಖ ತಡೆಯುವುದಕ್ಕಾಗಲಿಲ್ಲ. ಆಕೆಯ ಕಣ್ಣಿಂದ ನೀರಿಳಿಯಿತು. ಗಟ್ಟಿಯಾಗಿ ಕೂಗಿಕೊಂಡಳು.. "ಪದ್ಮಾ....ನನ್ನಿಂದ ಯಾವ ಅಪರಾಧ ನಡೆದಿದೆ ಎಂದು ಹೀಗೇ ರಾತ್ರಿ ಹೊತ್ತು ಪ್ರೇತವಾಗಿ ಬಂದೆ. ನಿನಗೆ ನಾನು ಯಾವ ಅನ್ಯಾಯ ಮಾಡಿದ್ದೆ ? ಏಕಮ್ಮ ನನ್ನನ್ನು ಹೆದರಿಸುತ್ತಿ ? ನಾನು ಹೆಂಗಸು. ನನ್ನ ಮನಸ್ಸು ನಿನಗೆ ಗೊತ್ತು. ಎರಡು ವರ್ಷದಿಂದ ದಿನಾ ನೀನು ನನ್ನನ್ನು ಕಂಡಿದ್ದೆ. ನಾನು ಬೇಕಾದರೆ ನಿನ್ನನ್ನು ನೋಡಿದ್ದೇನೆ. ಅದರಿಂದ ಅಪರಾಧ ನಡೆದದ್ದು ನಿಜ.. ಅದಕ್ಕೆ ನನ್ನನ್ನೇಕೆ ಹೀಗೆ ಗೋಳಾಡಿಸುತ್ತಿ....ನಿನ್ನ ಆತ್ಮಕ್ಕೆ ಶಾಂತಿ ದೊರಕಿಸುವಂತೆ ನನ್ನ ಕೈಯಿಂದಾಗುವ ಪ್ರಯತ್ನ ಮಾಡುತ್ತೇನೆ ತಾಯಿ. ದಯವಿಟ್ಟು ಕತ್ತಲಾದ ಮೇಲೆ ಈ ಮನೆಗೆ ಬರಬೇಡ" ಎಂದು ಕೈ ಮುಗಿದು ಕೇಳಿಕೊಂಡಳು. ಯಾವ ಉತ್ತರವೂ ಇಲ್ಲ. ಆದರೆ ಪಡಸಾಲೆಯ ಹತ್ತಿರಕ್ಕೆ ಹೋಗುವ ಎದೆಗಟ್ಟಿತನ ಆಕೆಗಿಲ್ಲ. ಏನು ಮಾಡುವುದಕ್ಕೂ ಆಕೆಗೆ ತೋಚಲಿಲ್ಲ. ಜಗಲಿಗೆ ಬಂದಳು. ಪಡಸಾಲೆಯಲ್ಲಿ ಮತ್ತೆ ಅದೇ ಅಳುವಿನ ಧ್ವನಿ. ಮೂಗಿನ ಸಿಂಬಳ ತೆಗೆಯುವ ಗದ್ದಲ ಕೇಳಿ ಬೆಚ್ಚಿಬಿದ್ದಳು ಶಾರದೆ. ಎರಡು ದಿನದ ಹಿಂದೆ ಬೆಳಗ್ಗೆ ಹತ್ತು ಗಂಟೆಯ ಸಮಯ ಪದ್ಮಾವತಿಯ ಜಕಣಿ ಬಂದು ತನ್ನ ಗಂಡನನ್ನು ಹಿಡಿದುಕೊಂಡಾಗ ನರಸನ ವಿಚಿತ್ರ ವರ್ತನೆಯನ್ನು ಅವಳು ಕಂಡು ನಡುಗಿಹೋಗಿದ್ದಳು. "ಸ್ನಾನ ಮಾಡಿ ಬನ್ನಿ" ಎಂದು ಗಂಡನ ಮೈಗೆ ಎಣ್ಣೆ ಸವರಿ ಹಂಡೆ ತುಂಬ ನೀರು ಕಾಯಿಸಿದ್ದಳು. ನರಸ ಸ್ನಾನಮಾಡಿ ಬಂದ. ಅಂಗಳದಲ್ಲಿ ಬರುತ್ತಿದ್ದಾಗಲೇ ಅವನಿಗೆ ಪ್ರೇತ ಆವೇಶಗೊಂಡಿರಬೇಕು.. ಅಡಿಗೆ ಮನೆಗೆ ಬಂದು ಅರಸಿನ ಕುಂಕುಮ ಹಣೆ ತುಂಬ ಹಚ್ಚಿಕೊಂಡ. ಶಾರದೆಯ ಸೀರೆಯನ್ನೇ ಸುತ್ತಿಕೊಂಡು ಆಕೆಯ ಕುಪ್ಪಸವನ್ನು ಮೈಮೇಲೆ ಹಾಕಿಕೊಳ್ಳುತ್ತಾ "ನನ್ನ ಸ್ವಾಮಿ ಎಲ್ಲಿ.. ನನ್ನ ಸ್ವಾಮಿಯನ್ನು ಕರೆಯಿರಿ" ಎಂದು ಹೇಳಿದಾಗ ಶಾರದೆಗೆ ಜೀವವೇ ತಲ್ಲಣಿಸಿಹೋಗಿತ್ತು. ಗಂಡನ ಸ್ವರವೇ ಇರಲಿಲ್ಲ. ಲಕ್ಷಣವಾಗಿ ಪದ್ಮಾವತಿಯ ಕಂಠವೇ ಆಗಿತ್ತು. ಜೀವಂತ ವ್ಯಕ್ತಿಯೇ ಮಾತನಾಡುತ್ತಿದ್ದಂತೆ 'ನನ್ನ ಸ್ವಾಮಿ ಎಲ್ಲಿ ?' ಎಂದಿದ್ದ ನರಸ. ಅತ್ತು ಬಿದ್ದಳು ಶಾರದೆ. ಮತ್ತೆ ಎರಡು ದಿನ ಜಕಣಿಯ ಕಾಟವಿದ್ದಿರಲಿಲ್ಲ.

ಆದರೆ ನರಸ ಆಗಾಗ ಕೂಗಿಕೊಳ್ಳುವುದು ಇದ್ದೇ ಇತ್ತು. ಅಕ್ಕಪಕ್ಕದವರಲ್ಲಿ ಹೇಳಿಕೊಂಡು ಕಂಬನಿ ಸುರಿಸಿದಳು ಶಾರದೆ. ನರಸನ ಬಗ್ಗೆ ಯಾರೂ ಅನು ಕಂಪದ ಮಾತನ್ನು ಹೇಳಿರಲಿಲ್ಲ. "ನಿನ್ನ ಗಂಡ ಮಾಡಿದ ಘೋರ ಪಾಪಕ್ಕೆ ಇದು ಶಿಕ್ಷೆಯೇ ಅಲ್ಲ....ಇನ್ನೂ ಅನುಭವಿಸಲಿ" ಎಂದರು ಕೆಲವರು. ಕೋಟಿ ಐತಾಳರ ಮುಂದೆ ಸೆರಗು ಚಾಚಿ ತಮ್ಮ ಅಪರಾಧವನ್ನು ಕ್ಷಮಿಸಿ ಪ್ರೇತ ಸಂಸ್ಕಾರ ಮಾಡಿ ಎಂದು ಮೊರೆಯಿಟ್ಟಾಗ ಐತಾಳರು "ಈ ಕಾರ್ಯಕ್ಕೆ ಸರ ಕಾರವೇ ಗಲ್ಲುಶಿಕ್ಷೆ ಕೊಡಬೇಕಾಗಿತ್ತು....ಹೇಗೆ ಪದ್ಮಾವತಿ ಸತ್ತಳೋ ಹಾಗೆ ಅವನ ಕೊರಳಿಗೆ ನೇಣು ಬಿಗಿಯಿಸಿ ಸಾಯಿಸಬೇಕಾಗಿತ್ತು. ಆಗ ನೀನು ವಿಧವೆಯಾಗುತ್ತಿದ್ದಿ ಶಾರದಾ. ನಿನಗೆ ಮಾಂಗಲ್ಯ ಯೋಗವೇ ಇರುತ್ತಿರಲಿಲ್ಲ. ಆದರೆ ನನ್ನ ಪದ್ದ ಪ್ರೇತವಾಗಿ ಬಂದು ಕಾಡಿದರೂ ನಿನಗೆ ಮುತ್ತೈದೆಯಾಗಿ ಬಾಳುವ ಭಾಗ್ಯವಿದೆ. ನನಗೆ ಯಾರಮೇಲೂ ಮತ್ಸರವಿಲ್ಲ. ಆದರೆ ಇದು ಮಾಡಬಾರದ ಕೆಲಸ. ನಿನ್ನ ಗಂಡ ನನ್ನ ಪದ್ದನನ್ನು ಸಾಯಿಸಿದ....ಈಗ ಅದೇ ಕೈಯಿಂದ ಮಾಡಿದ ಪಾಪವನ್ನು ಉಣ್ಣುತ್ತಿದ್ದಾನೆ" ಎಂದು ಬಿಟ್ಟಿದ್ದರು ಐತಾಳರು.

ಹತ್ತು ನಿಮಿಷ ಕಳೆದಿತ್ತು. ಹೆಂಡತಿಯ ತೋಳನ್ನು ಹಿಡಿದು ಮರೆ ಯಾಗಿ ಕುಳಿತಿದ್ದ ನರಸ ಒಮ್ಮೆ ಕೂಗಿಕೊಂಡ. "ಅಯ್ಯೋ....ಪ್ರೇತ ಬಂತು" ಎನ್ನುತ್ತಾ ಶಾರದೆಯನ್ನು ಗಟ್ಟಿಯಾಗಿ ಹಿಡಿದುಕೊಂಡಾಗ ಆಕೆ "ಎಲ್ಲಿ....ಎಲ್ಲಿ?" ಎಂದು ಎದುಬಾರಿ ಕೇಳಿದಳು. ಸಟಕ್ಕನೆ ಅರ್ಧ ಮುಚ್ಚಿದ ಅಡಿಗೆ ಮನೆಯ ಬಾಗಿಲು ತೆರೆಯಿತು. ಗಾಳಿಯ ಬೀಸಾಟವಿದ್ದಿರಲಿಲ್ಲ. ಹಾಗಿದ್ದರೆ ಬಾಗಿಲು ತೆರೆದವರು ಯಾರು? ಆಗ ಮಾತ್ರ ಶಾರದೆಯ ಜೀವ ಅಂಗೈ ಮೇಲೆ ಬಂದಿತ್ತು. ಪದ್ಮಾವತಿಯ ಪ್ರೇತ ಅಡಿಗೆ ಮನೆಗೆ ಬಂದಿರುವುದು ನಿಶ್ಚಯ. ಯಾರೋ ನಡೆದು ಬಂದಂತೆ ಸದ್ದು. ಅಲ್ಲನೆ ಕಾಲುಂಗುರ ನಡೆಯುವಾಗ ನೆಲಕ್ಕೆ ತಾಗಿದ ಸಪ್ಪಳ ಕೇಳಿದ ಮೇಲಂತೂ ಶಾರದೆಯ ಸ್ಥಿತಿ ಚಿಂತಾಜನ ಕವಾಯ್ತು. ಪ್ರಾಣಭಯ ಅವಳನ್ನು ಆವರಿಸಿತು. "ಯಾರು... ಯಾರು ?" ಎಂದು ಕೇಳಿದಳು. ಹತ್ತಿರದಲ್ಲೇ ಸೆರಗನ್ನು ಮೇಲಕ್ಕೆಳೆದಾಗ ಬೀಸುವ ತುಸುಗಾಳಿ ಆಕೆಯ ಮುಖದತ್ತ ಬೀಸಿದಾಗ ಅವಳೇ ಗಟ್ಟಿಯಾಗಿ ಬೊಬ್ಬೆ ಹಾಕಿದಳು. "ಭೂತ... ಭೂತ" ಎಂದು ಶಾರದೆ ಚೀರಿದಾಗ ಮಂಜರಿಗೆ

ಅದು ಮೊದಲು ಕೇಳಿಸಿತು. ಕೈಕಾಲು ತೊಳೆಯಲು ಕಟ್ಟೆಗೆ ಬಂದಿದ್ದರು. ಇಪ್ಪತ್ತು ಮಾರು ದೂರದಲ್ಲಿ ನರಸನ ಮನೆ. ಶಾರದೆಯ ಕೂಗಾಟ ಕೇಳಿದಾಗ ಅವರಿಗೂ ತುಂಬಾ ಮನ ನೊಂದಿತು. ಪರರ ಸುಖಕಷ್ಟವನ್ನು ವಿಚಾರಿಸುವ ಮನೋಭಾವ. ಭೂತ ಪ್ರೇತದ ಬಗ್ಗೆ ಹೆಚ್ಚಿನ ಭಯವಿದ್ದರೂ ಸಮಯಕ್ಕೆ ಹೋಗದಿದ್ದರೆ ಅಪವಾದ ಎಂದೇ ಜಗಲಿಗೆ ಬಂದು ಮೈಮೇಲೆ ವಸ್ತ್ರ ಹಾಕಿಕೊಂಡರು. ಅವರ ಹೆಂಡತಿಗೆ ಮಾತ್ರ ಆ ಹೊತ್ತಿನಲ್ಲಿ ಹೋಗುವುದು ಬೇಡವಾಗಿ ಕಂಡಿತೋ ಏನೋ...."ಹಾಳಾಗಿ ಹೋಗಲಿ ಈ ರಾತ್ರಿ ಹೊತ್ತು ನೀವೇಕೆ ಹೋಗುವುದು? ಅನುಭವಿಸಲಿ... ಸುಮ್ಮನೆ ಅಲ್ಲ... ಪದ್ದನನ್ನ ಕೊಂದು ಮನೆಗೆ ಬೆಂಕಿ ಹಾಕಿದ ನೋಡಿ... ಅದೇನು ಸಾಮಾನ್ಯವೆ? ದೇವರು ಅಷ್ಟಕ್ಕೆ ಬಿಡುತ್ತಾನೆಯೆ? ನಿಮಗೇಕೆ ಈ ಗೋಳು" ಎಂದಳು. "ಇರಲಿ... ಎಷ್ಟಾದರೂ ಪಕ್ಕದ ಮನೆ... ಶಾರದೆ ಒಬ್ಬಳೇ ಇದ್ದಾಳೆ. ಎಷ್ಟು ಹೆದರಿಕೊಳ್ಳುತ್ತಾಳೋ ಏನೋ. ಇಷ್ಟು ಹತ್ತಿರದಲ್ಲಿ ಗಂಡಸು ಎನ್ನಿಸಿಕೊಂಡ ನಾನಿರುವಾಗ ಸಮಯಕ್ಕೆ ಹೋಗದಿದ್ದರೆ ನಿಯತ್ತಿನ ಕೊಲೆಯಾಗುತ್ತದೆ. ಪರಿಸ್ಥಿತಿ ನೋಡಿ ವರ್ತಿಸಬೇಕು... ನಾಳೆ ನಾನೇ ಮನೆಯಲ್ಲಿ ಇಲ್ಲದಿದ್ದಾಗ ರಾತ್ರಿ ಹೊತ್ತು ಏನಾದರೂ ಆಕಸ್ಮಿಕ ನಡೆದರೆ ಆಗ ನಿನಗೇನಾಗುತ್ತದೆ ಹೇಳು? ಆಗ ನೆರೆಮನೆಯವರು ಹೊತ್ತಿಗೆ ಬಾರದಿದ್ದರೆ... ಅವನು ಬ್ರಾಹ್ಮಣನಾಗಿ ಮಾಡಬಾರದ ಕೆಲಸ ಮಾಡಿದ. ಆ ಹುಡುಗಿ ಏನು ಮಾಡಿದ್ದಾಳೆ? ಹೋಗಲಿ... ಪದ್ಮಾವತಿಯ ಪ್ರೇತ ನನ್ನನ್ನು ಏನು ಮಾಡುತ್ತದೆ... ಬರುತ್ತೇನೆ" ಎನ್ನುತ್ತಾ ಮಂಜರು ಗಾಯತ್ರಿಮಂತ್ರ ಹೇಳುತ್ತಾ ನರಸನ ಮನೆಗೆ ಬಂದರು.

ಮಂಜರು "ಏನಮ್ಮ ಶಾರದ..." ಎನ್ನುತ್ತಾ ಜಗಲಿಗೆ ಬಂದಾಗ ಶಾರದೆಗೆ ಅರ್ಧ ಜೀವ ಬಂತು. ಉಸಿರು ಸಡಿಲಾಯಿತು. ನರಸ ಹೆಂಡತಿಯ ತೋಳನ್ನು ಹಿಡಿದುಕೊಂಡು ಮಂಕು ಹಿಡಿದವನಂತೆ ಕುಳಿತಿದ್ದ. ಮಂಜರನ್ನು ಕಂಡಾಗ ಅವನಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಎರಡು ಬಾರಿ "ನರಸಾ" ಎಂದು ಕರೆದರು ಮಂಜರು. ಅವನಿಗೆ ಕೇಳಿಸಿತೋ ಇಲ್ಲವೋ ತೀರಾ ಹೆದರಿಕೊಂಡವನಂತೆ ಶಾರದೆಯ ಬೆನ್ನಿಗೆ ಮರೆಯಾಗಿ ಮುಖ ತಿರುಗಿಸಿದ. "ಎಲ್ಲಿದೆ ಪ್ರೇತ... ಸುಮ್ಮನೆ ಏಕೆ ಹೆದರುತ್ತಿ?" ಎಂದು ಕೇಳಿದಾಗ ಮಾತ್ರ ಮತ್ತೆ "ಪ್ರೇತಾ" ಎಂದು ಕೂಗಿಕೊಂಡ. "ಎಲ್ಲಿ" ಎಂದು ಮಂಜರು

ಕೇಳಿದ್ದಕ್ಕೆ ಪಡಸಾಲೆಯತ್ತ ಕೈಮಾಡಿ ತೋರಿಸುತ್ತಾ ಅಳುವುದಕ್ಕೆ ತೊಡಗಿದ. ಚಿಮಣಿಯ ದೀಪದಲ್ಲಿ ಶಾರದೆಯ ಮುಖ ಕಂಡು ಮಂಜರಿಗೆ ದುಃಖವಾಯ್ತು. ನರಸನ ಮುಖವಂತೂ ನೋಡುವುದಕ್ಕೆ ತೀರಾ ಕಷ್ಟವಾಗಿತ್ತು. ಯಾವ ಮಾತಿನಿಂದ ಆಕೆಯನ್ನು ಸಮಾಧಾನಿಸಬೇಕು–ಎಂಬುದೇ ಅವರಿಗೆ ತಿಳಿಯಲಿಲ್ಲ. ಶಾರದೆ ಮಾತ್ರ ಬಿಕ್ಕಳಿಸುತ್ತಾ "ನೋಡಿ ಮಂಜರೆ....ಪದ್ದಕ್ಕನ ಪ್ರೇತ ಬಂತು ಎಂದು ಕಿರುಚಿಕೊಳ್ಳುತ್ತಾರೆ. ಪ್ರೇತ ಬರುವುದೇನೋ ನಿಜ. ಎರಡು ದಿನದಿಂದ ಈ ಮನೆಯಲ್ಲಿ ಪ್ರೇತ ಸೇರಿದೆ ಎಂದು ನನಗೂ ಗೊತ್ತಾಗಿದೆ. ಹಾಗೆಂದು ಅದು ನನ್ನ ಕಣ್ಣಿಗೆ ಕಾಣಿಸುವುದಿಲ್ಲ. ಎರಡು ದಿನದಿಂದ ಅದರ ಕಾಟ ವಿಪರೀತವಾಗಿದೆ. ಅಳುವ ಧ್ವನಿ .. ಬಳೆಗಳ ಸದ್ದು ಎಲ್ಲಾ ನಾನು ಕೇಳಿದ್ದೇನೆ. ಐದು ನಿಮಿಷದ ಹಿಂದೆ ಅರ್ಧ ಮುಚ್ಚಿದ್ದ ಬಾಗಿಲನ್ನು ತೆರೆದು ಯಾರೋ ಒಳ ಬಂದ ಹಾಗೆ ಆಯ್ತು ..."ಎಂದು ಶಾರದೆ ಹೇಳಿದಳು. ಆ ಮಾತು ಕೇಳಿ ಮಂಜರೂ ಒಮ್ಮೆ ಹಿಂದೆ ಮುಂದೆ ನೋಡಿಕೊಂಡರು. ಅರ್ಧ ಮುಚ್ಚಿದ್ದ ಬಾಗಿಲನ್ನು ತಳ್ಳಿ ಯಾರೋ ಒಳಬಂದರು ಎಂದರೆ .. ಪದ್ಮಾವತಿಯ ಪ್ರೇತ ಅಡಿಗೆ ಮನೆಯಲ್ಲೇ ಇರಬೇಕು. ಅವರ ಎದೆಗುಂಡಿ ಬಡಿಯಿತು. ಮನಸ್ಸಿನ ಸ್ಥಿಮಿತವೂ ಹದಗೆಟ್ಟಿತು. ತಾನು ಪ್ರೇತವನ್ನು ಕಂಡಿಲ್ಲ ಎಂದು ಶಾರದೆ ಹೇಳಿದರೂ ಮತ್ತೆ ಅದೇ ಪ್ರಶ್ನೆ ಹಾಕಿದರು.

"ಹೌದು... ನೀನು ಒಮ್ಮೆಯೂ ನೋಡಿಲ್ಲವೆ ?"

"ಇಲ್ಲ... ಅದರ ರೂಪವನ್ನು ಇನ್ನೂ ನೋಡಿಲ್ಲ. ನಿನ್ನೆ ರಾತ್ರಿ ಪಡಸಾಲೆಯ ಬಾಗಿಲ ಬಳಿ ನಿಂತು ಕೈಮುಗಿದು ಕೇಳಿಕೊಂಡೆ. ಹರಿವಾಣದಲ್ಲಿ ಅರಸಿನ ಕುಂಕುಮ....ಒಂದು ಲೋಟ ಹಾಲನ್ನಿಟ್ಟರೆ ಬೆಳಿಗ್ಗೆ ಅದು ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು."

"ಈಗ ಕೂಗಿದ್ದೇಕೆ ?"

"ಅಡಿಗೆ ಮಾಡುತ್ತಾ ಇದ್ದೆ. ಅವರನ್ನು ಪಡಸಾಲೆಯಲ್ಲಿ ಕುಳ್ಳಿರಿಸಿ ಸಂಧ್ಯಾವಂದನೆ ಮಾಡಿ ಎಂದು ಹೇಳಿ ಬಂದಿದ್ದೆ. ತಂತ್ರಿಯವರು ಒಂದಿಷ್ಟು ವಿಭೂತಿ ಕೊಟ್ಟು ದಿನಾ ನೂರೆಂಟು ಗಾಯತ್ರಿಮಂತ್ರ ಜಪಿಸುವಂತೆ ಹೇಳಿದ್ದಾರೆ. ನಾನು ಒಗ್ಗರಣೆಗೆ ಉದ್ದಿನಬೇಳೆ ಹಾಕಿದ್ದೆ....ಅಷ್ಟೆ, ಭೂತ ಎಂದು ಓಡಿಬಂದರು. ಐದುನಿಮಿಷ....ಅಡಿಗೆ ಮನೆಯ ಬಾಗಿಲು ತೆರೆಯಿತು ನೋಡಿ.

ನಡಿಗೆ ಸದ್ದು ಕೇಳಿ ಹೆದರಿದೆ ಮಂಜರೆ. ಇರುವವಳು ನಾನು ಮಾತ್ರ. ಪದ್ಮಕ್ಕನ ಪ್ರೇತ ರಾತ್ರಿ ಹೊತ್ತು ಮನೆಯಲ್ಲಿದ್ದರೆ ನಾನು ಇವರನ್ನು ಹಾಕಿಕೊಂಡು ಹೇಗೆ ಬೆಳಗು ಮಾಡವುದು ?"

"ಪಡಸಾಲೆಯಿಂದ ಓಡಿಬಂದನೆ ?"

"ಹೌದು .."

"ಎಷ್ಟು ಹೊತ್ತಿನ ಮೇಲೆ ಅರ್ಧ ಮುಚ್ಚಿದ ಬಾಗಿಲು ತೆರೆಯಿತು ?"

"ಐದು ನಿಮಿಷ ಕಳೆದಿತ್ತು."

"ನಡಿಗೆಯ ಸದ್ದು ಕೇಳಿದ್ದು ನಿಜವೇನು ?"

"ಕಾಲುಂಗುರ ನೆಲಕ್ಕೆ ತಾಗಿದ ಸಪ್ಪಳ ಕೂಡಾ ಕೇಳಿಸುತ್ತಿತ್ತು.. "

"ಹಾಗಿದ್ದರೆ ಪದ್ಮಾವತಿಯ ಪ್ರೇತ ಇಲ್ಲೇ ಇರಬೇಕು ಶಾರದಾ" ಎನ್ನುತ್ತಾ ಮಂಜರು ಒಮ್ಮೆ ಸುತ್ತಲೂ ದೃಷ್ಟಿ ಹೊರಳಿಸಿ "ಪದ್ಮಾವತಿ" ಎಂದು ಕರೆದರು. ಯಾವ ಗದ್ದಲವೂ ಅವರಿಗೆ ಕೇಳಿಸಲಿಲ್ಲ.

"ನನಗೆ ಏನೂ ಕೇಳಿಸುವುದೇ ಇಲ್ಲವಲ್ಲ...."

"ಅಳುವ ಧ್ವನಿ ಕೇಳಿಸುವುದಿಲ್ಲವೆ ?"

"ಇಲ್ಲ ಶಾರದಾ...."

"ಕೈಬಳೆ ಅಲ್ಲಾಡುತ್ತಿದೆಯಲ್ಲ... ಆ ಸದ್ದು...."

"ಅದು ನಿನ್ನ ಕೈಬಳೆಯ ಸದ್ದು..."

"ಅಯ್ಯೋ....ನನ್ನ ಕೈಬಳೆ ಎಲ್ಲಿ ಸದ್ದು ಮಾಡಿದೆ.. ಮೇಲೆ ಸರಿಸಿ ಬಿಗಿದ್ದೇನೆ. ನೋಡಿ .." ಎಂದಳು ಶಾರದೆ.

"ನೀನು ಏನೇ ಅನ್ನು ಶಾರದ. ನನಗೆ ಒಂದೂ ಕೇಳಿಸುವುದಿಲ್ಲ."

"ಹಾಗೆ ನಿಮಗೆ ಕೇಳಿಸುವುದಕ್ಕೆ ನೀವೇನು ಪಾಪ ಮಾಡಿದ್ದೀರಿ....ಅಪರಾಧ ನಡೆದದ್ದು ನಮ್ಮಿಂದ. ಪದ್ಮಾವತಿಗೆ ನಿಮ್ಮ ಮೇಲೆ ಏನೂ ದ್ವೇಷವಿಲ್ಲ. ಆಕೆಗೆ ನೀವು ಎಂದರೆ ಭಕ್ತಿ. ನಿಮ್ಮ ಕಣ್ಣಿಗೆ ಕಾಣಿಸುತ್ತಾಳೆಯೇ ? ಆಕೆ ಪ್ರೇತವಾಗುವುದಕ್ಕೆ ಕಾರಣ ಅವರು. ಅವರ ಹೆಂಡತಿ ನಾನು. ಆ ಪಾಪಕ್ಕೆ ನಾನು ಹೊಣೆ. ಇಲ್ಲವಾಗಿದ್ದರೆ ಅವರಿಗೇಕೆ ಈ ಬುದ್ಧಿ ಬರುತ್ತಿತ್ತು. ಪದ್ಮಾವತಿಯನ್ನು ಹೀಗೆ ಕೊಲ್ಲುವುದೆ ? ನೋಡಿ ಈಗ ನಾವು ಅನುಭವಿಸುವುದನ್ನು. ಕೋಟಿ ಐತಾಳರ ಕಾಲು ಹಿಡಿದು ಕೇಳಿಕೊಂಡೆ. ಅವರ ಮುಂದೆ ನಾನು

ಅತ್ತದ್ದು ನನಗೆ ಗೊತ್ತು. ಪದ್ಮಾವತಿಯ ಆತ್ಮಕ್ಕೆ ಶಾಂತಿ ಸಿಗುವಂತೆ ಏನಾದರೂ ಮಾಡಿ ಎಂದೆ. ಗೋಕರ್ಣಕ್ಕೆ ಹೋಗಿಯಾದರೂ ಪಿಂಡ ಹಾಕಿದ್ದರೆ.. ಆದರೆ ಅವರದು ಒಂದೇ ಉತ್ತರ...ಅನುಭವಿಸಲಿ ಎಂದು. ಅವರಿಗೆ ಮನಸ್ಸು ಮುರಿದು ಹೋಗಿದೆ. ಪದ್ಮಾವತಿ ಎಂದರೆ ಅವರಿಗೆ ತುಂಬಾ ಪ್ರೀತಿ. ಅವಳಿಗೂ ಅಷ್ಟೆ. ಪಾಪ... ಆಕೆ ಕೂಡಾ ಯಾರಿಗೂ ದ್ರೋಹ ಎಣಿಸಿದವಳಲ್ಲ....”

“ನನಗೆ ಒಂದೂ ತಿಳಿಯುವುದಿಲ್ಲ ಶಾರದಾ... ಈ ವಿಚಾರದಲ್ಲಿ ಯಾವ ಪರಿಹಾರವನ್ನು ಸೂಚಿಸಲು ನಾನು ಅಸಮರ್ಥ. ನನ್ನಿಂದ ಏನಾದರೂ ಆಗುವಂತಿದ್ದರೆ ಸಹಾಯ ಮಾಡುತ್ತಿದ್ದೆ. ಆದರೆ ಭೂತ ಪ್ರೇತಗಳ ಬಗ್ಗೆ ಆಡುವುದಕ್ಕೆ ನನಗೆ ಅಧಿಕಾರವಿಲ್ಲ. ಭೂತವನ್ನು ನಾನು ಕಂಡವನೇ ಅಲ್ಲ. ಅವುಗಳ ಬಗ್ಗೆ ನೂರಾರು ಕತೆ ಕೇಳಿದ್ದೇನೆ. ಆದರೆ ಇದು ಪಕ್ಕದ ಮನೆಯಲ್ಲಿ ನಡೆದಮೇಲೆ ಸಂಪೂರ್ಣ ನಂಬಿದ್ದೇನೆ. ಇದಕ್ಕೆ ಏನು ಪರಿಹಾರವಿದೆಯೋ.... ನಾಳೆ ಕಾಳಾಚಾರಿಯನ್ನು ಕರೆಯಿಸುತ್ತೇನೆ. ಅವನು ಭೂತ ಪ್ರೇತಗಳನ್ನು ಬಿಡಿಸುತ್ತಾನಂತೆ... ಸೆರೆಗಾರನ ಮಗನಿಗೆ ಹಿಡಿದಿದ್ದ ಬ್ರಹ್ಮರಾಕ್ಷಸನನ್ನು ಬಿಡಿಸಿದ ವಿಚಾರ ನನಗೆ ಗೊತ್ತು ... ” ಎಂದರು ಮಂಜರು.

ಏನೋ ಹೇಳುವುದಕ್ಕೆ ಬಾಯಿ ತೆರೆದಿದ್ದಳು ಶಾರದೆ. ಆದರೆ ಪರಿಸ್ಥಿತಿಯಲ್ಲಿ ಇದ್ದಕ್ಕಿದ್ದಂತೆ ಬದಲಾವಣೆಯಾಗಿತ್ತು. ನೋಡುತ್ತಿದ್ದಂತೆ ನರಸನ ಕತ್ತು ಪಕ್ಕಕ್ಕೆ ವಾಲಿತು. ಅವನ ತಲೆ ತೂಗಿತು. ಕಣ್ಣು ಅರೆಮುಚ್ಚಿತ್ತು. ಏಕೋ ನರಳಾಡತೊಡಗಿದ. “ಏನು... ಏನಾಗುತ್ತದೆ ?” ಎಂದು ಶಾರದೆ ಕೇಳಿದಾಗ ಎರಡು ಬಾರಿ ಹೂಂಕರಿಸಿದ ಮಾತ್ರ. ಮಂಜರಿಗೂ ಅದೇಕೋ ಭಯ ಹುಟ್ಟಿತು. ನರಸನ ವಿಚಿತ್ರ ವರ್ತನೆ ಕಂಡು ಹೆದರಿದರು. ಜಕಣಿ ಮೈಮೇಲೆ ಬಂದಾಗ ಅದೇ ಸ್ಥಿತಿ ಒದಗಿ ಬರುವುದನ್ನು ಅವರು ಹಿಂದೆ ತಮ್ಮ ಕಣ್ಣಿಂದಲೇ ಕಂಡಿದ್ದರು. ನಾಲ್ಕು ವರ್ಷದ ಹಿಂದೆ ಬೇಳೂರಿನ ಸೋಮರತ್ತೆಯ ಮನೆಗೆ ಹೋಗಿದ್ದಾಗ ಆಕೆಯ ಮೈಮೇಲೆ ಅವಳ ಗಂಡನ ಜಕಣಿ ಬಂದದ್ದನ್ನು ತಟ್ಟನೆ ನೆನಸಿಕೊಂಡರು. ಆಗ ಕೂಡಾ ಆಕೆ ಇದೇ ರೀತಿ ನರಳಿದ್ದಳು. ತರುವಾಯ ಆವೇಶಗೊಂಡು ಕೆಕ್ಕರಿಸಿ ನಗುತ್ತಾ ತನ್ನ ಸೋದರಮಾವನಂತೆ ಆರ್ಭಟಿಸಿದ್ದು ಇನ್ನೂ ಅವರ ನೆನಪಿನಲ್ಲಿತ್ತು. “ಶಾರದಾ, ಈಗ ಜಕಣಿ ಬರುತ್ತದೆ”

ಎಂದೇ ಬಿಟ್ಟರು ಮಂಜರು. "ಏನು...ಏನು...?" ಎಂದು ಕಂಗಾಲಾಗಿ ಕೇಳಿದಳು ಶಾರದೆ. ಅಬ್ಬಾ! ಆಗಿನ ಸ್ಥಿತಿಯನ್ನು ನೋಡುವುದಕ್ಕಾಗಲಿಲ್ಲ. ಶಾರದೆಯು ಎದೆಯ ಮೇಲೆ ಕೆಂಡ ಸುರಿದಷ್ಟು ವೇದನೆ. ನರಸನಲ್ಲಾಗುತ್ತಿರುವ ಬದಲಾವಣೆಯನ್ನು ಕಂಡು ಮಂಜರ ಹೃದಯ ಬಹುವಾಗಿ ನೊಂದಿತು. ಇಬ್ಬರೂ ನೋಡುತ್ತಲೇ ಇದ್ದರು. ಎದೆ ಎದೆ ಬಡಿದುಕೊಳ್ಳುತ್ತಾ ನರಸ ಎದ್ದು ನಿಂತ. ಶಾರದೆಯ ನಾಲಗೆಯಲ್ಲಿ ತೇವವೇ ಇರಲಿಲ್ಲ. ಜನಿವಾರ ಹಿಡಿದುಕೊಂಡ ಮಂಜರು ಕೋಟಿಲಿಂಗೇಶ್ವರನನ್ನು ಸ್ಮರಿಸಿದರು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅವರ ಕಿವಿಗೆ ಕೇಳಿಸಿದ್ದು ಪದ್ಮಾವತಿಯ ಸ್ವರ. ಅಷ್ಟು ಆಶ್ಚರ್ಯವಾಗಿತ್ತು ಮಂಜರಿಗೆ. ಶಾರದೆ ಹಿಂದಿನ ದಿನವೇ ಆ ಕಂಠವನ್ನು ಪರಿಚಯ ಮಾಡಿಕೊಂಡಿದ್ದಳು. ಆದರೆ ಮಂಜರಿಗೆ ಹೊಸತು. "ನರಸಾ • ಎಂದರು. ವಿಕಾರವಾಗಿ ನಕ್ಕ ನರಸ. ಆದರೆ ಅದು ಗಂಡಸಿನ ನಗುವಾಗಿರಲಿಲ್ಲ. ಕೆಲವು ಬಾರಿ ಪದ್ಮಾವತಿ ಗುಡಿಯಲ್ಲಿ ಸಂತೋಷವಾದಾಗ ಹಾಗೆ ನಗುತ್ತಿದ್ದಳು. ಅದು ಮಂಜರಿಗೆ ಗೊತ್ತು. "ನರಸಾ... ಹೀಗೇಕೆ ಮಾಡುತ್ತಿ?" ಎಂದು ಮಂಜರು ಕೇಳಿದಾಗ ಮಾತ್ರ ನರಸನ ವರ್ತನೆ ವಿಕೋಪಕ್ಕೆ ಮುಟ್ಟಿತು. ಮುಖ ಗಡುಸಾಯಿತು. ಮಾತು ಕಠೋರವಾಗಿತ್ತು. "ಆ ಮನೆಹಾಳ ... ನನ್ನನ್ನು ಕೊಂದು ಮನೆಗೆ ಬೆಂಕಿ ಹಾಕಿದ ಮನೆಹಾಳ .. ಅಯ್ಯೋ ನನ್ನ ಗತಿಯೇ?" ಎಂದಿತು ಪದ್ಮಾವತಿಯ ಭೂತ. ಅದು ನಿಶ್ಚಯವಾಗಿಯೂ ಪದ್ಮಾವತಿಯ ಕಂಠ. ಅಂಜಿದ ಶಾರದೆ ಹಿಂದೆ ಸರಿದು ನಿಂತಳು. ಮಂಜರಿಗೆ ಎಲ್ಲಿಲ್ಲದ ಧೈರ್ಯ ಬಂದಿತ್ತು. ಪದ್ಮಾವತಿಗೆ ಅವರ ಬಗ್ಗೆ ತುಂಬಾ ಅಭಿಮಾನ. ಅವಳ ಪ್ರೇತವನ್ನು ನಡುರಾತ್ರಿಯಲ್ಲಿ ಸುಡುಗಾಡಿನಲ್ಲಿ ಬೇಕಾದರೂ ಮಾತನಾಡಿಸುವ ಎದೆಗಾರಿಗೆ ಆಮೇಲೆ ಅವರಿಗೆ ಬಂತು. ಕಾರಣ, ನರಸನ ಗಂಡು ಧ್ವನಿ ಹೋಗಿ ಪದ್ಮಾವತಿಯೇ ಮಾತನಾಡಿದಂತೆ ಕಂಠ ಬದಲಾವಣೆಯಾಗಬೇಕಾಗಿದ್ದರೆ, ಪ್ರೇತದ ಶಕ್ತಿಯ ಮಹತ್ವವನ್ನು ಅರಿತ ಮಂಜರು ತನ್ನಲ್ಲಿ ಅಧಿಕ ಭಕ್ತಿ ವಿಶ್ವಾಸವನ್ನಿಟ್ಟಿದ್ದ ಪದ್ಮಾವತಿ ಏನೂ ಮಾಡಲಾರಳು ಎಂದೇ ಎರಡು ಹೆಜ್ಜೆ ಮುಂದೆ ಬಂದರು.

"ಪದ್ಮಾವತಿ. ಪದ್ಮಾವತಿ ." ಎಂದರು ಎರಡು ಬಾರಿ.

"ಅಯ್ಯೋ ಮಂಜರೆ....ನನಗೆ ಈ ದುರ್ಗತಿ ಬಂತಲ್ಲ..." ಎಂದಿತು ಪದ್ದಕ್ಕನ ಜಕಣಿ.

"ಬರಬಾರದಿತ್ತು ಪದ್ದ....ನಿಜವಾಗಿಯೂ ಇದು ಭಾರಿ ದುರಂತ. ನಿನ್ನ ಮರಣದಿಂದ ಶಿವದೇವಾಲಯದ ಶೋಭೆಯೇ ಹೋಗಿದೆ. ಆರತಿಯ ಪ್ರಕಾಶವೇ ಕಂದಿದೆ. ನಮ್ಮ ಕೇರಿಯಲ್ಲಿ ನೀನಾದರೂ ನಗುತ್ತಿದ್ದ ಕಾಲ....ಆ ಭಾಗ್ಯ ಮುಂದೆ ನಾನು ಕಾಣುವುದಿಲ್ಲ. ನನ್ನ ಪರಮ ಮಿತ್ರರಾದ ಕೋಟಿ ಐತಾಳರ ದುಃಖವಂತೂ....ಅದನ್ನೆಲ್ಲಾ ಹೇಳಬೇಕೆಂದರೆ ತುಂಬಾ ಸಂಕಟವಾಗುತ್ತದೆ ತಾಯಿ" ಎನ್ನುತ್ತಾ ಮಂಜರು ತಮ್ಮ ಒದ್ದೆ ಕಣ್ಣಿನ ಮೇಲೆ ವಸ್ತ್ರ ಸರಿಸಿದರು. ಶಾರದೆ ದಂಗಾಗಿ ಹೋಗಿದ್ದಳು.

"ಹೇಳಿ ಮಂಜರೆ....ನೀವೇ ನ್ಯಾಯ ಹೇಳಿ..." ಎಂದಿತು ಪದ್ದಕ್ಕನ ಪ್ರೇತ.

"ನಾನು ಏನು ಹೇಳುವುದು ?"

"ನನಗೆ ಈ ಗತಿ ಬಂತಲ್ಲ ...ಇದು ನ್ಯಾಯವೇ?"

"ಅನ್ಯಾಯ...."

"ನಾನು ಯಾರಿಗೆ ದ್ರೋಹ ಎಣಿಸಿದ್ದೆ ಸ್ವಾಮಿ .. "

"ಆ ಬಗ್ಗೆ ನನಗೆ ನಂಬಿಕೆಯಿದೆ. ಪದ್ದ ದೇವರ ಹೆಂಡತಿಯಾದರೂ ನೀತಿ ಬಿಟ್ಟವಳಲ್ಲ ಎಂದು ಎಲ್ಲರೂ ಹೇಳುತ್ತಾರೆ"

"ನಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ಈ ಶಿಕ್ಷೆಯೆ? ದೇವರು ಕೊಟ್ಟ ರೂಪವೇ ನನಗೆ ಶಾಪವಾಗಬೇಕೆ? ನನ್ನ ಸ್ವಾಮಿಯನ್ನು ನಂಬಿ ಬಂದಾಗ ಈ ಬ್ರಾಹ್ಮಣ .. ಈ ಬ್ರಾಹ್ಮಣ...." ಪದ್ಮಾವತಿಯ ಕೊರಳು ಬಿಗಿದುಬಂದಿತ್ತು.

"ಅಯ್ಯೋ....ಎಂತಹ ಮನುಷ್ಯರು ಈ ಜಗತ್ತಿನಲ್ಲಿ ಹುಟ್ಟಿದ್ದಾರೆ. ದೇವರ ಸೇವೆ ಮಾಡುವ ಭಾಗ್ಯವು ನನಗಿಲ್ಲ. ಐತಾಳರು ಪ್ರೀತಿ ವಿಶ್ವಾಸದಿಂದ ನಾಲ್ಕು ಕಾಲ ಬದುಕುವುದಕ್ಕೂ ಅರ್ಚಕ ಬಿಡಲಿಲ್ಲ. ದೇವರ ಗರ್ಭಗುಡಿಯಲ್ಲಿ ಚಾಮರವನ್ನು ನಾರಂದದಲ್ಲಿಡುತ್ತಿದ್ದಾಗ ನನ್ನ ಕೈ ಹಿಡಿದನಲ್ಲ .. "

"ಯಾರು .. ನರಸನೆ..."

"ಹೂಂ....ಆ ಪಾಪಿಯೇ ನನ್ನ ಕೈ ಹಿಡಿದ"

"ಯಾವಾಗ...."

"ಕಳೆದ ತಿಂಗಳು ...ಹುಣ್ಣಿಮೆಯ ಮುಂಚಿನ ದಿನ ..."

"ಐತಾಳರು ಅಂದು ಗುಡಿಯಲ್ಲಿ ಇರಲಿಲ್ಲವೆ?"

"ಇಲ್ಲ ..."

"ಆಮೇಲೆ...."

"ಎಡಗಾಲಿನಿಂದ ಒದ್ದೆ ನೋಡಿ...."

"ನಿನ್ನ ಮೇಲೆ ನರಸನಿಗೆ ಮನಸ್ಸಿತ್ತೆ...."

"ಒಂದು ವರ್ಷದಿಂದ ಇದೇ ಗೋಳು ...ದಿನಾ ಪೀಡಿಸುತ್ತಾನೆ"

"ಐತಾಳರಿಗೆ ಈ ವಿಚಾರ ಗೊತ್ತೆ...."

"ನಾನು ಹೇಳಿಲ್ಲ ..."

"ನಿನ್ನ ಮನೆಗೆ ಬೆಂಕಿ ಹಾಕುವುದಕ್ಕೆ ಕಾರಣ ..."

"ಅದೇ ಮತ್ಸರ ..."

"ಎಷ್ಟು ಹೊತ್ತಿಗೆ ಮನೆಗೆ ಬೆಂಕಿ ಬಿತ್ತು...."

"ಮೊದಲು ನನ್ನನ್ನು ಕೊಂದು ಬೆಂಕಿ ಹೊತ್ತಿಸಿದ"

"ಇದು ಹೇಗೆ ನಡೆಯಿತು ಪದ್ಮಾವತಿ...."

"ಶ್ರಾವಣ ಸೋಮವಾರ....ಸಂಕ್ರಮಣ ಎಂದು ರಾತ್ರಿ ಪಂಚಕಜ್ಜಾಯ ತಿಂದು ಮಲಗಿದೆ. ಬೇಗ ನಿದ್ದೆ ಬಂತು. ಎಷ್ಟು ಹೊತ್ತಾಗಿತ್ತೋ.... ಚಾವಣಿಯ ಹುಲ್ಲು ಮೈ ಮೇಲೆ ಬಿದ್ದಾಗ ಎಚ್ಚರವಾಯ್ತು. ಮೇಲೆ ನೋಡಿದೆ. ಮಾಡಿನಲ್ಲಿ ಅಡಿ ಅಂತರದ ತೂತು. ಯಾರೋ ಇಳಿಯುವುದನ್ನು ಕಂಡು ಹೆದರಿದೆ. ಗಟ್ಟಿಯಾಗಿ ಕೂಗಬೇಕೆಂದು ಬಾಯಿ ತೆರೆದಿದ್ದೆ... ಮೂರ್ಖ ಆಗಲೇ ನನ್ನ ಕೊರಳು ಒತ್ತಿ ಹಿಡಿದಿದ್ದ. ಆಗಲೇ ನನ್ನ ಜೀವ ತೆಗೆದಿದ್ದ.... ಅಯ್ಯೋ....ನನ್ನ ಕರ್ಮವೇ .." ಮತ್ತೆ ಪದ್ದುವಿನ ಪ್ರೇತ ಅಳಹತ್ತಿತು. ಮಂಜರಿಗೂ ತಡೆಯಲಾರದ ದುಃಖವಾಗಿತ್ತು. ಪ್ರೇತದ ಕತೆಯನ್ನು ಪ್ರತ್ಯಕ್ಷ ಮುಂದೆ ನಿಂತೇ ಕೇಳಿದ್ದರು.

"ಪದ್ಮಾವತಿ....ಈಗ ನಿನ್ನ ಅಭಿಪ್ರಾಯವೇನು?"

"ನನ್ನ ಆತ್ಮಕ್ಕೆ ಶಾಂತಿ ಎಲ್ಲಿದೆ?"

"ಹೀಗೆ ಪ್ರೇತವಾಗಿಯೇ ಇರುವುದಕ್ಕೆ ಹೇಗೆ ಸಾಧ್ಯ?"

"ಹಾಗೆ ಇದ್ದರೂ ಚಿಂತೆಯಿಲ್ಲ. ಈ ಬ್ರಾಹ್ಮಣನನ್ನು ಸಾಯಿಸದೆ ಹೋಗುವುದಿಲ್ಲ.."

"ಅದೇ ತಪ್ಪು ಪದ್ಮಾವತಿ....ಬ್ರಾಹ್ಮಣನನ್ನು ಕೊಲ್ಲುವುದು ಮಹಾ ಪಾಪ.. ಯೋಚಿಸಿ ನೋಡು .."

"ನನ್ನ ಆಸೆ ಇನ್ನೂ ತೀರಿಲ್ಲ...ದೇವರ ಸೇವೆ... ನನ್ನ ಸ್ವಾಮಿಯ ಸೇವೆ ಮಾಡುವ ಭಾಗ್ಯ ತಪ್ಪಿಸಿ ಸ್ತ್ರೀ ಹತ್ಯ ಮಾಡಿದನಲ್ಲ. ಅದು ಕೂಡಾ ಮಹಾಪಾಪ...."

"ಒಪ್ಪಿದೆ ಆದರೆ ನೀನು ಪ್ರೇತವಾಗುವುದು ನನಗೆ ಇಷ್ಟವಿಲ್ಲ. ಅದರಲ್ಲೂ ಕೋಟಿ ಐತಾಳರಿಗೆ ತಡೆಯಲಾರದ ದುಃಖವಾಗಿದೆ. ನಿನಗೂ ಆತ್ಮ ಶಾಂತಿ ಮಾಡಿಸಿ ಸದ್ಗತಿ ತೋರಿಸುವುದೇ ಅವರಿಗಿರುವ ಆಸೆ .."

"ಯಾರಿಗೆ...."

"ನಿನ್ನ ಸ್ವಾಮಿಗೆ...."

"ಕರೆಯಿಸಿ ಅವರನ್ನು...."

"ಈಗ ಬೇಡ ..."

"ಮುಂಜನೆ... ಐತಾಳರನ್ನು ಕರೆಯಿಸಿ...ಅವರನ್ನು ಕಣ್ತುಂಬ ನೋಡಿ ಹೋಗುತ್ತೇನೆ"

"ಆ ಮಾತು ಈಗ ಬೇಡ....ಅವರನ್ನು ಕರೆಯಿಸುವುದಕ್ಕೆ ಇದು ಕಾಲವಲ್ಲ. ಅವರಿಗಿನ್ನೂ ನೀನು ಸತ್ತ ದುಃಖ ಹೋಗಿಲ್ಲ. ಒಂದು ಮಾತು ಹೇಳುತ್ತೇನೆ. ನಿನ್ನ ಹಿತ ಯೋಚಿಸಿ ಹೇಳಿದ ಮಾತಿದು. ಇದು ಕ್ಷೇತ್ರ. ದೇವಾಲಯದ ಸುತ್ತಿನ ಕೇರಿ. ಎಲ್ಲಾ ಮನೆಗಳೂ ಬ್ರಾಹ್ಮಣರದ್ದು. ಪರಶುರಾಮ ಕ್ಷೇತ್ರದ ಪವಿತ್ರ ಭೂಮಿ ಎಂಬುದನ್ನು ನೆನೆಸಿಕೊ. ಹೀಗೆ ನೀನು ಪ್ರೇತವಾಗಿ ಬರುವುದು ನನಗೆ ಅಸಮಾಧಾನವಾಗಿದೆ. ಐತಾಳರಿಗೂ ಅದು ಸರಿಹೋಗುವುದಿಲ್ಲ. ಆದದ್ದು ಆಗಿಹೋಯ್ತು. ನಾಳೆ ಅವರಿಗೂ ವಿಚಾರ ತಿಳಿಸಿ... ನಿನ್ನ ಆತ್ಮಕ್ಕೆ ಶಾಂತಿ ದೊರಕಿಸುವಂತೆ ಮಾಡುತ್ತೇನೆ. ಐತಾಳರು ನಿನಗೂ ಸದ್ಗತಿ ದೊರೆಯುವಂತೆ ಖಂಡಿತಾ ಮುಂದಿನ ವ್ಯವಸ್ಥೆ ಮಾಡುತ್ತಾರೆ. ನರಸನನ್ನು ದೇವರೇ ನೋಡಿಕೊಳ್ಳಲಿ.. ಪಾಪ. ಈ ಶಾಂದೆಯನ್ನಾದರೂ ಕಂಡು ನೀನು ಸುಮ್ಮನಿರು. ನಾನು ಕೂಡಾ ನಿನಗೆ ಸ್ವರ್ಗದಲ್ಲಿ ಸ್ಥಾನ ಸಿಗಲಿ

ಎಂದು ದೇವರನ್ನು ಪ್ರಾರ್ಥಿಸುತ್ತೇನೆ. ಈಗ ಹೋಗು ತಾಯಿ" ಎಂದು ಮಂಜರು ಕೈಮುಗಿದರು.

"ನೀವೇಕೆ ಕೈಮುಗಿಯುವುದು... ನನಗೆ ಅರಸಿನ ಕುಂಕುಮ ಕೊಡಲಿ. ನಾನೇ ಹೋಗುತ್ತೇನೆ" ಎಂದಿತು ಪ್ರೇತ.

ಅರಸಿನ ಕುಂಕುಮ ತಂದಳು ಶಾರದೆ.

ಭಕ್ತಿಯಿಂದ ಅರಸಿನ ಕುಂಕುಮ ಒಪ್ಪಿಸಿ ಅಡ್ಡಬಿದ್ದಳು.

ಎರಡು ನಿಮಿಷ ಮತ್ತೆ ಯಾವ ಮಾತೂ ಇರಲಿಲ್ಲ... ಮಂಜರು ಕೈ ಕಟ್ಟಿ ನಿಂತಿದ್ದರು. ನರಸ ದೊಪ್ಪನೆ ಕೆಳಬಿದ್ದ.

"ಒಂದು ಲೋಟ ನೀರು ತಾ" ಎಂದರು ಮಂಜರು.

ನರಸನ ಮುಖ ತುಂಬ ನೀರು ಚೆಲ್ಲಿದ ತರುವಾಯ ಅವನಿಗೆ ಪ್ರಜ್ಞೆ ಬಂತು.

"ಶಾರದಾ... ವಿಚಾರ ತಿಳಿಯಿತೆ?"

"______"

"ನೋಡು ನಿನ್ನ ಗಂಡ ಮಾಡಿದ ಪಾಪಕಾರ್ಯ. ಅವಳ ಆತ್ಮಕ್ಕೆ ಶಾಂತಿಯಿಲ್ಲ ಶಾರದಾ, ಅದಕ್ಕೆ ಪ್ರೇತವಾಗಿ ಬಂದಿದ್ದಾಳೆ."

"ನನಗೇಕೋ ಭಯವಾಗುತ್ತದೆ... ರಾತ್ರಿ ಹೊತ್ತು ಈ ಮನೆಯಲ್ಲಿ ಇರುವುದು ಹೇಗೆ ಹೇಳಿ" ಎಂದಳು ಶಾರದೆ.

"ಹೆದರಬೇಡಮ್ಮಾ... ಕೋಟಿ ಬತಾಳರಿಗೆ ಹೇಳಿ ನಾಳೆ ಮುಂದಿನ ವ್ಯವಸ್ಥೆ ಮಾಡುತ್ತೇನೆ. ರಾತ್ರಿ ದೀಪ ಹಚ್ಚಿಕೊಂಡೇ ಮಲಗು. ನರಸನ ಹಾಸಿಗೆಯಲ್ಲಿ ವಿನಾಯಕನ ಒಂದು ಕಲ್ಲಿನ ವಿಗ್ರಹವನ್ನು ಇಟ್ಟಿರಿ. ಹಾಗಿದ್ದರೆ ಭೂತ ಪ್ರೇತ ಬರುವುದಿಲ್ಲವಂತೆ. ಎಲ್ಲವೂ ಭಗವಂತನ ಆಟ... ಏನು ಆಶ್ಚರ್ಯ! ನಿಜವಾಗಿಯೂ ಇದೊಂದು ಸೋಜಿಗದ ಸಂಗತಿ. ಪ್ರತ್ಯಕ್ಷ ನನ್ನ ಅನುಭವಕ್ಕೆ ಬಂದದ್ದು ಇದೇ ಮೊದಲು ಆಗಲಿ ಶಾರದಾ ಬರುತ್ತೇನೆ.... ನನ್ನ ಸಂಧ್ಯಾವಂದನೆ ಇನ್ನೂ ಮುಗಿದಿಲ್ಲ..." ಎನ್ನುತ್ತಾ ಮಂಜರು ಅಡಿಗೆ ಮನೆಯಿಂದ ಹೊರಬಂದರು. ನರಸ ಮಂಕು ಬಡಿದವನಂತೆ ಪಿಳಿಪಿಳಿ ನೋಡುತ್ತಾ ಕುಳಿತಿದ್ದ. ಬಾಗಿಲ ಬಳಿ ನಿಂತಿದ್ದ ಶಾರದೆ....

“ಸಮಯಕ್ಕೆ ನೀವು ಬಂದದ್ದು .. ನನ್ನ ಜೀವವಾದರೂ ಉಳಿಯಿತು. ಇಲ್ಲವಾಗಿದ್ದರೆ ನನ್ನ ಪ್ರಾಣವೇ ಹಾರಿಹೋಗುತ್ತಿತ್ತು. ನೋಡಿ .. ನನ್ನನ್ನು ನಿಮ್ಮ ಮಗಳೆಂದೇ ತಿಳಿಯಿರಿ....ಏನಾದರೂ ಮಾಡಿ ಈ ಪ್ರೇತ ಕಾಟ ತಪ್ಪಿಸಿ” ಎಂದು ಮತ್ತೆ ಮಂಜರಲ್ಲಿ ಹೇಳಿದಳು.

೬

ಪಶ್ಚಿಮ ಸಮುದ್ರದ ಪೂರ್ವಕ್ಕೆ ಸರಿಯಾಗಿ ಅರ್ಧಗಾವುದ ದೂರದಲ್ಲಿ ಕೋಟಿ ಲಿಂಗೇಶ್ವರ ದೇವಾಲಯವಿದೆ. ಗರ್ಭಗುಡಿಯ ಒಳಗೆ ಶಿವ ವಿಗ್ರಹದ ಸುತ್ತಲೂ ವ್ಯಾಪಿಸಿರುವ ಹೆಚ್ಚು ಆಳವಿಲ್ಲದ ಹೊಂಡದಲ್ಲಿ ಕೋಟಿಲಿಂಗಗಳು ಇರುವುದರಿಂದ ಆ ಹೆಸರು ದೇವಾಲಯಕ್ಕೆ ಹೆಚ್ಚು ಅನ್ವಯವಾಗುತ್ತದೆ ಎಂದು ಕೆಲವರು ಹೇಳುತ್ತಾರೆ. ದೀರ್ಘಕಾಲದ ತರುವಾಯ ಅದು ಮಹಾ ಕ್ಷೇತ್ರವಾಗಿ ಸುತ್ತಲಿನ ಪ್ರದೇಶವೆಲ್ಲಾ ಕೋಟೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧವಾಯ್ತು ಎಂಬುದು ಜನಮಾತು. ಪೂರ್ವದ ಪರ್ವತ ಶ್ರೇಣಿಯಿಂದ ಪಡುಕಡಲಿನ ಕರಾವಳಿಯ ತೀರದ ತನಕ ಪರಶುರಾಮನಿಂದ ನಿರ್ಮಿಸಲಾದ ಪವಿತ್ರ ಭೂಮಿ ಎನ್ನುವ ಮಾತಿಗೆ ಹೆಚ್ಚಿನ ಬೆಂಬಲ ದೊರಕಿದೆ. ಪರಶುರಾಮನಿಗೆ ಆ ಭೂಮಿಯನ್ನು ನಿರ್ಮಿಸುವ ಅವಶ್ಯಕತೆ ಏನಿತ್ತೋ! ಅದು ಸಂಭವಿಸಿ ಎಷ್ಟು ಯುಗ ಕಳೆಯಿತೋ! ಅಂತೂ ಹಿಂದೆ ಪರ್ವತಶ್ರೇಣಿಯ ಸಾಲಿಗೆ ಕಡಲಿನ ಅಲೆಗಳು ಅಪ್ಪಳಿಸುತ್ತಿದ್ದವು ಎಂದು ಪುರಾಣದಲ್ಲಿ ಹೇಳಿದೆ. ಘಟ್ಟದ ಏರು ದಿನ್ನೆಯಲ್ಲಿ ನಿಂತು ಪಶ್ಚಿಮದತ್ತ ದೃಷ್ಟಿ ಹೊರಳಿಸಿದರೆ ಕಾಣುವ ತಗ್ಗು ಪ್ರದೇಶದ ಅದ್ಭುತ ಸೃಷ್ಟಿ ಸೌಂದರ್ಯಕ್ಕೆ ಬೆರಗಾದಾಗ, ಅದು ದೇವನಿರ್ಮಿತ ಎಂದು ಒಪ್ಪಿಕೊಳ್ಳುವುದಕ್ಕೆ ಬೆಂಬಲ ದೊರಕುತ್ತದೆ. ಪರಶುರಾಮ ಪರ್ವತದ ಶಿಕರದ ಮೇಲೆ ನಿಂತು ಬಲಗೈಯಲ್ಲಿದ್ದ ಕೊಡಲಿಯನ್ನು ಮೇಲೆತ್ತಿ ಪಡುವಣದತ್ತ ಮುಖ ಮಾಡಿ ನಿಂತು ಸಮುದ್ರ ರಾಜನಲ್ಲಿ ವಿನಂತಿಸಿಕೊಂಡ. "ಮಹಾಕ್ಷೇತ್ರ ಸ್ಥಾಪನೆಗಾಗಿ ನನಗೆ ಒಂದಿಷ್ಟು ಪುಣ್ಯಭೂಮಿ ಬೇಕು. ಈ

ಕೊಡಲಿಯನ್ನು ಎಸೆಯುತ್ತೇನೆ. ಅದು ಯಾವ ಕೇಂದ್ರದಲ್ಲಿ ಬೀಳುತ್ತದೋ ಆ ಗಡುವಿನವರೆಗೆ ನೀನು ಹಿಂದೆ ಸರಿಯಬೇಕು" ಎಂದು ಕೊಡಲಿಯನ್ನು ಎತ್ತಿ ಬಿಸುಡಿದ. ಪರಶುರಾಮನ ಆಜ್ಞೆಯನ್ನು ಪರಿಪಾಲಿಸಿದ ಸಮುದ್ರ ಸುಮಾರು ಹತ್ತು ಗಾವುದದಷ್ಟು ಭೂಭಾಗವನ್ನು ಬಿಟ್ಟು ಹಿಂದೆ ಸರಿಯಿತು. ಈ ಮಹಾ ಸಾಧನೆಯಿಂದ ನಿರ್ಮಿಸಿದ ಪವಿತ್ರ ಭೂಮಿಯಲ್ಲಿ ಬ್ರಾಹ್ಮಣರನ್ನು ಕರೆಸಿ ಅವರಿಗೆ ಧನ ಕನಕ ಸಂಪತ್ತನ್ನು ದಯಪಾಲಿಸಿ, ಕ್ಷೇತ್ರವನ್ನಾಗಿ ಮಾಡಿದ ಎಂಬ ಕತೆ ಕೇಳಿಬರುತ್ತದೆ. ಆದರೆ ಈಗಿನ ಶಿವದೇವಾಲಯದ ಬಗ್ಗೆ ಆ ಪುರಾಣದಲ್ಲಿ ಯಾವ ಉಲ್ಲೇಖವೂ ಇಲ್ಲ. ಸಾತ್ವಿಕರು ಹೇಳುತ್ತಾರೆ "ಈ ಶಿವ ದೇವಾಲಯ ಮಾನವನಿಂದ ನಿರ್ಮಿಸಿದ್ದಲ್ಲ. ಇದು ಶಿವನ ಗಣಸಮೂಹದ ಮುಖ್ಯರಾದ ಆದಿತ್ಯರು, ವಿಶ್ವರು, ವಸುಗಳು, ಸಾಧ್ಯರು ಮುಂತಾದ ದೇವಗಣಗಳಿಂದಲೇ ನಿರ್ಮಿತವಾದ ದೇವಸ್ಥಾನ ಅದಕ್ಕೆ ಪದ್ಮಪುರಾಣದಲ್ಲಿ ನಿದರ್ಶನವಿದೆ" ಎಂದು. ಆ ವಾದ ಸತ್ಯಾಂಶಕ್ಕೆ ಎಷ್ಟು ಹತ್ತಿರವೋ ಅಂತೂ ಇನ್ನೊಂದು ಪಂಗಡದವರ ವಾದ ಇನ್ನೂ ವಿಚಿತ್ರವಾಗಿದೆ. "ಶಿವನ ಗಣಗುಂಪಿನ ಅನಿಲ, ಮಹಾರಾಜಿಕ, ರುದ್ರರು ಕೋಟಿಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿದರು. ಬೆಳಗಿನ ಜಾವದಲ್ಲಿ ತೀರ್ಥದ ಕೆರೆಯನ್ನು ಕಟ್ಟುವುದಕ್ಕೆ ಗಣಸಮೂಹವೇ ಮಣ್ಣನ್ನು ಅಗೆಯಲು ಆರಂಭಿಸಿತು. ವಿಶಾಲ ಕೆರೆ ನಿರ್ಮಿತವಾಯ್ತು. ಸುತ್ತಲೂ ಆರು ಅಂತರದ ಕಲ್ಲಿನ ಪಾವಟಿಗೆ ಕಟ್ಟಿದರು. ಆದರೆ ಪೂರ್ವದಲ್ಲಿ ಒಂದು ಸಾಲು ಕಲ್ಲು ಚಪ್ಪಡಿಗಳನ್ನು ಇಡುವಷ್ಟರಲ್ಲಿ ಬೆಳಗಾಯ್ತು. ಹಾಗಾಗಿ ಆ ಭಾಗದಲ್ಲಿ ಕೆಲಸ ಅಪೂರ್ಣವಾಗಿದೆ" ಎಂಬ ಮಾತು ವ್ಯವಹಾರದಲ್ಲಿದೆ. ಕೆರೆಯ ಮೂಡು ಕಟ್ಟಣದ ಒಂದು ಸಾಲಿನಲ್ಲಿ ಇಂದಿಗೂ ಕಲ್ಲುಚಪ್ಪಡಿಗಳನ್ನು ಹಾಸಿಲ್ಲ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಅದು ಎಷ್ಟರಮಟ್ಟಿಗೆ ನಿಜವೋ....ಆ ದೇವಾಲಯವನ್ನು ಕಟ್ಟಿಸಿದವನು ವಸು ಚಕ್ರವರ್ತಿ ಎಂದು ಕೆಲವರು ಹೇಳುತ್ತಾರೆ. ಸುಂದರವಾದ ದೇವಾಲಯವನ್ನು ನಿರ್ಮಿಸಿದ ಆ ಅರಸು ಇತಿಹಾಸವನ್ನು ರೂಪಿಸಲು ಹಲವು ಶಿಲಾಶಾಸನಗಳನ್ನು ಬರೆಯಿಸಿದ್ದನಂತೆ. ಅಂತಹ ಒಂದು ಶಿಲಾಶಾಸನ ಧ್ವಜಮರದ ಕಟ್ಟೆಯ ಪೂರ್ವದಲ್ಲಿದ್ದು ಅದನ್ನು ತಾನು ಓದಿದ್ದೇನೆ ಎಂದು ತಂತ್ರಿಯವರ ಅಜ್ಜ ಹೇಳುತ್ತಿದ್ದರಂತೆ. ಅವರ ಮಾತಿನ ಪ್ರಕಾರ ಅನು ವಸುಚಕ್ರವರ್ತಿಯ ಮಹಾಕಾರ್ಯ

ಎಂದು ನಂಬಿಕೆಯಾಗಿದೆ. ಆ ಶಾಸನದ ಕಲ್ಲು ಮಾತ್ರ ಮತ್ತೆ ದೊರಕಲಿಲ್ಲ. ಮಂಜರ ತಂದೆ ಆಡಳಿತ ಮೊಕ್ತೇಸರರಾಗಿದ್ದ ಕಾಲದಲ್ಲಿ ಶಾಸನದ ಮಹತ್ವವನ್ನರಿಯದೆ ಆ ಕಲ್ಲುಹಾಸುಗಳನ್ನು ಸಿಕ್ಕಾಪಟ್ಟೆ ಬಿದ್ದಿದ್ದ ಚಪ್ಪಡಿಗಳನ್ನು ಸುತ್ತಿನ ನೆಲದ ಮೇಲೆ ಹಾಸಿ ಜನಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು. ದೇವಾಲಯದ ಗೋಪುರದ ಮಾಡುಗಳಲ್ಲಿ ವಜ್ರಗಾರೆಯಿಂದ ಜೋಡಿಸಿದ ಅದ್ಭುತ ಗಾತ್ರದ ಶಿಲೆಯ ಚಪ್ಪಡಿಗಳನ್ನು ನೋಡಿದರೆ, ಇದು ಮಾನವನಿಂದ ಆಗುವ ಕಾರ್ಯವಾಗಿ ಕಂಡುಬರುವುದಿಲ್ಲ. ಆದರೆ ಗೋಪುರದ ಮೇಲೆ ಹಾಸಿರುವ ತಾಮ್ರದ ತಗಡನ್ನು ಗಮನಿಸಿದರೆ ದೇವಾಲಯ ಪುರಾತನವಾದ್ದು ಎನ್ನುವುದಕ್ಕೆ ಬೆಂಬಲ ದೊರಕುವುದಿಲ್ಲ. ಇಷ್ಟೆಲ್ಲಾ ಆದರೂ ಆ ಕ್ಷೇತ್ರಕ್ಕೆ ಕೋಟೇಶ್ವರ ಎಂಬ ಹೆಸರೇ ಇರಲಿಲ್ಲವೆಂದೂ ಅದು ದೊಡ್ಡದ ಮಾಹಾತ್ಮ್ಯವಾಗಿದ್ದು ಅದಕ್ಕೆ ಬಗ್ಗೋಡಿ ಹೋಬಳಿ ಎಂಬ ಹೆಸರಿತ್ತು ಎನ್ನುವ ದಾಖಲೆ ಪಟೇಲರ ಮನೆಯ ನಾಲಂದದ ಪಶ್ಚಾರಿನ ಕಟ್ಟಿನಲ್ಲಿ ದೊರಕಿದೆ. ಆಗಲೇ ತಿಂಗಳ ನಾಡಿನಿಂದ ಕೆಲವು ಬ್ರಾಹ್ಮಣರು ಪಶ್ಚಿಮದ ಕರಾವಳಿ ತೀರಕ್ಕೆ ಬಂದರು. ಅವರೆಲ್ಲರೂ ಬ್ರಹ್ಮಚಾರಿಗಳು. ತರುವಾಯ ಮೊಗವೀರ ಹುಡುಗಿಯರನ್ನು ಬ್ರಾಹ್ಮಣ ಕನ್ಯೆಯರಾಗಿ ಪರಿವರ್ತಿಸಿ ಶಾಸ್ತ್ರೋಕ್ತವಾಗಿ ದೀಕ್ಷೆ ಕೊಡಿಸಿ ಮದುವೆ ಮಾಡಿಕೊಂಡರು ಎಂಬುದನ್ನು ಆ ದಾಖಲೆಯಲ್ಲಿ ನಮೂದಿಸಲಾಗಿದೆ. ಇದು ಸತ್ಯಾಂಶದಿಂದ ಎಷ್ಟೇ ದೂರವಿದ್ದರೂ ಒಂದು ವಿಚಾರ ಗಮನಾರ್ಹ. ಇಂದಿಗೂ ಬ್ರಾಹ್ಮಣರಲ್ಲಿ ಒಂದು ಸಂಪ್ರದಾಯವಿದೆ. ವಿವಾಹ ಸಮಾರಂಭದಲ್ಲಿ ವಧುವರರು ಕೆರೆಗೆ ಹೋಗಿ ಮೀನು ಹಿಡಿಯುವ ಒಂದು ಕ್ರಮ ಜಾರಿಯಲ್ಲಿದೆ. ಇದನ್ನು ಪರಿಶೀಲಿಸಿದರೆ ಬಗ್ಗೋಡಿ ಹೋಬಳಿಯ ಬಗ್ಗೆ ಇರುವ ದಾಖಲೆಗಳನ್ನು ನಂಬಬೇಕಾಗುತ್ತದೆ. ಹಳೆ ಹೆಸರಿನಂತೆ ತೆಕ್ಕಟ್ಟೆಯ ಕಾಳಿಕಲ್ಲಿನ ಕಟ್ಟೆಯ ತನಕ ಬಗ್ಗೋಡಿ ಗ್ರಾಮವಿತ್ತು ಎಂಬ ವಿವರವೂ ಅದರಲ್ಲಿ ಇದೆಯಂತೆ. ಏನೇ ಇದ್ದರೂ ಕೋಟೇಶ್ವರದ ಶಿವದೇವಾಲಯ ಮಾತ್ರ ಇಂದಿಗೂ ತನ್ನ ಕ್ಷೇತ್ರಮಹತ್ವವನ್ನು ಉಳಿಸಿಕೊಂಡಿದೆ.

ಶಿವದೇವಾಲಯದ ಸುತ್ತಲೂ ವಿಶಾಲ ತೆರೆ ಅಂಗಳ. ಗುಡಿಯ ಮುಂದುಗಡೆ ರಥಬೀದಿ. ಧ್ವಜಸ್ತಂಭದ ಬಳಿ ನಿಂತರೆ ಸುಂದರವಾದ ನೂರ

ದಲ್ಲಿರುವ ಬಸವನ ಗುಡಿ ಕಾಣಿಸುತ್ತದೆ. ದೇಗುಲದ ಉತ್ತರದಲ್ಲಿ ದೊಡ್ಡ ತೀರ್ಥ ಕೆರೆ. ಕೆರೆಯ ಸುತ್ತಲೂ ಆರು ಅಂತರದ ಪಾವಟಿಗೆಗಳು. ಕೆರೆಯ ನಡುವಿನಲ್ಲಿ ಮಣಕನ ಕಟ್ಟೆ. ಕ್ಷೇತ್ರದಲ್ಲಿ ಮಿಂದು ಜಪತಪ ಮಾಡುವುದಕ್ಕೆ ಒಂದು ಕಲ್ಲಿನ ಮಂಟಪ...ಮೂಡುದಿಕ್ಕಿನಲ್ಲಿ ಪ್ರೇತಶಾಲೆ ...ಗುಡಿಯ ಸುತ್ತಲೂ ಪೌಳಿ ...ಸುತ್ತಿನ ನಡುವಿನಲ್ಲಿ ಅಲ್ಲಲ್ಲಿ ಬಲಿಕಲ್ಲುಗಳು .. ನಾಲ್ಕು ದಿಕ್ಕಿನಲ್ಲೂ ಭಕ್ತರು ಕುಳಿತುಕೊಳ್ಳಲು ಅನುಕೂಲವಾಗುವಂತೆ ಚಾವಡಿಗಳು....ಗುಡಿಯ ಹೊರಬಾಗಿಲಲ್ಲೆ ಕ್ಷೇತ್ರಪಾಲ ವಿಗ್ರಹ.. ತೆಂಕಿಗೆ ಶಯನಮಂದಿರ....ತೇರು ಬೀದಿಯ ಪಕ್ಕದಲ್ಲೆ ಓಕುಳಿ ಹೊಂಡ....ಹೊಂಡದ ದಕ್ಷಿಣಕ್ಕಿರುವುದೇ ಪದ್ಮಾವತಿಯ ಮನೆ.

ಗುಡಿಯ ಹೊರಬಾಗದಲ್ಲಿರುವ ತೆರೆ ಅಂಗಳದ ಸುತ್ತಲೂ ಕಲ್ಲಿನ ಪಾಗಾರವಿದೆ. ಅದಕ್ಕೆ ಲಗ್ತಾಗಿಯೇ ಇರುವುದು ತೇರು ಬೀದಿ. ಬೀದಿಯ ಚರಂಡಿಗೆ ತಾಗಿಯೇ ಬ್ರಾಹ್ಮಣರ ಮನೆಗಳು. ಇದ್ದುದರಲ್ಲಿ ತಂತ್ರಿಯವರ ಮನೆಯೇ ದೊಡ್ಡದು. ಉಳಿದ ಎಲ್ಲಾ ಮನೆಗಳು ಎರಡು ಮೂರು ಅಂಕಣದ ಹುಲ್ಲುಚಾವಡಿಯ ಮುಚ್ಚಿಗೆಯಿಲ್ಲದ ಮನೆಗಳು. ಎರಡು ಅಂಕಣದ ಮನೆ ಪದ್ಮಾವತಿಯದು. ಚಾವಡಿಯಲ್ಲಿರುವ ಎರಡು ಕಂಬಗಳು ಕಿರಾಲು ಬೋಗಿಯ ಎಳೆಗಳು. ಅದನ್ನು ಮಾಡಿನ ಸೂರಿನ ತೊಲೆಗೆ ಹುರಿಯ ಹಗ್ಗದಲ್ಲಿ ಬಿಗಿಸಿ ಕಟ್ಟಿದ್ದು. ಮನೆಗೆ ಎರಡೇ ಬಾಗಿಲು. ಮುಂದೆ ಚಾವಡಿಗೆ ಮುಖವಾಗಿ ಒಂದು ಕಂಡಿ. ಆ ಕಂಡಿಯ ಬಾಗಿಲು ತೆರೆದರೆ ಒಳಕಾಣಿಸುವುದು ಪದ್ಮಾವತಿಯ ಶಯನಮಂದಿರ. ಕೋಟಿ ಐತಾಳರೇ ಕಟ್ಟಿಸಿದ ಮನೆ ಅದು. ಮೊಗೆ ಬೆಟ್ಟನಿಂದ ಬಂದಾಗ ಅವಳು ಇದ್ದದ್ದು ಮೊದಲು ದೇವಾಲಯದ ಉಗ್ರಾಣ ದಲ್ಲಿ. ಎರಡು ಹೊತ್ತಿನ ಊಟ ಐತಾಳರ ಮನೆಯಲ್ಲೆ ಆಗುತ್ತಿತ್ತು. ಎರಡು ತಿಂಗಳು ಮಾತ್ರ ಪದ್ಮಾವತಿ ಉಗ್ರಾಣದ ಕೋಣೆಯಲ್ಲಿದ್ದಳು. ಆದರೆ ಅದು ಐತಾಳರಿಗೆ ಸರಿಕಾಣಲಿಲ್ಲ. ಓಕುಳಿ ಹೊಂಡದ ಬಳಿ ಇರುವ ದೇವಾಲಯದ ಬಳಿ ಇರುವ ಕಾಲಿ ಜಾಗದಲ್ಲೆ ಪದ್ಮಾವತಿಗಾಗಿ ಮನೆ ಕಟ್ಟಿಸಿದರು. ದೇವಾ ಲಯದ ಉಗ್ರಾಣದಲ್ಲಿ ಪದ್ಮಾವತಿ ಇದ್ದರೂ ತಾನು ಆಕೆಯ ಜೊತೆ ಸಂಪರ್ಕ ಇಟ್ಟುಕೊಂಡು ಆ ಸ್ಥಾನವನ್ನು ಅಪವಿತ್ರ ಮಾಡುವುದು ಮಹಾ ಪಾಪ ಎಂದೇ ಎಣಿಸಿದರು ಐತಾಳರು. ಅಲ್ಲದೆ ತನ್ನ ಸುಖಕ್ಕಾಗಿ ಪದ್ಮಾವತಿಯನ್ನು

ಕರೆದುಕೊಂಡು ಬಂದಾಗ ಹೆಂಡತಿಯು ಕೈಯಿಂದ ಅಡಿಗೆ ಮಾಡಿಸಿ ಆಕೆಗೆ ಬಡಿಸುವಂತೆ ಹೇಳುವುದು ಧರ್ಮವಲ್ಲ ಎಂಬ ವಿಚಾರವನ್ನು ತಮ್ಮಲ್ಲೇ ಯೋಚಿಸಿಕೊಂಡರು. ಈ ನಿರ್ಧಾರದ ಬಳಿಕ ಪದ್ಮಾವತಿಯಲ್ಲಿ "ನಿನಗೊಂದು ಮನೆ ಕಟ್ಟಿಸಿಕೊಡುತ್ತೇನೆ. ಎರಡು ತಿಂಗಳು ಉಗ್ರಾಣದ ಕೋಣೆಯಲ್ಲಿ ನಾನು ನಿನ್ನ ಸಂಪರ್ಕ ಇಟ್ಟುಕೊಂಡದ್ದು ಅಪರಾಧ....ಮತ್ತೆ ನನ್ನ ಮನೆಗೆ ಊಟಕ್ಕೆ ಬಂದು ಕಾಮಾಕ್ಷಿಯಿಂದ ಸೇವೆ ಮಾಡಿಸಿಕೊಳ್ಳುವುದು ನನಗೆ ಇಷ್ಟವಿಲ್ಲ. ನೀನು ನಿನ್ನದಾದ ಮನೆಯಲ್ಲೇ ಇದ್ದರೆ....ನನಗೂ ಆಗಾಗ ಬಂದು ಹೋಗುವುದಕ್ಕೆ ಅನುಕೂಲವಾಗುತ್ತದೆ. ನೀನೇ ನಿನಗೆ ಬೇಕಾದಹಾಗೆ ಅಡಿಗೆ ಮಾಡಿಕೊಂಡು ಊಟ ಮಾಡುವುದಕ್ಕೂ ಸರಿಹೋಗುತ್ತದೆ" ಎಂದರು. ಪದ್ಮಾವತಿಗೂ ಅದು ಇಷ್ಟವಾಗಿತ್ತು. "ಆಗಲಿ...ನಿಮ್ಮ ಮನಸ್ಸು" ಎಂದಳು. ಎರಡು ತಿಂಗಳಲ್ಲೇ ಐತಾಳರು ಮನೆ ಕಟ್ಟಿಸುವ ಕಾರ್ಯ ಮುಗಿಸಿದ್ದರು. ಮನೆ ಒಕ್ಕಲಿಗೆ ಮೊಗೆಬೆಟ್ಟಿನಿಂದ ಗಿರಿಜಳನ್ನು ಕರೆಯಿಸಲು ಮರೆತಿರಲಿಲ್ಲ ಐತಾಳರು. "ಮಗಳು ಹೊಸಮನೆಗೆ ಬಂದದ್ದು...ನೆನಪಿಗಿರಲಿ" ಎಂದು ಐತಾಳರೇ ಗಿರಿಜಳಿಗೆ ಜರಿ ಪತ್ತಲಿನ ಸೀರೆ ಕೊಟ್ಟು "ಪದ್ಮಾವತಿ ಸುಖವಾಗಿದ್ದಾಳೆ..." ಎಂದಿದ್ದರು ಐತಾಳರು. ಆ ಮಾತು ಸುಳ್ಳಾಗಲಿಲ್ಲ. ಎರಡು ವರ್ಷಕಾಲ ಪದ್ಮಾವತಿ ಆ ಮನೆಯಲ್ಲಿ ಸುಖವಾಗಿ ಬಾಳಿದ್ದಳು.

೫

ಕಟ್ಟೆಂಗೆರೆಯ ಉಬ್ಬಿನ ಇಕ್ಕಡೆಯ ಹಕ್ಕಲದ ನಡುವೆ ಮಲೆನೂರಿನಿಂದ ಹಾದುಬರುವ ಕೆಮ್ಮಣ್ಣಿನ ಮಾರ್ಗವಿದೆ. ಕಡಿದಾದ ಕೊರಕಲು ದಾರಿಯ ಎರಡು ಬದಿಯ ದಿಬ್ಬದಲ್ಲಿ ಸಾಲಾಗಿ ನೆಟ್ಟ...ಎತ್ತರಕ್ಕೆ ಬೆಳೆದ ಕಿರಾಲು ಬೋಗಿಯ ಮರಗಳು. ನಡುವೆ ಅಲ್ಲೊಂದು ಇಲ್ಲೊಂದು ಸೊಯ್ಯನೆ ಗುಡ್ಡದ ತಪ್ಪಲಿನಿಂದ ಬೀಸುವ ಗಾಳಿಗೆ ತೂರಾಡುವ ಉದ್ದನೆಯ ಸರ್ಪೆಯ ಎಳೆ ಸಸಿಗಳು. ಸಾಲುಮರಗಳ ಇಬ್ಬದಿಯಲ್ಲೂ ಸರಕಾರದ ಹಡು ಭೂಮಿಗಳು. ದರಖಾಸ್ತು ಆದ ಕೆಲವು ಜಡ್ಡಿನಲ್ಲಿ ತಲೆ ಎತ್ತಿ ನಿಂತ ಹಸಿರು ಚಿಗುರೊಡೆದ ಮಾವಿನ ತೋಪು. ಇನ್ನೂ ತಗ್ಗಿನ ಪ್ರದೇಶದಲ್ಲಿ ಗೋವೆಯ ಹಾಡಿ. ಹಾಡಿಯ ದಿಣ್ಣೆಯಲ್ಲಿ ಮಾರಿಯಮ್ಮನ ಕಟ್ಟೆಯಿದೆ. ಮಲೆನೂರಿನಿಂದ ಬರುವವರು ಎತ್ತಿನ ಗಾಡಿಗಳನ್ನು ಅಲ್ಲಿಯೇ ನಿಲ್ಲಿಸಿ, ಆ ಕಟ್ಟೆಯ ಮುಂದೆ ನಿಂತು ಒಂದು ತೆಂಗಿನಕಾಯನ್ನಾದರೂ ಒಡೆಯದಿದ್ದರೆ ಗಾಡಿ ಕೋಟೇಶ್ವರದ ಗ್ರಾಮಕ್ಕೆ ಬರುವಂತಿಲ್ಲ. ಆ ನಂಬಿಕೆ ಇಂದಿಗೂ ನಡೆದುಬಂದಿದೆ. ಕಟ್ಟೆಯ ಕಲ್ಲಿಗೆ ತೆಂಗಿನಕಾಯಿ ಒಡೆಯದೆ ಗಾಡಿಯನ್ನು ಇಳಿಜಾರಿನಲ್ಲಿ ಇಳಿಸಿದಾಗಲೇ ಮಲೆನೂರಿನ ನಂಜೇಗೌಡನ ಗಾಡಿಯ ಎತ್ತುಗಳು ಕಾಲು ಮುರಿಸಿಕೊಂಡು ... ಗಾಡಿಯು ಮೂಕಿಯಿಂದ ನೊಗ ಜಾರಿ ಹತ್ತಿರದ ಕಣಿವೆಯಲ್ಲಿ ಉರುಳಿದ ಕತೆಯನ್ನು ಇಂದಿಗೂ ಹೇಳುತ್ತಾರೆ. ಅಂತೂ ಆ ಕಟ್ಟೆ ಎಂದರೆ ಎಲ್ಲರಿಗೂ ಭಯ ಭಕ್ತಿ. ಆಸಾಡಿಯ ಜಡಿಮಳೆಯಲ್ಲಿ ಒಂದು ರಾತ್ರಿ ಊರಿನ ಮಾರಿ ಗುಡಿಯಿಂದ ಮಾರಿಯನ್ನು ಓಡಿಸುವ ಒಂದು ಕ್ರಮವಿದೆ. ಆ ಕಟ್ಟೆಯೇ.

ಮೂಡಣ ಗಡಿ. ಪ್ರತಿವರ್ಷ ಮಾರಿಯನ್ನು ಆ ಕಟ್ಟೆಯತನಕ ಬಿಡುತ್ತಾರೆ. ಅದನ್ನು ಮರೆತರೆ ಊರಿಗೆ ಬಂತು ಕೇಡು. ಜನರನ್ನು ಆಹುತಿ ತೆಗೆದು ಕೊಳ್ಳುವಂತಹ ದೊಡ್ಡ ರೋಗ ತಲೆ ಹಾಕುತ್ತದೆ. ಅದು ಸುಳ್ಳಲ್ಲ. ಒಂದು ವರ್ಷ ಮಾರಿಗುಡಿಯ ಪೂಜಾರಿಗಳಲ್ಲಿ ಜಗಳ ಹುಟ್ಟಿತು. ಮಾರಿ ಬಿಡುವು ದನ್ನೆ ಮರೆತರು. ಎರಡೇ ದಿನ. ಹನ್ನೊಂದು ಹಸುಗಳು ನಡುರಸ್ತೆಯಲ್ಲಿ ಕೈಕಾಲು ಚಾಚಿ ಪ್ರಾಣಬಿಟ್ಟವು. ಮತ್ತೆ ನಾಲ್ಕು ದಿನದ ತರುವಾಯ ಊರಲ್ಲಿ ಮೈಲಿಗೆ ರೋಗ ಹರಡಿತು. ಹೆದರಿದ ಜನ ಮಾರಿಗುಡಿಯ ಮುಂದೆ ಬೊಬ್ಬೆಯಿಟ್ಟರು. ಕೊನೆಗೆ ದೇವಿಗೆ ಒಂದುನೂರು ಕೋಳಿ ಆಹುತಿ ಕೊಟ್ಟು ಮಾರಿಯನ್ನು ಕಟ್ಟಂಗೆರೆಯ ಉಬ್ಬಿನ ಕಟ್ಟೆಯತನಕ ಬಿಡಿಸಿಬಿಟ್ಟರು. ಇದರ ಅರ್ಥ ಆ ಮಾರಿ ತನ್ನ ಗ್ರಾಮವನ್ನು ಬಿಟ್ಟು ಇನ್ನೊಂದು ಗ್ರಾಮವನ್ನು ಪ್ರವೇಶಿಸಿತು ಎಂದರ್ಥ. ಆ ಕಟ್ಟೆ ಕೋಟೇಶ್ವರ ಗ್ರಾಮದ ಪೂರ್ವಕ್ಕಿದೆ. ಆ ಕಟ್ಟೆಯನ್ನು ದಾಟಿದರೆ ಗ್ರಾಮ ಪ್ರವೇಶವಾದಂತೆ. ಆ ಕರಿಕಲ್ಲಿನ ಕಟ್ಟೆಯ ಮೇಲೆ ನಿಂತು ಪಡುವಣದತ್ತ ದೃಷ್ಟಿ ಹೊರಳಿಸಿದರೆ ಗ್ರಾಮದ ವಿಶಾಲ ಬಯಲು ಪ್ರದೇಶ ಕಾಣುತ್ತದೆ. ಕಾಗೇರಿ ತೋಡಿನ ಉತ್ತರದ್ದಂತೂ ಮಾಕೋರ್ಡುಮಕ್ಕಿ ಭೂಮಿ. ಅದು ಸೆಟ್ಟರಿಗೆ ಸೇರಿದ್ದು. ತೆಂಕಿಗೆ ಅಡಿಗಳ ಸಾಗುವಳಿಯ ಜಮೀನು. ಹೆಚ್ಚಿನ ನೀರಿನ ಆಶ್ರಯವಿದ್ದು ಹೊಂಡದ ಜಾಗ ದಲ್ಲಿರುವುದರಿಂದ ಅಡಿಗಳ ಭೂಮಿ ಸೆಟ್ಟರ ಮಕ್ಕಿಗಿಂತ ಒಂದು ಪಟ್ಟು ಮೇಲು. ತೋಡಿನಿಂದ ಕೆಮ್ಮಣ್ಣಿನ ದಾರಿಯಲ್ಲಿ ಪಡುಮುಖವಾಗಿ ಬಂದರೆ ಊರಿನ ಗಣ್ಯ ವ್ಯಕ್ತಿಗಳಾದ ಕೋಟಿ ಐತಾಳರ ಹೆಂಚಿನ ಹೆಬ್ಬಾಗಿಲ ಮನೆ ಕಾಣಿಸು ತ್ತದೆ. ಅಲ್ಲಿಂದಲೇ ಆರಂಭ ಕೋಟೇಶ್ವರ ಪೇಟೆ. ಸಾಕಷ್ಟು ದೊಡ್ಡದಾದ ಮನೆ. ಹೆಬ್ಬಾಗಿಲ ಒಂದೊಂದು ಮುಂಡಿಗೆಯೇ ಐತಾಳರ ಜಬರದಸ್ತನ್ನು ಸಾರುವಂತಿತ್ತು. ಎರಡಾಳೆತ್ತರದ ಬಾಗಿಲು. ಒಂದು ಆನೆಯೇ ಒಳ ಹೋಗುವಷ್ಟು ಅಗಲವಾದ ಮುಂಬಾಗಿಲು. ಆ ಕಾಲದಲ್ಲಿ ಮಂಗಳೂರು ಹೆಂಚನ್ನು ತರಿಸಿದವರಲ್ಲಿ ಐತಾಳರೇ ಮೊದಲಿಗರು. ಹತ್ತು ಗಾಡಿಯಲ್ಲಿ ಹೆಂಚು ತುಂಬಿಸಿ ಮಂಗಳೂರಿನಿಂದ ಕೋಟೇಶ್ವರಕ್ಕೆ ತರುವ ಸಾಹಸ ಆಗಿನ ದಿನಗಳಲ್ಲಿ ವಿಶೇಷ. ಹೆಬ್ಬಾಗಿಲ ಮುಂದೆಯೇ ಕೆರೆ ಅಂಗಣ. ಪಕ್ಕದಲ್ಲಿ ಮಳೆನೂರಿನ ರಸ್ತೆ. ಅಂಗಣದ ಪೂರ್ವಕ್ಕೆ ಸುಮಾರು ಹತ್ತುನೂರು ದೂರ

ದಲ್ಲೆ ಒಂದು ನಿಲಸುಕಲ್ಲು. ಅದು ಮೈಲಿ ಕಲ್ಲೆಂದು ಕೆಲವರ ವಾದ. ಯಾವುದೋ ಭೂತದ ಕಲ್ಲೆಂದು ಹಲವರ ಅಭಿಪ್ರಾಯ. ಅಂತೂ ಅದು ಮೈಲಿ ಕಲ್ಲೇ ಎಂಬುದು ಐತಾಳರಿಗೆ ನಿಶ್ಚಯವಾಗಿ ತಿಳಿದಿತ್ತು. ನಗರದ ಶಿವಪ್ಪನಾಯ್ಕನ ಆಡಳಿತದಲ್ಲಿ ಪಶ್ಚಿಮ ಕರಾವಳಿಯ ಬಹುಭಾಗ ಅವನ ಆಧಿಪತ್ಯಕ್ಕೊಳಗಾಗಿತ್ತು ಎಂಬ ವದಂತಿಯಿದೆ. ಆಗಲೇ ಆತನು ನಗರದಿಂದ ಹುಲಿಕಲ್ ಮಾರ್ಗವಾಗಿ ಮೈಲಿ ಕಲ್ಲುಗಳನ್ನು ಹಾಕಿಸಿದ ಎನ್ನುತ್ತಾರೆ. ಆದರೆ ಇನ್ನೊಂದು ಕತೆ ತೀರಾ ಬೇರೆಯಾಗಿದೆ. ವಸುಪುರವನ್ನು ಆಳುತ್ತಿದ್ದ ವಸು ಚಕ್ರವರ್ತಿಯೆ ಕೋಟೇಶ್ವರವನ್ನು ತನ್ನ ವಶಪಡಿಸಿಕೊಂಡು ಅದಕ್ಕೆ ಧ್ವಜಪುರ ಎಂದು ನಾಮಕರಣ ಮಾಡಿದ ಎನ್ನುತ್ತಾರೆ. ಆಗಲೇ ಈ ಮೈಲಿಕಲ್ಲುಗಳನ್ನು ನೆಟ್ಟರು ಎಂದು ಹೇಳುತ್ತಾರೆ. ಅಂತೂ ಆ ಮೈಲಿಕಲ್ಲಿನ ಮೇಲೆ ಯಾವ ಅಂಕಿ ಅಂಶಗಳೂ ಇರಲಿಲ್ಲ. ದಾರಿಯಲ್ಲಿ ಹೋಗುತ್ತಿದ್ದ ದನ ಕರುಗಳು ಮೈ ತುರಿಸಿಕೊಳ್ಳುವುದಕ್ಕೆ ಅದು ಉಪಯೋಗವಾಗಿತ್ತು ಎಂಬುದು ನಿಜ. ಆದರೆ ಕಳೆದ ಶತಮಾದ ಆರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬ್ರಿಟಿಷರ ಆಧಿಪತ್ಯಕ್ಕೆ ಸೇರಿದ ಅನಂತರ, ಆ ಮೈಲಿಯ ಕಲ್ಲಿನಲ್ಲಿ ಇಪ್ಪತ್ತೊಂಬತ್ತು ಎಂಬ ಅಂಖೆಯನ್ನು ಬರೆಯಲಾಯ್ತು. ಅದು ಸೋಮೇಶ್ವರದ ದಿಂದ ಕೋಟೇಶ್ವರಕ್ಕಿರುವ ಅಂತರವನ್ನು ಸೂಚಿಸುತ್ತದೆ ಎಂಬುದೇ ಸಮಾಧಾನ.

ರಸ್ತೆಯ ಎಡಕ್ಕೆ ಗೋಳಿಮರದ ಹಾಡಿಯಿದೆ. ಹೆಬ್ಬಾಗಿಲ ನಡೆಯಲ್ಲಿ ನಿಂತರೆ ಹಾಡಿ ಕಾಣಿಸುತ್ತದೆ. ದೊಡ್ಡ ಆಲದ ಮರದಲ್ಲೆ ಬೊಬ್ಬರ್ಯ ದೆವ್ವವಿದೆ ಎಂದು ಸುದ್ದಿ. ಐತಾಳರೆ ಹೇಳುತ್ತಾರೆ 'ಬಾರೀ ದೆವ್ವವಿದೆ' ಎಂದು. ಆದರಲ್ಲಿಯೂ ಒಂದು ಸೋಜಿಗವಿದೆ. ಆ ದೆವ್ವವೇ ಐತಾಳರ ಮನೆಯನ್ನು ರಕ್ಷಿಸುತ್ತದೆ ಎಂದು. ಗ್ರಾಮ ತುಂಬ ಆ ಮಾತು ಹರಡಿದೆ. ಐತಾಳರಿಗೆ ದೆವ್ವದ ಬೆಂಬಲವಿದೆ ಎಂಬುದು ಹತ್ತಿರದ ಹಳ್ಳಿಯವರಿಗೂ ಹಬ್ಬಿತ್ತು. ಜನ ನಂಬುವುದಕ್ಕೂ ಸಕಾರಣಗಳಿದ್ದುವು. ಆ ದಾರಿಯಲ್ಲಿ ರಾತ್ರಿ ದೆವ್ವವನು ಕಂಡವರಿದ್ದಾರೆ. ಆಲದಮರದ ಎತ್ತರದಷ್ಟೆ ಒಂದು ವ್ಯಕ್ತಿ ರಾತ್ರಿ ಹೊತ್ತು ಬಿಳಿಯ ಬಟ್ಟೆ ಧರಿಸಿ ಹಾಡಿಯಿಂದ ಹಕ್ಕಲದ ದಿನ್ನೆಯ ಮೇಲೆ ನಡೆದು ಹೋದುದನ್ನು ನೋಡಿದವರಿದ್ದಾರೆ. ನಡುರಾತ್ರಿಯಲ್ಲಿ ಕೈಯಲ್ಲಿ ಸೂಡಿ

ಹಿಡಿದು....ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಐತಾಳರ ಮನೆಗೆ ಮೂರ ಸುತ್ತು ಬಂದುದನ್ನು ನಾನು ನನ್ನ ಕಣ್ಣಿಂದಲೇ ಕಂಡೆ ಎಂದು ಸಾಲೇರ ಕೊರಗ ಹೇಳು ತ್ತಾನೆ. ಸೂಡಿಯ ದೀಪ ಕಂಡು ಹೆದರಿದವರಿದ್ದಾರೆ. ಮೇಟಿನ ಮಂಜ ಹಳೆ ಆಳಿನೆಯ ಬಯಲಾಟಕ್ಕೆ ಹೋದವನು ಬೆಳಗಿನಜಾವ ವಾಪಾಸು ಬರುವಾಗ ಕತ್ತಲೇ ಆವರಿಸಿತ್ತು. ದಾರಿ ಕೂಡಾ ಸರಿಯಾಗಿ ಕಾಣಿಸುತ್ತಿರಲಿಲ್ಲ. ಹೆದ್ದಾರಿ ಯಲ್ಲಿ ಬರುತ್ತಿದ್ದಾಗಲೇ ತೋಡಿನ ವರೆಯ ಬಳಿ ಸೂಡಿ ಕಾಣಿಸಿತು. ಯಾರೋ ಆಟಕ್ಕೆ ಹೋದವರು ಇರಬೇಕೆಂದು ಬೆಳಕಿನ ಆಶ್ರಯ ಪಡೆಯಲು ಸಿಳ್ಳು ಹಾಕಿದ. ಮೂರನೆಯ ಸಿಳ್ಳಿಗೆ ಸೂಡಿಯ ಬೆಳಕು ಹತ್ತಿರದಲ್ಲಿ ಕಾಣಿಸಿತು. ಕಣ್ಣು ಮುಂದೆಯೇ ದೊಂದಿ ಬೆಂಕಿ ಉರಿದಂತೆ ಕಂಡಿತು. ಬೊಬ್ಬರ್ಯನ ವಿಕಾರ ರೂಪ ಕಂಡೇ ಕೆಕ್ಕರಿಸಿ ಕೂಗುತ್ತಾ ಚರಂಡಿಗೆ ಬಿದ್ದ. ಎದೆ ಒಡೆದು ರಕ್ತ ಬಾಯಿಂದ ಹೊರಬಂದಿತ್ತು. ಈ ಘಟನೆ ನಡೆದ ಮೇಲೆ ಆ ದೈವದ ಬಗ್ಗೆ ಜನರಿಗೂ ನಂಬಿಕೆ ಬಂತು. ಐತಾಳರ ರಕ್ಷಕನೆಂದು ವದಂತಿ ಹಬ್ಬಿದ ಮೇಲೆ ಐತಾಳರ ತೂಕ ಒಂದು ಗೇಣು ಮೇಲೇರಿತು. ಜನರಲ್ಲಿ ಅಧಿಕಾರ ಚಲಾಯಿಸುವುದಕ್ಕೂ ಅವರಿಗೆ ಇದು ಸುಗಮವಾಯ್ತು.

ಆ ದೈವ ಐತಾಳರಿಗೆ ಶರಣು ಬಂದ ಕತೆಯನ್ನು ಅವರ ಬಾಯಿಂದಲೇ ಕೇಳಬೇಕು. ಒಂದಕ್ಕೆ ಎರಡುಮಾಡಿ ಅವರು ಹೇಳುತ್ತಿದ್ದರೆ ಜನರು ನಂಬಲೇ ಬೇಕು. ಮೊದಲು ಮೊದಲು ಅವರಿಗೂ ಆ ಹಾಡಿಯ ಗೋಳಿಮರದಲ್ಲಿ ದೈವವಿತ್ತು ಎಂದು ತಿಳಿದೇ ಇರಲಿಲ್ಲವಂತೆ. ಎಷ್ಟೋ ರಾತ್ರಿ ಮಲವಿಸರ್ಜನೆಗೆ ಅದೇ ಮರದಡಿ ಕುಳಿತಿದ್ದೇನೆ ಎನ್ನುತ್ತಾರೆ. ಒಮ್ಮೆ ಪೇಟೆಯಲ್ಲಿ ಯಾರೋ ಕೇಳಿದರು, "ಹೌದೆ ಐತಾಳರೇ...ಆ ಬೊಬ್ಬರ್ಯ ನಿಮಗೆ ಕಾಣಿಸಿತ್ತೆ" ಎಂದು. ಐತಾಳರು ಆಗ ವಿವರಿಸಿದರು. ಒಂದು ರಾತ್ರಿ ಕುಂದಾಪುರದಿಂದ ಮನೆಗೆ ಬರುವಾಗಲೇ ಹೊತ್ತಾಗಿತ್ತು. ಯಾವುದೋ ಕೇಸಿನ ಸಂಬಂಧ ಹೋಗಿದ್ದರು. ಕುರುಕ್ಷೇತ್ರದ ಬೆಟ್ಟಿನ ಜಾಗಕ್ಕೆ ಬರುವಾಗಲೇ ನಡುರಾತ್ರಿ ಎಂದು ತಿಳಿಯಿತು. ಯಾವ ಭಯ ಅವರಿಗೆ ಇಲ್ಲದಿದ್ದರೂ ಸುಡುಗಾಡಿನ ಕಟ್ಟೆಯಿಂದ ಕೇಳುವ ವಿಕಾರ ಕೂಗು ಮಾತ್ರ ಅವರನ್ನು ಎಚ್ಚರಿಸಿತು. ಹೆಜ್ಜೆಯ ವೇಗ ಹೆಚ್ಚಿಸಿದರು. ಇದ್ದಕ್ಕಿದ್ದಂತೆ ಬೆಳಕು ಕಾಣಿಸಿತು. ಅರೆಕ್ಷಣ ಮಾತ್ರ. ಮತ್ತೆ ಕತ್ತಲು. ಬಾನಲ್ಲಿ ದಟ್ಟವಾಗಿ ಮೋಡ ತುಂಬಿತ್ತು.

ಆ ಬೆಳಕು ಎಲ್ಲಿಂದ ಬಂತು ಎಂಬುದೇ ಐತಾಳರಿಗೆ ಅಚ್ಚರಿ. ಒಂದೇ ಸನೋಡಿದರು. ಯಾರೂ ಕಾಣಿಸಲಿಲ್ಲ. ಎರಡುಬಾರಿ "ಯಾರು?" ಎಂದು ವಿಚಾರಿಸಿದರು. ಮತ್ತೆ ಪಳಕ್ಕನೆ ಬೆಂಕಿಯ ಚೆಂಡು ಮುಂದೆ ಹಾದು ಹೋದಂತೆ ಅರಿವಾಯಿತು. ಆಗ ಮಾತ್ರ ಐತಾಳರು ಹೆದರಿದರು. ಪಟಕ್ಕನೆ ಜನಿವಾರವನ್ನು ಕೈಯಲ್ಲಿ ಹಿಡಿದು ಹತ್ತು ಸಾರಿ ಗಾಯತ್ರಿ ಮಂತ್ರ ಪಠಿಸಿ ಗಟ್ಟಿಯಾಗಿ "ನಾನು ಬ್ರಾಹ್ಮಣನೇ ನಿಜವಾಗಿದ್ದರೆ....ನನ್ನ ಮನೆಯಲ್ಲಿ ಸಾಲಿಗ್ರಾಮ ಇರುವುದಾದರೆ... ಈ ನನ್ನ ಬಾಯಿಂದ ಬಂದ ಗಾಯತ್ರಿ ಮಂತ್ರದಲ್ಲಿ ಕಿಂಚಿತ್ತಾದರೂ ಶಕ್ತಿ ಇರುವುದಾದರೆ ಭೂತ ಪ್ರೇತದ ಕಾಟ ನನ್ನ ಪಾಲಿಗೆ ಇಲ್ಲವಾಗಲಿ" ಎಂದುಬಿಟ್ಟರು. ಮುಂದಿನ ಪರಿಣಾಮವನ್ನು ಐತಾಳರೇ ಹೇಳಬೇಕು. ಅಷ್ಟೇ ಆಕರ್ಷಕವಾಗಿ ಬಣ್ಣಿಸಿದ್ದಾರೆ. ಅವರ ಕಾಲು ನೆಲ ಕಚ್ಚಿ ನಿಂತಿತ್ತು. ಮನೆ ಇನ್ನೂ ಎರಡು ಕೂಗಿನ ದಾರಿ. ಮತ್ತೆ ಬೆಳಕು ಕಾಣಿಸಲಿಲ್ಲ. ಯಾರೋ ಇದ್ದಕ್ಕಿದ್ದಂತೆ ಅಳುವ ಸದ್ದು ಕೇಳಿತು. 'ಯಾರು' ಎಂದು ಕೇಳಿದರು ಐತಾಳರು. ಬೊಬ್ಬರ್ಯ ಅವರೊಡನೆ ಕ್ಷಮೆ ಕೇಳಿತಂತೆ. "ನಿಮ್ಮ ಮೊರೆ ಹೊಕ್ಕಿದ್ದೇನೆ... ನನಗೊಂದು ಸ್ಥಾನ ಕಲ್ಪಿಸಿ ಕೊಡಿ" ಎಂದು ಕೇಳಿರುವುದಾಗಿ ಐತಾಳರು ಹೇಳುತ್ತಾರೆ. ದೆವ್ವದೊಡನೆ ಮಾತನಾಡಿದವರು ಆ ಊರಲ್ಲಿ ಅವರೇ ಮೊದಲಿಗರು. ಈ ವಿಚಾರ ಕೇಳಿ ಮಂತ್ರ ತಂತ್ರ ಪ್ರವೀಣರಾದ ಶಿವಐತಾಳರೂ ಮೂಗಿನ ಮೇಲೆ ಬೆರಳಿಟ್ಟಿದ್ದಾರೆ. ಈ ಸಾಹಸಕ್ಕೂ ಹೆಚ್ಚಿನ ಸಾಹಸ ತಾನು ಮಾಡಿದ್ದೇನೆ ಎಂದು ಕೆರೆ ಕಟ್ಟೆಯ ಮಂಜರು ಒಂದು ದಿನ ಐತಾಳರ ಮುಂದೆಯೇ ಹೇಳಿದರು. ಹಕ್ಕಲಲ್ಲಿ ಮೇವಿಗೆ ಬಿಟ್ಟಿದ್ದ ಹಸು ಕತ್ತಲಾದರೂ ಮನೆಗೆ ಬರಲಿಲ್ಲವಂತೆ. ಕೈಯಲ್ಲಿ ಬಳ್ಳಿ ಹಿಡಿದು ಮಂಜರೇ ಹಕ್ಕಲ ತುಂಬ ಹುಡುಕಾಡಿದರು. ಒಂದು ಪೊದೆಯ ಬಳಿ ಏನೋ ಸರಸರ ಸದ್ದಾಯ್ತು. ತಮ್ಮ ದನವೇ ಇರಬೇಕೆಂದು ದಾರ ಕೊರಳಿಗೆ ಬಿಗಿದು ಎಳೆದುಕೊಂಡೇ ಬಂದರು. ಅದನ್ನು ಸರಿಯಾಗಿ ಗಮನಿಸಲೂ ಇಲ್ಲ. ಕೊಟ್ಟಿಗೆಯ ಹೊರಗಿದ್ದ ಗೂಟಕ್ಕೆ ಬಿಗಿದರು. ಬೆಳಗ್ಗೆ ನೋಡುವಾಗ ಅದು ಹುಲಿಮರಿಯಾಗಿತ್ತು ಎಂದು ಮಂಜರು ತಮ್ಮ ಸಾಹಸ ಹೇಳುತ್ತಾರೆ. ಮಂಜರದ್ದು ಡೋಂಗಿ ಎನ್ನುತ್ತಾರೆ ಜನರು. ಐತಾಳರದ್ದು ನೂರಕ್ಕೆ ನೂರು ಸತ್ಯ ಎಂದು ಜನರ ಬಾಯಲ್ಲಿ ನೆಲೆಯೂರಿತು ಆ ವಿಚಾರ

ಆ ದೆವ್ವ ಮೊದಲು ಎಲ್ಲಿತ್ತು ಎಂಬ ಪ್ರಶ್ನೆ ಉದ್ಭವಿಸಿತು. ಅದು ಬಂದದ್ದು ಎಲ್ಲಿಂದ ಎಂದು ಐತಾಳರನ್ನೇ ಕೇಳಿದರು. ಸರಾಗವಾಗಿ ಉತ್ತರಿಸಿದರು ಐತಾಳರು. ಹಿಂದೆ ಮಂಗಳೂರಿನಲ್ಲಿದ್ದ ಅಂತೋನಿ ದೊರೆಯವರು ಬಾರಕೂರಿ ಯಿಂದ ಕೋಟೇಶ್ವರದವರೆಗೆ ಇರುವ ರಸ್ತೆಯನ್ನು ವಿಸ್ತರಿಸವುದಕ್ಕೆ ಆಜ್ಞಾಪಿಸಿ ದರಂತೆ. ಆಗಲೇ ಕೆಲವು ಮರಗಳು ನೆಲಕ್ಕುರುಳಿದುವು. [illegible] ದಾರಿ ಯಲ್ಲಿದ್ದ ಹುಣಸೆಮರದಲ್ಲಿ ಈ ಜೊಬ್ಬರ್ಯ ಇತ್ತಂತೆ. ಮರ ಕಡಿಯುವಾಗ ದೆವ್ವದ ಶಕ್ತಿ ಎಲ್ಲಿಗೆ ಹೋಗಿತ್ತು ಎಂಬ ಪ್ರಶ್ನೆಗೆ ಉತ್ತರವಿಲ್ಲ. ಊರಿನ [illegible] ಕೂಲಿಗಳು ಆ ಮರವನ್ನು ಕಡಿಯುವುದಕ್ಕೆ ನಿರಾಕರಿಸಿದಾಗ [illegible] ಇಬ್ಬರು ದಢೂತಿ ಆಸಾಮಿಗಳು ಎರಡೇ ಗಂಟೆಯಲ್ಲಿ ಮರವನ್ನು ನೆಲಕ್ಕುರುಳಿ ಸಿದರು. ಇದ್ದ ದೆವ್ವ ಮೆಲ್ಲನೆ ಜಾರಿತು. ಸ್ಥಾನವಿಲ್ಲದೆ ರಾತ್ರಿ ಎಲ್ಲಾ [illegible] ಹೆದ್ದಾರಿ... ಅಡಿಗಳ ಜೋಗಿಹಾಡಿ.... ದುಗ್ಗಪ್ಪ ಶೆಟ್ಟರ ಬಯಲಿನಲ್ಲಿ ತಿರುಗುವು ದಕ್ಕೆ ತೊಡಗಿತು. ಆ ತರುವಾಯ ಜನ ರಾತ್ರಿ ಹೊತ್ತು ಹೊರಬರುವುದಕ್ಕೆ ಹೆದರಿಕೊಂಡರು. ದಿನವೂ ಒಂದೊಂದು ಘಟನೆ ಐತಾಳರ ಕಿವಿಮುಟ್ಟಿತು. ಅವರಿಗೂ ಅದನ್ನು ಪರೀಕ್ಷಿಸುವ ಮನಸ್ಸಾಯಿತು. ಎರಡು ತಿಂಗಳು ಅದರ ದರ್ಶನವೇ ಅವರಿಗಾಗಲಿಲ್ಲ. ಆದರೆ ಒಂದು ಕಾರುತಿಂಗಳ ರಾತ್ರಿ, [illegible] ಹೆಬ್ಬಲಸಿನ ಮರದಿಂದ ಮಣ್ಣು ಉದುರುವ ಸಪ್ಪಳ ಕೇಳಿಸಿತು. ಒಂದು ರಾತ್ರಿ ಮೂತ್ರವಿಸರ್ಜನೆಗೆ ಬಚ್ಚಲು ಮನೆಗೆ ಹೋಗಿದ್ದಾಗ ಬಾವಿಯ ಕಟ್ಟೆಯ ದಾರಿ ಯಲ್ಲಿ ಗೆಜ್ಜೆಯ ನಾದ ಕೇಳಿಸಿತು. ಅವರಿಗೂ ಅನುಮಾನ ಬಂತು. ಕಿಂಡಿ ಯಿಂದಲೇ ಹೊರನೋಡಿದರು. ಬಿಳಿಯ ಬಟ್ಟೆ ಹಾಕಿಕೊಂಡ ಒಂದು ರೂಪ ಚಲಿಸಿದಂತೆ ಕಂಡಿತು. ದೆವ್ವ ಚರಂಡಿಯ ಮೇಲೆ ಕುಪ್ಪಳಿಸಿ ಹಾರಿ ನಾಯ್ಕರ ಮುತ್ತನ ಮನೆಯ ಪೂರ್ವಕ್ಕಿರುವ ಪೊದೆಯ ಬಳಿಯಲ್ಲಿ ಮಾಯವಾದುದನ್ನು ಕಂಡರು. ಇದಾದಮೇಲೆ ಮತ್ತೆ ಅವರು ದೆವ್ವವನ್ನು ಕಂಡದ್ದು ಮತ್ತು ಮಾತನಾಡಿದ್ದು ಕುರುಕ್ಷೇತ್ರದ ಜಡ್ಡಿನಲ್ಲಿ. ಇದಾದ ಬಳಿಕ ಐತಾಳರು ತಡಮಾಡಲಿಲ್ಲ. ಕಂಡ್ಲೂರಿನ ಪಂಜುರ್ಲಿ ದೆವ್ವದ ಪಾತ್ರಿಯನ್ನು ಕರೆಯಿಸಿ, ಜೊಬ್ಬರ್ಯನನ್ನು ಬಂಧಿಸಿ ಒಂದು ರಾತ್ರಿಯಲ್ಲೇ ತಮ್ಮ ಮನೆಯ ಮುಂದಿನ ಹಾಡಿಯಲ್ಲಿರುವ ಗೋಳಿಮರದಲ್ಲಿ ಸ್ಥಾನ ಕಲ್ಪಿಸಿಕೊಟ್ಟರು. ಅದಕ್ಕೆ ತೃಪ್ತಿ

ಗಾಗಿ ಹತ್ತು ಕೋಳಿ... ನಾಲ್ಕು ಸೇರು ಅಕ್ಕಿಯ ಚರುಮಾಡಿ ಮರದ ಬುಡದಲ್ಲಿಟ್ಟು... ದೊಡ್ಡ ಎರಡು ಗುಂಬಳಕಾಯನ್ನು ಒಡೆದು... ತಾವೇ ಮುಂದೆ ಚೆಲ್ಲಿದರು. ಅಂದಿನಿಂದ ದೆವ್ವ ಅವರ ಮನೆಯ ರಕ್ಷಕನಾದ ಎಂದು ಊರು ತುಂಬ ಹರಡಿತು. ಆ ಮಾತಿಗೂ ಒಂದು ದಿನ ನಡೆದ ಘಟನೆಗೂ ಜನತೆ ಎಲ್ಲಿಲ್ಲದ ಸಂಬಂಧ ಕಲ್ಪಿಸಿತು. ತೆಂಗಿನಕಾಯಿ ಕಳುವುದಕ್ಕೆ ಬಂದ ಪೂಜಾರಿ ಐತಾಳರ ಮನೆಯ ಬಾವಿಯ ಕಟ್ಟೆಯ ಹತ್ತಿರದ ಮರ ಹತ್ತಿದನಂತೆ. ಅರ್ಧ ಮರ ಹತ್ತಿದಾಗ ಕಾಲು ಜಾರಿ ಕೆಳಬಿದ್ದು ಎಡಗಾಲು ಮುರಿದುಕೊಂಡ. ಇದು ದೆವ್ವದ ಆಟ ಎಂದು ಊರಲ್ಲಿ ಹಬ್ಬಿತು. ಐತಾಳರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ನಿಜವಾಗಿಯು ತನ್ನ ಭಾಗ್ಯಕ್ಕೆ ದೆವ್ವದ ಕೃಪೆಯಿದೆ ಎಂಬ ನಂಬಿಕೆ ಅವರಿಗೂ ಬಂತು. ಆದರೆ ಪೂಜಾರಿ ಹೇಳುತ್ತಾನೆ "ಕಾಲಿಗೆ ಕಟ್ಟಿದ ಮಡೆ ಹಗ್ಗ ಮೇಲೆ ಹತ್ತುತ್ತಿದ್ದಾಗ ತುಂಡಾಯ್ತು.. ರಾತ್ರಿ ಹೊತ್ತು ಕಾಣಿಸಲಿಲ್ಲ....ಕಾಲು ಜಾರಿತು" ಎಂದು. ಅಂತೂ ಆ ದಿನದಿಂದ ದೆವ್ವಕ್ಕೆ ಭಕ್ತರಿಂದ ಆಹುತಿ ಹೆಚ್ಚಾಗಿ ದೊರಕತೊಡಗಿತ್ತು. ಇಷ್ಟಾದರೂ ದೆವ್ವದ ಕೋಪ ತಣಿದಿದೆ ಎಂಬಂತಿಲ್ಲ. ಒಂದೊಂದು ರಾತ್ರಿ ಇದ್ದಕ್ಕಿದ್ದಂತೆ ಸುಡುಗಾಡಿನ ದಾರಿಯಿಂದ ವಿಕಾರವಾದ ಕೂಗು ಕೇಳುವುದುಟು. ಕೆಲವು ಸಾರಿ ಬೆಳಗಿನ ಜಾವ ಗಂಟಲು ಕೆಕ್ಕರಿಸಿಕೊಂಡು ಕೂಗುವುದನ್ನು ಕೇಳಿದವರಿದ್ದಾರೆ. ಅದು ಬೊಬ್ಬರ್ಯ ಅಲ್ಲ.....ಮೊನ್ನೆ ತಾನೆ ಕೊರಳಿಗೆ ನೇಣು ಸುತ್ತಿಕೊಂಡು ಹೊಂಗೆ ಮರದಲ್ಲಿ ಪ್ರಾಣಬಿಟ್ಟ ಮಂಜನ ಪ್ರೇತ ಎಂಬ ಸುದ್ದಿ ಪಸರಿಸಿತು. ಕೋಟದ ಸಂತೆಯಿಂದ ಮರಳಿ ಬರುತ್ತಿದ್ದ ಅಂಕಯ್ಯ ಸುಡುಗಾಡಿನ ಕಟ್ಟೆಯ ಮೇಲೆ ಯಾರೋ ತಲೆ ಕೆದರಿಕೊಂಡು ಕುಳಿತಿದ್ದನ್ನು ಕಂಡು ಒಂದು ವಾರ ಹಾಸಿಗೆ ಹಿಡಿದ ಸಮಾಚಾರ ಕೇರಿ ತುಂಬಿತು. ಅದು ಯಾವ ದೆವ್ವ ಎಂಬುವರ ಬಗ್ಗೆ ಇನ್ನೂ ನಿರ್ಧಾರವಾಗದಿದ್ದರೂ ಬೆಂಗಳೂರಿನಲ್ಲಿ ನಾಲ್ಕು ವರ್ಷ ಇದ್ದು ಬಂದ ಸೋಮು ಒಂದು ರಾತ್ರಿ ಎದೆಗಟ್ಟಿತನದಿಂದ ಸುಡುಗಾಡಿನ ಕಟ್ಟೆಗೆ ಲ್ಯಾಟು ಹಿಡಿದು ನೋಡಿದ.. ಅಲ್ಲಿ ಕುಳಿತದ್ದು ಬಾರಕೂರಿನ ಹುಚ್ಚ ಪೊನ್ನಾಚಾರಿ ಎಂದು ಮತ್ತೆ ತಿಳಿಯಿತು. ಆದರೆ ರಾತ್ರಿ ಹೊತ್ತು ಕೇಳುವ ಆ ಕೂಗಿನ ಬಗ್ಗೆ ಇನ್ನೂ ಯಾರಿಗೂ ಏನೂ ತಿಳಿದಿರಲಿಲ್ಲ. ಜನರು ಹೆದರಿಕೊಂಡು ರಾತ್ರಿ ಕಳೆಯುವ ಪಾಪಕರ್ಮ ಮಾತ್ರ ಮುಗಿದಿರಲಿಲ್ಲ.

ಆಲದಮರದ ಹಿಂದೆಯೇ ನಾಗನ ಬನವಿದೆ. ತಮಗೆ ಮಕ್ಕಳಾಗಲಿಲ್ಲವೆಂದು ಕೋಣೆಯ ಕಾಮಂತರು ಎರಡು ನಾಗನ ಕಲ್ಲನ್ನು ಪ್ರತಿಷ್ಠೆ ಮಾಡಿದರು. ಹುಟ್ಟಿದ ಮಕ್ಕಳು ಒಂದೂ ಉಳಿಯಲಿಲ್ಲವೆಂದು ವೆಂಕಟೆ ಭಟ್ಟರು ಬನದಲ್ಲಿ ಒಂದು ಗೋಪುರ ಕಟ್ಟಿಸಿದರು. ಆ ಬನದ ಉತ್ತರಕ್ಕೆ ತೆಂಗಿನ ತೋಟ. ಅದು ದುಗ್ಗಪ್ಪ ಸೆಟ್ಟರದು. ಮುಂದೆ ಕುರುಕ್ಷೇತ್ರ ಬಯಲು. ಪೇಟೆಗೆ ಹೋಗುವ ಮಾರ್ಗದ ಎಡಕ್ಕೆ ಆ ಬಯಲು ಪ್ರದೇಶವಿದೆ. ಆ ಹೆಸರು ಏಕೆ ಬಂತೋ.... ಅಂತೂ ನರಸಯ್ಯ ಕಿಣಿಯವರು ಆ ಭೂಮಿ ಕುರುಕ್ಷೇತ್ರವಾದ ಕತೆಯನ್ನು ಇಂದಿಗೂ ಹೇಳುತ್ತಾರೆ.

ಕುರುಕ್ಷೇತ್ರ ಯಾರಿಗೆ ಸೇರಿದ್ದು ಎನ್ನುವುದೇ ಒಂದು ಸಮಸ್ಯೆ. ಆ ಪ್ರದೇಶದಲ್ಲಿ ಯಾವ ಭಾಗ ಯಾರದು ಎನ್ನುವುದಕ್ಕೆ ಸರಿಯಾದ ರುಜುವಾತು ಇನ್ನೂ ದೊರೆತಿಲ್ಲ. ಶಾನಭೋಗರನ್ನು ಕೇಳಿದರೆ ಆ ಭೂಮಿಯ ಪಟ್ಟಾ ನಂಬರೇ ತಮ್ಮ ರಿಕಾರ್ಡಿನಲ್ಲಿ ಇಲ್ಲ ಎನ್ನುತಾರೆ. ಮಾದಯ್ಯ ಭಟ್ಟರು ಹೊಂಡದ ಮೇಲಿನ ಭೂಮಿ ಎಲ್ಲಾ ತಮ್ಮದು ಎನ್ನುತ್ತಾರೆ. ಗಣಪತಿ ಕಾಮ್ತಿಯವರು 'ನಾಗನ ಬನದಿಂದ ಪಶ್ಚಿಮಕ್ಕೆ....ಉತ್ತರದಲ್ಲಿ ಸರ್ವೇಮರದ ತನಕ ಸುಮಾರು ಎರಡು ಮುಡಿ ಗದ್ದೆ ನನ್ನದು' ಎನುತ್ತಾರೆ. ರಸ್ತೆಗೆ ಮುಖವಾಗಿರುವ ದಿಬ್ಬದ ತಾವು ತಮ್ಮದು ಎನ್ನುತ್ತಾರೆ ಕೊಗ್ಗ ಕಾಮ್ತಿಯವರು. ಅಂತೂ ತಕರಾರಿನ ಜಾಗ. ಅದಕ್ಕೆ ಸರಿಯಾಗಿ ಕುರುಕ್ಷೇತ್ರ ಎಂಬ ಹೆಸರು. ಸಾಗುವಳಿಯಾದದೆ ಹಡುಬಿದ್ದ ಭೂಮಿ ಅದು. ಪೇಟೆಗೆ ಸನಿಹದಲ್ಲಿದ್ದರೂ ಕುರುಕ್ಷೇತ್ರ ಉಪಯೋಗವಾಗಲಿಲ್ಲ. ಅದೇ ಒಂದು ವಿಚಿತ್ರ. ಆ ಹೆಸರೇ ಅದಕ್ಕೆ ಕಾರಣವಿರಬಹುದು ಎನ್ನುತ್ತಾರೆ ಹಿರಿಯರು. ಜಾಗಕ್ಕೆ ಗಾಡಿ ಬೆಟ್ಟು ಎಂಬ ಹೆಸರಿತ್ತು ಎಂದು ಐತಾಳರು ನಿದರ್ಶನ ಕೊಡುತ್ತಾರೆ. ಕೋಟೇಶ್ವರ ಜಾತ್ರೆಗೆ ಮಲೆನಾಡಿನಿಂದ ಗಾಡಿಗಳಲ್ಲಿ ಅಕ್ಕಿ, ಮೆಣಸು, ಜೇನಿಗೆ ಮುಂತಾದ ಸಾಮಾನುಗಳನ್ನು ತಂದವರು ಗಾಡಿಗಳನ್ನು ಆ ಜಾಗದಲ್ಲಿ ಬಿಡುತ್ತಿದ್ದರು ಎನ್ನುವ ಮಾತು ಸತ್ಯ. ಆದರೆ ಅದು ಕುರುಕ್ಷೇತ್ರ ಆದ ಬಗ್ಗೆಯೂ ಒಂದು ಕತೆಯಿದೆ.

ಮಕರ ಸಂಕ್ರಮಣದ ಮುಂಚಿನ ದಿನ ಮುಂಡಾಸು ಸೀನಪ್ಪ ಹೆಗಡೆ ಚೆನ್ನಾಗಿ ಕುಡಿದು ಗಾಡಿಬೆಟ್ಟಿನ ಅಶ್ವತ್ಥಕಟ್ಟೆಯ ಮೇಲೆ ಕುಳಿತಿದ್ದ. ಬುದ್ಧಿ

ವಿಕಲ್ಪವಾಗಿತ್ತು. ಅಪ್ಲೇಲಿರಿದ್ದರಿಂದ ಜ್ಞಾನ ಹಿಡಿತದಲ್ಲಿರಲಿಲ್ಲ. ಮೊದಲೇ ಅವನಿಗೆ ನಾಡವರ ಕೆಚ್ಚು. ಸಾಲದುದಕ್ಕೆ ಕುಡಿದ ಅಮಲು ಬೇರೆ. ಪೈಗಳ ಮಗ ಸ್ಕೈಕಲು ಹತ್ತಿ ಆ ದಾರಿಯಲ್ಲಿ ಬರುತ್ತಿದ್ದಾಗ ಹೆಗಡೆ ಉದ್ರೇಕಗೊಂಡಿದ್ದ. ಪೈಗಳ ಮಗನನ್ನು ಕಂಡದ್ದೇ ಕಂಡದ್ದು... ಏಕೋ ಏನೋ... ಕಾಲಲ್ಲಿದ್ದ ಎಕ್ಕಡವನ್ನು ಎತ್ತಿ ಅವನತ್ತ ಬಿಸುಟ. ಎಂತಹ ಅವಮಾನ....? ಕಾರಣವಿಲ್ಲದೆ ಅವಮಾನಿಸುವುದೇ ? ಪೈಗಳ ಮಗನ ಮೈಗೆ ಹೆಗಡೆಯ ಕಾಲಿನ ಎಕ್ಕಡ ತಾಗಿತು ಎಂದು ಪೇಟೆಯಲ್ಲಿ ವಿಷಯ ಹರಡಿತು. ಕೊಂಕಣಿ ಜನಾಂಗವೇ ಒಂದಾಗಿ ಹೆಗಡೆಯವರನ್ನು ಮುತ್ತಿದರು. ಮಾರುಕೋಡಿನ ಶೆಟ್ಟರ ಮನೆಗೂ ಈ ಸುದ್ದಿ ಬಂತು. ಅವರೂ ಒಂದಾಗಿ ಗಾಡಿಬೆಟ್ಟಿಗೆ ಬಂದರು. ಜಾತಿ ಕಲಹ ಆರಂಭವಾಯ್ತು. ಮಾತಿಗೆ ಮಾತು ಬೆಳೆದು ಗುದ್ದಾಡುವುದಕ್ಕೆ ಆರಂಭಿಸಿದರು. ಭಾರೀ ಜಗಳವೇ ನಡೆಯಿತು. ಹತ್ತು ಗಂಟೆಯವರೆಗೂ ಕಲಹ ನಿಲ್ಲಲಿಲ್ಲ. ಪುಣ್ಯಕ್ಕೆ ಐತಾಳರು ಆ ದಿನ ನೆರೆಊರಿಗೆ ಹೋಗಿದ್ದರು. ಅವರ ಗಾಡಿ ಬರುವಾಗಲೇ ರಾತ್ರಿ ಗಂಟೆ ಹತ್ತಾಗಿತ್ತು. ಕೊನೆಗೆ ಐತಾಳರೇ ಬಂದು ಪಂಚಾಯ್ತಿ ಮಾಡಿದ ಮೇಲೆ ಜಗಳ ನಿಂತಿತು. ಆ ದಿನದಿಂದ ಅದು ಕುರುಕ್ಷೇತ್ರವಾಯ್ತು ಎನ್ನುತ್ತಾರೆ. ಅಂತೂ ಕುರುಕ್ಷೇತ್ರಕ್ಕೆ ಇನ್ನೂ ಒಂದು ರೂಪ ಬಂದಿಲ್ಲ.

ಪೇಟೆಯ ಮೂರು ರಸ್ತೆ ಸೇರುವಲ್ಲಿಯೇ ಅಚ್ಚಯ್ಯನ ಕಿರಾಣಿ ಅಂಗಡಿ. ಐತಾಳರು ಸಂಜೆ ಹೊತ್ತು ಉಪ್ಪಿನ ಮೂಟೆಯ ಮೇಲೋ....ತೆಂಗಿನ ಕಾಯಿಯ ರಾಶಿಯ ಮೇಲೋ....ಕುಳಿತು ಗಂಟೆಕಾಲ ಹರಟೆ ಕೊಚ್ಚುವ ಖಾಯಂ ಅಂಗಡಿ ಅದು. ಆ ಪೇಟೆಯಲ್ಲಿ ಇನ್ನೂ ಹತ್ತಾರು ಅಂಗಡಿಗಳಿದ್ದರೂ ಐತಾಳರು ಮಾತ್ರ ಅಚ್ಚಯ್ಯನ ಅಂಗಡಿಯಲ್ಲೆ ಮೊಕ್ಕಾಂ ಹೂಡುವುದು. ಒಂದಿಷ್ಟು ತಾಂಬೂಲ ಮೆದ್ದುಕೊಂಡು....ನಿಪ್ಪಾಣಿಯ ತಂಬಾಕಿನಿಂದ ತಯಾರಿಸಿದ ಉಂಡೆ ಗುಡಾಕನ್ನು ದವಡೆಯ ಎಡೆಯಲ್ಲಿಟ್ಟು ಮಾತಿಗೆ ಕುಳಿತರೆ ....ನಡುನಡುವೆ ಒಂದು ಬೆಲ್ಲ ಮೆಣಸು....ಚಿಕ್ಕಾಸಿನ ಜೀರಿಗೆ ಕೇಳುವ ಗಿರಾಕಿ ಗಳನ್ನು ಗಮನಿಸಬೇಕಾಗಿತ್ತು ಅಚ್ಚಯ್ಯ. ರೂಪಾಯಿ ನೋಟುಗಳ ವ್ಯಾಪಾರವೇ ವಾರಕ್ಕೊಮ್ಮೆ. ಏನಿದ್ದರೂ ಪಾವಾಣೆ ಆಣೆ ವ್ಯಾಪಾರ. ಅಷ್ಟರಲ್ಲೆ ತೃಪ್ತಿ ಅವರಿಗೆ. ಏರಕ್ಕೆ ಹಿಗ್ಗಿದವರಲ್ಲ. ಮೂರಕ್ಕೆ ಕುಗ್ಗಿದವರಲ್ಲ.

ಕೋಟೇಶ್ವರ ಪೇಟೆಯಲ್ಲಿ ಅಚ್ಚಯ್ಯನ ವ್ಯಾಪಾರ ನ್ಯಾಯವಾದದ್ದು ಎಂದು ಜನ ವಿಶ್ವಾಸ ಹೊಂದಿದ್ದಾರೆ. ದುಡ್ಡು ಕಾಸಿಗೆ ಬಾಯಿ ಬಿಡುವವರೂ ಅಲ್ಲ. ಡಬ್ಬಿ ಹುಡುಕಿದರೂ ಒಂದು ರೂಪಾಯಿನ ನೋಟು ಕಾಣುವುದು ಅಷ್ಟು ಕಷ್ಟ ಸಾಧ್ಯವಾದ ಕಾಲವಾಗಿತ್ತು. ಆಗಿನ ದಿನಗಳಲ್ಲಿ ಐತಾಳರು ಕುಂದಾಪುರ ದಿಂದ ನೂರು ರೂಪಾಯಿನ ಒಂದು ನೋಟನ್ನು ತಂದಾಗ ಪೇಟೆಯ ಜನವೇ ಅದನ್ನು ನೋಡುವುದಕ್ಕೆ ಹಿಂಡಾಗಿ ಬಂದಿದ್ದರು. ಕೊನೆಗೆ ದೇವಾಲಯದ ಚಾವಡಿಯಲ್ಲಿ ಕುಳಿತು ಬಂದವರಿಗೆಲ್ಲಾ ತೋರಿಸಿ ಪುಣ್ಯ ಕಟ್ಟಿಕೊಂಡರು ಐತಾಳರು. "ಅಂತಹದೇ ಒಂದು ನೋಟನ್ನು ಈ ಪೆಟ್ಟಿಗೆಯಲ್ಲಿ ಇಡುವ ಆಸೆಯಾಗಿದೆ ಸ್ವಾಮಿ" ಎಂದು ಅಚ್ಚಯ್ಯ ಹೇಳುವುದಕ್ಕೆ ತೊಡಗಿ ಮೂರು ವರ್ಷ ಸಂದರೂ ಅವರ ಪಿಟಾರಿಯಲ್ಲಿ ಇನ್ನೂ ಹತ್ತು ರೂಪಾಯಿನ ನೋಟೇ ಬರುವುದಕ್ಕೆ ನಿರಾಕರಿಸಿತ್ತು. ಆದರೆ ಐತಾಳರ ಮನೆ ಪತ್ತಾಸಿನ ಒಳಗಡೆ ನೂರು ರೂಪಾಯಿಯ ಎರಡು ನೋಟಿವೆ ಎಂದು ಹತ್ತು ಮಂದಿಗೆ ತಿಳಿದದ್ದೆ "ಐತಾಳರು ಭಾರಿ ಕುಳ" ಎನ್ನುವುದಕ್ಕೆ ಕಾರಣವಾಗಿತ್ತು.

ಅಚ್ಚಯ್ಯನ ಮೂಲಸ್ಥಾನ ಶಂಕರನಾರಾಯಣದ ಹತ್ತಿರದ ಸಪ್ರದ. ಶಂಕರನಾರಾಯಣದ ಪೇಟೆಯಲ್ಲಿ ಅವರ ತಂದೆಯ ಗೇಣಿನ ಅಂಗಡಿಯಿತ್ತು. ದೊಡ್ಡ ಕುಟುಂಬಕ್ಕೆ ಅವರ ದುಡಿಮೆ ಸಾಲದಾಯ್ತು. ಎಲ್ಲಿದ್ದರೂ ನಾನು ಬದುಕಿ ತಿನ್ನುತ್ತೇನೆ ಎಂದು ಅಚ್ಚಯ್ಯ ಊರು ಬಿಡುವ ಗಟ್ಟಿ ಮನಸ್ಸು ಮಾಡಿದರು. ತಂದೆಯವರ ಆಶೀರ್ವಾದ ಬೇಡಿದರು. ಕರಾವಳಿ ಪ್ರದೇಶದಲ್ಲಿ ಏನಾದರೂ ವ್ಯಾಪಾರ ಮಾಡುತ್ತೇನೆ ಎಂದು ಅಚ್ಚಯ್ಯ ತಂದೆಯವರನ್ನು ಸಮಾಧಾನಿಸಿದರು. ಕುಂದಾಪುರದ ಸಂತೆಗೆ ಹೊರಟಿದ್ದ ಅಮಾಸೆ ಬೈಲು ಕೆವಿಲಾಯರ ಜೋಡೆತ್ತಿನ ಗಾಡಿಯಲ್ಲಿ ಕುಳಿತರು. ಗಾಡಿ ಹತ್ತಿದಾಗ ಗಂಟೆ ಎಂಟಾಗಿತ್ತು. ಮನಸ್ಸಿನಲ್ಲೇ ಸಂಕಲ್ಪಿಸಿಕೊಂಡರು. ಈ ಗಾಡಿ ಬೆಳಗಿನ ಜಾವ ಬೆಳ್ಳಿ ಮೂಡುವ ಹೊತ್ತಿಗೆ ಯಾವ ಊರು ತಲುಪುತ್ತದೋ ಅಲ್ಲೇ ವ್ಯಾಪಾರ ಆರಂಭಿಸುತ್ತೇನೆ ಎಂದು. ಗಾಡಿ ಹೊರಟಿತು. ಹಾಲಾಡಿಯ ಹೊಳೆಯಲ್ಲಿ ಗಾಡಿ ಇಳಿದಾಗ ಅವರಿಗೆ ನಿದ್ದೆ ಬಂದಿತ್ತು. ಬೆಳ್ಳಿ ಮೂಡಿದಾಗ ಗಾಡಿ ಇದ್ದದ್ದು ಕೋಟೇಶ್ವರದ ಮೂಡು ರಸ್ತೆಯ ಅಶ್ವತ್ಥದ ಕಟ್ಟೆಯ ಬಳಿ. ದಿಗ್ಗನೆ ಎದ್ದರು. ನೋಡುತ್ತಾರೆ ಕೋಟೇಶ್ವರ ಪೇಟೆ. ನಮಸ್ಕಾರ ಮಾಡಿದರು. ಗಾಡಿ ಇಳಿದು

ಬೆಳಗಾಗುವತನಕ ಕಟ್ಟೆಯ ಮೇಲೆ ಕುಳಿತರು. ಅಲ್ಲಿಂದಲೇ ಆರಂಭಿಸಿದರು ವ್ಯಾಪಾರ. ಮೊದಲು ಹೆಡಿಗೆ ಗೆಣಸು ತಂದು ಬೇಯಿಸಿ ಕಟ್ಟೆಯ ಮೇಲಿಟ್ಟು ವ್ಯಾಪಾರ ಮಾಡಿದರು. ಏನೋ ಅದೃಷ್ಟ ಚೆನ್ನಾಗಿತ್ತು. ಎರಡು ತಿಂಗಳಲ್ಲಿ ನಾಲ್ಕು ರೂಪಾಯಿ ಸಂಪಾದಿಸಿದರು. ಪಕ್ಕದಲ್ಲಿ ದಬ್ಬೆಯ ತಟ್ಟಿ ಕಟ್ಟಿ ಕಿರಾಣಿ ಅಂಗಡಿ ತೆರೆದರು. ಕ್ರಮೇಣ ಹಿಂದೆ ಹುಲ್ಲಿನ ಮನೆ ಕಾಣಿಸಿತು. ಆರು ವರ್ಷದ ತರುವಾಯ ಅಚ್ಚಯ್ಯನ ಮದುವೆಯೂ ಆಯಿತು. ಐತಾಳರ ಸ್ನೇಹ ದೊರಕಿದ ಮೇಲೆ ಅಚ್ಚಯ್ಯನೂ ಊರಿನ ಒಂದು ಕುಳ ಎನಿಸಿಕೊಂಡರು.

ಧರ್ಮದ ಬಾವಿಯ ಉತ್ತರಕ್ಕಿರುವುದು ಹಸನಾ ಸಾಬಿಯ ಬೀಡಾ ಅಂಗಡಿ. ಮುಂದಿನ ರಸ್ತೆಯು ಪಶ್ಚಿಮಕ್ಕೆ ದೇವಾಲಯಕ್ಕೆ ಹೋಗುವ ದಾರಿ. ತಿರುವಿನಲ್ಲಿ ಒಂದು ಹುಲ್ಲು ಮನೆಯಿದೆ. ಅದು ಮೊದಲು ಪಾಂಡುರಂಗ ಶಮ್ತಿಯವರಿಗೆ ಸೇರಿತ್ತು. ಹಿಸೆ ಪಾಲು ಆದಾಗ ಅವರ ತಮ್ಮ ನರಸಿಂಹನ ಭಾಗಕ್ಕೆ ಹೋಗಿತ್ತು. ಊರಲ್ಲಿ ಏನೂ ದುಡಿಮೆ ಇಲ್ಲದೆ ದಿನ ಕಳೆಯುವುದೇ ಕಷ್ಟವಾಗಿರುವಾಗ ನರಸಿಂಹನಿಗೆ ಯಾರೋ ಕಾಫಿ ಅಂಗಡಿಯ ಬಗ್ಗೆ ಆಸೆ ಹುಟ್ಟಿಸಿದರು. 'ಮಂಗಳೂರಲ್ಲಿ ನಾಲ್ಕಾರು ಹೋಟೆಲುಗಳು ಆರಂಭವಾಗಿವೆ. ಒಂದಕ್ಕೆ ಎರಡು ಲಾಭ' ಎಂದು ಅವನನ್ನು ಉಬ್ಬಿಸಿಯೇ ಬಿಟ್ಟರು. ಒಂದೇ ವಾರ....ಹುಲ್ಲು ಮಾಡಿನ ಕೆಳಗೆ ಒಂದು ಮರದ ಹಲಗೆ ನೇತಾಡಿತು. ಅದರಲ್ಲಿ ಸುಣ್ಣದ ಕಲ್ಲಿನಿಂದ ನರಸಿಂಹನೇ ಗೀಚಿದ "ಬ್ರಾಹ್ಮಣರ ಕಾಫಿ ಮಂದಿರ" ಎಂದು. ಮೊದಲು ಮೊದಲು ಜನರು ಹೋಗುವುದಕ್ಕೆ ಹೆದರಿದರು. ಆಗಿನ ಕಾಲದಲ್ಲಿ ಕಾಫಿ ಕುಡಿಯುವುದು ಹೆಂಡ ಕುಡಿದಷ್ಟೆ ಕೆಟ್ಟದ್ದು ಎಂಬ ಅಭಿಪ್ರಾಯವಿತ್ತು. ತಪ್ಪಲೆಯಲ್ಲಿ ನೀರು ಕಾಯುತ್ತಿದ್ದರೂ ಹಾಲು ಕುದಿಯುತ್ತಿದ್ದರೂ ಒಂದು ಬಿಲ್ಲೆಯ ಕಾಫಿಗೆ ನರಸಿಂಹ ಗಿರಾಕಿಯ ಎದುರು ನೋಡಬೇಕಾಯ್ತು. ಆದರೆ ಒಂದು ದಿನ ಪೇಟೆಯಲ್ಲಿ ಒಂದು ಹೋಟೆಲು ಆಗಿದೆ ಎಂದು ಮಾರಿ ಬಲೆ ಬೀಸುತ್ತಿದ್ದವರಲ್ಲಿ ಯಾರೋ ಅಂದರು. "ಕಾಫಿ ಎಂದರೆ ಏನು....ಅದು ಹೇಗಿರುತ್ತದೆ" ಎಂದು ನೋಡುವುದಕ್ಕಾಗಿಯೇ ಮೊಗೇರರು ಕಾಫಿ ಮಂದಿರಕ್ಕೆ ಬರತೊಡಗಿದರು. ವ್ಯಾಪಾರ ಕುದುರಿತು. ಕೊನೆಗೆ ಬ್ರಾಹ್ಮಣರು ಹಿಂದಿನ ಬಾಗಿಲಿನಿಂದ ಒಳಬಂದು ಕಾಫಿ ಕುಡಿದದ್ದೇ ನರಸಿಂಹನಿಗೆ ಎಲ್ಲಿಲ್ಲದ ಸಂತೋಷ. ಗರಿ ಚಾಪೆ ತೆಗೆದು ಎರಡು ಕಲ್ಲಿನಮೇಲೆ ಹಲಗೆ

ಹಾಕಿದ. ಅಷ್ಟೇ ಸುಧಾರಣೆ. ಕಾಫಿ ಕುಡಿವವರು "ಹ್ಯೊ....ಕಾಫಿ ಅಂದರೆ ಇದು ಮಾರಾಯ್ರು... ಎಷ್ಟು ಸಾಪಾಗಿರುತ್ತೆ ಕುಡಿಯುವುದಕ್ಕೆ" ಎಂದು ಎಲ್ಲರೂ ಬಾಯಿ ಚಪ್ಪರಿಸತೊಡಗಿದಾಗ ನರಸಿಂಹನ ಮಂದಿರದಲ್ಲಿ ಜನ ತುಂಬಿದರು. ಅಪ್ಪಟ್ಟವಾದ ಎಮ್ಮೆ ಹಾಲಿನಿಂದಲೇ ಕಾಫಿ ಮಾಡಿ ಲೋಟದಲ್ಲಿ ತುಂಬಿಸಿಕೊಟ್ಟ. ಅಂಗಡಿಯ ಮುಂದೆಯೇ ತಂಬಾಕಿನ ಎಂಜಲು ಉಗಿಯುತ್ತಿದ್ದ ನರಸಿಂಹ ಅದನ್ನು ನಿಲ್ಲಿಸಿದ. ಹೊಲಸು ವಸ್ತ್ರವನ್ನು ಬದಲಿಸಿ ಚೊಕ್ಕವಾದ ಚಡ್ಡಿ ಬನಿಯನ್ನು ತೊಟ್ಟುಕೊಂಡ. ವಾರಕ್ಕೆ ಎರಡು ಬಾರಿ ಗಡ್ಡ ಮಾಡಿಕೊಳ್ಳುವುದನ್ನು ಜಾರಿಗೆ ತಂದ. ಒಮ್ಮೆ ಗೋವೆಹಾಡಿ ರುದ್ರ ಬೊಂಬಾಯಿಯಿಂದ ಊರಿಗೆ ಬಂದವನು ನರಸಿಂಹನ ಫಲಹಾರ ಮಂದಿರಕ್ಕೆ ಬಂದ. ಆಗ ಇನ್ನೂ ತಿಂಡಿ ಎಂಬುದು ಅವತರಿಸಿರಲಿಲ್ಲ. ಕಾಫಿ ಹೇಳಬೇಕು, -ಕುದಿಯುವ ನೀರನ್ನು ಕೈಪಾತ್ರೆಗೆ ತುಂಬಿಸಬೇಕು. ತರುವಾಯ ಕಾಫಿಪುಡಿ ಅದಕ್ಕೆ ಹಾಕಬೇಕು. ಅದನ್ನು ಬಟ್ಟೆಯಲ್ಲಿ ಅರಸಿದ ಅನಂತರ ಹಾಲಿಗೆ ಸೇರಿಸಬೇಕು. ಇಷ್ಟಕ್ಕೆ ತುಂಬಾ ಹೊತ್ತು ತೆಗೆದುಕೊಳ್ಳುವುದನ್ನು ಗಮನಿಸಿದ ರುದ್ರ ಒಂದು ಉಪಾಯ ಹೇಳಿದ "ಅಯ್ಯ... ಕಾಫಿ ಬರುವುದನ್ನೆ ಕಾಯುವ ಬದಲು ಅವಲಕ್ಕಿಗೆ ಒಂದಿಷ್ಟು ಖಾರ, ಉಪ್ಪು, ಇಂಗು ಹಾಕಿ ಇಡಿ" ಎಂದು. ನರಸಿಂಹನಿಗೂ ಸರಿಕಂಡಿತು. ಅವಲಕ್ಕಿ ಜನಪ್ರಿಯವಾದುದನ್ನು ಕಂಡು ಮತ್ತೆ ಚಕ್ಕುಲಿ, ಖಾರದಕಡ್ಡಿ, ಈರುಳ್ಳಿ ಬಜೆ ಮಾಡುವುದಕ್ಕೆ ಆರಂಭಿಸಿದ. ಇಷ್ಟಾದರೂ ಐತಾಳರು ಒಮ್ಮೆಯೂ ತನ್ನ ಕಾಫಿ ಮಂದಿರಕ್ಕೆ ಬರಲಿಲ್ಲ ಎಂಬ ಕೊರಗು ನರಸಿಂಹನಿಗೆ ಇದ್ದೇ ಇತ್ತು. ಐತಾಳರಂತಹ ವ್ಯಕ್ತಿ ತನ್ನ ಹೋಟೇಲಿಗೆ ಬಂದರೆ ಮಾತ್ರ ಈ ಊರಲ್ಲಿ ವ್ಯಾಪಾರ ತನ್ನ ಕೈ ಸೇರಿದಂತೆ ಎಂದೇ ಅವನ ಎಣಿಕೆ. ಆದರೆ ಐತಾಳರು ಹಾಗೆಲ್ಲ ಹೋಟೇಲಿಗೆ ಹೋಗುತ್ತಾರೆಯೆ? ಆ ದಾರಿಯಲ್ಲಿ ಹೋಗುವಾಗೆಲ್ಲಾ ನೋಡಿದ್ದರು. ಮಾರಿಬಲಿಯ ನೊಗೇರರು... ಹುರಿಹಗ್ಗದ ಸಾಬಿ... ಗಸ್ತಾಲು ಮಡೀನಾ ಬ್ಯಾರಿ... ಎಲ್ಲಾ ಬೆಂಚಿನ ಮೇಲೆ ಕುಳಿತಿರುವುದನ್ನು. ಇದೆಲ್ಲಕ್ಕಿಂತ ಹೆಚ್ಚಾಗಿ ಕೂಸಾಳು ಗಂಗ ಹಿಂದಿನ ಬಾಗಿಲ ಹೊರನಿಂತು ಕಾಫಿ ಕುಡಿಯುವುದನ್ನು ಕಂಡಮೇಲೆ ಐತಾಳರು "ಇದು ನಮ್ಮಂತಹ ಜನಿವಾರ ಹಾಕಿಕೊಂಡವರಿಗೆ ಹೇಳಿಸಿದ್ದಲ್ಲ" ಎಂದು ಕೊಂಡರು. ಆದರೆ ಒಂದೆರಡು

ಬಾರಿ ಆ ದಾರಿಯಲ್ಲಿ ಹೋಗುತ್ತಿದ್ದಾಗ ಈರುಳ್ಳಿ ಬಜೆಯ ಗಮಗಮ ವಾಸನೆ ಮೂಗಿಗೆ ಬಡಿದಾಗ ತಿನ್ನಬೇಕು ಎನ್ನುವ ಆಸೆ. ಆದರೆ ಹೋಗುವುದಕ್ಕೆ ಮಾನದ ಪ್ರಶ್ನೆ. ಯಾರಿಂದಲಾದರೂ ದುಗ್ಗಾಣಿಯ ಬಜೆ ತರಿಸುವುದಕ್ಕೂ ಭಯ. ಇಷ್ಟಾದರೂ ನರಸಿಂಹನ ಭಾಗ್ಯಕ್ಕೆ ಐತಾಳರಂತಹ ವ್ಯಕ್ತಿಯನ್ನು ಗಿರಾಕಿಯಾಗಿ ಪಡೆಯುವ ಯೋಗ ಇದ್ದೇ ಇತ್ತು. ಆಗ ಕುಂದಾಪುರದಲ್ಲಿ ಕಲೆಕ್ಟರಾಗಿದ್ದ ಸೋಮಾಸಿಯವರು ಕೋಟಿಲಿಂಗೇಶ್ವರ ದೇವಾಲಯದ ದರ್ಶನಕ್ಕೆ ಬಂದರು... ಅಂದರೆ ಸೋಮಾಸಿಯವರು ದೇವರನ್ನು ನೋಡುವುದಕ್ಕೆ ಬಂದವರೇ ಅಲ್ಲ. ದೇವಾಲಯದ ಸ್ವಾಧೀನವಿರುವ ನೂರಾರು ಎಕರೆ ಭೂಮಿಯಲ್ಲಿ ಸುಮಾರು ಅರ್ಧ ಭಾಗವನ್ನು ಸರಕಾರ ತಮ್ಮದಾಗಿ ಮಾಡಿಕೊಳ್ಳುತ್ತದೆ ಎಂಬ ನೋಟೀಸು ಮೊಕ್ತೇಸರರಾದ ಐತಾಳರಿಗೆ ಬಂತು. "ಅದು ದೇವರ ಸೊತ್ತು ...ಅದನ್ನು ಕೊಡುವಲ್ಲಿ ಯಾವ ನ್ಯಾಯವೂ ಇಲ್ಲ" ಎಂದು ಐತಾಳರು ಮರುಪತ್ರ ಬರೆದ ಮೂರನೆಯ ದಿನವೇ ಸೋಮಾಸಿಯವರು ಕೋಟೇಶ್ವರಕ್ಕೆ ಬಂದರು. ದೊರೆಯವರನ್ನು ಸಂತೋಷಪಡಿಸಲು ಐತಾಳರು ನರಸಿಂಹನ ಅಂಗಡಿಯಿಂದಲೇ ಕಾಫಿ ಮತ್ತು ತಿಂಡಿ ತರಿಸಿದ್ದರು. ಆಗಲೇ ಎಲ್ಲರ ಕಣ್ಣು ತಪ್ಪಿಸಿ ಒಂದು ತುಂಡು ಈರುಳ್ಳಿ ಬಜೆ ತಿಂದೇಬಿಟ್ಟರು. ನಾಲಗೆಗೆ ರುಚಿ ಹಿಡಿಯಿತು. ಗೋಚಿ ತಿಂದರು ಈರುಳ್ಳಿ ಬಜೆಯನ್ನು. ಮತ್ತೆ ಒಂದು ಪಾವಲಿಯ ಬಜೆ ತರಿಸಿ ತಿಂದರೂ ಐತಾಳರ ಬಯಕೆ ತೀರಲಿಲ್ಲ. ಸೋಮಾಸಿಯವರು ಬಂದ ದಿನದಿಂದಲೇ ಐತಾಳರು ಈರುಳ್ಳಿ ಬಜೆಯ ಪರಮ ಭಕ್ತರಾದರು. "ಈ ಕೊಂಕಣಿ ಹುಡುಗ ಕಡಲೆ ಹಿಟ್ಟಿಗೆ ಈರುಳ್ಳಿ ಸೇರಿಸಿ ಹೇಗೆ ಇಷ್ಟು ರುಚಿಯಾಗಿ ಬಜೆ ಮಾಡುತ್ತಾನೆ?" ಎನ್ನುವುದೇ ಅವರ ಪ್ರಶ್ನೆ. ಅಂದು ಪೇಟೆಯಿಂದ ಕಡಲೆ ಹಿಟ್ಟು ತರಿಸಿ... ಹೆಂಡತಿಯಲ್ಲಿ ಈರುಳ್ಳಿ ಬಜೆ ಮಾಡುವಂತೆ ಹೇಳಿದರು. ಆಕೆ ಬಜೆ ಮಾಡಿ ತಾಟಿನಲ್ಲಿಟ್ಟಳು. ಒಂದನ್ನು ಬಾಯಿಗಿಟ್ಟಾಗಲೇ ಐತಾಳರ ಮುಖ ಗಂಟು ಹಾಕಿತು. "ಥೂ... ಇದೆಂತಹ ಬಜೆ... ಸೆಗಣಿಯನ್ನು ತಿಂದಹಾಗಿದೆ" ಎಂದು ತಿರಸ್ಕರಿಸಿಬಿಟ್ಟರು. "ಹಾಗಿದ್ದರೆ ನರಸಿಂಹನ ಅಂಗಡಿಗೆ ಹೋಗಿ ಎಂಜಲು ತಟ್ಟೆಯಲ್ಲಿ ಬಜೆ ತಿಂದು ಬನ್ನಿ.... ಅದೇ ಸರಿ ನಿಮಗೆ" ಎಂದು ರೇಗಿದಳು ಆಕೆ. "ಏಕೆ ಹೋಗಬಾರದು?" ಎಂದಿತು ಮನಸ್ಸು. "ನರಸಿಂಹನ ಎದೆಯಮೇಲೂ ಜನಿವಾರವಿದೆ. ನಾನು

ಶಿವಳ್ಳಿ ಬ್ರಾಹ್ಮಣ. ಅವನು ಸಾರಸ್ವತ ಬ್ರಾಹ್ಮಣ. ಈರುಳ್ಳಿ ಬಜೆ ತಿಂದರೂ ತಪ್ಪೇನು ?" ಎಂದುಕೊಂಡರು ಐತಾಳರು. ನಾಲ್ಕು ದಿನ ಉದ್ದೇಶಪೂರ್ವಕ ವಾಗಿಯೇ ನರಸಿಂಹನ ಫಲಹಾರ ಮಂದಿರದ ಮುಂದೆ ಅಡ್ಡಾಡಿದರು. ಒಂದು ಸಾರಿ ನರಸಿಂಹ ಬೀಡಿ ಕುಡಿಯುತ್ತಾ ಹೊರಬಾಗಿಲಲ್ಲಿ ನಿಂತಾಗಲೇ ಐತಾಳರ ಸವಾರಿ ಆ ದಾರಿಯಲ್ಲಿ ಬಂದರು. ನರಸಿಂಹನೂ ನೋಡಿದ. ಐತಾಳರು ಮುಗುಳು ನಗೆ ಹಾಯಿಸಿದರು. ನರಸಿಂಹನಿಗೂ ಏನು ಕಂಡಿತೋ.... "ನಮಸ್ಕಾರ ಸ್ವಾಮಿ.. ಒಂದು ಕಪ್ಪು ಕಾಫಿ ಕುಡಿದು ಹೋಗಿ" ಎಂದ. ನಿಂತ ಐತಾಳರು "ಬರುವುದಕ್ಕೇನೂ ಜಾತಿಧರ್ಮದ ಅಡ್ಡಿಯಿಲ್ಲ. ಆದರೆ ಬಿಲ್ಲವರು, ಸಾಬಿಗಳು ಬಂದು ಹೋಗುವ ಜಾಗ. ಕೂಸಾಳು ಮಕ್ಕಳೆಲ್ಲಾ ಮುಟ್ಟಿದ ಲೋಟ. ಇಲ್ಲವಾಗಿದ್ದರೆ ಬರುವುದಕ್ಕೆ ಏನೂ ಹಿಂದೆ ಮುಂದೆ ನೋಡುತ್ತಿರಲಿಲ್ಲ" ಎಂದರು. "ಅಯ್ಯೋ....ಬೆಳ್ಳಿಯ ಲೋಟದಲ್ಲಿ ಕಾಫಿ ಕೊಡುತ್ತೇನೆ ಸ್ವಾಮಿ....ಅವರು ಕುಳಿತುಕೊಳ್ಳುವ ಜಾಗವೇ ನಿಮಗೆ ಬೇಡ. ನನ್ನ ಮನೆಯ ಚಾವಡಿಯಲ್ಲೇ ಕುಳಿತುಕೊಳ್ಳಿ" ಎಂದ. ಒಳಬಂದರು ಐತಾಳರು. ಆದಿನ ಪಾವಲಿ ಬಜೆ ತಿಂದವರು ಅದನ್ನು ಹೊಗಳಿದ್ದೆ ಹೊಗಳಿದ್ದು. ನರಸಿಂಹನಿಗೂ ಅಹಂಕಾರ ಬಂತು. ಬಂದವರಲ್ಲಿ "ಕೋಟಿ ಐತಾಳರೇ ಈ ಬಜೆಯನ್ನು ಮೆಚ್ಚಿದ್ದಾರೆ" ಎಂದು ಹೇಳುವುದಕ್ಕೆ ಆರಂಭಿಸಿದ. ಕಾನೂನು ಐತಾಳರೇ ಹೋಟೇಲಿಗೆ ಹೋಗುತ್ತಿದ್ದಾರೆ ಎಂದ ಮೇಲೆ ಆ ವ್ಯಾಪಾರದ ಬಗ್ಗೆ ಊರಿನವರಿಗೂ ಗೌರವದ ಭಾವನೆ ಬಂತು. ಅಲ್ಲದೆ ದಿನವೂ ಸಂಜೆ ಎರಡಾಣೆಯ ಬಜೆಯನ್ನು ಕಟ್ಟಿಸಿಕೊಂಡು... ಕೋಟಿನ ಕಿಸೆಗೆ ತುರುಕಿಸಿ ಕೊಂಡು ಪದ್ಮಳ ಮನೆಗೆ ಹೋಗುವುದು ವಾಡಿಕೆಯಾಯ್ತು. "ಕಮ್ತಿಯವರೆ ....ನಮ್ಮ ಪದ್ಮಳಿಗೆ ನಿಮ್ಮ ಬಜೆ ಎಂದರೆ ಪ್ರಾಣ. ಒಂದು ತುಂಡು ಬಜೆ ತಿನ್ನದಿದ್ದರೆ ಆಕೆಯ ಗಂಟಲಿನಿಂದ ಸಂಗೀತವೇ ಹೊರಡುವುದಿಲ್ಲ" ಎಂದು ಐತಾಳರು ಹೇಳಿದಮೇಲೆ ನರಸಿಂಹ ಗೆಲುವಾದ. "ಹಾ! ಪದ್ಮನೇ ಹಾಗೇ ಹೇಳಿದಳೆ?" ಎಂದು ತನ್ನಲ್ಲಿ ತಾನೆ ಸಂತೋಷ ಪಟ್ಟುಕೊಂಡ. "ನೋಡಿ ... ನಮ್ಮ ಐತಾಳರ ಸೂಳೆ ಕೂಡ ಈ ಬಜೆಗೆ ಸರ್ಟಿಫಿಕೇಟು ಕೊಟ್ಟಿದ್ದಾಳೆ" ಎಂದು ಹತ್ತು ಜನರಲ್ಲಿ ಬಾಯಿ ಬಡಿದುಕೊಂಡ. ಆದರೆ ಐತಾಳರು ಮಂದಿರದ ಒಳಗೆ ಬಂದಾಗ ನರಸಿಂಹ ಕೆಲವು ಸಾರಿ ಹೆದರುತ್ತಿದ್ದ. ಯಾರಾ

ದರೂ ಸಾಬಿಗಳು ಬಂದರೆ ಐತಾಳರು ರೇಗುವುದುಂಟು. ಒಮ್ಮೆ ಗಲ್ಲದ ಹತ್ತಿರವೇ ಐತಾಳರು ಕುಳಿತಿದ್ದಾಗ ಗರ್ನಾಲು ಸಾಬಿ ಒಳಬಂದ. ಮುಂದಿನ ಬೆಂಚಿನ ಮೇಲೆ ಕುಳಿತೇ "ಒಂದು ಕಪ್ಪು ಚಾ ಕೊಡಿ ರಾಯ್ರೆ" ಎಂದ. ಮೊದಲು ಮೊದಲು ಸಾಬಿ ಐತಾಳರಿಗೆ ಟೊಪ್ಪಿ ತೆಗೆದು ಸಲಾಂ ಮಾಡುವ ಕ್ರಮವಿತ್ತು. ಆದರೆ ಮದೀನಾ ಸಾಬಿ ಇಂದು ಐತಾಳರ ಮುಂದೆಯೇ ಕುಳಿತಾಗ ಪರಿಸ್ಥಿತಿ ಕೊಂಚ ದುಗುಡಾಯಿಸಿತು. "ಹೌದೆ... ಈ ಸಾಬಿ ಮಕ್ಕಳಿಗೆ ಎಷ್ಟು ದಿಮಾಕು ನೋಡಿ. ಬ್ರಾಹ್ಮಣರ ಮುಂದೆಯೇ ಕುಳಿತು ಕೊಳ್ಳುವಷ್ಟು ರಾಪು ಬಂತಲ್ಲ. ನಾಳೆಯಿಂದ ಇವರಿಗೆಲ್ಲಾ ಹೊರಗಿನಿಂದಲೇ ಕಾಫಿ ಸರಬರಾಜುಮಾಡಿ" ಎಂದು ಬಿಟ್ಟರು. ಸಾಬಿ ತುಟಿಪಿಟಕ್ಕೆನ್ನಲಿಲ್ಲ ಕಾರಣ ಹಿಂದೆ ಒಂದು ತಕರಾರಿನಲ್ಲಿ "ಕೋಟೇಶ್ವರದಲ್ಲಿರುವ ನಿಮ್ಮ ಸಾಬಿಗಳ ನಾಲ್ಕು ಮನೆಗೂ ಬೆಂಕಿ ಹಾಕಿಸುತ್ತೇನೆ" ಎಂದು ಹೆದರಿಸಿದ್ದರು. "ನಿಮ್ಮ ಹಬ್ಬಕ್ಕೆ ಸ್ನಾನ ಮಾಡಲು ಕೆರೆಗೆ ಬನ್ನಿ....ಸೊಂಟ ಮುರಿಸಿ ಹಾಕಿಸುತ್ತೇನೆ" ಎಂದು ಒದರಿದ್ದರು. ಆದರೆ ಕಾಲ ಬದಲಾಯಿಸಿತು. ಸಾಬಿಯ ಹಣೆಬರಹ ಅದಲುಬದಲಾಯ್ತು. ಮದೀನಾ ಬ್ಯಾರಿ ಚರ್ಮದ ವ್ಯಾಪಾರಕ್ಕೆ ಆರಂಭಿಸಿದ್ದೆ ...ಅವನ ಕಿಸೆ ತುಂಬಿತು. ಆರು ತಿಂಗಳು ನರಸಿಂಹನ ಹೋಟೇಲಿಗೆ ಬರಲಿಲ್ಲ. ಸಾಬಿ ಚರ್ಮದ ವ್ಯಾಪಾರದಲ್ಲೆ ನಿರತನಾದ. ಕೈತುಂಬ ದುಡ್ಡು ಸಂಪಾದಿಸಿದ. ಹೊಲೆಯರಿಂದ ನಾಲ್ಕಾಣೆಗೆ ಪಡೆಯುವ ಚರ್ಮಕ್ಕೆ ಮಂಗಳೂರಿನಲ್ಲಿ ಹತ್ತು ರೂಪಾಯಿಗಳ ಬೆಲೆಯಿತ್ತು. ಉದ್ದನೆಯ ಕೋಟು ಹೊಲಿಸಿದ. ಅರಬ್ಬಿ ಟೊಪ್ಪಿಯನ್ನು ಹಾಕಿಕೊಂಡು ಅದರ ಸುತ್ತ ಜರಿ ಸುತ್ತಿದ್ದ. ಕಾಲಿಗೆ ಹೂವಿನ ಎಕ್ಕಡ ಹಾಕಿಕೊಂಡೇ ಒಂದು ದಿನ ಐತಾಳರು ಇದ್ದಾಗಲೇ ಮದೀನಾ ಬ್ಯಾರಿ ನರಸಿಂಹನ ಹೋಟೇಲಿಗೆ ಬಂದ. ಅವನ ಅರಸುಮರ್ಜಿ ಕಂಡು ಐತಾಳರೇ ದಂಗಾಗಿಹೋದರು. ಗಲ್ಲದ ಹತ್ತಿರವಿದ್ದ ಬೆಂಚಿನ ಮೇಲೆಯೇ ಕುಳಿತ. ಐತಾಳರು ಆಗ ಮಾತ್ರ ತಡೆಯಲಿಲ್ಲ. "ಕನ್ನಿತ್ತುಮವರೆ... ಒಂದು ಲೋಟ ಚಾ ಕೊಡಿ" ಎನ್ನುತ್ತ ಹತ್ತು ರೂಪಾಯಿನ ಒಂದು ನೋಟನ್ನು ಮೇಜಿನ ಮೇಲೆ ಒಗೆದ. ಪಾಪ... ಎರಡು ಬಿಲ್ಲೆಯ ವ್ಯಾಪಾರಕ್ಕೆ ಹತ್ತು ರೂಪಾಯಿಯ ನೋಟು ಕೊಡುವುದೇ...? ಐತಾಳರು ಮೆಲ್ಲನೆ ಹೆಜ್ಜೆ ಕಿತ್ತರು.

೬

ದೀಪ ಹಚ್ಚುವ ಹೊತ್ತು. ಕತ್ತಲೆ ಮಸುಕಾಗಿ ಮುಸುಕಿದ್ದರೂ ನಸು ಬೆಳಕು ಇದ್ದಾಗಲೇ ಕೋಟಿ ಐತಾಳರು ಒಳದಾರಿಯಿಂದಲೇ ಅಚ್ಚಯ್ಯನ ಅಂಗಡಿಗೆ ಬಂದರು. ಹೊಗೆ ಕಾರುತ್ತಿದ್ದ ಚಿಮಣಿಯ ಕಂದುಬೆಳಕಿನಲ್ಲಿ ಚಿಲ್ಲರೆ ಪೆಟ್ಟಿಗೆಯನ್ನು ಹಿಡಿದು....ಎರಡು ದುಗ್ಗಾಣಿಯ ವ್ಯಾಪಾರಕ್ಕೆ ಪಾವಲಿ ಕೊಟ್ಟ ಗಿರಾಕಿಗೆ ಚಿಲ್ಲರೆ ಕೊಡುವ ಗಲಾಟೆಯಲ್ಲಿದ್ದಾಗ, ಐತಾಳರು ಅಂಗಡಿಯ ಜಗಲಿ ಹತ್ತಿ ಉಪ್ಪು ತುಂಬಿಸಿದ ದೇವದಾರು ಪೆಟ್ಟಿಗೆಯ ಮೇಲೆ ಕುಳಿತರು. ರುವಿ ದುಗ್ಗಾಣಿಯನ್ನು ಕೂಡಿಸಿ ಗಿರಾಕಿಯನ್ನು ಕಳುಹಿಸುವುದಕ್ಕೆ ಹತ್ತು ನಿಮಿಷ ಬೇಕಾಯ್ತು ಅಚ್ಚಯ್ಯನಿಗೆ. ಇಷ್ಟಾದರೂ ಐತಾಳರು ಬಂದದ್ದನ್ನು ಅವರು ಗಮನಿಸಿರಲಿಲ್ಲ. ಬೆಟ್ಟಿನ ಮೊಗೇರರ ಹೆಂಗಸರು ಮೀನಿನ ಕುಕ್ಕೆಯನ್ನು ಬೀದಿಯ ಚರಂಡಿಯ ಅಂಚಲ್ಲಿ ಇಟ್ಟು ಅಚ್ಚಯ್ಯನ ಅಂಗಡಿಗೆ ಬಂದರು. ಸಂಜೆಯ ವ್ಯಾಪಾರದ ಗದ್ದಲವನ್ನು ನೋಡುತ್ತ ಐತಾಳರು ಸುಮ್ಮನೆ ಕುಳಿತುಕೊಂಡರು. ಪದ್ಮಾವತಿಯ ಮನೆಗೆ ಬೆಂಕಿ ಬಿದ್ದು ಆಕೆ ಸತ್ತ ಮೇಲೆ ಐತಾಳರು ಅವರ ಅಂಗಡಿಗೆ ಬಂದೇ ಇರಲಿಲ್ಲ. ಅಚ್ಚಯ್ಯನೇ ಒಮ್ಮೆ ಐತಾಳರ ಯೋಗಕ್ಷೇಮ ವಿಚಾರಿಸಲು ಅವರ ಮನೆಗೆ ಹೋಗಿದ್ದರು. ಅದೂ ಆ ಘಟನೆ ನಡೆದ ನಾಲ್ಕನೆಯ ದಿನ. ಶ್ರಾವಣ ಸೋಮವಾರದ ಹಿಂದಿನ ದಿನ ಅಚ್ಚಯ್ಯ ಕುಲದೇವಸ್ಥಾನದ ದೇವರ ದರ್ಶನಕ್ಕೆ ಹೋಗುವ ಪ್ರಸಂಗ ಬಂತು. ಅವರ ಹೆಂಡತಿ ಎಂದೋ ಒಮ್ಮೆ ಮಗುವಿಗೆ ಗಾಳಿ ಸೋಂಕಿ ಮೂಗು ಕಟ್ಟಿದ್ದಾಗ ಹೇಳಿಕೊಂಡ ಹರಕೆ ಅದು. ಅದಕ್ಕೆ ಮೂರು ವರ್ಷದ

ಅವಧಿ. "ಇದೇ ಕೊನೆಯ ವರ್ಷ... ವೆಂಕಟರಮಣನಿಗೆ ಹರಕೆ ಒಪ್ಪಿಸದಿದ್ದರೆ ಹೇಗೆ?" ಎಂದು ಹೆಂಡತಿ ಪಿರಿಪಿರಿ ಮಾಡಿದ್ದರಿಂದ ಅವರು ಮುಂಚಿನ ದಿನವೇ ಅಂಗಡಿಯ ಬಾಗಿಲು ಹಾಕಿ ಕುಲದೇವಸ್ಥಾನಕ್ಕೆ ಹೋದರು. ಹಾಗಾಗಿ ಪದ್ಮಾವತಿಯ ಹೆಣ ನೋಡುವ ದುರಂತ ಅವರ ಪಾಲಿಗೆ ಇಲ್ಲವಾಯ್ತು. ಪದ್ದಕ್ಕನ ಮನೆ ಉರಿಯುತ್ತಿದ್ದಾಗ ಅಚ್ಚಯ್ಯ ಪೆರಡಾಲದ ವೆಂಕಟರಮಣ ದೇವಾಲಯದ ಸುತ್ತಿನಲ್ಲಿರುವ ಅರ್ಚಕನ ಮನೆಯಲ್ಲಿ ಹಾಯಾಗಿ ನಿದ್ದೆ ಮಾಡಿದ್ದರು. ಆದರೆ ಮೂರನೆಯ ದಿನ ಊರಿಗೆ ಬರುತ್ತಿದ್ದಾಗ ಬಸ್ಸಿನಲ್ಲಿ ಯಾರೋ ಆ ವಿಚಾರ ಮಾತನಾಡಿಕೊಳ್ಳುವುದು ಅವರ ಕಿವಿಗೆ ಬಿತ್ತು. "ಕೋಟೇಶ್ವರದಲ್ಲಿ ಮಾಲೆಯ ಪದ್ದಳ ಮನೆಗೆ ಬೆಂಕಿ ಬಿದ್ದು ಆಕೆ ಸತ್ತಳು ನೋಡಿ" ಎಂಬ ವರ್ತಮಾನವನ್ನು ಕೇಳಿ ಅಚ್ಚಯ್ಯ ದಂಗುಬಡಿದುಹೋದರು. "ಅಯ್ಯೋ ವೆಂಕಟರಮಣ... ಪದ್ಮಾವತಿ ಮನೆಗೆ ಬೆಂಕಿ ಬಿತ್ತೆ? ಅವಳು ಸತ್ತಳೆ? ಐತಾಳರನ್ನು ಈ ಸ್ಥಿತಿಯಲ್ಲಿ ನಾನು ಹೇಗೆ ನೋಡುವುದು? ಯಾವ ಮಾತನ್ನು ಹೇಳಿ ಅವರನ್ನು ಸಮಾಧಾನಿಸುವುದು?" ಎಂದು ಬಹು ವಾಗಿ ದುಃಖಿಸಿದರು ಅಚ್ಚಯ್ಯ. ಊರಿಗೆ ಬಂದು ಬಸ್ಸು ಇಳಿದು ಐತಾಳ ರನ್ನು ಕಾಣುವ ತನಕ ಅವರಿಗೆ ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ತಿರುಕಣಿಗೆ ಬಂದಾಗಲೇ ಹೆಂಡತಿಯಲ್ಲಿ "ನೀನು ಮನೆಗೆ ಹೋಗು... ಐತಾಳರನ್ನು ಕಂಡು ಬರುತ್ತೇನೆ" ಎಂದು ಮೂಡು ಹೆದ್ದಾರಿಯಲ್ಲಿ ಅವಸರ ಅವಸರವಾಗಿ ನೆಡೆದು ಹೋದರು. ಅಚ್ಚಯ್ಯನನ್ನು ಕಂಡಾಗ ಬಿಕ್ಕಿ ಬಿಕ್ಕಿ ಅಳುವುದಕ್ಕೆ ತೊಡಗಿದರು ಐತಾಳರು. "ನೀವಾದರೂ ಆಗ ಊರಲ್ಲಿ ಇದ್ದಿದ್ದರೆ ಎಷ್ಟೋ ಸಮಾಧಾನ ವಾಗುತ್ತಿತ್ತು" ಎಂದು ಐತಾಳರು ಹೇಳಿದಾಗ ಅಚ್ಚಯ್ಯನಿಗೂ ಸಹಿಸುವು ದಾಗಲಿಲ್ಲ. "ಎಂತಹ ಕೆಲಸ ಆಗಿಹೋಯ್ತು ಐತಾಳರೇ... ಆ ಸಮಯ ದಲ್ಲೆ ನಾನು ಕುಲದೇವಸ್ಥಾನಕ್ಕೆ ಹೋಗಬೇಕಿತ್ತೆ? ಪದ್ಮಾವತಿಯ ಹೆಣ ಉರಿಯುವ ಚಿತೆಯ ಮೇಲಿದ್ದಾಗ ನಾನು ನಿಮ್ಮ ಮುಖ ನೋಡಿಕೊಂಡಿರುವ ದುರಾದೃಷ್ಟವಾದರೂ ತಪ್ಪಿತಲ್ಲ ಸ್ವಾಮಿ ಛೇ....ನಾವು ನೀವು ಇಷ್ಟು ವಿಶ್ವಾಸ ದಿಂದ ಇದ್ದು ನಿಮ್ಮ ಕಷ್ಟದಲ್ಲಿ ಭಾಗಿಯಾಗುವ ಯೋಗ ತಪ್ಪಿದ್ದೇ ನನಗೆ ದುಃಖವಾಗಿದೆ" ಎಂದು ಅವರೂ ತಮ್ಮ ಸಂತಾಪ ವ್ಯಕ್ತಪಡಿಸಿ... ಗಂಟೆಕಾಲ ಇದ್ದು ಮತ್ತೆ ಮತ್ತೆ ಮಾತಾಡಿ ಮನೆಗೆ ಬಂದಿದ್ದರು. ಆಮೇಲೆ

ಐತಾಳರ ದರ್ಶನವೇ ಇರಲಿಲ್ಲ. ಆ ಕಡೆಯಿಂದ ಬರುವವರನ್ನೆಲ್ಲಾ ಅಚ್ಚಯ್ಯ ಕೇಳಿದರು "ಎಲ್ಲಿ.. ಐತಾಳರು ಕಾಣುವುದೇ ಇಲ್ಲವಲ್ಲ" ಎಂದು. ಪೇಟೆ ಬೀದಿಯಲ್ಲಿ ಅವರನ್ನು ಕಂಡವರೇ ಇಲ್ಲ. ವಾಡಿಕೆಯಂತೆ ಎರಡು ದಿನಕ್ಕೊಮ್ಮೆ ಒಂದು ಕಟ್ಟು ಚಪ್ಪರದ ಎಲೆ .. ಹಸಿ ಅಡಿಕೆ ತರುವುದಕ್ಕೆ ಪಾಟಾಳಿ ಬರುತ್ತಿದ್ದ. ಅವನಿಂದಲೇ ತಿಳಿಯಬೇಕಾಗಿತ್ತು ಐತಾಳರ ಯೋಗಕ್ಷೇಮ. "ಸಂಜೆ ಹೊತ್ತು ಈ ಕಡೆ ಬಂದು ಒಂದು ಗಂಟೆಯಾದರೂ ನಮ್ಮೊಂದಿಗೆ ಸಂತೋಷವಾಗಿ ಕಳೆಯುತ್ತಿದ್ದರು... ಈಗ ಅದು ಬೇಡವಾಗಿದೆ ಅವರಿಗೆ" ಎಂದು ಅಚ್ಚಯ್ಯ ಪಾಟಾಳಿಯ ಮುಂದೆ ತಮ್ಮ ದುಃಖ ತೋಡಿಕೊಂಡು 'ಒಮ್ಮೆ ಈ ಕಡೆ ಬಂದುಹೋಗುವಂತೆ ಹೇಳು" ಎಂದು ಹೇಳಿಕಳುಹಿಸಿದರು. ಗೆಳೆಯನನ್ನು ಕಾಣುವ ಹಂಬಲ ಅಚ್ಚಯ್ಯನಿಗೆ. ಅಂಗಡಿ ಬಿಟ್ಟು ಹೋಗುವಂತಿಲ್ಲ. ಚಿಕ್ಕಾಸಿನ ವ್ಯಾಪಾರ ಹೋದರೆ ಮತ್ತೆ ಗಿರಾಕಿಯನ್ನು ಸಂಪಾದಿಸುವುದೇ ಕಷ್ಟ. ಐತಾಳರು ಆ ದಿನದಿಂದ ರಾಜಮಾರ್ಗವನ್ನೇ ಬಿಟ್ಟಿದ್ದರು. ಮನೆಯ ಹಿಂದಿನ ಬಯಲು ದಾರಿಯಿಂದ ಮಾರುತಿ ವನದ ಜಡ್ಡಿಗೆ ಹೋಗಿ ಅಲ್ಲಿಂದಲೇ ಬನದ ಗುಡಿಯ ಓಣಿಯಿಂದ ಗುಡಿಗೆ ಹೋಗುವುದಕ್ಕೆ ಆರಂಭಿಸಿದರು. ಜನರ ಮುಖ ನೋಡುವುದೇ ಬೇಸರ. ಕಂಡವರು ಮತ್ತೆ ಮತ್ತೆ ಪದ್ಮಾವತಿಯ ಬಗ್ಗೆ ಕೇಳುತ್ತಾರೆ. ನರಸನನ್ನು ಏನು ಮಾಡಿದಿರಿ ಎನ್ನುತ್ತಾರೆ. "ಪದ್ಮಾವತಿ ಸಾಯಬಾರದಿತ್ತು .. ಭಾರಿ ಅನ್ಯಾಯ" ಎಂದು ಜನರು ಐತಾಳರ ಮನಸ್ಸನ್ನು ಮತ್ತೆ ಕದಡಿಸುತ್ತಾರೆ. ನಡೆದುಹೋದುದನ್ನು ನೆನಪು ಮಾಡಿಕೊಡುತ್ತಾರೆ. ಪದ್ಮಾವತಿಯ ರೂಪ ಗುಣವನ್ನು ಬಣ್ಣಿಸಿ ಅವರ ಕಣ್ಣಿಂದ ನೀರಿಳಿಯುವಂತೆ ಮಾಡುತ್ತಾರೆ. ಉಪಹಾರ ಮಂದಿರದ ನರಸಿಂಹ ಒಂದು ದಿನ ರಥಬೀದಿಯಲ್ಲಿ ಹೋಗುತ್ತಿದ್ದ ಐತಾಳರನ್ನು ನಿಲ್ಲಿಸಿ "ಪದ್ಮಮ್ಮನಿಗೆ ನನ್ನ ಈರುಳ್ಳಿ ಬಜೆ ಎಂದರೆ ಎಷ್ಟು ಪ್ರೀತಿ... ಪಾಪ... ಅಂತಹ ಹೆಂಗಸು ಗುಡಿಯಲ್ಲಿದ್ದರೆ ಎಷ್ಟು ಚಂದ. ಹೇಳುತ್ತೇನೆ ಸ್ವಾಮಿ... ಹಬ್ಬದ ಸಮಯ ಜರತಾರಿಯ ಸೀರೆಯುಟ್ಟು ... ಗುಡಿಯ ಮುಂದಿನ ಕಲ್ಲಿನ ಹಾಸಿನ ಮೇಲೆ ಕುಳಿತು ಹೂಮಾಲೆ ಕಟ್ಟುತ್ತಿದ್ದರೆ.... ಎಷ್ಟು ಸಂತೋಷವಾಗುತ್ತಿತ್ತು" ಎಂದುಬಿಟ್ಟ. ಐತಾಳರಿಗೆ ತಲೆ ಒಡೆಯುವಷ್ಟು ಬಿರಿಯತೊಡಗಿತು. ಬೇಡಬೇಡವೆಂದರೂ ಪದ್ಮಾವತಿ ವತಿಯ ರೂಪ ಮತ್ತೆ ಮತ್ತೆ ಮನಮಂದಿರವನ್ನು ಆಕ್ರಮಿಸಿತು. ಪದ್ಮಾವತಿ

ಗೆಂದು ಅವರು ಒಂದು ಜರತಾರಿ ಸೀರೆಯನ್ನು ತರಿಸಿದ್ದರು ಮಂಗಳೂರಿನಿಂದ. ಅಂಗೈ ಅಗಲದ ಬಂಗಾರದ ಜರಿ ಅಂಚಿನ ಸೀರೆಯದು. ಅವಳ ಬೆಳ್ಳಗಿನ ಮೈಗೆ ಒಪ್ಪುವಂತಹ ನಸುಕೆಂಪಿನ ಬಣ್ಣದ ಚುಕ್ಕಿ ಇರುವ ಸೀರೆಯನ್ನೆ ತರಿಸಿದ್ದರು. ಅದನ್ನು ತರಿಸುವುದಕ್ಕೆ ಅವರಿಗಾದ ಆರ್ಥಿಕ ಕಷ್ಟ ಅಷ್ಟಿಷ್ಟಲ್ಲ. ಆಗಿನ ಕಾಲದಲ್ಲೆ ಅದಕ್ಕೆ ನೂರು ರೂಪಾಯಿಯ ಒಂದು ನೋಟು ಕೊಟ್ಟಿದ್ದಾರೆ ಎಂದಾಗ ಜನರು ಎದೆಯ ಮೇಲೆ ಕೈಯಿಟ್ಟು ಉದ್ವೇಗ ವ್ಯಕ್ತಪಡಿಸಿದವರಿದ್ದಾರೆ. ಆ ಸೀರೆಯನ್ನುಟ್ಟು.... ವಂಕಿ ಸರ ಹಾಕಿಕೊಂಡು.... ಮುಗುಳನ್ನು ಕಿವಿಗೆ ಜೋಡಿಸಿ....ತಾಂಬೂಲ ಮೆದ್ದುಕೊಂಡು ಪದ್ಮಾವತಿ ಒಮ್ಮೆ ನಕ್ಕರೆ....ಐತಾಳರು ಹೆಮ್ಮೆಯಿಂದ "ಯಾವ ಜನ್ಮದ ಪುಣ್ಯವೊ.... ಇಂತಹ ಹುಡುಗಿ ನನ್ನ ಆಶ್ರಯದಲ್ಲಿರುವುದು" ಎಂದು ತಮಗೆ ತಾವೇ ಸಂತೋಷಪಡುತ್ತಿದ್ದರು. ಆದರೆ ಆ ಸೀರೆಯನ್ನಿಟ್ಟಿದ್ದ ಪತ್ತಾಸೇ ಉರಿದು ಹೋಗಿತ್ತು. ಬಂಗಾರದ ಪವನು ಸರ....ನತ್ತು....ಅವಳ ತಾಯಿ ಕೊಟ್ಟಿದ್ದ ಮುತ್ತಿನ ಮುಗುಳು... ನೀಲಿ ಹರಳಿನ ಉಂಗುರ ಮಾತ್ರ ಒಂದು ಕರಡಿಕೆಯಲ್ಲಿಟ್ಟು "ಅಯ್ಯ....ಮನೆಯ ಚಾವಣಿ ಹುಲ್ಲಿನದು....ಬಾಗಿಲು ಗಟ್ಟಿಯಾಗಿಲ್ಲ.....ಇದು ನನ್ನ ಮನೆಯಲ್ಲಿರವುದಕ್ಕಿಂತ ಗುಡಿಯ ಉಗ್ರಾಣದಲ್ಲಿ ಇರುವುದೇ ಒಳ್ಳೆಯದು. ಬೇಕಾದಾಗ ತೆಗೆದುಕೊಳ್ಳುತ್ತೇನೆ" ಎಂದು ಐತಾಳರ ಹತ್ತಿರ ಕೊಟ್ಟು ಅದರ ಜೊತೆ ಐವತ್ತು ಬೆಳ್ಳಿಯ ರೂಪಾಯಿ ಬೇರೆ ಕೊಟ್ಟಿದ್ದಳು. ಪದ್ಮಾವತಿಯ ಮನೆ ಸುಟ್ಟರೂ ಆ ಬಂಗಾರದ ಒಡವೆಗಳು ಮತ್ತು ಅವಳ ನಗದು ಹಣ ಐತಾಳರ ಹತ್ತಿರವೇ ಇತ್ತು. ಅದರ ಬಗ್ಗೆ ಎರಡು ದಿನದಿಂದ ತಮ್ಮಲ್ಲಿ ತಾವೇ ವಿಚಾರಮಾಡಿ ಅದನ್ನು ಆಕೆಯ ತಾಯಿಗೆ ಕೊಟ್ಟುಬರವುದು ಎಂದು ತೀರ್ಮಾನಿಸಿದರು. ಎರಡು ಕರ್ತವ್ಯದ ಕುರಿತು ಐತಾಳರು ವಿವೇಚಿಸಿದ್ದರು. ಒಂದು....ಪದಾವತಿಯ ಆತ್ಮಕ್ಕೆ ಶಾಂತಿ ದೊರೆಯುುವಂತೆ ಮುಂದಿನ ಸದ್ಗತಿ ಕಾರ್ಯವನ್ನು ಆಕೆಯ ಸಂಬಂಧಿಕರಿಂದ ಮಾಡಿಸುವುದು. ಇನ್ನೊಂದು ಆಕೆಯು ಋಣದಿಂದ ಪಾರಾಗುವಂತೆ ಇರುವ ಅವಳ ಒಡವೆ ಮತ್ತು ಹಣವನ್ನು ಮೊಗೆಬೆಟ್ಟಿಗೆ ಹೋಗಿ ಗಿರಿಜಳಿಗೆ ಕೊಟ್ಟು ಬರುವುದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಅವರ ಹತ್ತಿರ ಹಣವಿರಲಿಲ್ಲ. ಆಕೆ ಕೊಟ್ಟಿದ್ದ ಹಣವನ್ನು ಎಂದೋ ತಮ್ಮ ಸ್ವಂತಕ್ಕೆ ಉಪಯೋಗಿಸಿಕೊಂಡಿ

ದ್ದರು. ಹಾಗಾಗಿ ಅಚ್ಚಯ್ಯನನ್ನು ಕಂಡು ಒಂದಿಷ್ಟು ಹಣ ಸಾಲ ಪಡೆಯುವ ಉದ್ದೇಶದಿಂದಲೇ ಬಂದಿದ್ದರು ಐತಾಳರು.

ದುಗ್ಗಾಣಿಯ ಖಾರದ ಕಡ್ಡಿಯನ್ನು ಕೊಟ್ಟು ಡಬ್ಬದ ಮುಚ್ಚಳ ಹಾಕುತ್ತಿದ್ದಾಗ ಪೆಟ್ಟಿಗೆಯ ಮೇಲೆ ಕುಳಿತಿದ್ದ ಐತಾಳರನ್ನು ಕಂಡು ಅಚ್ಚಯ್ಯ "ಹೋ... ಐತಾಳರೇ. ಯಾವಾಗ ಬಂದದ್ದು...."ಎಂದರು ಅಷ್ಟೇ ಹಿಗ್ಗಿನಿಂದ.

"ಹತ್ತು ನಿಮಿಷ ಆಯ್ತು...ನಿಮ್ಮ ವ್ಯಾಪಾರ ಮುಗಿಯಲಿ ಅಂತ ಸುಮ್ಮನಿದ್ದೆ."

"ಛೇ....ನಾನು ನೋಡಲೇ ಇಲ್ಲವಲ್ಲ. ಈ ಗಿರಾಕಿಗಳ ಕಿರಿಕಿರಿಯಲ್ಲಿ ಯಾರು ಬಂದರೂ ಗೊತ್ತಾಗುವುದಿಲ್ಲ. ಹಾಳಾದ್ದು ಈ ಚಿಮಣಿಯ ಬೆಳಕಿನಲ್ಲಿ ಕಣ್ಣು ಸರಿಯಾಗಿ ಕಾಣುವುದಿಲ್ಲ."

"ಅದನ್ನೆ ಹೇಳಬೇಕೆಂದಿದ್ದೆ. ಈ ಬೆಳಕು ವ್ಯಾಪಾರಕ್ಕೆ ಸಾಲದು. ಉಡುಪಿಯ ಕಟೀಲರ ಅಂಗಡಿಯಲ್ಲಿ ಲಾಟೀನು ಬಂದಿದೆಯಂತೆ. ಒಂದನ್ನು ತರಿಸಿದರೆ ನಿಮಗೂ ಅನುಕೂಲ. ಈ ಹೊಗೆಯ ಕಾಟವೂ ತಪ್ಪುತ್ತದೆ."

"ಹೌದು... ಮೊನ್ನೆ ಯಾತ್ರೆಗೆ ಹೋದಾಗ ಕಾರ್ಕಳದಲ್ಲಿ ಅದನ್ನು ನೋಡಿದೆ. ಒಂದು ರೂಪಾಯಿ ದರವಂತೆ. ನಮ್ಮ ಯೋಗ್ಯತೆಗೆ ಹೆಚ್ಚು. ಇನ್ನು ದೊಡ್ಡ ಮನಸ್ಸು ಮಾಡಿ ತರಿಸಿದೆನೆನ್ನಿ....ನಿತ್ಯ ಸೀಮೆ ಎಣ್ಣೆ ಎಷ್ಟು ಬೇಕು? ಅಂತಹ ವ್ಯಾಪಾರ ಏನಿದೆಹೇಳಿ? ಕಾಸು ಚಿಕ್ಕಾಸಿನ ವ್ಯಾಪಾರಕ್ಕೆ ಈ ಚಿಮಣಿ ಸಾಕು. ದೇವರು ಮುಂದೆ ಅನುಕೂಲ ಮಾಡಿದರೆ ಲಾಟೀನು ಕಾಣುವ ಯೋಗ ಬಂದೀತು—ಇರಲಿ....ನಿಮ್ಮ ದರ್ಶನವೇ ಇಲ್ಲವಲ್ಲ. ಪೇಟೆ ಕಡೆ ಮುಖ ಹಾಕದೆ ಎಷ್ಟು ದಿನವಾಯ್ತು. ದಿನವೂ ನೀವು ಒಮ್ಮೆ ಯಾದರೂ ಬಂದುಹೋಗುವ ಕ್ರಮವಿತ್ತು ನೋಡಿ. ಸಂಜೆಯಾದರೆ ನಿಮ್ಮ ನೆನಪಾಗುತ್ತದೆ. ಹೋಗಲಿ....ನಾನು ಆ ಕಡೆ ಬರುವುದಕ್ಕೆ ಅಂಗಡಿಯಲ್ಲಿ ಯಾರಿಲ್ಲ."

"ಬರುವುದಕ್ಕೆ ಏನೂ ಅಡೆತಡೆಯಿಲ್ಲ ಅಚ್ಚಯ್ಯ. ಈ ಜನರು ಅದನ್ನೆ ಮತ್ತೆ ಮತ್ತೆ ನೆನಪು ಮಾಡಿಕೊಡುತ್ತಾರೆ. ಅದೇ ನನ್ನ ಮನಸ್ಸನ್ನು ಕೊರೆಯುತ್ತದೆ. ಎರಡು ವರ್ಷದ ಬಾಂಧವ್ಯ ನೋಡಿ....ಒಮ್ಮೆಯೂ

ಪದ್ಮಾವತಿ ನನ್ನನ್ನು ಬಿಟ್ಟು ಎರಡು ದಿನ ತವರಿಗೆ ಹೋದವಳಲ್ಲ. ನಿತ್ಯ ಕಂಡ ಮುಖ. ಮಾತನಾಡಿಸಿದ ಜೀವ. ಎಲ್ಲ ನಿಮಗೆ ತಿಳಿದದ್ದೆ. ಹಗಲು ರಾತ್ರಿ ಅವಳದ್ದೆ ಯೋಚನೆಯಾಗಿದೆ. ಇನ್ನು ನನ್ನ ಭಾಗ್ಯಕ್ಕೆ ಅಂತಹ ಹುಡುಗಿಯ ಸಂಪರ್ಕ ಸಹವಾಸ ಎಲ್ಲಿ ಸಿಗುತ್ತದೆ ಹೇಳಿ?" ಎಂದು ಐತಾಳರು ಅಳತೊಡಗಿದರು.

"ಛೇ! ಆದದ್ದು ಆಗಿಹೋಯ್ತು. ಮರೆತುಬಿಡಿ ಎಂದು ನಿಮ್ಮ ಮನೆಗೆ ಬಂದಾಗಲೇ ಹೇಳಿದೆ. ನಮ್ಮವರಾಗಿ ಒಂದು ಮಾತು ಹೇಳುತ್ತೇನೆ... ದೇವರು ನಿಮಗೆ ವಿವೇಕ ಕೊಟ್ಟಿದ್ದಾನೆ. ಪ್ರಪಂಚಜ್ಞಾನವಿದೆ. ನೀವು ಅಳುವುದು ನನಗೆ ಸರಿಬೀಳುವುದಿಲ್ಲ, ನನಗೆ ಅದರಿಂದ ದುಃಖವಾಗುತ್ತದೆ. ಮಿಂಚಿ ಹೋದ ಕಾರ್ಯ. ಚಿಂತಿಸಿ ಇನ್ನು ಫಲವಿಲ್ಲ. ಮತ್ಸರ ಎಂತಹ ಅನರ್ಥಕ್ಕೆ ದಾರಿಮಾಡಿತು ನೋಡಿ ...ಆ ಪಾಪಿ ಕೊಂದನಲ್ಲ... ಅವನಿಗಾದರೂ ಸುಖ ವಿದೆಯೆ? ನಿನ್ನೆ ಯಾರೋ ಅನ್ನುತ್ತಿದ್ದರು, ನಾಲ್ಕು ದಿನ ಕಳೆದರೆ ಅವನೂ ಸಾಯುತ್ತಾನೆಂದು. ಎಲ್ಲಾ ವಿಚಿತ್ರವಾಗಿ ಕಾಣುತ್ತದೆ ಐತಾಳರೆ.... ದೇವರಿಗೆ ಆರತಿ ಎತ್ತಿದ ಕೈಯಿಂದಲೇ ಕೊಂದ ನೋಡಿ....ಮತ್ತೆ ಅದೇ ಕೈಯಿಂದಲೇ ಬೆಂಕಿ ಹಾಕಿದ. ಬ್ರಾಹ್ಮಣನ ಈ ಹೊಲಸುಕಾರ್ಯ ಕಂಡು ಇತರ ಜಾತಿ ಯವರಿಗೆ ನಗುವುದಕ್ಕಾಯ್ತು. ನಿನ್ನೆ ಆ ಪೂಜಾರಿ ಸಂಜೆಹೊತ್ತು ಕಟ್ಟೆಯ ಮೇಲೆ ಕುಳಿತು ಹೇಳಿದ 'ಬ್ರಾಹ್ಮಣರು ಜನಿವಾರ ಕಡಿದುಕೊಳ್ಳುವುದು ಒಳ್ಳೆಯದು' ಎಂದು. ಎಂತಹ ಮಾತು ಕೇಳುವ ಕಾಲ ಬಂತು ನೋಡಿ ..."

ಕೋಟೆ ಐತಾಳರು ಏನನ್ನೂ ಹೇಳದೆ ಮುಖ ಕೆಳಗೆ ಮಾಡಿಕೊಂಡು ಸುಮ್ಮನೆ ಕುಳಿತರು. ಅಚ್ಚಯ್ಯನೇ ಮಾತಿನ ಗತ್ತನ್ನು ಬದಲಾಯಿಸಿದರು.

"ಅವನ ಸ್ಥಿತಿ ಹೇಗಿದೆ ಸ್ವಾಮಿ....ಬದುಕುವ ಆಸೆ ಇದೆಯೆ?"

"ಸತ್ತರೆ ಸಾಯಲಿ ಅಚ್ಚಯ್ಯ. ದೇವರಿಗೆ ಬೇಡವಾಗಿದ್ದರೆ ಮತ್ತೆ ನಮಗೇಕೆ ಹೇಳಿ?"

"ಹೌದು... ನಾನೊಂದು ವಿಚಾರ ಹೇಳಿದ್ದೆ.... ನೆನಪಿದೆಯೆ?"

"ಯಾವುದು?"

"ಆಕೆಯ ಮುಂದಿನ ಸದ್ಗತಿ ಕಾರ್ಯ"

"ಯೋಚಿಸಿದ್ದೇನೆ. ಕುಂದಾಪುರದಲ್ಲಿ ಆಕೆಯ ಹತ್ತಿರದ ಬಂಧು

ಇದ್ದಾರೆ. ಅವನನ್ನೇ ಗೋಕರ್ಣಕ್ಕೆ ಕಳುಹಿಸಿ ಪಿಂಡ ಹಾಕಿಸುತ್ತೇನೆ. ಅಷ್ಟೇ ಅಲ್ಲ.. ನಾಡದು ಮೊಗೆಬೆಟ್ಟಗೆ ಹೋಗುವುದೆಂತ ಎಣಿಸಿದ್ದೇನೆ... ..."

"ಹಾಗೆ ಮಾಡಿ....ಆ ಮುದುಕಿ ಎಷ್ಟು ನೊಂದುಕೊಂಡಿದ್ದಾಳೋ ಏನೋ... ಹೌದು... ಸಮಾಚಾರ ತಿಳಿದಮೇಲೆ ಯಾರೂ ಆ ಕಡೆಯಿಂದ ಬಂದೇ ಇಲ್ಲವಲ್ಲ"

"ಅದೂ ನನಗೆ ಯೋಚನೆಯಾಗಿದೆ. ಆ ದಿನ ಸಂಜೆಯೇ ಪತ್ರ ಬರೆದು ಸೋಮಯಾಜರಿಗೆ ಕಳುಹಿಸಿದೆ. ಆ ಕಡೆ ಹೋಗುವ ಒಂದು ಗಾಡಿಯಿತ್ತು. ಆ ಮೇಲೆ ಅಲ್ಲಿಂದ ಯಾವ ಸುದ್ದಿಯೂ ಬಂದಿಲ್ಲ. ನಾನು ಹೋಗುವುದು ಎರಡು ಕೆಲಸದ ಮೇಲೆ. ಒಂದು ಗಿರಿಜಮ್ಮನನ್ನು ಕಂಡು ಬರುವುದು. ಇನ್ನೊಂದು ಪದ್ದಕ್ಕನ ಕೆಲವು ಬಂಗಾರದ ಒಡವೆ ನನ್ನ ಹತ್ತಿರ ಇದೆ. ಅಲ್ಲದೆ ಒಂದಿಷ್ಟು ಹಣ ಕೂಡಾ ಕೊಟ್ಟಿದ್ದಳು. ಅದು ಯಾರಿಗೆ ಸಲ್ಲಬೇಕೋ, ಅವರಿಗೆ ಸಲ್ಲಿಸಿಬಿಟ್ಟರೆ ಋಣಭಾರ ತಪ್ಪುತ್ತದೆ ಎಂದೇ ನನ್ನ ಅಭಿಪ್ರಾಯ. ಆದರೆ ಒಂದು ಕೆಲಸ ಆಯ್ತು ...ಸದ್ಯಕ್ಕೆ ನನ್ನ ಬಳಿ ಚಿಕ್ಕಾಸು ಇಲ್ಲ. ಆಸ್ತಿ ಮಾರುವುದು ಈ ಸಂದರ್ಭದಲ್ಲಿ ಒಳ್ಳೆಯದಲ್ಲ. ಕಾಮಾಕ್ಷಿಯ ಬಂಗಾರವನ್ನು ಅಡವು ಇಟ್ಟು ಪದ್ಮಾವತಿ ಋಣ ಕಡಿದುಕೊಳ್ಳುವುದು ನೀತಿ ಕಾರ್ಯ ಆಗುವುದಿಲ್ಲ. ಅದನ್ನೆಲ್ಲಾ ಯೋಚಿಸಿ ಕೊನೆಗೆ ನಿಮ್ಮನ್ನು ನೋಡುವುದಕ್ಕೆ ಬಂದೆ ..."

ಅಚ್ಚಯ್ಯ ಸೂಕ್ಷ್ಮವಾಗಿ ಐತಾಳರ ಮನಸ್ಸನ್ನು ಅರ್ಥಮಾಡಿಕೊಂಡರು.

"ಈ ವಿಚಾರದಲ್ಲಿ ನನ್ನಿಂದ ಏನಾಗಬೇಕು ?"

"ಒಂದು ಉಪಕಾರ ಮಾಡಬೇಕು ನೀವು"

"ಹೇಳಿ ಐತಾಳರೆ ...ಸಂಕೋಚವೇನು ?"

"ಮನಸ್ಸಿಗೆ ಬೇಸರ ತಂದುಕೊಳ್ಳಬೇಡಿ"

"ಅಂತಹ ಕಾಟು ಮನುಷ್ಯ ನಾನಲ್ಲ. ವಿಶ್ವಾಸಕ್ಕೆ ಬಿಲಿ ಕೊಡುತ್ತೇನೆ. ಅಷ್ಟು ನಂಬಿಕೆ ನಿಮಗಿದ್ದರೆ ಸಾಕು"

"ಹಣದ ಲೇವಾದೇವಿ....ಎಂದರೆ ಸ್ನೇಹದ ವ್ಯವಹಾರದಲ್ಲಿ ಮುಂದೆ ತೊಡಕಾಗಬಾರದು"

"ಅಯ್ಯೋ ಈ ಮಾತು ಯಾರಿಗೆ ಹೇಳುತ್ತೀರಿ ? ನನ್ನ ಬಗ್ಗೆ ಸಂಪೂರ್ಣ ನಂಬಿಕೆ ಇಡಿ ಐತಾಳರೆ .. "

"ಐದು ಹತ್ತಾಗಿದ್ದರೆ ನನಗೆ ಯೋಚನೆಯಿಲ್ಲ. ಇದು ನೂರಕ್ಕೆ ಮುಟ್ಟುತ್ತದೆ"

"ಎಷ್ಟು....ಒಂದು ನೂರೆ ?"

"ಹೌದು...."

"ಏಕೆ ಸ್ವಾಮಿ ಅಷ್ಟು ಹಣ ..."

"ಪದ್ಮಾವತಿ ಋಣ ಸಂದಾಯಮಾಡುವುದಕ್ಕೆ ಬೇಕು ಅಚ್ಚಯ್ಯ. ಆ ಕಾರ್ಯ ಮುಗಿದರೆ ಮುಂದೆ ನನಗೆ ಯಾವ ಚಿಂತೆಯೂ ಅಲ್ಲ. ಆಕೆಯ ತಾಯಿಯ ಮುಂದೆ ಒಡಸೆ ಇಟ್ಟು – ಇದು ಪದ್ಮಾವತಿ ಸಾಯುವಾಗ ಬಿಟ್ಟು ಹೋದ ಹಣ ಎಂದು ನೂರು ರೂಪಾಯಿಯನ್ನು ಆಕೆಯ ಕೈಮೇಲೆ ಹಾಕಿದರೆ ಮತ್ತೆ ನನಗೆ ನಿಶ್ಚಿಂತೆ"

"ಹೂಂ... ಸರಿ .. " ಎಂದು ಅಚ್ಚಯ್ಯ ಒಂದು ನಿಮಿಷ ಕಣ್ಣು ಮುಚ್ಚಿ ಏನನ್ನೋ ಯೋಚಿಸಿದರು.

"ನನ್ನ ಕಾರ್ಯ ಕೈಗೂಡುವ ಭರವಸೆ ಇದೆಯೋ !"

"ಅದನ್ನೇ ಯೋಚಿಸುತ್ತಿದ್ದೇನೆ .. ಮನೆಯ ಪೆಟ್ಟಿಗೆಯಲ್ಲಿ ಹತ್ತು ರೂಪಾಯಿಯ ನಾಲ್ಕು ನೋಟು ಇದೆ. ದೇವರ ಕಂಡಿಯ ಡಬ್ಬದಲ್ಲಿ ಪಾವಲಿಗಳು ಒಂದು ಹತ್ತು ರೂಪಾಯಿಯಷ್ಟು ಇರಬಹುದು. ಉಳಿದ ಹಣಕ್ಕೆ ನಾಳೆ ನಮ್ಮ ಕಮ್ತಿಯವರನ್ನೇ ಕೇಳಬೇಕು. ಆಗಲಿ ಐತಾಳರೆ....ನನಗೆ ಒಂದೆರಡು ದಿನ ಸಮಯ ಕೊಡಿ. ಖಂಡಿತಾ ಕೊಡುತ್ತೇನೆ"

"ಸುಮ್ಮನೆ ಬಾಯಿಮಾತಿನ ಮೇಲೆ ಬೇಡವೇ ಬೇಡ...."

"ಅಂದರೆ ..."

"ಒಂದು ಪತ್ರದಲ್ಲಿ ಬರೆದುಕೊಡುತ್ತೇನೆ ...ಒಂದು ವರ್ಷದಲ್ಲಿ ಪಾವತಿ ಮಾಡುವ ಶರತ್ತಿನ ಮೇಲೆ ಅಷ್ಟೆ – ತಾವು ಬಡ್ಡಿಯನ್ನು ದಯವಿಟ್ಟು ತೆಗೆದುಕೊಳ್ಳಬೇಕು"

"ನೋಡಿ ...ವ್ಯವಹಾರ ಎಂದು ವಿಶ್ವಾಸಕ್ಕೆ ಎರಡು ಬಗೆಯುವ ಕೆಲಸ ನಾನು ಮಾಡುವುದಿಲ್ಲ. ನಿಮ್ಮಿಂದ ಪತ್ರ ಬರೆಸಿಕೊಂಡು ಬಡ್ಡಿ ಪಡೆಯು

ವುದು ಮಾತ್ರ ಆಗದ ಮಾತು. ಹಣ ಕೊಡುತ್ತೇನೆ. ತಮಗೆ ಯಾವಾಗ ಅನುಕೂಲವಾಗುತ್ತದೋ... ಆಗ ವಾಪತಿ ಮಾಡಿ"

"ಹೇಳಿದೆನಲ್ಲ....ಪತ್ರ ಬರೆದು ಕೊಡುವುದು ನಿಶ್ಚಯ. ಅದನ್ನು ತಾವು ಒಪ್ಪದಿದ್ದರೆ ತಮ್ಮಿಂದ ಹಣ ಪಡೆಯುವುದೇ ನನಗೆ ಸಂಕೋಚವಾಗುತ್ತದೆ. ದಯವಿಟ್ಟು ನನ್ನ ಮಾತಿಗೆ ಅಲ್ಲ ಎನ್ನಬೇಡಿ"

"ಸರಿ ಸ್ವಾಮಿ....ಪತ್ರ ಬೇಕಿದ್ದರೆ ಬರೆದು ಕೊಡಿ. ಆದರೆ ಬಡ್ಡಿಯ ವಿಚಾರ ಎತ್ತಬೇಡಿ" ಎಂದರು ಅಚ್ಚಯ್ಯ.

ಕೃತಜ್ಞತೆಯನ್ನು ಹೇಗೆ ಅರ್ಪಿಸಬೇಕೆಂಬುದು ಐತಾಳರಿಗೆ ತಿಳಿಯಲಿಲ್ಲ. ಇದ್ದಕ್ಕಿದ್ದಂತೆ ಅವರ ಕಣ್ಣಿಂದ ಬಳಬಳ ನೀರಿಳಿಯಿತು.

"ನನ್ನ ಭಾಗ್ಯಕ್ಕೆ ಪದ್ಮಾವತಿಯ ವಿಶ್ವಾಸ....ನಿಮ್ಮ ವಿಶ್ವಾಸ ಎರಡು ಶಾಶ್ವತವಾಗಿತ್ತು. ಪದ್ದಕ್ಕ ನನ್ನಿಂದ ದೂರವಾದರೂ ನಿಮ್ಮ ಪ್ರೀತಿ ವಿಶ್ವಾಸ ಇನ್ನೂ ನನ್ನ ಪಾಲಿಗೆ ಜೀವಂತವಾಗಿದೆ. ಮುಂದೆ ನನ್ನಿಂದ ಏನಾದರೂ ಉಪಕಾರ ಆಗುವಂತಹ ಅವಕಾಶ ದೇವರು ಕೊಡಲಿ. ನಾಡದು ಬೆಳಗ್ಗೆ ಬರುತ್ತೇನೆ....ನಾಳೆಯ ತಾರೀಖನ್ನು ಕಾಣಿಸಿ ಪತ್ರ ಬರೆದು ತರುತ್ತೇನೆ ..."

"ತಾವು ಯಾವಾಗ ಮೊಗೆಬೆಟ್ಟಿಗೆ ಹೋಗುವುದು?"

"ಮದೀನಾ ಬ್ಯಾರಿ ತನ್ನ ಗಾಡಿ ಕೊಡುವುದಾಗಿ ಹೇಳಿದ್ದಾನೆ. ಅವನ ವಿಶ್ವಾಸ ಕೂಡಾ ದೊಡ್ಡದಾಗಿದೆ. ಎರಡು ದಿನ ಅವನಿಗೆ ಕುಂದಾಪುರಕ್ಕೆ ಹೋಗುವ ಕೆಲಸ ಇದೆ ಎಂದಿದ್ದಾನೆ. ಈ ಸ್ಥಿತಿಯಲ್ಲಿ ನಡೆದುಹೋಗುವುದು ನನ್ನಿಂದ ಸಾಧ್ಯವಿಲ್ಲ. ಬೇರೆ ಗಾಡಿ ಪ್ರಯಾಣ ಎಂದರೆ ನಾಲ್ಕು ದಿನ ಹಾಸಿಗೆ ಬಿಟ್ಟು ಏಳುವುದೇ ಕಷ್ಟ. ಬ್ಯಾರಿಯವರು ಗಾಡಿಗೆ ಮೊನ್ನೆ ತಾನೆ ಮಂಗಳೂರಿನಿಂದ ರಬ್ಬರಿನ ದಿಂಬು ತರಿಸಿದ್ದಾರೆ. ಅವನಾಗಿಯೇ ಗಾಡಿ ಕೊಡುತ್ತೇನೆ ಎಂದು ಪ್ರಸ್ತಾಪಿಸಿದ. ಅವನಿಗೂ ಬ್ರಾಹ್ಮಣರು ಎಂದರೆ ಎಷ್ಟು ವಿನಯ ಭಕ್ತಿ ನೋಡಿ....ಮೊದಲು ಮೊದಲು ನೆಲ ಬಿಟ್ಟೇ ನಡೆಯುತ್ತಿದ್ದ. ಅಲಾಬಿ ಹಬ್ಬದ ಗಲಾಟೆಯಲ್ಲಿ ಕಾರ್ವಿ ಕೇರಿಯವರು ಅವನಿಗೆ ಹೊಡೆಯುವುದಕ್ಕೆ ಬಂದಾಗ ನಾನೇ ಪಂಚಾಯ್ತಿ ಮಾಡಿ ಅವನ ಮಾನ ಉಳಿಸಿದೆ ನೋಡಿ.... ಆ ಮೇಲೆ ನನ್ನ ಬಗ್ಗೆ ಎಲ್ಲಿಲ್ಲದ ಆದರ ಗೌರವ....ನಾನೂ ಅವನ ಬಗ್ಗೆ ವಿಶ್ವಾಸ ಇಟ್ಟಿದ್ದೇನೆ...."

"ವಿಶ್ವಾಸಕ್ಕೆ ಯಾರಾದರೇನು? ಆ ನರಸಸಿಗಿಂತ ಈ ಸಾಬಿಯೇ ಎಷ್ಟೋ ಮೇಲು. ಅವನ ಗಾಡಿಯೂ ತುಂಬಾ ಚೆನ್ನಾಗಿದೆ. ಹಾಗೆ ಮಾಡಿ... ನಾನು ನಾಳೆ ಸಂಜೆಯೇ ನಿಮಗೆ ಹಣ ಕೊಡುತ್ತೇನೆ. ಇಷ್ಟೇ ಹೊತ್ತಿಗೆ ಬನ್ನಿ. ಇನ್ನೇನೂ ಇಲ್ಲ ...ಕಡಿಮೆಯಾಗುವ ಹಣಕ್ಕೆ ಕವಿತ್ರಯವರನ್ನು ನೋಡಬೇಕು. ಆ ಕೆಲಸ ನಾಳೆಯೇ ಆಗುವ ನಂಬಿಕೆ...." ಎಂದರು ಅಚ್ಚಯ್ಯ. ಮಹತ್ವದ ಕಾರ್ಯ ಕೈಗೂಡಿದ್ದರಿಂದ ಐತಾಳರು ಸಂತೋಷದಿಂದ ಮನೆಗೆ ಬಂದರು.

ಮಾರನೆಯ ದಿನ.. ದೀಪ ಹಚ್ಚುವ ಹೊತ್ತಿಗೆ ಸರಿಯಾಗಿ ಕೋಟೆ ಐತಾಳರು ಅಂಗಡಿಗೆ ಬಂದರು. ಅಚ್ಚಯ್ಯ ಅವರ ನಿರೀಕ್ಷೆಯಲ್ಲೇ ಇದ್ದಿರ ಬೇಕು. ನಮಸ್ಕಾರ ಎಂದವರೇ ಪೆಟ್ಟಿಗೆಯ ಬಾಗಿಲು ತೆರೆದು ಕಾಗದ ಮಡಿಕೆ ಯಲ್ಲಿದ್ದ ಹಣವನ್ನು ಐತಾಳರ ಕೈಯಲ್ಲಿಟ್ಟು "ಸರಿಯಾಗಿದೆ.. ನೋಡಿಕೊಳ್ಳಿ" ಎಂದರು. ಐತಾಳರಿಗಾದ ಆನಂದ ಅವರ ಮುಖದಲ್ಲೇ ವ್ಯಕ್ತವಾಗುತ್ತಿತ್ತು. ಕೃತಜ್ಞತೆಯನ್ನು ಅರ್ಪಿಸುವುದಕ್ಕೆ ಬಾಯಿಯೇ ಕಟ್ಟಿಹೋಗಿತ್ತು. ತಮ್ಮ ಕೈಯಲ್ಲಿದ್ದ ಪತ್ರವನ್ನು ಗಲ್ಲದ ಮೇಲಿಟ್ಟು "ನೋಡಿ, ಇದು ಪತ್ರ....ಎಲ್ಲ ವನ್ನೂ ವಿವರವಾಗಿ ಕಾಣಿಸಿದ್ದೇನೆ" ಎಂದರು. ಅಚ್ಚಯ್ಯನಿಗೆ ಏನು ಕಂಡಿತೋ "ಛೆ! ನಿಮ್ಮಲ್ಲಿ ಪತ್ರ ಬರೆದು ಕೊಡಿ ಎಂದು ಯಾರಪ್ಪ ಹೇಳಿದರು. ಅದನ್ನು ನಾನು ಇಡುವುದಾದರೂ ಎಲ್ಲಿ? ಮನೆಯ ಪತ್ತಾಸು ತುಂಬ ಜಿರಳೆ. ಅಂಗಡಿಯಲ್ಲಿ ತಂಗಸಿನ ಜಾಗದಲ್ಲಿ ಒರಲೆ ಹಿಡಿದಿದೆ. ಹೋಗಲಿ....ನಿಮ್ಮ ಮನಸ್ಸನ್ನೇಕೆ ನೋಯಿಸುವುದು...." ಎಂದು ಪತ್ರವನ್ನು ಗಲ್ಲದ ಅರೆ ಯಲ್ಲಿಟ್ಟರು.

ಐತಾಳರು ಕಾಗದದ ಮಡಿಕೆಯನ್ನು ಬಿಡಿಸಿ...ಒಂದು ರೂಪಾಯಿನ ಒಂದು ನೋಟನ್ನು ಹೊರತೆಗೆದು....ಅದನ್ನು ಗಲ್ಲದ ಪೆಟ್ಟಿಗೆಯ ಮೇಲಿಡುತ್ತಾ,

"ಇದೆಲ್ಲಾ ಏನೆಂದು ಕೇಳಬೇಡಿ....ನನ್ನ ಮನಸ್ಸಿಗೆ ಸರಿಕಂಡು ಹೀಗೆ ಮಾಡುತ್ತಿದ್ದೇನೆ. ನಾಳೆ ಹೊರಡುವ ವ್ಯವಸ್ಥೆ ಮಾಡಿದ್ದೇನೆ ಅಚ್ಚಯ್ಯ. ಇನ್ನು ನಿಮ್ಮನ್ನು ನಾನು ನೋಡುವುದು ಗುರುವಾರ. ಒಂದಿಷ್ಟು ಕೆಲಸ ಬಾಕಿ ಇದೆ. ದೇವಾಲಯದ ಕಾರ್ಯ ಎಂದರೆ ...ನಾನು ಬರುವವರೆಗಿನ ಸಾಮಗ್ರಿ ಸಲಕರಣೆಗಳ ವ್ಯವಸ್ಥೆ ಆಗಬೇಕು. ನೈವೇದ್ಯಕ್ಕೆ ಬೇಲೆಯಿಂದ ಎರಡು ಮುಡಿ ಬೆಳ್ತಿಗೆ ಅಕ್ಕಿಗೆ ಹೇಳಿದ್ದೇನೆ. ಮೊಕ್ತೇಸರನಾಗಿ ವಾರಕಾಲ ಊರು ಬಿಡುವು

ದೆಂದರೆ ಒಂದಲ್ಲ ಒಂದು ತಾಪತ್ರಯ. ಎಂಟು ಗಂಟೆಯವರೆಗೆ ಇಲ್ಲೇ ಕುಳಿತು ನಿಮ್ಮ ಜೊತೆ ಮಾತನಾಡಬಹುದಿತ್ತು. ಆದರೆ ಪರಿಸ್ಥಿತಿ ಹಾಗಿದೆ. ಏನೂ ತಿಳಿದುಕೊಳ್ಳಬೇಡಿ ...ಬಂದ ಮೇಲೆ ಬಾಕಿ ವಿಚಾರ....ಇದು ಬಡ್ಡಿಯ ಹಣ..." ಎಂದು ಐತಾಳರು ನೋಟನ್ನು ಗಲ್ಲದ ಮೇಲಿಟ್ಟು "ನಮಸ್ಕಾರ" ಎಂದವರೇ ಮೆಟ್ಟಿಲು ಇಳಿದರು.

ಏನೋ ಹೇಳುವುದಕ್ಕೆ ಅಚ್ಚಯ್ಯ ಬಾಯಿ ತೆರೆದಿದ್ದರು—ಆದರೆ ಎಲ್ಲಿದ್ದಾರೆ ಐತಾಳರು, ಆಗಲೇ ಚರಂಡಿ ದಾಟಿ ರಸ್ತೆಯಲ್ಲಿ ಹತ್ತು ಹೆಜ್ಜೆ ಮುಂದೆ ಹೋಗಿದ್ದರು.

೭

ಜೋಡೆತ್ತಿನ ಗಾಡಿ ಮೊಗೆಬೆಟ್ಟಿನ ಸಂಕದ ಮೇಲೆ ಬಂದಾಗ ಸೂರ್ಯ ನಡುನೆತ್ತಿಗೆ ಬಂದಿದ್ದ. ಗುಡ್ಡದ ತಪ್ಪಲಿನ ಬಯಲಿನಲ್ಲಿ ಹರಿಯುತ್ತಿದ್ದ ಎಣ್ಣೆ ಹೊಳೆಯ ತಂಪಿನ ನೀರನ್ನು ಕಂಡು ಎತ್ತುಗಳು ಬಿಸಿ ಉಸಿರು ಕಾರುತ್ತಾ ನೊಗ ಚಾಚಿ ನಿಂತೇಬಿಟ್ಟವು. ಬಾರುಕೋಲಿನಿಂದ ನಾಲ್ಕು ಬಿಗಿದು ಬಾಲ ಜಿಗಿಸಿದರೂ ಅವುಗಳು ಇಟ್ಟ ಕಾಲನ್ನು ನೆಲಬಿಟ್ಟು ಎತ್ತಲೇ ಇಲ್ಲ. ಅಬ್ಬು ವಿಧಿಯಿಲ್ಲದೆ ನೊಗ ಇಳಿಸುವ ಯೋಚನೆಯಿಂದ "ಅಯ್ಯ ... ಎತ್ತುಗಳಿಗೆ ನೀರು ಕುಡಿಯುವ ಆಸೆಯಾಗಿದೆ....ಬೆಳಿಗ್ಗೆ ಒಂದಿಷ್ಟು ಹಿಂಡಿ ಮಾತ್ರ ಕೊಟ್ಟಿದ್ದೆ....ಒಂದು ಗಳಿಗೆ ನೀರಲ್ಲಿ ಕಾಲಾಡಿಕೊಂಡು ಬರಲಿ" ಎಂದು ಆಗಲೇ ಮೂಕಿಯಿಂದ ಕೇಳಹಾರಿದ. ಕೋಟೆ ಐತಾಳರು "ನೋಡಪ್ಪ ... ನಾವು ಮೊಗೆಬೆಟ್ಟಿಗೆ ಬೇಗ ಹೋಗಬೇಕು...ಮಧ್ಯಾಹ್ನ ಊಟದ ಹೊತ್ತಿಗೆ ಸರಿಯಾಗಿ ಹೋಗುವುದು ಒಳ್ಳೆಯ ಸಂಪ್ರದಾಯವಲ್ಲ....ಬೇಗ ಗಾಡಿ ಕಟ್ಟು" ಎಂದರು. ಎತ್ತುಗಳನ್ನು ಹೊಳೆಯ ದಡಕ್ಕೆ ಕರೆದುಕೊಂಡು ಹೋದ ಅಬ್ಬು. ಬಿಸಿಲಿನ ಜಳಕ್ಕೆ ಉಬ್ಬಸ ಬಿಡುತ್ತಿದ್ದ ಎತ್ತುಗಳು ತಂಪಿನ ನೀರಲ್ಲಿ ಮುಖ ಮೇಲೆತ್ತಿ ಮುಳುಗಿದ್ದೇ ಮುಳುಗಿದ್ದು....ದಡ ಕಾಣುವ ಹಂಬಲವೇ ಅವುಗಳಿಗೆ ಇಲ್ಲವಾಯ್ತು. ಕತ್ತಗಳಿಂದ ಅವುಗಳ ಮೈ ಉಜ್ಜಿ....ಎರಡು ಹಿಡಿ ಹುಲ್ಲು ಚೆಲ್ಲಿ ಮತ್ತೆ ಗಾಡಿ ಕಟ್ಟುವಾಗ ಎರಡು ಗಳಿಗೆ ಕಳೆದಿತ್ತು. ಬೆಳ್ಳಿ ಮೂಡುವ ಹೊತ್ತಿಗೆ ಗಾಡಿ ಕಳುಹಿಸುತ್ತೇನೆ ಎಂದಿದ್ದರು ಬ್ಯಾರಿಯವರು –ಹಿಂದಿನ ದಿನ ಸಂಜೆ ಪೇಟೆಯಲ್ಲಿ ಸಿಕ್ಕಿದಾಗ. "ಹಾಗೆ ಮಾಡಿ ...ಬೇಗ ಹೊರಡುವುದೇ

ಕ್ಷೇಮ. ದಾರಿಯೂ ಮೊದಲೇ ಕೊರಕಲು. ಮೊಗೆಬೆಟ್ಟು ಇರುವುದೇ ಉಬ್ಬಿನಲ್ಲಿ....ಅಲ್ಲದೆ ತುಂಬಾ ಸುಡುಬಿಸಿಲು" ಎಂದು ಹೇಳಿದ್ದ ಐತಾಳರು ಬೆಳ್ಳಿ ಮೂಡುವುದಕ್ಕೆ ಸರಿಯಾಗಿ ಎದ್ದು....ಮುಖ ಕೈಕಾಲು ತೊಳೆದು ಒಂದು ಲೋಟ ಕಾಫಿ ಕುಡಿದು....ಎರಡು ಚೀಲವನ್ನು ಕೈಯಲ್ಲಿ ಹಿಡಿದು, ಹೆಂಡತಿಯಲ್ಲಿ "ನಾಳೆ ಬರುತ್ತೇನೆ–ಮನೆ ಕಡೆ ಸಿಗಾ ಇರಲಿ" ಎಂದು ಜರಂಡಿಯ ಕಲ್ಲಿನ ಮೇಲೆ ನಿಂತು "ಗಾಡಿ ಬರುತ್ತದೆ" ಎಂದು ಕಾದರೆ ಅದು ಬರುವಾಗ ಬೆಳ್ಳಗೆ ಬೆಳಕಾಗಿತ್ತು. ತಡವಾಗಿ ಬಂದರೂ ಅಬ್ಬುಸಿಗೆ ಗಾಡಿ ಕಟ್ಟುವ ಮನಸ್ಸೇ ಇಲ್ಲ. ಚಾ ಕುಡಿಯದೆ ಹೊರಡುವ ಕುಳವೇ ಅವನಲ್ಲ. ಎರಡಾಣೆಯ ಪಾವಲಿಯನ್ನು ಅವನ ಕೈಮೇಲೆ ಹಾಕಿದ ಐತಾಳರು "ನೋಡಪ್ಪ.. ಮೊಗೆ ಬೆಟ್ಟಿಗೆ ಮೂರು ಹರಿದಾರಿ ದೂರ. ಬೆಳಗಿನ ಜಾವವೇ ಗಾಡಿ ಕಟ್ಟಿದ್ದರೆ ಇಷ್ಟು ಹೊತ್ತಿಗೆ ಕಟ್ಟಂಗೆರೆಯನ್ನಾದರೂ ದಾಟಬಹುದಿತ್ತು. ಹೋಗು... ಇನ್ನಾದರೂ ಪೇಟೆಗೆ ಹೋಗಿ ಬೇಗ ಬಂದುಬಿಡು" ಎಂದು ಎಚ್ಚರಿಸಿದರು. ಅಂತೂ ಗಾಡಿ ಕೋಟೇಶ್ವರ ಬಿಡುವಾಗ ರಸ್ತೆಯ ಮೇಲೆ ಎಳೆ ಬಿಸಿಲು ಬಿದ್ದಿತ್ತು.

ಎತ್ತುಗಳ ಕೊರಳಿನ ಗೆಜ್ಜೆಯ ಸ್ವರ ಕೇಳಿ ರುಕ್ಮಿಣಿ ಅಡಿಗೆಮನೆಯಿಂದಲೇ ಕತ್ತು ಹೊರಹಾಕಿ ನೋಡುತ್ತಾಳೆ– ಐತಾಳರು ಗಾಡಿ ಇಳಿಯುತ್ತಿದ್ದರು. ಅಲ್ಲಿಂದಲೇ ಕೂಗಿ ಹೇಳಿದಳು "ಐತಾಳರು ಬಂದರು ನೋಡಿ" ಎಂದು. ದೇವರ ಮನೆಯಲ್ಲಿದ್ದ ಸೋಮಯಾಜರು ಧಿಗ್ಗನೆ ಎದ್ದು ಉಟ್ಟಿದ್ದ ಆರು ಮೊಳದ ಸಾಲೀರ ಪಂಚೆಯನ್ನು ಬದಲಿಸಿ ಹಸಿರು ಮುಗುಟಿಯನ್ನು ಸುತ್ತಿಕೊಂಡು "ಐತಾಳರು ಬಂದರೇನು ? ಆಶ್ಚರ್ಯ.. ಹಾಗಿದ್ದರೆ ಎರಡು ಪದಾರ್ಥ ಹೆಚ್ಚಿರಲಿ ರುಕ್ಮಿಣಿ....ಕೋಡೊಲೆಯಲ್ಲಿ ಬೆಂಕಿ ಇದ್ದರೆ ಹೆಸರುಬೇಳೆ ಬೇಯಿಸಲಿಕ್ಕೆ ಹಾಕು" ಎಂದು ಸೋಮಯಾಜರು ಅಂಗಳದಲ್ಲಿ ಸರಸರ ಹೆಜ್ಜೆ ಹಾಕಿದರು. ಐತಾಳರನ್ನು ಕಂಡು ಅವರಿಗೆಷ್ಟು ಸಂತೋಷವಾಗಿತ್ತೋ.... ಮುಖ ತುಂಬ ನಗು ಚೆಲ್ಲಿ.. ಎರಡೂ ಕೈ ಜೋಡಿಸಿ ಹಣೆಯ ಮೇಲಿಟ್ಟು "ಬರಬೇಕು....ದೇವರನ್ನು ಕಂಡಷ್ಟು ಸಂತೋಷವಾಯ್ತು.. ನೆನಪದೆ ನೀವು ಬಂದದ್ದು...." ಎಂದರು. ಐತಾಳರು ಬಿಚ್ಚಿಹೋಗಿದ್ದ ಪಂಚೆ ಕಚ್ಚೆಯನ್ನು ಬಿಗಿಯುತ್ತಾ "ಎಲ್ಲರೂ ಕ್ಷೇಮವೇ ? 'ಗಿರಿಜ ಆರೋಗ್ಯವಾಗಿದ್ದಾಳೆಯೆ?"

ಎಂದು ಮೊದಲು ವಿಚಾರಿಸಿಕೊಂಡರು. "ತಕ್ಕಮಟ್ಟಿಗೆ ನಾವೆಲ್ಲಾ ಆರೋಗ್ಯ ....ಗಿರಿಜಳ ಬಗ್ಗೆ ಏನು ಹೇಳುವುದು ಐತಾಳರೆ. ಅದನ್ನೆ ನೆನಸಿಕೊಂಡು ಅಳುತ್ತಾಳೆ. ಬಿಡಿ.... ಆ ವಿಚಾರ ಮಾತನಾಡುವುದು ತೋಟದಲ್ಲಿ ಅಲ್ಲ. ಮೊದಲು ಸ್ನಾನ ಊಟ" ಎನ್ನುತ್ತಾ ಸೋಮಯಾಜರು ಗಾಡಿಯಲ್ಲಿದ್ದ ಚೀಲವನ್ನು ತಾವೇ ಹಿಡಿದುಕೊಳ್ಳುತ್ತಾ ಗಾಡಿಯವನಲ್ಲಿ "ಗಾಡಿಯನ್ನು ತಂಪಿನಲ್ಲಿ ನಿಲ್ಲಿಸು. ಎತ್ತುಗಳನ್ನು ಬೇಕಿದ್ದರೆ ಕೊಟ್ಟಿಗೆಯಲ್ಲೆ ಕಟ್ಟು. ಅಟ್ಟದ ಮೇಲೆ ಹುಲ್ಲಿದೆ. ಅಕ್ಕಚ್ಚು ಬಾಯರು ಆಮೇಲೆ ತಯಾರಿಸಿದರಾಯ್ತು. ನೀನು ತೋಟದ ಗುಮ್ಮಿಯಲ್ಲಿ ಕೈಕಾಲು ತೊಳೆದು ಬಾ...." ಎಂದು ಐತಾಳರತ್ತ ಮುಖ ಮಾಡಿ "ಬನ್ನಿ ಸ್ವಾಮಿ ....ಎರಡು ವರ್ಷವಾಗಿತ್ತು ನಿಮ್ಮನ್ನು ನೋಡದೆ. ಪದ್ಮಾವತಿಯನ್ನು ಕರೆದುಕೊಂಡುಹೋಗುವುದಕ್ಕೆ ಬಂದವರು, ಮತ್ತೆ ಮೊಗೆಬೆಟ್ಟಿನ ಕಡೆ ಮುಖ ಹಾಕಲಿಲ್ಲ. ನನಗೂ ಆ ಕಡೆ ಬರುವುದಕ್ಕೆ ಸಮಯವಾಗಲಿಲ್ಲ. ದೇವಾಲಯದ ಪೂಜೆ ಎಂದರೆ ಅಷ್ಟೇ ನೋಡಿ. ಒಂದು ದಿನ ಊರು ಬಿಡಬೇಕಾದರೆ ಪೂಜೆಗೆ ಯಾರನ್ನಾದರೂ ಹುಡುಕಬೇಕು...." ಎಂದರು ಸೋಮಯಾಜರು. ಆಗಲೇ ಜಗಲಿಗೆ ಬಂದಿದ್ದರು ಐತಾಳರು. ಎರಡು ನಿಮಿಷದಲ್ಲಿ ರುಕ್ಮಿಣಿ ಬೆಲ್ಲದ ಪಾನಕ ಮಾಡಿ ತಂದಿದ್ದಳು. ಒಂದೇ ಮಾತಿನಲ್ಲಿ ಆಕೆ ಪದ್ಮಾವತಿಯ ಸಾವಿನ ಬಗ್ಗೆ ಕೇಳಿ ತಿಳಿದುಕೊಂಡಳು. ಸೋಮಯಾಜರು ಕೂಡಾ ಆ ತರುವಾಯ ಸೂಕ್ಷ್ಮವಾಗಿ ಆಕೆಯ ಸಾವಿನ ದುರಂತ ಘಟನೆಯನ್ನು ಐತಾಳರಿಂದ ತಿಳಿದುಕೊಂಡರು.

"ನೀವು ಬರುವ ನಿರೀಕ್ಷಣೆಯೇ ಇದ್ದಿರಲಿಲ್ಲ ಐತಾಳರೆ...." ಎಂದರು ಸೋಮಯಾಜರು.

"ನಿರೀಕ್ಷಣೆ ಇರುವುದಾದರೂ ಹೇಗೆ ಸಾಧ್ಯ? ಎರಡು ವಾರದ ಹಿಂದೆ ನನಗೂ ಈ ಪ್ರಯಾಣದ ಬಗ್ಗೆ ಕನಸಿನಲ್ಲಿಯೂ ಯೋಚನೆಯಿರಲಿಲ್ಲ. ಆದರೆ ಪದ್ಮಾವತಿಯನ್ನು ಕಳೆದುಕೊಂಡ ಮೇಲೆ ಒಮ್ಮೆಯಾದರೂ ನಿಮ್ಮನ್ನು ನೋಡದೆ ಇದ್ದರೆ....ಮುಖ್ಯವಾಗಿ ಗಿರಜಳನ್ನು ಕಾಣದಿದ್ದರೆ ನಿಯತ್ತಿಗೆ ವಿರುದ್ಧವಾಗುತ್ತದೆ. ನಡೆಯಬಾರದ್ದು ನಡೆದುಹೋಗಿದೆ. ಆಗಬಾರದ್ದು ಆಗಿಹೋದ ಮೇಲೆ ಅನುಭವಿಸುವವರು ನಾವು. ಇರುವ ಒಬ್ಬಳು ಮಗಳನ್ನು ಬಹುವಾಗಿ ಹಚ್ಚಿಕೊಂಡಿದ್ದಳು ಗಿರಿಜ. ಹಾಗಿರುವಾಗ ನಿಮಗೆ ಒಂದು ಪತ್ರ ಬರೆದು

ಸುದ್ದಿ ಮುಟ್ಟಿಸಿದರೆ ನನ್ನ ಕರ್ತವ್ಯ ಮುಗಿದಂತಾಯ್ತೆ? ಅದಕ್ಕೆ ಬಂದೆ ಸೋಮಯಾಜರೆ ..." ಎಂದರು ಐತಾಳರು.

"ತಾವು ಬಂದದ್ದು ಒಳ್ಳೆಯದೇ ಆಯ್ತು. ನಿಮ್ಮನ್ನು ಕಂಡೇ ಆಕೆ ಸಮಾಧಾನ ಹೊಂದಬೇಕಲ್ಲದೆ ನಾನು ಹೇಳಿ ಹೇಳಿ ಸೋತಿದ್ದೇನೆ. ಮೂರು ದಿನ ಊಟ ಮಾಡದೆ ನೆಲದ ಮೇಲೆ ಮಲಗಿ ಅತ್ತಳು. ಎಷ್ಟು ಹೇಳಿದರೂ ಅನ್ನ ಮುಟ್ಟಲೇ ಇಲ್ಲ. ಆ ಮೇಲೆ ನನಗೆ ಸಿಟ್ಟು ಬಂತು. ಏನೋ ಹೇಳಿದೆ....ನಾಲ್ಕನೆಯ ದಿನ ಒಂದಿಷ್ಟು ಉಂಡಳು. ಎಷ್ಟಾದರೂ ಹೆತ್ತ ಹೊಟ್ಟೆ ಅನ್ನಿ ...ಆದರೆ ಪದ್ಮ ನನ್ನ ಮಗಳು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ವೇದನೆ ನನಗಿಲ್ಲವೆ ? ಮಗಳ ಸಾವಿನ ದುಃಖದಲ್ಲಿ ಅವಳಷ್ಟೇ ನಾನು ನೊಂದಿದ್ದೇನೆ ಐತಾಳರೆ. ಹೊಂದಿಕೊಂಡವರಲ್ಲಿ ಎಲ್ಲರಿಗೂ ಒಂದೊಂದು ರೀತಿಯ ಸಂಬಂಧ ಇದ್ದೇ ಇದೆ ಅಲ್ಲವೆ....ಈಗ ತೋಟದ ಮನೆಯಲ್ಲಿ ಕಾಲಹರಣ ಮಾಡುತ್ತಿದ್ದಾಳೆ. ನಾನು ಹೇಳಿದರೆ ಯಾವುದಕ್ಕೂ ಅಲ್ಲ ಎನ್ನುವುದಿಲ್ಲ. ಆದರೆ ಯಾವುದರಲ್ಲೂ ಆಸಕ್ತಿ ಇದ್ದಂತೆ ಕಂಡುಬರುವುದಿಲ್ಲ."

"ನೋಡಿ....ಈಗ ನಾನು ಬಂದಿರುವ ವಿಚಾರ ಆಕೆಗೆ ತಿಳಿಸುವುದು ಬೇಡ ಅವಳು ಈ ಮನೆಗೆ ಯಾವಾಗ ಬರುತ್ತಾಳೆ?"

"ಅದಕ್ಕೆ ನಿಯಮವಿಲ್ಲ. ಮನಸ್ಸಾದರೆ ದಿನವೆಲ್ಲಾ ಇಲ್ಲೇ ಇರುತ್ತಾಳೆ. ಎರಡು ವಾರದಿಂದ ಮನೆ ಬಿಟ್ಟು ಹೊರ ಬರುವುದೇ ಇಲ್ಲ"

"ಹೌದು ...ನಾನು ಬರೆದ ಪತ್ರ ಯಾವಾಗ ನಿಮ್ಮ ಕೈಸೇರಿತು"

"ಅದೇ ದಿನ ರಾತ್ರಿ....ಆದರೆ ಪತ್ರ ಬರುವ ಮೊದಲೇ ವರ್ತಮಾನ ಬಂದಿತ್ತು. ಯಾರೋ ಮೀನು ಮಾರುವ ಹೆಂಗಸರು ಜಡ್ಡಿನಲ್ಲಿ ಹೇಳಿದರಂತೆ, ಕೋಟೇಶ್ವರದಲ್ಲಿ ಹೀಗಾಯ್ತು ಎಂದು. ಆ ಮೇಲೆ ಪತ್ರ ಕಂಡೇ ನಮಗೆ ನಂಬಿಕೆಯಾದದ್ದು"

"ಎಂತಹ ಕೆಲಸ ಆಗಿಹೋಯ್ತು ಸ್ವಾಮಿ. ನಾನು ಪತ್ರ ಬರೆದು ನಿಮಗೆ ತಿಳಿಸುವಂತಹ ವಿಚಾರವೆ? ಪದ್ಮಾವತಿ ಸತ್ತಳು ಎಂದು ಬರೆಯುವಂತಹ ಘೋರ ಶಿಕ್ಷೆ ದೇವರು ನನಗೆ ಕೊಟ್ಟ ನೋಡಿ. ಕಳೆದ ವರ್ಷ ಗಿರಿಜ ನಮ್ಮಲ್ಲಿಗೆ ಬಂದಿದ್ದಾಗ ನಾನೇ ಹೇಳಿದ್ದೆ....ಪದ್ಮಾವತಿ ತಾಯಿಯಾದರೆ ನಾವು

ಮೂವರೂ ಜೊತೆಯಾಗಿ ಮೊಗೆಬೆಟ್ಟಿಗೆ ಬರುತ್ತೇವೆ ಎಂದು. ವಿಧಿವಿಚಿತ್ರ ಹಾಗಿದೆ. ಆ ಮಾತು ಹೇಳಿ ವರ್ಷ ಕಳೆದಿಲ್ಲ. ಈಗ ಒಂಟಿಯಾಗಿ ಅವಳನ್ನು ನೋಡಬೇಕಾಗಿದೆ."

"ಅದರ ಬಗ್ಗೆ ಏನು ಹೇಳುವುದಕ್ಕೂ ನನಗೆ ತೋಚುವುದಿಲ್ಲ. ಆಕೆಯ ಜಾತಕದಲ್ಲಿ ಈ ವರ್ಷ ಭಾರಿ ಕಂಟಕವಿತ್ತು ಐತಾಳರೆ. ಜಾತಕ ಬರೆದವನು ನಾನೆ. ಅದನ್ನೆ ನಂಬಬೇಕಾಗಿದೆ. ಒಳ್ಳೆಯ ವಿಚಾರವಾಗಿದ್ದರೆ ಮಾತನಾಡ ಬಹುದಿತ್ತು....ಇದು ಹಳೆಯದನ್ನು ನೆನಪುಮಾಡಿಕೊಟ್ಟು ದುಃಖ ಬರಿಸು ವಂತಹ ವಿಚಾರ. ಹಾಗಾಗಿ ಈಗ ಬೇಡ. ಮೊದಲು ನಿಮ್ಮ ಸ್ನಾನ...." ಎಂದರು ಸೋಮಯಾಜರು.

ಸ್ನಾನ, ಊಟ ಉಪಚಾರ ಮುಗಿಯುವಾಗ ಗಂಟೆ ಎರಡಾಗಿತ್ತು. ಗಾಡಿಯವನಿಗೆ ಅಂಗಣದಲ್ಲೆ ಎಲೆ ಹಾಕಿ ಬಡಿಸಿದರು ಸೋಮಯಾಜರು.

ಪಡಸಾಲೆಯಲ್ಲಿ ಐತಾಳರಿಗೆ ಹಾಸಿಗೆ ಬಿಡಿಸಿ....ತಾವು ದೂರದಲ್ಲೆ ಬಣ್ಣದ ಚಾಪೆಯ ಮೇಲೆ ಕುಳಿತರು. ತಾವು ಬಂದ ಉದ್ದೇಶವನ್ನು ವಿವರಿಸಿದ ಐತಾಳರು "ನಾನು ನಾಳೆ ಬೆಳಿಗ್ಗೆ ಹೊರಡಬೇಕು. ಗಾಡಿ ಮದೀನಾ ಬ್ಯಾರಿ ಯವರದ್ದು. ಅವರಿಗೆ ನೂರೆಂಟು ಕಡೆ ಹೋಗಿಬರುವ ಕೆಲಸ ಇರುತ್ತದೆ. ಏನೋ ದಾಕ್ಷಿಣ್ಯಕ್ಕೆ ಕೊಟ್ಟಿದ್ದಾರೆ. ಹಾಗಾಗಿ ನಾಳೆ ಮಧ್ಯಾಹ್ನದ ಒಳಗೆ ನಾನು ಕೋಟೇಶ್ವರದಲ್ಲಿ ಇರಬೇಕು. ಅಂತೂ ನಿಮ್ಮನ್ನು ನೋಡಿದ್ದೊಂದೇ ಸಮಾಧಾನ. ಇನ್ನು ಗಿರಿಜಳನ್ನು ಕಂಡು ಮಾತನಾಡಿಸಬೇಕು. ಬಂಗಾರದ ಒಡವೆ ನಗದು ಹಣ ಅವಳಿಗೆ ಕೊಟ್ಟರೆ ಪದ್ದನ ಋಣ ಸಂದಾಯವಾದಂತೆ. ಮುಂದೆ ಆಕೆಯ ಸದ್ಗತಿ ಕಾರ್ಯ.. ಅದನ್ನು ನಾನು ಮಾಡಿಸುತ್ತೇನೆ. ಸಂಜೆ ಐದು ಗಂಟೆಯ ಮೇಲೆ ಗಿರಿಜಳ ಮನೆಗೆ ಹೋಗುವುದೇ ಒಳ್ಳೆಯದು. ಬಿಸಿಲು ಹೊತ್ತಿನಲ್ಲಿ ನನಗೂ ಅದನ್ನೆಲ್ಲಾ ಹೇಳುವುದೆಂದರೆ ಆಗದ ಮಾತು. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ ಸೋಮಯಾಜರೆ....ಗಾಡಿ ಪ್ರಯಾಣ ಎಂದರೆ ಮೈಕೈ ಮುರಿಸಿಕೊಳ್ಳುವುದೇ ಆಯ್ತು" ಎಂದು ಐತಾಳರು ಹೇಳಿದರು.

"ಪ್ರೇತಸಂಸ್ಕಾರ ಮಾತ್ರ ಆಗಲೇಬೇಕು ನೋಡಿ" ಎಂದರು ಸೋಮ ಯಾಜರು ಕೆಲವು ಹೊತ್ತಿನ ಅನಂತರ.

"ಛೆ! ಅದೇಕೆ ಹಾಗೆ ಹೇಳುತ್ತೀರಿ. ನನ್ನ ಪದ್ದ ಜಕಣಿಯಾಗಿ ಕೇರಿಯಲ್ಲಿದ್ದರೆ ನಾನು ಹೇಗೆ ಸಹಿಸುವುದು?"

"ಅಷ್ಟನ್ನು ಮಾಡಿ ಐತಾಳರೆ...ವರ್ಷ ವರ್ಷ ಪಿಂಡ ಹಾಕುವುದಕ್ಕೆ ಅವಳಿಗೆ ಮಕ್ಕಳಿಲ್ಲ ಅನ್ನಿ. ಈ ಒಂದು ಕಾರ್ಯದಿಂದಲಾದರೂ ಆಕೆಗೆ ಮೋಕ್ಷ ಸಿಗುವಂತಾದರೆ ಸಾಕು...."

"ಆ ಬಗ್ಗೆ ನಾನು ಯೋಚಿಸಿದ್ದೇನೆ....ಎಂದಿಗೂ ಲೋಪ ಮಾಡುವುದಿಲ್ಲ" ಎಂದರು ಐತಾಳರು.

ಂ ಂ ಂ ಂ ಂ

ಸೋಮಯಾಜರು ಬಾಗಿಲು ತಟ್ಟಿದರು.

"ಗಿರಿಜ.. ಐತಾಳರು ಕೋಟೇಶ್ವರದಿಂದ ಬಂದಿದ್ದಾರೆ..." ಎಂದರು ಹೊರಬಾಗಿಲಲ್ಲಿ ನಿಂತಿದ್ದ ಸೋಮಯಾಜರು. ಐತಾಳರಿಗೆ ಏಕೋ ಎದೆ ಒಂದೇ ಸಮನೆ ಹೊಡೆದುಕೊಳ್ಳುತ್ತಿತ್ತು. ಆಕೆಯನ್ನು ಕಾಣುವುದಕ್ಕೆ ಅವರ ಗಂಡೆದೆ ಅಳುಕಿದ್ದರೂ....ಮೆಟ್ಟಿಲ ಮೇಲೆ ನಿಂತು ಬಾಗಿಲು ತೆಗೆಯುವುದನ್ನೇ ಕಾದಿದ್ದರು.

"ಅಯ್ಯಾ...ಯಾರು ಬಂದವರು?" ಎನ್ನುತ್ತಾ ಬಾಗಿಲು ತೆರೆದಳು ಗಿರಿಜ.

"ನಾನು.." ಎಂದು ಐತಾಳರು ಬಲಾತ್ಕಾರದ ನಗುವಿನಿಂದ ಗಿರಿಜಳ ಮುಖ ಕಂಡರು. ಅತ್ತೇ ಬಿಟ್ಟಳು ಗಿರಿಜ.

"ನೋಡು.. ಅವರು ನಿನ್ನನ್ನು ನೋಡುವುದಕ್ಕೆಂದೇ ಬಂದಿದ್ದಾರೆ. ಸುಮ್ಮನೆ ಕಣ್ಣೀರು ಹಾಕಿ ಅವರ ಮನಸ್ಸನ್ನು ನೋಯಿಸಬೇಡ. ನಾನು ಗುಡಿಗೆ ಹೋಗಿಬರುತ್ತೇನೆ..." ಎಂದು ಸೋಮಯಾಜರು ಹೊರಟಾಗ ಐತಾಳರು "ತಾವು ಇದ್ದಿದ್ದರೆ ಚೆನ್ನಾಗಿತ್ತು" ಎಂದರು.

"ಇರುವುದಕ್ಕೆ ಏನೂ ಅಭ್ಯಂತರವಿಲ್ಲ. ಆದರೆ ಪೂಜೆಗೆ ಹೊತ್ತಾಗುತ್ತದೆ. ತಮಗೆ ಅನುಕೂಲವಾದರೆ ಕತ್ತಲಾದ ಮೇಲೆ ದೇವಾಲಯಕ್ಕೆ ಬನ್ನಿ" ಎಂದು ಸೋಮಯಾಜರು ಹೊರಟುಬಿಟ್ಟರು.

ಅನಿರೀಕ್ಷಿತವಾಗಿ ಬಂದ ಐತಾಳರನ್ನು ಕಂಡು ಗಿರಿಜ ಬಿಕ್ಕಿ ಬಿಕ್ಕಿ

ಅಳುವುದಕ್ಕೆ ಆರಂಭಿಸಿದಳು. ಜಗಲಿಯ ಕಂಬದ ಮೈಗೆ ಒರಗಿ ಕುಳಿತ ಐತಾಳರಿಗೆ ಬಾಯಿಂದ ಮಾತೇ ಹೊರಡಲಿಲ್ಲ. ತಮ್ಮ ಕಣ್ಣನ್ನೂ ಒದ್ದೆ ಮಾಡಿಕೊಂಡು ಅಂಗಿಯ ಅಂಚಿನಿಂದ ಒರಸಿಕೊಂಡರು. ಐತಾಳರು ಬಂದರೆಂದು ಚಾಪೆ ಹಾಸುವುದಕ್ಕೂ ನೆನಪಾಗಲಿಲ್ಲ ಗಿರಿಜಳಿಗೆ. ಐದು ನಿಮಿಷ ಇಬ್ಬರೂ ಏನನ್ನೂ ಮಾತನಾಡದೆ ಕಣ್ಣಿನ ಮೇಲೆ ಸೆರಗು ಹಾಕುವ ಕೆಲಸವೇ ಆಯ್ತು. "ದೇವರಿಗೆ ನನ್ನ ಕಣ್ಣೀರು ನೆಲದ ಮೇಲೆ ಬೀಳುವುದು ಬೇಕಿತ್ತೋ ಏನೋ... ಯಾವ ಜನ್ಮದಲ್ಲಿ ಯಾರ ಹೆಣ್ಣು ಮಕ್ಕಳ ಹೊಟ್ಟೆ ಉರಿಸಿದ್ದೆನೋ ....ದೇವರು ನನಗೇಕೆ ಈ ದುಃಖ ಕೊಟ್ಟ ? ನನ್ನ ಮಗಳು ಯಾವ ಪಾಪ ಮಾಡಿದ್ದಳೆಂದು ಈ ಕೆಟ್ಟ ಸಾವು" ಎಂದು ಗೋಳೋ ಅತ್ತಳು ಗಿರಿಜ. ಇದನ್ನೆಲ್ಲಾ ಮೊದಲೇ ಎಣಿಸಿದ್ದರು ಐತಾಳರು. ಪರಿಸ್ಥಿತಿಯನ್ನು ಸುಧಾರಿಸುವುದೇ ಕಷ್ಟವಾಗಿತ್ತು ಅವರಿಗೆ. ಗಿರಿಜಳನ್ನು ಕಂಡಮೇಲೆ ತಾನು ಬಾರದಿದ್ದರೆ ಎಷ್ಟೋ ಒಳ್ಳೆಯದಿತ್ತು ಎಂದುಕೊಂಡರು. ಬೇರೆ ಯಾವ ಮಾತನ್ನೂ ಆಡದ ಗಿರಿಜ ಅಳುವುದನ್ನೆ ಮುಂದುವರಿಸಿದಳು. ಸತ್ತ ಮಗಳನ್ನು ಹೆತ್ತ ತಾಯಿ....ಎದೆಯ ಮೇಲೆ ಸಾವಿನ ವಾರ್ತೆಯ ಕೆಂಡವೇ ಸುರಿದಿದೆ....ಐತಾಳರನ್ನು ಕಂಡದ್ದು ಮತ್ತಷ್ಟು ದುಃಖ ಹೆಚ್ಚುವುದಕ್ಕೆ ಕಾರಣವಾಯ್ತು.

"ಮುಖ್ಯ ನನ್ನ ಪ್ರಾರಬ್ಧ. ಅವಳನ್ನು ಉಳಿಸಿಕೊಳ್ಳುವ ಭಾಗ್ಯ ನನ್ನ ಹಣೆಯಲ್ಲಿ ಬರೆದಿಲ್ಲ. ನನ್ನ ಆಶ್ರಯದಲ್ಲಿ ಹತ್ತು ವರ್ಷ ಬದುಕು ನಡೆಸುವ ಯೋಗ ಅವಳ ಪಾಲಿಗೂ ಇಲ್ಲವಾಯ್ತು. ಜನ್ಮಜನ್ಮದಲ್ಲಿಯೂ ಪದ್ಮಾವತಿಯು ನನ್ನವಳೇ ಆಗಿದ್ದು ಆಕೆಯ ಹಿತ ಬಯಸಿ ಎಷ್ಟೇ ಸುಖ ಕೊಟ್ಟರೂ ಅವಳ ಋಣ ತೀರಿಸುವ ಯೋಗ್ಯತೆ ನನಗಿಲ್ಲ. ಇದರಲ್ಲಿ ನಿನ್ನನ್ನು ವಂಚಿಸಿದ ಮಹಾಪರಾಧ ನನ್ನದು. ನಿನ್ನ ಮಗಳ ಯೋಗಕ್ಷೇಮ ನನಗಿರಲಿ ...ಗೌರವವಾದ ಜೀವನದಲ್ಲಿ ಆಕೆಯ ಬದುಕನ್ನು ಬೆಳಗಿಸುತ್ತೇನೆ ಎಂದು ಕರೆದುಕೊಂಡು ಹೋದವನು ನಾನು. ನನ್ನ ಮಾತನ್ನು ಉಳಿಸಿಕೊಳ್ಳುವುದಕ್ಕೆ ನನ್ನಿಂದಾಗಲಿಲ್ಲ. ಅದನ್ನೆಲ್ಲಾ ಹೇಳುವುದಕ್ಕೆ ನನಗೆ ಕಷ್ಟವಾಗುತ್ತದೆ. ಪದ್ಮಾವತಿ ಸತ್ತಳೆಂದು ನಿಮ್ಮನ್ನೆಲ್ಲಾ ಮರೆಯುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಒಂದು ದೃಷ್ಟಿಯಿಂದ ನಾನು ನಿನ್ನ ಅಳಿಯನಾಗಿಯೇ ಬಂದಿದ್ದೇನೆ. ಆ ಸಂಬಂಧದಲ್ಲಿ ನನಗೆ ಇನ್ನೂ ನಂಬಿಕೆಯಿದೆ. ಆದರೆ ಇದೆಲ್ಲಾ ಶಾಶ್ವತವಲ್ಲ

ಎಂದು ಈಗ ತಿಳಿಯಿತು. ನಡೆದದ್ದು ನಿನಗೆ ಗೊತ್ತಿದೆ. ಆ ಬಗ್ಗೆ ಏನನ್ನೂ ಹೇಳುವುದಿಲ್ಲ. ಹೇಳುವುದಕ್ಕೆ ಏನಿದೆ? ಯಾವ ಮಾತು ಹೇಳಿ ನಿನ್ನನ್ನು ಸಂತೈಸಿದರೂ ಅದು ವ್ಯರ್ಥವೇ ಸರಿ. ಆ ಬ್ರಾಹ್ಮಣ ಆಕೆಯನ್ನು ಕೊಲ್ಲುವ ಮೊದಲು ನನ್ನ ಮನೆಗೆ ಬೆಂಕಿ ಹಾಕಿದ್ದರೆ ಬದುಕಿನ ನಿತ್ಯ ಅನುಭವಿಸುವ ವೇದನೆಯಾದರೂ ತಪ್ಪುತ್ತಿತ್ತು" ಎಂದರು ಐತಾಳರು.

ಬಿಕ್ಕಳಿಸಿದಳು ಗಿರಿಜ.

"ಆ ಪಾಪಿಗೆ ಏನು ಮಾಡಿದ್ದಳು ನನ್ನ ಮಗಳು? ಬ್ರಾಹ್ಮಣನಾಗಿ ನಿತ್ಯ ಆರತಿ ಎತ್ತುವ ಕೈಯಿಂದಲೇ ಕೊಂದನಲ್ಲ ಹೇಗೆ ಮನಸ್ಸು ಬಂತು ಹೇಳಿ? ಮಗಳು ಹಾಸಿಗೆ ಹಿಡಿದು ಜ್ವರ ಬಂದು ಸತ್ತಿದ್ದರೆ ನನಗೆ ಇಷ್ಟು ದುಃಖವಾಗುತ್ತಿರಲಿಲ್ಲ. ಹೀಗೆ ಬೆಂಕಿಹಾಕಿ ಸುಟ್ಟು ಕೊಂದ ನೋವು.. ಅದೇ ನನಗೆ ತಡೆಯುವುದಕ್ಕಾಗುವುದಿಲ್ಲ ಐತಾಳರೆ.." ಎಂದಳು ಬಿಕ್ಕಳಿಸುತ್ತಾ.

"ಅದೆಲ್ಲಾ ದೊಡ್ಡ ಕತೆ ಗಿರಿಜಾ.. ನೀನು ಹೆಣ್ಣಾಗಿ ಹುಟ್ಟಿ ಅನುಭವಿಸಿದವಳೆ.. ಮಾಲೆಯವರ ಜಾತಿಯಲ್ಲಿ ಇದ್ದು ನೀನೂ ಈ ಪ್ರಪಂಚವನ್ನು ಕಂಡಿದ್ದೆ. ದೇವರನ್ನು ಮದುವೆಯಾದವರ ಗೋಳೇ ಇಷ್ಟು. ನೀನು ರುದ್ರ ಹೆಗಡೆಯ ಬಗ್ಗೆ ಹಿಂದೊಮ್ಮೆ ನನಗೆ ಹೇಳಿದ್ದು ನೆನಪಿದೆ. ಕುಂತಿಕೊಪ್ಪದಲ್ಲಿದ್ದಾಗ ನೀನು ಅನುಭವಿಸಿದ ಕಹಿ ಘಟನೆಯನ್ನೆಲ್ಲಾ ಈ ಸಂದರ್ಭದಲ್ಲಿ ನೆನೆಸಿಕೊ. ಪದ್ಮಾವತಿ ಕೂಡಾ ಒಂದು ದಿನ ನರಸನ ಪ್ರಸ್ತಾಪ ಬಂದಾಗ 'ಈ ಊರಲ್ಲಿ ನನ್ನ ಮಾನ ಉಳಿಸಿಕೊಳ್ಳುವುದೇ ಕಷ್ಟವಾಗಿ ಕಾಣುತ್ತದೆ' ಎಂದಿದ್ದಳು. ನೀನು ಕೂಡಾ ದೇವರ ಹೆಂಡತಿಯಾಗಿ ಸೋಮಯಾಜರ ಆಶ್ರಯದಲ್ಲಿ ಅವರ ಪ್ರೀತಿ ವಿಶ್ವಾಸ ಉಳಿಸಿಕೊಂಡು ವೈಮನಸ್ಸನ್ನು ಚೊಕ್ಕಟವಾಗಿಡುವುದಕ್ಕೆ ಎಷ್ಟು ಶ್ರಮಿಸಿದ್ದಿ ಎಂಬುದು ನನಗೆ ಗೊತ್ತು. ನಿನ್ನ ಬಾಳಿನ ದೀಪವನ್ನು ನಂದಿಸಲು ಯತ್ನಿಸಿದವನು ರುದ್ರ ಹೆಗಡೆ. ಆದರೆ ಅದು ಅವನಿಂದಾಗಲಿಲ್ಲ. ಕಾರಣ ನಿನ್ನ ಅದೃಷ್ಟ ಗಟ್ಟಿಯಾಗಿತ್ತು. ಪದ್ಮಾವತಿಯ ಬಾಳ ದೀಪವನ್ನು ಆರಿಸಿದವನು ನರಸ. ಅವನ ಕಾರ್ಯ ಕೈಗೂಡಿತು. ಇಲ್ಲಿ ನಮ್ಮ ಅದೃಷ್ಟವೇ ನೆಟ್ಟಗಿಲ್ಲ. ಪದ್ಮಾವತಿ ನನ್ನವಳಾಗಿರುವುದೇ ನಮ್ಮೂರವರಿಗೆ ಸಹಿಸುವುದಕ್ಕಾಗಲಿಲ್ಲ ನೋಡು. ದೇವರು ಈ ಹೊಟ್ಟೆಕಿಚ್ಚನ್ನು ಏಕೆ ಹುಟ್ಟಿಸಿದನೋ ...ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾಯ್ತು. ಪದ್ಮಾವತಿಯ ಸಹವಾಸ

ನನಗಿದೆಯಲ್ಲಾ ಎಂದು ಕೇರಿಯ ಬ್ರಾಹ್ಮಣರಲ್ಲಿ ಯಾರು ಯಾರು ಹೊಟ್ಟೆ ಉರಿದುಕೊಂಡಿದ್ದಾರೆ ಎಂಬ ವಿಚಾರ ನನಗೆ ಗೊತ್ತು. ಅದನ್ನು ಹೇಳುವುದಕ್ಕೆ ಸಮಯ ಬಂದಿಲ್ಲ. ಮನೆಗೆ ಬೆಂಕಿ ಬಿದ್ದಾಗ ನನ್ನ ಮುಂದೆ ಅಯ್ಯೋ ಎಂದವರೆಲ್ಲಾ ಅಂತರಂಗದಲ್ಲಿ ಅವಳ ಸಾವನ್ನು ಬಯಸಿದವರೆ. ನನ್ನನ್ನು ಎದುರಿನಲ್ಲಿ ಬಾಯಿ ತುಂಬ ಹೊಗಳಿದವರೆಲ್ಲಾ ಪದ್ಮಾವತಿಯ ಸಂಪರ್ಕ ಬೆಳಸಿದ ಮೇಲೆ ಹಿಂಬಿನಿಂದ ಅಪಪ್ರಚಾರ ಮಾಡಿದ್ದಾರೆ. ನನಗೆ ತಿಳಿಯದಂತೆ ಏನೇನೋ ನಡೆಯಿತು. ಆಕೆ ದೇವಾಲಯದಲ್ಲಿದ್ದಾಗ ಗುಡಿಗೆ ಅವಳನ್ನು ನೋಡುವುದಕ್ಕೆ ಹೋದವರೆಲ್ಲಾ ನನಗೆ ಬೇಕಾಗಿದ್ದವರು. ಎಷ್ಟೋ ಪ್ರಯತ್ನಗಳೇ ಹುಟ್ಟಿದುವು. ಪದ್ದ ಹಾಗೆ ಹೀಗೆ ಎಂದು ಹೇಳಿ ಚಾಡಿಯ ಮಾತಿನಿಂದ ಬುದ್ಧಿ ಬದಲಾಯಿಸುವ ಸಾಹಸ ಕೂಡಾ ನಡೆಯಿತು. ಪದ್ದಕ್ಕನ ಮನೆಗೆ ಬೇರೆಯವರು ಹೋಗುತ್ತಾರೆ... ಆಕೆ ವ್ಯಭಿಚಾರಿಣಿ ಎಂದು ಸುಳ್ಳು ಹೇಳಿದವರು ಕೂಡಾ ವೇದಪಾರಾಯಣ ಪ್ರವೀಣರೆ. ಏನಾದರೂ ಅದನ್ನು ನಾನು ನಂಬಲಿಲ್ಲ. ಅವಳ ಪೈಮನಸ್ಸು ನಿರ್ಮಲ ಎಂಬುದನ್ನು ಎಂದೋ ಅರಿತುಕೊಂಡಿದ್ದೆ. ಪದ್ದಕ್ಕನ ಹೃದಯದಲ್ಲಿ ಕುಳಿತು ಎಲ್ಲವನ್ನು ಪರಿಚಯ ಮಾಡಿಕೊಂಡ ನನಗೆ ಜನರ ಚಾಡಿಯ ಮಾತು ಕೇಳಿಸಲೇ ಇಲ್ಲ. ಆದರೆ ಆಕೆ ಕಂಡವರ ಕಣ್ಣಿಗೆ ಮಣ್ಣೆರಚಿದ್ದು ನಿಜ. ನನ್ನ ಪರಿಚಿತರೇ ಎಷ್ಟೋ ಜನ ಹಣ ಬಂಗಾರದ ಆಸೆ ತೋರಿಸಿ ಅವಳನ್ನು ಬಲೆಗೆ ಹಾಕಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಇದನ್ನೆಲ್ಲಾ ನಾನು ಮೊದಲೇ ಯೋಚಿಸಿದ್ದೆ....ಕೋಟೀಶ್ವರದಲ್ಲಿ ಪದ್ಮಾವತಿ ಜೊತೆ ನಾನಿರುವುದು ಸೆರಗಿನಲ್ಲಿ ಕೆಂಡ ಕಟ್ಟಿಕೊಂಡ ಹಾಗೆ ಎಂದು. ಹೇಳುತ್ತಾರಲ್ಲ....ರೂಪವತಿಯಾದ ಒಂದು ಹುಡುಗಿ ಕೇರಿಯಲ್ಲಿ ಇರುವುದು ಅಪಾಯ ಎಂದು. ಕಟ್ಟಿಕೊಂಡ ಮಡದಿಯ ಜೊತೆ ಎಲ್ಲಿಯೂ ಇರಬಹುದು. ಇಟ್ಟುಕೊಂಡವಳ ಜೊತೆ ಇರುವುದೆಂದರೆ ಎಲ್ಲರ ಹತ್ತಿರ ದ್ವೇಷ ಕಟ್ಟಿಕೊಳ್ಳಬೇಕು. ಪದ್ದಕ್ಕನನ್ನು ನನ್ನ ಮನೆಯ ಹೆಬ್ಬಾಗಿಲ ಕೋಣೆಯಲ್ಲೆ ಇರುವಂತೆ ಒತ್ತಾಯಿಸಿದೆ. ಆಕೆಗದು ಸರಿಬೀಳಲಿಲ್ಲ. ಒಂದು ಮನೆಯಲ್ಲಿ ಇಬ್ಬರು ಹೆಂಗಸರು ಬೇಡ....ಎಡ ಸಂಸಾರ ದೂರವಿರುವುದೇ ಚಂದ ಎಂದಳು. ತನ್ನದಾದ ಮನೆಯೇ ಅವಳಿಗೆ ಇಷ್ಟ. ಯಾರು ಯಾರು ಏನೇನು ಮಾಡಿದ್ದರೋ... ಅಂತೂ ಪದ್ಮಾವತಿಯ ಒಳ್ಳೆತನದಲ್ಲಿ ಆಕೆಗೆ ಸುಖ ಸಿಕ್ಕಲಿಲ್ಲ.

ಕೊನೆಗೆ ಒಳ್ಳೆಯ ಮರಣವೂ ದೊರೆಯಲಿಲ್ಲ. ಈ ನರಸ ಬಹಳ ದಿನದಿಂದಲೂ ಆಕೆಯ ಹಿಂದೆ ಬಿದ್ದಿರುವುದು ನನಗೆ ಗೊತ್ತಿದ್ದರೂ ವಿಷಯ ಹೀಗೆ ವಿಕೋಪಕ್ಕೆ ಹೋಗುತ್ತದೆ ಎಂದು ಭಾವಿಸಿರಲಿಲ್ಲ. ನರಸನ ಹಗೆತನ ಹೆಡೆ ಎತ್ತುವಂತಹ ಘಟನೆ ಏನು ನಡೆಯಿತೋ....ಅವನೇ ಕೊಂದ. ವಿಚಾರ ನಮಗೆ ಗೊತ್ತಾದ್ದು ಮನೆ ಸುಟ್ಟು ....ಆಕೆಯ ದೇಹ ಉರಿದುಹೋದ ತರುವಾಯ. ಪೂಜೆಗೆ ಕುಳಿತಿದ್ದ ನರಸನ ಕೈಯಿಂದ ಆರತಿ ಬಿತ್ತು ಗಿರಿಜಾ....ಮತ್ತೆ ಅವನ ಸ್ಥಿತಿಯೇ ಕುಂಬಾ ಕೆಟ್ಟಿತು. ಎರಡು ದಿನ ಮಂಕು ಬಡಿದವನಂತೆ ಇದ್ದ. ಆ ಮೇಲೆ ...' ಇದ್ದಕ್ಕಿದ್ದಂತೆ ಐತಾಳರ ಕಣ್ಣಿಂದ ನೀರಿಳಿಯುತೊಡಗಿತು. ಹೇಳುವುದಕ್ಕೆ ಅವರಿಗೂ ಸಂಕಟ.

"ಆಮೇಲೆ ನನ್ನ ಪದ್ದ ಪ್ರೇತವಾಗಿ ಬಂದಳು ನೋಡು. ನರಸನ ಸ್ಥಿತಿ ಹಾಗೆ ಆಗಿರದಿರುತ್ತಿದ್ದರೆ ಪದ್ದಕ್ಕನ ಸಾವಿನ ಕಾರಣವೂ ನನಗೆ ತಿಳಿಯುತ್ತಲೇ ಇರಲಿಲ್ಲ. ಎಲ್ಲವೂ ಈಶ್ವರ ಸಂಕಲ್ಪ."

"ನನ್ನ ಮಗಳು ಜಕಣಿಯಾದಳೆ....? ಅಯ್ಯೋ ದೇವರೇ' ಎಂದು ಗಿರಿಜ ಮಂಡಿಯ ಮೇಲೆ ತಲೆಯಿಟ್ಟು ಮತ್ತೆ ಬಿಕ್ಕಿದಳು. ಐತಾಳರ ಯಾವ ಮಾತೂ ಆಕೆಯನ್ನು ಸಮಾಧಾನಿಸಲಿಲ್ಲ. ಎಷ್ಟೇ ಅಂಗಲಾಚಿದರೂ 'ಪದ್ಮಾವತಿಯು ಪ್ರೇತವಾದಳಲ್ಲ. ನಮ್ಮ ವಂಶದಲ್ಲಿ ಯಾರಿಗೂ ಈ ಗತಿ ಬಂದಿಲ್ಲವಲ್ಲ.."ಎಂದು ಗೋಳಿಟ್ಟಳು.

"ನೋಡು .. ಒಂದು ವಿಚಾರ ನಾನು ಹೇಳುತ್ತೇನೆ. ನಾನೀಗ ಕೋಟೇಶ್ವರದಿಂದ ಬಂದಿರುವುದು ನಿನ್ನ ಕಣ್ಣಿಂದ ನೀರಿಳಿಸುವುದಕ್ಕಲ್ಲ. ಎಂತಹ ಮಹತ್ವದ ಕೆಲಸವಿದ್ದರೂ ಅದನ್ನೆಲ್ಲಾ ಬಿಟ್ಟು ಬಂದಿದ್ದೇನೆ. ದೇವಾಲಯದಲ್ಲಿ ಯಾವುದೂ ವ್ಯವಸ್ಥೆಯಿಲ್ಲ. ಮನೆಕಡೆ ಬೇರೆ ಜನವೇ ಇಲ್ಲ. ಆದರೂ ನಿನ್ನನ್ನು ನೋಡುವ ನನ್ನ ಕರ್ತವ್ಯವನ್ನು ಪೂರೈಸಿದ್ದೇನೆ. ನಿನ್ನ ಮನಸ್ಸಿಗೆ ನೋವಾಗಿದೆ ಎಂದು ನನಗೆ ಗೊತ್ತು. ನಿನಗಿಂತ ಹೆಚ್ಚು ನನಗಾಗಿದೆ. ನೀನು ಆಕೆಯನ್ನು ಹೆತ್ತವಳು. ಆದರೆ ನಾನು ಪ್ರೀತಿಸಿದವನು. ನಿನ್ನಷ್ಟೆ ನನಗೂ ಆಕೆಯ ರಕ್ತ ಸಂಬಂಧವಿದೆ. ತಾಯಿ ನೀನು ಪರ ಊರಿನಲ್ಲಿರುವಾಗ ಮಗಳು ಸತ್ತ ಸುದ್ದಿಯನ್ನು ನಾನಾದರೂ ಹೇಗೆ ಮುಚ್ಚಿಡಲಿ? ಅಂದೇ ನಾನು ಹೊರಟುಬರುವುದು ಆಗದ ಮಾತು. ನೀನಾದರೂ ವರ್ತಮಾನ ತಿಳಿದು

ಆಕಡೆ ಬರುತ್ತಿ ಎಂದಿದ್ದೆ. ಸೋಮಯಾಜರು ಬರುವ ನಿರೀಕ್ಷಣೆ ನನಗಿತ್ತು. ಆದರೆ ಯಾರೂ ಬರಲಿಲ್ಲ. ಮೊಗೆಬೆಟ್ಟಿನ ಸುದ್ದಿಯೇ ಇಲ್ಲವಾಯ್ತು. ಹಾಗಿರವಾಗ ನಾನೂ ದೊಡ್ಡಮನಸಸ್ಸ ಮಾಡಿದೆ. ಅಲ್ಲದೆ ಪದ್ಮಾವತಿಯ ಋಣ ತೀರಿಸುವ ಇನ್ನೊಂದು ಕೆಲಸ ಬಾಕಿ ಉಳಿದಿದೆ. ಅದನ್ನು ನಿನಗೆ ಒಪ್ಪಿಸಿಬಿಟ್ಟರೆ ಮುಂದೆ ನನಗೆ ಯಾವ ಚಿಂತೆಯೂ ಇಲ್ಲ. ಅವಳ ಬಂಗಾರದ ಒಡವೆ ಕೆಲವು ನನ್ನ ಬಳಿಯಿದೆ. ಸಮಯಕ್ಕಾಗುತ್ತದೆ ಎಂದು ಒಂದಿಷ್ಟು ನಗದು ಹಣ ಬೇರೆ ಕೊಟ್ಟಿದ್ಧಳು. ಅದು ನಿನಗೆಸಲ್ಲಬೇಕಾದ್ದು. ಈ ಪೆಟ್ಟಿಗೆ ಯಲ್ಲಿದೆ ನೋಡು ..." ಎನ್ನುತ್ತಾ ಐತಾಳರು ಪೆಟ್ಟಿಗೆಯನ್ನು ಚೀಲದಿಂದ ಹೊರತೆಗೆದು ಗಿರಿಜಳ ಮುಂದಿಟ್ಟರು.

"ಅದನ್ನು ಕೊಡುವುದಕ್ಕೆ ಇಲ್ಲಿಗೆ ಬರಬೇಕಾಗಿತ್ತೆ?"

"ಮತ್ತೆ ನಾನು ಹೇಗೆ ಅದನ್ನು ಇಟ್ಟುಕೊಳ್ಳುವುದು."

"ನಾನೇನು ಬಂಗಾರ ಹಾಕಿದ್ದೆ ಸ್ವಾಮಿ...."

"ಯಾರೇ ಕೊಟ್ಟಿರಲಿ....ಕೊಟ್ಟಮೇಲೆ ಅದು ಅವಳ ಸೊತ್ತು. ಸತ್ತ ಮೇಲೆ ಅದು ಅವಳ ಹತ್ತಿರದವರಿಗೆ ಸೇರತಕ್ಕದ್ದು."

"ನನ್ನ ಮಗಳನ್ನೆ ಕಳೆದುಕೊಂಡ ಮೇಲೆ ಇದೆಲ್ಲಾ ನನಗೇಕೆ....?"

"ಆ ಮಾತಿಗೆ ನನ್ನಲ್ಲಿ ಉತ್ತರವೇ ಇಲ್ಲ ..."

"ಎಷ್ಟು ದೊಡ್ಡಮನಸ್ಸು ನಿಮ್ಮದು....ನಿಮ್ಮ ಜೊತೆ ಹತ್ತು ವರ್ಷ ಬದುಕಿದ್ದು ಸುಖಪಡುವ ಯೋಗ ಅವಳ ಹಣೆಯಲ್ಲಿ ದೇವರು ಬರೆಯಲಿಲ್ಲ."

"ಇನ್ನು ಆ ಮಾತು ನಿನ್ನ ಬಾಯಿಂದಲೇ ಬರಬಾರದು'"

"ಹೇಗೆ ಮರೆಯುವುದು ಹೇಳಿ"

"ಇನ್ನು ಚಿಂತಿಸಿದರೂ ಏನು ಪ್ರಯೋಜನ...."

"ಸತ್ತ ಮಗಳಿಗೆ ಇನ್ನೂ ಸದ್ಗತಿ ಸಿಗಲಿಲ್ಲವಲ್ಲ"

"ಅದಕ್ಕೆ ತಕ್ಕ ವ್ಯವಸ್ಥೆ ನಾನು ಮಾಡುತ್ತೇನೆ ಗಿರಿಜಾ. ನಿಶ್ಚಯ ವಾಗಿಯೂ ಪದ್ಮಾವತಿಗೆ ಮೋಕ್ಷ ಕಾಣಿಸುತ್ತೇನೆ. ಎಷ್ಟೇ ಹಣ ವ್ಯಯ ವಾದರೂ ಚಿಂತೆಯಿಲ್ಲ–ಹತ್ತು ಮಂದಿ ಬ್ರಾಹ್ಮಣರಿಗೆ ದಾನ ದಕ್ಷಿಣೆ ಕೊಟ್ಟು ಗೋಕರ್ಣ ಕ್ಷೇತ್ರದಲ್ಲಿ ಪಿಂಡ ಹಾಕಿಸುತ್ತೇನೆ."

"ಆ ಕೆಲಸ ಇಲ್ಲೆ ಮಾಡಿದರೆ ಹೇಗೆ?"

"ಅದು ನನ್ನ ಪಾಲಿಗೆ ಸೇರಿದ್ದು"

"ಆ ಬ್ರಾಹ್ಮಣನ ಸ್ಥಿತಿ ಹೇಗಿವೆ ಸ್ವಾಮಿ....ಜಕಣಿ ಸ್ತ್ರೈಪೇಳಿ ಬಂದದ್ದನ್ನು ನೀವು ನೋಡಿದ್ದುಂಟೆ?"

"ಅಯ್ಯೋ....ಅದನ್ನೆಲ್ಲಾ ನಾನು ನೋಡುವುದೇ ಇಲ್ಲ ಗಿರಿಜಾ.... ಮಂಜರು ಒಂದು ದಿನ ತಮ್ಮ ಅನುಭವ ಹೇಳಿದರು. ಅಷ್ಟಕ್ಕೆ ನನಗೆ ಸಾಕಾಗಿ ಹೋಯ್ತು. ಇನ್ನು ನನ್ನ ಕಣ್ಣಿಂದ ನೋಡಿದರೆ ಮುಗಿದೇ ಹೋಯ್ತು...."

"ನನ್ನ ಮಗಳಿಗೆ ಎಂತಹ ದುರ್ದೆಶೆ ಬಂತು ಅಯ್ಯ...."

"ಛೇ! ಇನ್ನು ಆ ವಿಚಾರ ಎತ್ತಲೇ ಬೇಡ. ಆದದ್ದು ಆಗಿಹೋಯ್ತು."

"ಅದನ್ನು ಮರೆಯುವುದು ಅಷ್ಟು ಸುಲಭವೆ?"

"ಮತ್ತೆ ನಿತ್ಯ ಅದನ್ನೆ ನೆನಸಿಕೊಂಡು ಕಣ್ಣೀರು ಹಾಕುವುದರಲ್ಲಿ ಯಾವ ಸಾರ್ಥಕವಿದೆ?"

"ನನ್ನದು ಹೆತ್ತ ಕರಳು....ಎಷ್ಟೇ ಸಂತೈಸಿಕೊಂಡರೂ ದುಃಖ ತಡೆಯುವುದಿಲ್ಲ ಐತಾಳರೆ...."

"ನೋಡು....ಮಿಂಚಿಹೋದ ಕಾರ್ಯ. ಇನ್ನು ಎಷ್ಟೇ ಚಿಂತಿಸಿದರೂ ಪದ್ಮಾವತಿಯನ್ನು ಮರಳಿ ಪಡೆಯುವುದು ಆಗದ ಮಾತು. ಸುಮ್ಮನೆ ಕಣ್ಣಿಂದ ನೀರಿಳಿಸಿಕೊಂಡೇ ಯಾವ ಕಾರ್ಯ ಸಾಧಿಸಬೇಕಾಗಿದೆ. ಸೋಮಯಾಜರೂ ಅದನ್ನೆ ಹೇಳಿದರು. ನಾನು ಬಂದವನೆ ನಿನ್ನ ಬಗ್ಗೆ ವಿಚಾರಿಸಿದೆ. ನೀನೇ ನಾಲ್ಕು ಸಮಧಾನದ ಮಾತು ಹೇಳಿ ಅಂದರು. ಪಾಪ-ಅವರು ದೇವರಂತಹ ಮನುಷ್ಯ. ನಿನ್ನ ಮೇಲೆ ಇಟ್ಟಿರುವ ಅಭಿಮಾನ ವಿಶ್ವಾಸ ತುಂಬಾ ವಿಶೇಷವಾದ್ದು. ಅವರ ಹೆಂಡತಿ ಕೂಡಾ ಪದ್ಮಾವತಿಯ ಸಾವಿನ ಬಗ್ಗೆ ಮನಸ ನೊಂದುಕೊಂಡಿದ್ದಾಳೆ. ಇನ್ನು ನಾನು ಹೇಳುವಂತಹ ಯಾವ ಮಾತೂ ಉಳಿದಿಲ್ಲ ಗಿರಿಜ. ಮುಂದೆ ಹೀಗೆ ನೀನು ಅಳುವುದಾದರೆ ನಾನು ದೇವರ ಹೆಸರು ಹೇಳಿ ಆಣೆ ಮಾಡಬೇಕಾಗುತ್ತದೆ. ಹೇಳಿದ್ದೇನೆ....ಈ ವರ್ಷದ ಜಾತ್ರೆಗೆ ಖಂಡಿತಾ ನಿನ್ನನ್ನು ಕರೆಯಿಸುತ್ತೇನೆ. ನಿನ್ನನ್ನು ಮಾತ್ರವಲ್ಲ, ನಿನ್ನ ಜೊತೆಯಲ್ಲಿ ಸೋಮಯಾಜರೂ ಬರುತ್ತಾರೆ. ಎರಡು ದಿನ ಮುಂದಾಗಿ ಗಾಡಿ ಕಳುಹಿಸುತ್ತೇನೆ....ಇಲ್ಲಿಗೆ ನಿನ್ನ ಸಂಬಂಧ ಕಡಿದುಕೊಳ್ಳುವುದೇ ಇಲ್ಲ. ಹಾಗೆ

ನಾನು ನಿನ್ನನ್ನು ಮರೆತರೆ ಪದ್ಮನ ಆತ್ಮಕ್ಕೆ ಶಾಂತಿಯೇ ಇಲ್ಲ" ಎಂದರು ಐತಾಳರು.

ಮತ್ತೆ ಗಿರಿಜಳ ಕಣ್ಣು ಒದ್ದೆಯಾಗಿತ್ತು. ಸೆರಗಿನಿಂದ ಒರಸಿಕೊಳ್ಳುತ್ತಾ,

"ಪದ್ಮ ಸತ್ತರೂ ನಿಮ್ಮ ಪ್ರೀತಿ ವಿಶ್ವಾಸಕ್ಕೆ ದಕ್ಕೆ ಬರಲಿಲ್ಲ. ಅದನ್ನಾದರೂ ದೇವರು ಶಾಶ್ವತವಾಗಿರುವಂತೆ ಮಾಡಲಿ" ಎಂದಳು.

"ಅನುಮಾನವೇ ಬೇಡ....ನಾಳೆ ಬೆಳಿಗ್ಗೆ ನಾನು ಹೊರಡುತ್ತೇನೆ. ರಾತ್ರಿ ನೀನೇ ಸೋಮಯಾಜರ ಮನೆ ಕಡೆ ಬಾ .. ನಾನೀಗ ಗುಡಿಗೆ ಹೋಗಿ ದೇವರ ದರ್ಶನ ಮಾಡಿಕೊಂಡು ಸೋಮಯಾಜರ ಜೊತೆ ಹೋಗುತ್ತೇನೆ."

"ಒಂದು ಲೋಟ ಹಾಲನ್ನಾದರೂ ಕೊಡುತ್ತೇನೆ"

"ಸರಿ ಹೋಯ್ತು....ರುಕ್ಮಿಣಿ ಗಂಟಲು ಕಟ್ಟುವವರೆಗೆ ಹೆಸರು ಗಂಜಿ ಕೊಟ್ಟಿದ್ದಳು. ಕುಳಿತುಕೊಳ್ಳುವುದಕ್ಕೆ ಸಮಯವೂ ಇಲ್ಲ. ಕತ್ತಲಾದರೆ ಹಕ್ಕಲ ದಾರಿಯಲ್ಲಿ ನಡೆದ ಅಭ್ಯಾಸವಿಲ್ಲ ..ಬರುತ್ತೇನೆ .." ಎಂದು ಐತಾಳರು ಹೊರನಡೆದರು. ಏನೋ ಹೇಳುವುದಕ್ಕೆ ಬಾಯಿ ತೆರೆದಿದ್ದಳು ಗಿರಿಜ. ಆದರೆ ಬಂಗಾರದ ಒಡವೆಯಿರುವ ಪೆಟ್ಟಿಗೆಯನ್ನು ಕಂಡಾಗ ಮತ್ತೆ ದುಃಖ ಉಮ್ಮಳಿಸಿ ಬಂತು. ಮಂಡಿಯ ಮೇಲೆ ತಲೆಯಿಟ್ಟು ಕಣ್ಣು ಮುಚ್ಚಿಕೊಂಡಳು. ಮನ ಮಂದಿರದಲ್ಲಿ ಒಂದೊಂದಾಗಿ ಹಳೆಯ ನೆನಪುಗಳು ಮೂಡತೊಡಗಿತು. ಇದ್ದಕ್ಕಿದ್ದಂತೆ ಗಿರಿಜಳ ಮನಸ್ಸು-ತಾನು ಹುಟ್ಟಿದ ಊರಾದ ಶುಂಠಿಕೊಪ್ಪದ ಬಯಲನ್ನು ದಾಟಿ ಶೇಷಗಿರಿಯಪ್ಪನ ಮನೆಗೆ ಹೋಗಿತ್ತು. ಆಮೇಲೆ.... ಆಮೇಲೆ....

೮

ಎಡತೊರೆಯ ಕಲ್ಲುಸಂಕವನ್ನು ದಾಟಿ, ಬರೆಯ ತಪ್ಪಲಿನ ಕಿರುದಾರಿಯಲ್ಲಿ ಐವತ್ತು ಮಾರು ದೂರ ನಡೆದರೆ ಮೊಗೆಬೆಟ್ಟಿನ ಶಿವದೇವಾಲಯದ ಗೋಪುರ ಕಾಣಿಸುತ್ತದೆ. ಆ ಸುತ್ತಿನ ನಿಲಸುಕಂಬದ ಸರಿ ಉತ್ತರಕ್ಕೆ ಮೊಗೆಬೆಟ್ಟಿನ ವಿಶಾಲ ಜಡ್ಡಿನ ಪ್ರದೇಶ. ಸಾಗುವಳಿಯ ಭೂಮಿ ಇರುವುದೆಲ್ಲಾ ಗುಡಿಯ ಹಿಂಭಾಗದಲ್ಲಿ. ನಿಲಸುಕಂಬದಿಂದ ಗುಡಿಯತನಕ ಕಲ್ಲುಮುಳ್ಳಿನ ಕಾಲು ದಾರಿ ಒಂದಿದೆ. ಆ ದಾರಿ ಗುಡಿಯ ಕರಿಕಲ್ಲಿನ ಪ್ರಾಗಾರದ ಬಾಗಿಲವರೆಗೆ ಒಂದೇ ಸಮನಾಗಿದೆ. ಶಿವಗುಡಿಯ ಬಲಭಾಗದಲ್ಲಿ ಅರ್ಚಕ ಸೋಮಯಾಜರ ಮನೆ. ಹುಲ್ಲಿನ ಚಾವಣಿ. ಅಡಿಕೆ ದಬ್ಬೆಯ ತಳಿಗಳು. ತೆಂಗಿನ ಸೋಗೆಯ ಚಪ್ಪರ. ಅವರ ಮನೆಯ ಹಿಂದೆ ತೆಂಗಿನ ತೋಟ. ತೋಟದ ಕೆರೆಯ ದಂಡೆಯಲ್ಲಿ ಗುಡಿಯ ಚಾಮರ ಬೀಸುವ....ದೇವರಿಗೆ ಬೆಳಗುವ ಆರತಿಗೆ ಬತ್ತಿ ಹೊಸೆಯುವ ಗಿರಿಜಮ್ಮನ ಮನೆ. ಆಕೆ ಸೋಮಯಾಜರ ಉಪಪತ್ನಿಯಾದ್ದರಿಂದಲೇ ತೋಟದ ಮನೆಯನ್ನು ಅವಳಿಗಾಗಿ ಕೊಟ್ಟಿದ್ದರು ಅವರು. ಚಿಕ್ಕದಾದ ಮನೆ.... ಮನೆಯಲ್ಲಿರುವುದು ಗಿರಿಜಮ್ಮ ಮತ್ತು ಮಗಳು ಪದ್ಮಾವತಿ. ದೇವಾಲಯದ ಬಾಪ್ತಿನಿಂದ ಬರುವ ಸಂಬಳ ತಿಂಗಳಿಗೆ ಎರಡು ರೂಪಾಯಿ. ವರ್ಷಕ್ಕೆ ಆರು ಮುಡಿ ಅಕ್ಕಿ ಸೋಮಯಾಜರ ತಿರಿಯಿಂದ ಅವಳ ಮನೆಗೆ ಸಾಗುತ್ತದೆ. ತಮ್ಮ ಹೆಂಡತಿಗೆ ದೀಪಾವಳಿಯ ಹೊತ್ತಿಗೆ ಸೀರೆ ತರುವಾಗ ಗಿರಿಜಳಿಗೂ ಎರಡನ್ನು ತರುವ ಕ್ರಮ ಸೋಮಯಾಜರದ್ದು. ಕೊನೆಗೆ ಸೋಮಯಾಜರ ಹೆಂಡತಿಯ ಹಳೆ ಸೀರೆಯಾದರೂ ಸರಿಯೆ....ಆಡಂಬರ ಜೀವನ ಗಿರಿಜಮ್ಮನಿಗೆ ಆಗದು.

ನಾನು ನೊಗೆಬೆಟ್ಟು ದೊಡ್ಡ ಗ್ರಾಮವಲ್ಲ. ಬರಿಯ ತಪ್ಪಲಿನ ಜಾಗ. ಉತ್ತರ ಐದಲ್ಲಿ ಎತ್ತರಕ್ಕೆ ಹರಡಿದ ಬರಿಯ ಕಾಡುಗಳು. ಅದರ ಎಡದಲ್ಲಿ ಒಂದು ಬೋಳುಗುಡ್ಡ. ಗುಡ್ಡ ತುಂಬ ಬೆಳೆದ ಕುರುಚಲು ಹುಲ್ಲು. ಗುಡ್ಡದ ಹಿಂಬಾಗದಲ್ಲೆ ಬಿದಿರು ಹಿಂಡಲು. ಗುಡಿಯ ಹಿಂದಿನ ಕಾನನ್ನು ದಾಟಿದರೆ ಬೇಸಾಯಕ್ಕೆ ಯೋಗ್ಯವಾದ ಸಾಗು ಭೂಮಿ. ಗುಡಿಯ ಸುತ್ತಲೂ ಜೀರ್ಣವಾಗಿ ಹೋದ ಪ್ರಾಗಾರ. ಒಳ ಪೌಳಿಗಳೂ ಹಾಳಾಗಿವೆ. ದೇವರ ಗರ್ಭಗುಡಿಯ ಮುಂದಿನ ಧ್ವಜಮರ ಕೂಡಾ ಒಡೆದು ಸಿಂಬಾಗಿ ಹೋಗಿವೆ. ಬಸವನ ವಿಗ್ರಹದಲ್ಲಿ ಮೂತಿಯ ಒಂದು ಬದಿಯೇ ಕೆತ್ತಿಹೋಗಿವೆ. ಕಂಚಿನ ದ್ವಾರಪಾಲಕನನ್ನು ನೋಡಿದರೆ ದೇವಾಲಯ ತೀರಾ ಪುರಾತನವಲ್ಲ ಎನ್ನುವ ಭರವಸೆ ಕಾಣುತ್ತದೆ. ಕಾರಣ ಅಷ್ಟೊಂದು ಲಕ್ಷಣವಾದ ಆ ಆಕರ್ಷಕ ಕಂಚಿನ ವಿಗ್ರಹ ನೊಗೆಬೆಟ್ಟಿನಂತಹ ಗ್ರಾಮಕ್ಕೆ ಬಂದ ಬಗೆಯಾದರೂ ಹೇಗೆ? ಎಂಬ ಸಂದೇಹ ಬರುತ್ತದೆ. ಆದರೆ ಸೋಮಯಾಜರಿಗೆ ಒಂದು ಸಮಾಧಾನವಿತ್ತು. ಗುಡಿಯ ಮುಂದೆ ಹಾಸಿದ್ದ ಕಲ್ಲು ಚಪ್ಪಡಿಯಲ್ಲಿ ಬರೆದ ಕನ್ನಡ ಅಕ್ಷರಕ್ಕೆ ಸುಣ್ಣದ ಹುಡಿ ಒರಸಿ ಓದಿದವರು ಅವರು. ಅದರ ಪ್ರಕಾರ ಆ ದೇವಾಲಯವನ್ನು ಕಟ್ಟಿಸಿದವನು ಮಲ್ಲಿಕಾರ್ಜುನಸ್ವಾಮಿ ಎಂಬುದು ಮತ್ತೆ ತಿಳಿಯಿತು. ಅದು ಶತಮಾನಗಳ ಹಿಂದೆ ಲಿಂಗಾಯತರ ಪಾಳಯವಾಗಿತ್ತು ಎಂದು ಸದ್ಯ ಬದುಕಿರುವ ಕೆಳಹಿತ್ತಲಿನ ಗಾಡಿ ಬಸವ ಹೇಳುತ್ತಾನೆ. ತಾನು ಮಲ್ಲಿಕಾರ್ಜುನ ಅರಸರ ವಂಶದವನು ಎಂದು ಇಂದಿಗೂ ಹೇಳಿಕೊಂಡೇ ಬಂದಿದ್ದಾನೆ. ಗುಡ್ಡದ ತಪ್ಪಲಿನ ಕೆಲವು ಶಿಲೆಯ ಚೌಕಗಳನ್ನು ತೋರಿಸಿ "ಇದು ಅರಮನೆ ಇದ್ದ ತಾವು" ಎಂದು ನಿದರ್ಶನ ಕೊಡುತ್ತಾನೆ. "ಧ್ವಜಮರಕ್ಕೆ ಬಂಗಾರದ ಕವಚವಿತ್ತು.... ಗೋಪುರದ ಕಲಶದಲ್ಲಿ ವಜ್ರದ ಹರಳಿತ್ತು" ಎಂದು ಬಸವ ತನ್ನ ವಂಶಜರ ವೈಭವ ಹೇಳಿಕೊಳ್ಳುತ್ತಾನೆ. ಆದರೆ ಧ್ವಜಮರದ ಸ್ಥಿತಿ ನೋಡಿದರೆ ಇನ್ನೊಂದು ಮಳೆಗಾಲ ಕಳೆಯುವುದು ಕಷ್ಟವಾಗಿತ್ತು. ಸೋಮಯಾಜರು ಎರಡು ಕಿರಾಲು ಬೋಗಿಯ ಸೋಟೆಯನ್ನು ಧ್ವಜಮರದ ಇಬ್ಬದಿಯಲ್ಲಿ ಆನಿಸಿ ನಿಲ್ಲಿಸಿದ್ದರಿಂದ ಅದು ಬೀಳದೆ ಹಾಗೆ ನಿಂತಿದೆ.

ಗಿರಿಜಮ್ಮ ಆ ಊರಿಗೆ ಬಂದದ್ದು ಶಿವನಿಗೆ ಹೂಮಾಲೆ ಕಟ್ಟುವುದಕ್ಕೆ ... ಮತ್ತು ಪೂಜೆಯ ಕಾಲದಲ್ಲಿ ಚಾಮರ ಬೀಸುವುದಕ್ಕೆ. ಆದರೆ ನಿತ್ಯ ಆ ಮಾಲೆ

ಬೀಳುವುದು ಸೋಮಯಾಜರ ಕುತ್ತಿಗೆಗೆ ಎಂದು ಭಕ್ತರು ಗುಸುಗುಸು ಆಡಿಕೊಳ್ಳುತ್ತಾರೆ. ಚಾಮರ ಬೀಸುವುದರಿಂದ ಗಾಳಿ ಸೋಂಕಿದ್ದು ಸೋಮಯಾಜರ ದುಂಡು ಮೈಗೆ. ಗಿರಿಜ ಸೆರಗನ್ನು ಸೊಂಟಕ್ಕೆ ಬಿಗಿದು .. ಬಳೆಗಳನ್ನು ಮೇಲೆ ಸರಿಸಿ ಚಾಮರ ಬೀಸುವಾಗ ಅವನ್ನು ಕಂಡು ಹೊಟ್ಟೆ ಉರಿದುಕೊಂಡವನು ರುದ್ರ ಹೆಗಡೆ. ಅವನೂ ಮೊಗೆಬಿಟ್ಟಿನ ಮಕ್ಕಿ ಮನೆಯವನು. ಎಷ್ಟೇ ಹುರಿ ಮೀಸೆ ತಿರುವಿದರೂ ಗಿರಿಜ ಸೆಟ್ಟಿಯ ಗೋಜಿಗೆ ಹೋಗಲೇ ಇಲ್ಲ. “ನನ್ನ ಕೊರಳಲ್ಲಿರುವ ಮಾಂಗಲ್ಯ ಕಟ್ಟಿದ್ದು ಶುಂಠಿಕೊಪ್ಪದ ಶಿವದೇವರು ... ಈ ದೇಹ ಇನ್ನು ಬ್ರಾಹ್ಮಣರಿಗೆ ಮಾತ್ರ ದಕ್ಕುತ್ತದೆ” ಎಂದಿದ್ದಳಂತೆ. ಸೆಟ್ಟಿಯ ತಲೆಗೆ ಒಂದೂ ತಿಳಿಯಲಿಲ್ಲ. ಶಿವದೇವರು ಮಾಂಗಲ್ಯ ಸುತ್ತುವುದು ಎಂದರೇನು? ಈ ಬ್ರಾಹ್ಮಣರ ಸೂಳೆಯಾಗಿರುವುದು ಎಂದರೇನು? ಎಂದು ಎಷ್ಟೋ ಬಾರಿ ಪೇಚಿಗೆ ಸಿಲುಕಿಕೊಂಡರೂ ಗಿರಿಜಮ್ಮನ ಸಹವಾಸ ಮಾತ್ರ ದೊರೆಯಲಿಲ್ಲ.

ಗಿರಿಜ ಮೊಗೆಬಿಟ್ಟಿನವಳಲ್ಲ. ಆಕೆ ಹುಟ್ಟಿದ್ದು ಶುಂಠಿಕೊಪ್ಪದಲ್ಲಿ. ಶುಂಠಿಕೊಪ್ಪದ ಶೇಷಗಿರಿಯಪ್ಪನ ಆಶ್ರಯದಲ್ಲಿ ಇದ್ದವಳು ಗಿರಿಜಳ ತಾಯಿ. ಆಕೆಯ ಹೆಸರು ವನಜ. ಆಕೆ ಕೂಡಾ ಮಾಲೆಯವರ ಜಾತಿಗೆ ಸೇರಿದವಳು. ಸಂಪ್ರದಾಯದಂತೆ ಅವಳ ವಿವಾಹ ನಡೆದದ್ದು ಶಿವಗುಡಿಯಲ್ಲಿ. ತಾನು ದೇವರ ಹೆಂಡತಿ ಎಂದುಕೊಂಡರೂ ಅವಳು ಪ್ರಥಮರಾತ್ರಿ ಕಳೆದದ್ದು ಶೇಷಗಿರಿಯಪ್ಪನ ಹಾಸಿಗೆಯಲ್ಲಿ. ಆದರೆ ವೆಂಕಪ್ಪ ಹೆಗಡೆಯ ಜೋಪಡಿಯಲ್ಲೂ ಕೆಲವು ದಿನ ಇದ್ದಳು ಎನ್ನುತ್ತಾರೆ ಜನರು. “ನನ್ನ ಮಂಚಕ್ಕೆ ಬಾರದಿದ್ದರೆ ನಿನ್ನ ಜೀವ ತೆಗೆದು ತೋಟದಲ್ಲಿ ಹಾಕಿ ಮಣ್ಣು ಮುಚ್ಚುತ್ತೇನೆ” ಎಂದು ಹೆಗಡೆ ಆರ್ಭಟಿಸಿದ ತರುವಾಯ ಹೆದರಿಕೊಂಡಳು ವನಜ. ಒಂದು ರಾತ್ರಿ ಹೆಗಡೆಯ ಎದೆಯ ಮೇಲೆ ತಲೆಯಿಟ್ಟು ಗೋಳೋ ಅತ್ತಳು. “ನೀನು ನನಗೆ ಬೇಕು ವನಜಾ.. ಆದರೆ ಶೇಷಗಿರಿಯಪ್ಪನ ಆಶ್ರಯದಲ್ಲಿ ಇರು” ಎಂದು ಹೆಗಡೆ ಸಮಾಧಾನಿಸಿದ ಮೇಲೆ ವನಜ ಎರಡು ಜೀವದ ಸೊತ್ತಾದಳು. ಹೆಗಡೆಯ ಮುಂದೆ ನಿಲ್ಲುವುದಕ್ಕೆ ಶೇಷಗಿರಿಯಪ್ಪನಿಗೂ ಭಯ. “ಏನೇ ಆಗಲಿ....ವನಜ ನನಗೂ ಸುಖ ಕೊಡುತ್ತಾಳಲ್ಲ” ಎಂದೇ ಉಸಿರೆಳೆದ. ಆದರೆ ಗಿರಿಜ ಯಾರ ಮಗಳು ಎಂಬುದು ವನಜಳಿಗೂ ಸಂದೇಹ. ಆದರೆ ಮಗಳ ಸಮಾಧಾನಕ್ಕಾಗಿ

"ಶೇಷಗಿರಿಯಪ್ಪನೇ ನಿನ್ನ ತಂದೆ" ಎಂದಿದ್ದಳು. ಗಿರಿಜಳಿಗೆ ಅನುಮಾನ. ಒಂದು ದಿನ ಹೆಗಡೆಯೇ ಹೇಳಿದ್ದ....ನನ್ನ ಮಗಳಿಗೂ ಒಂದು ಬಂಗಾರದ ಸರ ಮಾಡಿಸಬೇಕೆಂದು. ಗಿರಿಜಳ ಎಳೆ ಬುದ್ಧಿಗೆ ಒಂದೂ ಹೊಳೆಯಲಿಲ್ಲ. ನಾಲ್ಕು ವರ್ಷದ ತರುವಾಯ ಹೆಗಡೆ ಹುಲಿಬೇಟೆಗೆ ಹೋದವನು ಮತ್ತೆ ಬರಲಿಲ್ಲ. ವನಜಳಿಗೂ ಸಂತೋಷವಾಗಿತ್ತು. ಶೇಷಗಿರಿಯಪ್ಪನಿಗೂ ಅಷ್ಟೇ ಆನಂದ ವಾಗಿತ್ತು. ಗಿರಿಜಳಿಗೆ ಹದಿನಾಲ್ಕು ವರ್ಷದ ಪ್ರಾಯ ತುಂಬಿದಾಗಲೇ ಆಕೆಯ ಮದುವೆ ನಡೆಯಿತು .. ತೀರಾ ಸರಳವಾದ ಮದುವೆ. ಶುಂಠಿಕೊಪ್ಪದ ಶಿವಗುಡಿ ಯಲ್ಲಿ ನಡೆದದ್ದು ಲಗ್ನ. ಗುಡಿಯಲ್ಲಿ ಇದ್ದವರು ಮೂವರು ಮಾತ್ರ. ಅರ್ಧ ಗಂಟೆ ಕಾಲ ಕರಿಮಣಿ ಶಿವಲಿಂಗದ ಮೇಲಿತ್ತು. ತಾನೇ ಕಟ್ಟುತ್ತೇನೆ ಎಂದರು ಶೇಷಗಿರಿಯಪ್ಪ. ವನಜ ಒಪ್ಪಲಿಲ್ಲ. "ನಿಮ್ಮ ಮಗಳು... ನೀವು ಸುತ್ತುವುದು ನ್ಯಾಯವಲ್ಲ" ಎಂದು ತಾನೇ ಮಗಳ ಕೈಯಲ್ಲಿ ಕರಿಮಣಿ ಕೊಟ್ಟಳು. "ಇಂದಿ ನಿಂದ ನೀನು ದೇವರ ಹೆಂಡತಿ" ಎಂದು ಮಗಳ ಕಿವಿಯಲ್ಲಿ ಉಸುರಿದಳು. ಒಂದು ದಿನವೆಲ್ಲಾ ಶಿವನ ಸೇವೆ ಮಾಡಿದಳು ಗಿರಿಜ. ದಿನವಿಡಿ ವಿಗ್ರಹಕ್ಕೆ ಚಾಮರ ಬೀಸಿದಳು. ಹೊರೆ ಹೊರೆ ಹೂ ತಂದು ಮಾಲೆ ಕಟ್ಟಿದಳು. ಆಗ ಆಕೆ ಮೈಕೈ ತುಂಬಿಕೊಂಡು ಬೆಳೆದಿದ್ದರೂ ಋತುಮತಿಯಾಗಿರಲಿಲ್ಲ. ಕೊರಳಲ್ಲಿ ಮಾಂಗಲ್ಯವಿದ್ದರೂ ಗಂಡಿನ ಆಶ್ರಯ ಪಡೆದವಳಲ್ಲ. ಯೋಗ್ಯರನ್ನೇ ತನ್ನ ಮಗಳ ಯಜಮಾನರನ್ನಾಗಿ ಮಾಡುವ ಬಯಕೆ ವನಜಳದ್ದು. ಶೇಷಗಿರಿ ಯಪ್ಪನಿಗೆ ತಮ್ಮ ಹಾಸಿಗೆಗೆ ಎಳೆಯುವ ಯೋಚನೆ....ಅವರೂ ಆಕೆ ಮೈ ನೆರೆಯುವುದನ್ನೇ ಎದಿರು ನೋಡುತ್ತಿದ್ದರು. ಮಗಳು ಗುಡಿಯ ಒಳಗೆ ಮಾಲೆ ಕಟ್ಟುತ್ತಿದ್ದಾಗ .. ಆರತಿಗೆ ಬತ್ತಿ ಹೊಸೆಯುವಾಗ ಗಿರಿಜಳ ಗಲ್ಲ ನೇವರಿಸುವ ಕ್ರಮವಿತ್ತು. ಬೆನ್ನಮೇಲೆ ಕೈಯಾಡಿಸಿದ ದಿನಗಳಿವೆ. ಗಿರಿಜ ತಾಯ ಮುಂದೆ ಗೋಳಿಟ್ಟಾಗ ವನಜ ಹೇಳಿದ್ದಳು "ನಿನ್ನ ಅಪ್ಪನಲ್ಲವೆ ಗಿರಿಜಾ.... ಪ್ರೀತಿ ಎಲ್ಲಿ ಹೋಗುತ್ತದೆ ಹೇಳು" ಎಂದು.

ಗಿರಿಜ ಮೈನೆರೆದದ್ದು ಕೊಡಿ ತಿಂಗಳ ಒಂದು ಸೋಮವಾರ. ಸಂಜೆ ಕೈಯಲ್ಲಿ ಹೂಬುಟ್ಟಿ ಹಿಡಿದು ಗುಡಿಗೆ ಹೊರಟಿದ್ದಳು. "ನನಗೆ ಮೈ ಬೆಚ್ಚ ಗಾಗಿದೆ ಮಗು....ನೀನೇ ಹೋಗಿ ಆರತಿಗೆ ಬತ್ತಿ ಹಾಕಿ ಬಾ" ಎಂದಿದ್ದಳು ವನಜ. ಅರ್ಧದಾರಿಗೆ ಹೋಗಿದ್ದವಳು ಮನೆಗೆ ಧಾವಿಸಿ ಬಂದಳು. ಮೊದಲು

ಕಂಗಾಲಾದಳು ವನಜ. ಆಮೇಲೆ ತಿಳಿಯಿತು ಮಗಳು ಋತುಮತಿಯಾಗಿದ್ದಾಳೆ ಎಂದು. ಶೇಷಗಿರಿಯಪ್ಪನಿಗೆ ಎದೆ ಕುಸಿಯಿತು. ಆದರೆ ಏನೂ ಪ್ರಯೋಜನವಾಗಲಿಲ್ಲ. ಮುದ್ದುಮುದ್ದಾಗಿ ಬೆಳೆದಿದ್ದ ಗಿರಿಜಳನ್ನು ಕಂಡು ಬಾಯಿ ಬಿಟ್ಟವರು ಶೇಷಗಿರಿಯಪ್ಪ. "ಹುಡುಗಿ ಮೈನೆರೆದಳು" ಎಂಬ ಸುದ್ದಿ ಕಿವಿಗೆ ಬಿದ್ದಾಗ "ಒಳ್ಳೆಯದೆ ಆಯ್ತು" ಎಂದು ಸಮಾಧಾನ ತಾಳಿದ್ದರು ಅವರು. ಮೂರು ದಿನ ಚಾವಡಿಯ ಮೂಲೆಯಲ್ಲಿ ಕುಳಿತು ನಾಲ್ಕನೆಯ ದಿನ ಸ್ನಾನ ಮುಗಿಸಿ ಒಳಬಂದಿದ್ದಳು ಗಿರಿಜ. ಸಂಪ್ರದಾಯ ಆಚರಣೆಯಲ್ಲಿ ವನಜಳಿಗೆ ಅಧಿಕ ಭಕ್ತಿ. ಆ ಒಂದು ದಿನ ವಿಧಿನಿಯಮಕ್ಕೆ ಶರಣು ಬಂದು ದೇವರ ಸಾನಿಧ್ಯದಲ್ಲಿ ಗಿರಿಜಳಿರುವುದು ಅವಳಿಗೆ ಬೇಕಿತ್ತು. ಸಂಜೆ ಮಗಳನ್ನು ಶೃಂಗರಿಸಿದಳು. ನಸುಕೆಂಪಿನ ಗಲ್ಲಕ್ಕೆ ಅರಿಸಿನ ಸವರಿದಳು. ಕಣ್ಣಿನ ಸುತ್ತ ಕಾಡಿಗೆ ಹಚ್ಚಿದಳು. ಪತ್ತಲನ್ನೆ ಲಕ್ಷಣವಾಗಿ ಸುತ್ತಿ ಕಿರಿಗೆಯ ಸೆರಗನ್ನೆ ಹರಿದು ಮಾಡಿದ್ದ ರವಿಕೆಯನ್ನು ತೊಟ್ಟು ಮೇಸತ್ತಿನಿಂದ ಅಲಂಕರಿಸಿಕೊಂಡಳು ಗಿರಿಜ. ಗಂಡಿನ ಆಶ್ರಯ ಪಡೆಯುವ ಮೊದಲು ದೇವರಸೇವೆ ಮುಗಿಸುವುದು ಕರ್ತವ್ಯವಾಗಿತ್ತು. ಶಿವನ ಹೆಂಡತಿಯಾಗಿ .. ಆ ಒಂದು ದಿನ ಧರ್ಮ ಎಣಿಸಿದರೆ ಮತ್ತೆ ಮಗಳು ವೃತ್ತಿ ಆರಂಭಿಸಿದರೂ ಪಾಪವಿಲ್ಲ. ಗುಡಿಗೆ ಹೊರಡುವ ಮೊದಲು ಶೇಷಗಿರಿಯಪ್ಪನಿಗೆ ನಮಸ್ಕಾರ ಮಾಡಿದ್ದಳು ಗಿರಿಜ. ವಂಕಿ ಸರ ಹಾಕಿದ್ದಳು. ಮುತ್ತಿನ ಮುಗುಳು ಕಿವಿ ಮುಚ್ಚಿತ್ತು. ತಾಯಿಯ ಜೊತೆ ಗುಡಿಗೆ ಹೋದಳು. ದೇವರಿಗೆ ಅದೆಷ್ಟು ಸುತ್ತು ಬಂದಿದ್ದಳೋ .. ಲಿಂಗದ ಮುಂದೆ ಕುಳಿತು ಗಳಿಗೆ ಕಾಲ ಚಾಮರಸೇವೆ ಮಾಡಿದಳು. ಮನೆಗೆ ಬರುವಾಗ ಕತ್ತಲಾಗಿತ್ತು. ಶೇಷಗಿರಿಯಪ್ಪನ ಮುಂದೆಯೇ ಕಲ್ಲಾರತಿ ಎತ್ತಿ ದೃಷ್ಟಿ ... ದಳು. ಕಡಲೆ ಪಾಯಸ ಮತ್ತು ಹೆಸರುಬೇಳೆಯ ಕೋಸಂಬರಿಯನ್ನು ... ದ್ದಳು ವನಜ. ಶೇಷಗಿರಿಯಪ್ಪನೂ ಅಲ್ಲೇ ಊಟಕ್ಕೆ ಕುಂತರು. ಊಟ ... ತರುವಾಯ... ವನಜ ಮಗಳ ಕಿವಿಯಲ್ಲಿ ಹೇಳಿದ್ದಳು "ಈ ಒಂದು ... ು ಶಿವನ ಹೆಂಡತಿಯಾಗಿರು. ಅವನ ಸೇವೆ ಮಾಡು. ಅವನ ಸಂಪರ್ಕ ಸುಖವನ್ನೆ ಅನುಭವಿಸಬೇಕು. ಸಾಧ್ಯವಾದರೆ ಜಾಗರಣೆ ಮಾಡು. ಇಲ್ಲ... ಶಿವನ ಸ್ಮರಣೆ ಮಾಡಿ ಮಲಗು" ಎಂದು ಎಲ್ಲವನ್ನೂ ವಿವರಿಸಿದಳು. ಕೋಣೆಯ ಬಾಗಿಲು ಹಾಕಿಕೊಂಡಳು ಗಿರಿಜ. ವನಜ ಹೇಳಿದಳು "ನಿನ್ನ

ಭಾಗ್ಯಕ್ಕೆ ಯೋಗ್ಯ ಗಂಡಿನ ಆಶ್ರಯದಲ್ಲೇ ಬಿಡುತ್ತೇನೆ... ನಾಳೆ ನೀನು ಯಾರ ಸಹವಾಸ ಬಯಸಿದರೂ ಅದರಲ್ಲಿ ದೋಷವಿಲ್ಲ.. ಶಿವನಿಗೆ ದ್ರೋಹವಿಲ್ಲ" ಎಂದು. ಅದನ್ನೆ ನೆನೆಸಿಕೊಂಡ ಗಿರಿಜ ಹಾಸಿಗೆಗೆ ಬಂದಳು. ಹೊಗೆ ಕಾರುತ್ತಿದ್ದ ಚಿಮಣಿಯ ದೀಪವನ್ನು ಎತ್ತರದ ಕೈಗೂಟದ ಮೇಲೆ ಇರಿಸಿದಳು. ಹಾಸಿಗೆ ಮುಂದಾಗಿ ವನಜಳೇ ಹಾಸಿದ್ದಳು. ಒಗೆದ ಬಿಳಿಯ ಬಟ್ಟೆಯನ್ನು ಮೇಲೆ ಬಿಡಿಸಿ ಅದರ ಮೇಲೆ ಚಂದನದ ಗೊಂಬೆಯನ್ನಿಡಲಾಗಿತ್ತು. ಸೇವೆಯ ಕ್ರಮವನ್ನು ಚೆನ್ನಾಗಿ ಕೇಳಿ ತಿಳಿದುಕೊಂಡಿದ್ದಳು ಗಿರಿಜ. ಚಂದನದ ಗೊಂಬೆಯನ್ನು ತೊಡೆಯ ಮೇಲಿಟ್ಟಳು. ಒಮ್ಮೆ ನಕ್ಕಳು. "ನಿಮ್ಮ ಚರಣದಾಸಿ ನಾನು ನನ್ನ ಸೇವೆಯನ್ನು ಸ್ವೀಕರಿಸಿ" ಎಂದು ತನ್ನಲ್ಲೇ ಮೆಲ್ಲನೆ ಅಂದುಕೊಂಡಳು. "ನೀವು ನನ್ನ ದೇವರು... ನಾನು ನಿಮ್ಮ ಹೆಂಡತಿ. ಈ ಕೊರಳಲ್ಲಿರುವ ಕರಿಮಣಿ ಕಟ್ಟಿದ್ದು ನೀವು. ಈ ದೇಹ ನಿಮ್ಮದು. ಇಂದಿನವರೆಗೆ ನಾನು ಪಾಪ ಎಣಿಸಿಲ್ಲ. ಬೇರೆಯವರ ಮುಖ ನೋಡಿಲ್ಲ. ಮೈಮನಸ್ಸು ಚೊಕ್ಕವಾಗಿದೆ. ಈ ರಾತ್ರಿ.. ಒಂದು ರಾತ್ರಿ ನನ್ನ ದೇಹ ನಿಮ್ಮದು" ಎಂದು ಗೊಂಬೆಯನ್ನೆ ನೋಡುತ್ತಾ ಬಹು ನಿಧಾನವಾಗಿ ಹೇಳಿದಳು. ಗೊಂಬೆಗೆ ಕೈಮುಗಿದಳು. ಹೂಮಾಲೆ ಹಾಕಿದಳು. "ಹಾಲು ಕುಡಿ ನನ್ನ ದೇವರೆ" ಎನ್ನುತ್ತಾ ಗಿಂಡಿಯನ್ನು ಗೊಂಬೆಯ ಬಳಿ ಇಟ್ಟಳು. ತಾಂಬೂಲ ಮಡಚಿದಳು. ಏನೋ ಭ್ರಮೆ. ಅಷ್ಟೇ ನಂಬಿಕೆ. ಅಂಗೈ ಮೇಲೆ ಗೊಂಬೆಯನ್ನಿಟ್ಟು ಕ್ಷಣಕಾಲ ಆಡಿಸಿದಳು. ತರುವಾಯ ಗೊಂಬೆಯನ್ನು ತನ್ನ ಎದೆಯ ಮೇಲಿಟ್ಟು ಮಲಗಿಕೊಂಡಳು ಗಿರಿಜ.

ಮಗಳನ್ನು ಯಾರ ಆಶ್ರಯದಲ್ಲಿ ಬಿಡಲಿ? ಯಾವ ದೇವಾಲಯದಲ್ಲಿ ಚಾಮರ ಬೀಸುವ ಕೆಲಸವಿದೆ? ಯಾವ ನೆಲದ ಅನ್ನ ನೀರಿನ ಋಣ ಗಿರಿಜಳಿಗಿದೆಯೋ....ನನ್ನ ಮಗಳನ್ನು ನೋಡಿಕೊಳ್ಳುವ ಗಂಡು ಎಲ್ಲಿದ್ದಾನೆ? ಎಂದು ವನಜ ನಿತ್ಯ ಯೋಚಿಸುತ್ತಲೇ ಇದ್ದಳು. ಕಂಡವರ ಮಡಲಿಗೆ ಹಾಕುವ ಮನಸ್ಸು ಅವಳಿಗಿಲ್ಲ. ದೂರ ಕಳುಹಿಸುವುದು ಅವಳಿಗೆ ಬೇಡವಾಗಿತ್ತು. ಎರಡು ಸಂಸಾರ ನಡೆಯಿಸುವ ತಾಕತ್ತು ಇರುವ ಗಣ್ಯರೇ ಆಗಬೇಕು. ನಾಳೆ ಎರಡು ಹೊತ್ತಿನ ಅನ್ನಕ್ಕೆ ತೊಂದರೆಯಾಗಿ ಮಗಳು ಬಿಡುಸೂಳೆಯಾಗಿ ಬಾಳುವುದು ಅವಳಿಗೆ ಇಷ್ಟವಿಲ್ಲ. ಬ್ರಾಹ್ಮಣರೇ ಆಗಿದ್ದರೆ ತುಂಬಾ ಸಂತೋಷ.

ದೇವರ ಸೇವೆ ಮಾಡಿಕೊಂಡು ಬ್ರಾಹ್ಮಣರ ಆಶ್ರಯದಲ್ಲಿರುವುದಾದರೆ ಅದು ವನಜಳಿಗೆ ಹಿತವಾಗಿತ್ತು. ಹೆಗಡೆಯ ಮೊಮ್ಮಗ ಕೆಲವು ದೃಷ್ಟಿಯಿಂದ ಉತ್ತಮವಾಗಿ ಕಂಡರೂ ಅವನಿಗೆ ಕುಡಿಯುವ ಅಭ್ಯಾಸವಿದೆ. ಕೋಳಿ ಗೂಡಿರುವ ಅಂಗಣದಲ್ಲಿ ಮಗಳು ನಡೆಯುವುದು ವನಜಳಿಗೆ ಬೇಡವಾಗಿತ್ತು. ಕಳೆದ ವರ್ಷವೇ ರಾಜು ಹೆಗಡೆ ಹೇಳಿದ್ದ, "ನಿನ್ನ ಮಗಳನ್ನು ನಾನು ನೋಡಿಕೊಳ್ಳುತ್ತೇನೆ" ಎಂದು. ಆದರೆ ವನಜಳಿಗೆ ಏಕೋ ಅವನು ಸರಿಬೀಳಲಿಲ್ಲ. ಬಯಲ ತೋಟದ ಆಚೆ ಇರುವ ಕೇಶವ ಕೆದಿಲಾಯರ ಮಗ ಗಣಪತಿಗೆ ಗಿರಿಜಳ ಮೇಲೆ ಮನಸ್ಸಿತ್ತು. ಆ ವಿಚಾರ ಗಿರಿಜಳಿಗೆ ಗೊತ್ತಿದ್ದರೂ ಕೆದಿಲಾಯರಿಗೆ ಎರಡು ಹೊತ್ತು ಅನ್ನ ಹಾಕುವುದೇ ತುಂಬಾ ತೊಂದರೆಯಾಗಿತ್ತು. ಅಡಿಕೆ ತೋಟದ ಮಂಜುನಾಥ ಕಮ್ತಿಯವರ ಮಗ ಒಂದೆರಡು ಸಾರಿ ಗಿರಿಜಳನ್ನು ತೊಡಮೆ ಹತ್ತಿರ ನಿಂತು ಮಾತನಾಡಿಸಿದ್ದ. ಆದರೆ ಅವನು ಕಳೆದ ತಿಂಗಳು ಅದೇಕೊ ಕೊರಳಿಗೆ ಹಗ್ಗ ಬಿಗಿದು ಕೊಂಡು ಬೋಗಿಯ ಮರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಶೇಷಗಿರಿಯಪ್ಪನನ್ನೆ ಕೇಳಿದಳು "ಮಗಳ ಮುಂದಿನ ಭವಿಷ್ಯದ ಬಗ್ಗೆ ಏನು ಮಾಡುತ್ತೀರಿ?" ಎಂದು. ಗಂಟಲ ಮೇಲಿನ ಮಾತನ್ನೆ ಹೇಳಿದರು. "ಇರಲಿ ವನಜಾ....ಇನ್ನೂ ನಾಲ್ಕು ಕಾಲ ಹೋಗಲಿ. ಹುಡುಗಿ ಇನ್ನೂ ಹದಿನಾರು ವರ್ಷದಲ್ಲಿದ್ದಾಳೆ. ನಮ್ಮ ಕಣ್ಮುಂದೆ ಇದ್ದರೆ ಅದೇ ಒಂದು ನೆಮ್ಮದಿ" ಎಂದಿದ್ದರೂ ಆ ಮಾತಿನಿಂದ ವನಜಳಿಗೆ ಸಮಾಧಾನವಾಗಿರಲಿಲ್ಲ.

ಕಾಳೂರಿನಲ್ಲಿ ಗಿರಿಜಳ ದೊಡ್ಡಮ್ಮನ ಮನೆಯಿದೆ. ಕಾಳೂರಿನ ಪಟೇಲರು ಆಕೆಯ ಯಜಮಾನರು. ತನ್ನ ಮಗಳ ಬಗ್ಗೆ ಅಕ್ಕನಿಂದಲೇ ಮುಂದಿನ ವ್ಯವಸ್ಥೆ ತಿಳಿಯುವ ಬಗ್ಗೆ ವನಜ ಎರಡು ದಿನದ ಮಾತಿನ ಬಗ್ಗೆ ಕಾಳೂರಿಗೆ ಹೋಗುವ ಮನಸ್ಸು ಮಾಡಿದಳು. ಗಿರಿಜಳಲ್ಲಿ ಎಲ್ಲವನ್ನೂ ವಿವರವಾಗಿ ತಿಳಿಸಿದಳು. "ನಾನು ಕೇವಲ ಎರಡೇ ದಿನದಲ್ಲಿ ಬಂದುಬಿಡುತ್ತೇನೆ. ನಿನ್ನನ್ನೂ ಕರೆದು ಕೊಂಡು ಹೋಗಬಹುದಿತ್ತು. ಮೂರು ಹರದಾರಿ ದೂರ. ಗುಡ್ಡದ ದಾರಿ. ನಾನು ಬರುವತನಕ ಅಪ್ಪನ ಮನೆಯಲ್ಲಿ ಇದ್ದು ಬಿಡು" ಎಂದಳು ಮಗಳಲ್ಲಿ. ಶೇಷಗಿರಿಯಪ್ಪನಿಗೆ ವನಜ ಕಾಳೂರಿಗೆ ಹೋಗುವ ಕಾರಣ ತಿಳಿಯದೆ ಹಲವು ಪ್ರಶ್ನೆ ಹಾಕಿದರು. "ಅಕ್ಕನನ್ನು ನೋಡದೆ ವರ್ಷವಾಯ್ತು. ಕಳೆದ ವರ್ಷ

ಜಾತ್ರೆಗೆ ಬಂದಿದ್ದಳು, ಅಲ್ಲದೆ ನನ್ನ ಅವಲಕ್ಕಿ ಸರ ಅವಳ ಬಳಿಯಲ್ಲಿದೆ. ನಾಳೆ ಗಿರಿಜಳನ್ನು ಕಳುಹಿಸುವುದಾದರೆ ಬರಿ ಕೊರಳಲ್ಲಿ ಕಳುಹಿಸುವುದು ಹೇಗೆ? ಕಾಳೂರಿಗೆ ಹೋದರೆ ಸರ ತರುವುದಲ್ಲದೆ ಅಕ್ಕನನ್ನು ಕಂಡುಬಂದ ಹಾಗಾಯ್ತು. ನಾನು ನಾಡಿದ್ದು ಖಂಡಿತಾ ಬರುತ್ತೇನೆ. ಎರಡು ದಿನ ಗಿರಿಜ ಇಲ್ಲೇ ಇರುತ್ತಾಳೆ. ತೋಟದ ಮನೆಯಲ್ಲಿ ಒಬ್ಬಳೇ ಇರುವುದು ಬೇಡ. ಹೇಗೂ ಬೆಳೆದ ಹುಡುಗಿ" ಎಂದಳು. ಶೇಷಗಿರಿಯಪ್ಪನಿಗೆ ಸಂತೋಷವಾಗಿತ್ತು. ವನಜ ಕಾಳೂರಿಗೆ ಹೋಗುವುದೇ ಅವರಿಗೆ ಸರಿಕಂಡಿತು. ಅಂತಹ ಅವಕಾಶವನ್ನು ಅವರೇ ಬಯಸಿದ್ದರು. "ಹೋಗಿ ಬಾ ವನಜಾ... ಹುಡುಗಿಯ ಬಗ್ಗೆ ಯೋಚನೆ ಬೇಡ. ಎರಡು ದಿನ ಹೆಚ್ಚುಕಡಿಮೆಯಾದರೆ ನಿನಗೆ ಚಿಂತೆ ಬೇಡ. ನನ್ನ ಹೆಂಡತಿಯ ಜೊತೆ ಇರುತ್ತಾಳೆ" ಎಂದು ಶೇಷಗಿರಿಯಪ್ಪ ನಾಲಿಗೆಯ ತುದಿ ಮಾತಿನಿಂದ ಸಂತೈಸಿದರು.

"ನಾನು ಬರುತ್ತೇನೆ . ದೊಡ್ಡಮ್ಮನನ್ನು ನೋಡುವುದಕ್ಕೆ" ಎಂದು ಗಿರಿಜ ಮತ್ತೆ ತಾಯಿ ಹೊರಡುವ ಮೊದಲು ಉರುಹಾಕಿದಳು. ವನಜಳಿಗೆ ಮಗಳು ಬರಬಾರದೆನ್ನುವ ಅಭಿಪ್ರಾಯವಿರಲಿಲ್ಲ. ಆದರೆ ಪ್ರಯಾಣ ತಂಬಾ ಪ್ರಯಾಸದ್ದು· ಗುಡ್ಡ ಹತ್ತಿ ಇಳಿಯುವುದೇ ಇರುವ ತೊಡಕು.

"ನೋಡು ಗಿರಿಜಾ .. ನಾನು ಹೋಗುವುದು ನಿನ್ನ ಒಳಿತಿಗಾಗಿ. ನಿನ್ನ ಯಜಮಾನರನ್ನು ಹುಡುಕುವುದಕ್ಕೆ ಕಾಳೂರಿಗೆ ಹೋಗುತ್ತಿದ್ದೇನೆ. ಮೂರು ಹರದಾರಿ ನಡೆಯುವುದು ನಿನ್ನಿಂದ ಆಗದು. ಎರಡು ದಿನದ ಮಟ್ಟಿಗೆ ಸುಮ್ಮನೆ ಏಕೆ ಬರುವುದು. ಈ ವಿಚಾರವನ್ನು ಅಯ್ಯನಿಗೆ ಮಾತ್ರ ತಿಳಿಸಬೇಡ. ನಿನಗೊಂದು ಯೋಗ್ಯ ಆಶ್ರಯ ಸಿಕ್ಕಿದರೆ ಮುಂದೆ ನನಗೆ ಯಾವ ಯೋಚನೆಯೂ ಇಲ್ಲ. ನೀನು ಸುಖವಾಗಿರಬೇಕು ...ಅದೇ ನನ್ನ ಆಸೆ" ಎಂದು ಮಗಳಲ್ಲಿ ಹೇಳಿದಳು ವನಜ. ಆ ಮಾತು ಕಿವಿಗೆ ಬಿದ್ದಾಗ "ಆಗಲಮ್ಮ ...ಬೇಗ ಬಂದುಬಿಡು ...ಎರಡು ದಿನ ಹೇಗಾದರೂ ಅವರ ಮನೆಯಲ್ಲಿರುತ್ತೇನೆ...." ಎಂದಳು ಗಿರಿಜ. ವನಜ ಕಾಳೂರಿಗೆ ಹೊರಟ ಮರುಗಳಿಗೆಯಲ್ಲೇ ಗಿರಿಜ ಮನೆಗೆ ಬೀಗ ಹಾಕಿ ಅಯ್ಯನ ಮನೆಗೆ ಬಂದಳು.

ಮುಸುರೆಯ ಪಾತ್ರೆಗಳನ್ನು ತೊಳೆದು . ಅಡಿಗೆಮನೆ ಸಾರಿಸಿ ಕೈಕಾಲು ತೊಳೆದು ಪಾತಾಳ ಅಂಕಣಕ್ಕೆ ಬಂದಳು ಗಿರಿಜ. ಸಂಜೆಯೇ ತನ್ನ ಮನೆ

ಯಿಂದ ತಂದಿದ್ದ ಹಾಸಿಗೆಯನ್ನು ಜಗಲಿಯ ದಿಣ್ಣೆಯ ಮೇಲಿಟ್ಟಿದ್ದಳು. "ನಾನು ಎಲ್ಲಿ ಮಲಗುವುದು ..?" ಎಂದು ಶೇಷಗಿರಿಯಪ್ಪನನ್ನು ಕೇಳಿದ್ದಳು ಗಿರಿಜ. "ಚಾವಡಿಯ ದಿಣ್ಣೆಯಲ್ಲಿ ಮಲಗು... ಏನೂ ಭಯವಿಲ್ಲ. ಪಾತಾಳ ಅಂಕಣದ ಬಾಗಿಲು ಹಾಕಿಕೊಂಡರೆ ಮುಗಿಯಿತು. ಪಡಸಾಲೆಯಲ್ಲಿ ನಾವಿದ್ದೇವೆ. ಬೇಕಿದ್ದರೆ ದೀಪವನ್ನು ಗೋಡೆಯ ಕಂಡಿಯಲ್ಲಿ ಇಡು. ರಾತ್ರಿ ಹೊರಗೆ ಹೋಗಬೇಕಾದ ಪ್ರಸಂಗ ಬಂದರೆ ಒಬ್ಬಳೇ ಹೋಗಬೇಡ ...ನನ್ನನ್ನು ಕರೆ... ಇಲ್ಲ ಅಪ್ಪನನ್ನು ಕೂಗು ..." ಎಂದರು ಶೇಷಗಿರಿಯಪ್ಪ. ದಿಣ್ಣೆಯ ಮೇಲೆ ಹಾಸಿಗೆ ಬಿಡಿಸಿದಳು ಗಿರಿಜ. ಹೆಂಡತಿಯನ್ನು ಬಿಟ್ಟು ಹೊರಜಗಲಿಯಲ್ಲಿ ಮಲಗುವುದು ಶೇಷಗಿರಿಯಪ್ಪನಿಗೆ ಬೇಡವಾಗಿತ್ತು. ಅಲ್ಲದೆ ಗಿರಿಜ ಏನಾದರೂ ತಿಳಿದುಕೊಂಡರೆ? ಪಡಸಾಲೆಯ ಬಾಗಿಲು ಹಾಕದೆ ಮಲಗಿಕೊಂಡರು ಅವರು. ಎರಡು ನಿಮಿಷ ಕಳೆದಿತ್ತು. ಗಿರಿಜಾ "ಅಯ್ಯಾ..." ಎಂದು ಕರೆದಳು. ಹಾಸಿಗೆಯಿಂದಲೇ ಕೇಳಿದರು "... ಏನು...." ಎಂದು ಶೇಷಗಿರಿಯಪ್ಪ. "ಏನೋ ಕೂಗು ಕೇಳಿಸುತ್ತಿದೆಯಲ್ಲ ..ಸ್ವಲ್ಪ ಹೊರಬನ್ನಿ" ಎಂದಳು ಆಕೆ ಹೆದರಿಕೊಂಡು. ಶೇಷಗಿರಿಯಪ್ಪ ಹೊರಬಂದರು. ಬಯಲಿನ ತೆಂಕಿನಿಂದಲೇ ಕೂಗು ಕೇಳಿಸಿತ್ತು. ಮೊದಲು ಮೊದಲು ಅವರಿಗೂ ತಿಳಿಯಲಿಲ್ಲ. ಕೊನೆಗೆ ಏನನ್ನೋ ಯೋಚಿಸಿಕೊಂಡು ಗಟ್ಟಿಯಾಗಿ ನಕ್ಕು, "ಗಿರಿಜಾ ಹೆದರಿಕೊಂಡೆಯಾ... ಇಂದು ಗೋವೆ ಹಾಡಿ ದೆಯ್ಯದ ಮನೆಯಲ್ಲಿ ಗೆಂಡ.... ಕೂಗಿದ್ದು ಯಕ್ಷ ದೆಯ್ಯದ ಪಾತ್ರಿ, ತಿಳಿಯಿತೆ?" ಎಂದರು. ಮತ್ತೆ ಗಿರಿಜಳಿಗೆ ತಿಳಿಯಿತು. "ಮೊದಲು ಗೊತ್ತಾಗಲಿಲ್ಲ ಹಾಗಿದ್ದರೆ ಸರಿ .." ಎಂದಳು. ಮುಸುಕು ಎಳೆದುಕೊಂಡಾಗಲೇ ಆಕೆಗೆ ನಿದ್ದೆ ಬಂತು.

ಮಗ್ಗುಲು ಹೊರಳಿಸಿ ಹೊರಳಿಸಿ ಎರಡು ಗಂಟೆಯ ಕಾಲ ಕಳೆದರು ಶೇಷಗಿರಿಯಪ್ಪ. ಹೆಂಡತಿ ಗೊರಕೆ ಹೊಡೆಯಲು ಆರಂಭಿಸಿದಾಗಲೇ ಮೈ ತುಂಬ ಕಂಬಳಿ ಹೊದೆದುಕೊಂಡು ಮೆಲ್ಲನೆ ಚಾವಡಿಗೆ ಬಂದರು. ಪಡುಬದಿಯಲ್ಲಿ ಕಟ್ಟಿದ್ದ ಬಿದಿರಿನ ತಳಿಯಿಂದ ನಸು ತಿಂಗಳ ಬೆಳಕು ತೂರಿಬಂದದ್ದರಿಂದ ಗಿರಿಜಳು ಮಲಗಿರುವ ತಾವು ಮಸುಕಾಗಿ ಕಾಣಿಸುತ್ತಿತ್ತು. ದಿಣ್ಣೆಯ ಹತ್ತಿರ ಬಂದರು. ಅರ್ಧ ಎದೆಯವರೆಗೆ ಮುಸುಕಿತ್ತು. ಮುಖ ಗೋಚರಿಸುವಷ್ಟು ತಿಂಗಳ ಬೆಳಕಿರುವುದು ಅವರಿಗೆ ಸಾಕಾಗಿತ್ತು. ಅವರ ಕೈ ಮುಂದುವರಿಯಿತು.

ಬೆರಳುಗಳು ಗಿರಿಜಳ ತುಟಿ ಆಡಿಸಿತು. ಅಂಗೈ ಮುಷ್ಟಿ ಎದೆಯನ್ನು ಹಿಂಡಿತು. ಇನ್ನು ಏನು ಮಾಡುವ ಬಯಕೆಯಿತ್ತೋ... ಗ್ರಹಚಾರಕ್ಕೆ ಅವಳಿಗೆ ಎಚ್ಚರವಾಯ್ತು. ಯಾರೋ ತನ್ನನ್ನು ಹಿಡಿದುಕೊಂಡಿರುವಂತೆ ನಿದ್ದೆಯ ಕಣ್ಣಲ್ಲೆ ಅರಿವಾದಾಗ ಕೂಗಿದಳು. ಕಣ್ಣು ತೆರೆದಿದ್ದಳು ಅಷ್ಟೆ—ಸರ್‍ರನೆ ಹೊದೆಯುವ ವಸ್ತ್ರವನ್ನು ಆಕೆಯ ಮುಖದ ಮೇಲೆ ಎಳೆದು ಶೇಷಗಿರಿಯಪ್ಪ ಪಡಸಾಲೆಯ ಒಳಬಂದು ತನ್ನ ಹಾಸಿಗೆಯ ಮೇಲೆ ಬಿದ್ದರು. ಗಟ್ಟಿಯಾಗಿ ಅರಚಿಕೊಂಡಳು ಗಿರಿಜ. ಕಂಡದ್ದು ಕರ್‍ರಗಿನ ಒಂದು ರೂಪ. ಮತ್ತೆ ಅದು ಎಲ್ಲಿಗೆ ಹೋಯ್ತು ಎಂದು ನೋಡುವುದಕ್ಕೆ ಹೊದಿಕೆ ಮುಖದ ಮೇಲಿತ್ತು. ಕೂಗಿಕೊಂಡೇ ಪಡಸಾಲೆಯ ಬಾಗಿಲ ಬಳಿ ಓಡಿಬಂದಳು. "ಅಯ್ಯೋ....ಅಯ್ಯೋ...." ಎಂದು ಒಂದೇ ಸಮನೆ ಅರಚಿದಾಗ ಏನೂ ತಿಳಿಯದವರಂತೆ ಶೇಷಗಿರಿಯಪ್ಪ "ಏನು ....ಏನಾಯ್ತು ?" ಎನ್ನುತ್ತಾ ಅವಸರದಿಂದ ದೀಪ ಹಚ್ಚಿದರು. ಅವರ ಹೆಂಡತಿಗೂ ಎಚ್ಚರವಾಗಿತ್ತು. "ಏಕಮ್ಮ ಹೆದರಿಕೊಂಡೆ... ಆದದ್ದು ಏನು ?" ಎಂದಳು ಆಕೆ. ಶೇಷಗಿರಿಯಪ್ಪನ ಕಾಲು ಹಿಡಿದುಕೊಂಡ ಗಿರಿಜ ಗೋಳೋ ಅಳುವುದಕ್ಕೆ ತೊಡಗಿದಳು. ಎಷ್ಟೇ ಕೇಳಿದರೂ ಆಕೆಯ ಬಾಯಿಂದ ಒಂದೇ ಒಂದು ಮಾತು ಹೊರಡಲಿಲ್ಲ. ಅಷ್ಟು ಹೆದರಿದ್ದಳು. ಮೈ ನಡುಗುವುದನ್ನು ಕಂಡು ಶೇಷಗಿರಿಯಪ್ಪನ ಹೆಂಡತಿ "ಅಯ್ಯೋ ಪ್ರಾರಬ್ಧವೆ. ಏನಾಯ್ತು ಇವಳಿಗೆ. ಏನನ್ನು ಕಂಡು ಹೆದರಿದಳೋ ..." ಎಂದು ಆಕೆ ಭಯದಿಂದ ಹೇಳಿದಳು. ಗಿರಿಜಳ ತುಟಿ ಬೆಳ್ಳಗಾಗಿತ್ತು. ಮುಖದಲ್ಲಿ ರಕ್ತವರ್ಣವೇ ಇಲ್ಲ. ಕೈ ಕಂಪಿಸುವುದನ್ನು ಕಂಡು ಶೇಷಗಿರಿಯಪ್ಪ ಹತ್ತು ಭಾರಿ "ಏನನ್ನು ಕಂಡೆ" ಎಂದು ಕೇಳಿದರು ತಮ್ಮ ಸಮಾಧಾನಕ್ಕೆ. ಎಲ್ಲಿಯಾದರೂ ತಾನು ಪಡಸಾಲೆಯ ಬಳಿ ಓಡಿದ್ದನ್ನು ಆಕೆ ಕಂಡಿದ್ದರೆ? ಆದರೆ ಗಿರಿಜ ಒಮ್ಮೆ ಮಾತ್ರ ಬಹು ಪ್ರಯಾಸದಿಂದ ತೊದಲುತ್ತಾ "ಪಿ... ಶಾ .. ಚಿ" ಎಂದಾಗ ಶೇಷಗಿರಿಯಪ್ಪನ ಉಸಿರು ಸಡಿಲಾಯ್ತು. ಆದರೂ "ಪಿಶಾಚಿ... ಈ ಮನೆಗೆ ಹೇಗೆ ಬರುತ್ತದೆ. ಏನೋ ಕನಸಿನಲ್ಲಿ ಕಂಡು ಹೆದರಿಕೊಂಡಿದ್ದಾಳೆ" ಎಂದರು. ಅವರ ಹೆಂಡತಿ "ಹೋಗಲಿ ....ನೀನು ಪಡಸಾಲೆಯಲ್ಲೆ ಮಲಗಿಬಿಡು" ಎಂದಳು. ಗಿರಿಜಳ ಸ್ಥಿತಿ ತೀರಾ ವಿಕೋಪಕ್ಕೆ ಹೋಗಿತ್ತು. ಮೈ ಆಗಲೇ ಬೆಚ್ಚಗಾಗಿತ್ತು. ಹಣೆ ಮುಟ್ಟಿದರೆ ಕೆಂಡದ ಮೇಲೆ ಕೈ ಆಡಿಸಿದಂತಾಯ್ತು. "ಹುಡುಗಿಗೆ ಜ್ವರ ಬಂದಿದೆಯಲ್ಲ.

ಅಷ್ಟು ಹೆದರಿಕೊಳ್ಳುವಂತಹ ಘಟನೆ ಏನು ನಡೆಯಿತು. ತಾಯಿ ಊರಲ್ಲಿ ಇಲ್ಲದಿರುವಾಗ ಹೀಗಾಗಬೇಕೆ ? ಅದೂ ನಮ್ಮ ಮನೆಗೆ ಬಂದು ರಾತ್ರಿ ಹೆದರಿಕೊಂಡಳು ಎಂದರೆ .. ವನಜ ಏನು ತಿಳಿದುಕೊಳ್ಳುತ್ತಾಳೋ ...” ಎಂದು ಶೇಷಗಿರಿಯಪ್ಪನ ಹೆಂಡತಿ ತುಂಬಾ ನೊಂದು ಹೇಳಿದಳು. “ಗಿರಿಜಾ .. ಏನೂ ಭಯವಿಲ್ಲ . ಬೆಳಗ್ಗೆ ಎಲ್ಲಾ ಸರಿಹೋಗುತ್ತದೆ. ನೀನು ಅಮ್ಮನ ಪಕ್ಕದಲ್ಲೇ ಹಾಸಿಗೆ ಬಿಡಿಸಿ ಮಲಗಿಕೋ .. ಅಷ್ಟು ಹೆದರಿಕೊಳ್ಳುವುದಕ್ಕೆ ಏನಾಗಿದೆ....ಆ ಕರಿ ಬೆಕ್ಕು ಎಲ್ಲಿ ನಾರಂದದಿಂದ ಮೈಮೇಲೆ ಕುಪ್ಪಳಿಸಿತೋ ಏನೋ .. ಅದು ಇಲಿ ಹಿಡಿಯುವುದಕ್ಕೆ ನಾರಂದ ಹತ್ತುತ್ತದೆ. ರಾತ್ರಿ ಹೊತ್ತು ಕಣ್ಣಿಗೆ ಹಾಗೆಲ್ಲಾ ಕಾಣಿಸುತ್ತವೆ” ಎಂದು ಶೇಷಗಿರಿಯಪ್ಪ ಧೈರ್ಯ ಹೇಳಿದರು. ಆದರೆ ಗಿರಿಜಳ ಸ್ಥಿತಿ ಸುಧಾರಿಸಲಿಲ್ಲ. ಇನ್ನೂ ನಡುಗುತ್ತಲೇ ಇದ್ದಳು. ದೀಪ ದೊಡ್ಡದು ಮಾಡಿ ಆಕೆಯ ಹಾಸಿಗೆಯನ್ನು ತಾನೇ ಪಡಸಾಲೆಗೆ ತಂದು.. ಬಾಗಿಲು ಹಾಕುತ್ತಾ “ಇನ್ನು ಭಯವಿಲ್ಲ . ಮಲಗು” ಎಂದರು. “ನಾನಿದ್ದೇನೆ ಗಿರಿಜಾ ....ಇನ್ನು ಹೆದರಿಕೆಯಿಲ್ಲ” ಎಂದು ಗಿರಿಜಳ ಬೆನ್ನು ತಟ್ಟಿದಳು ಶೇಷಗಿರಿಯಪ್ಪನ ಹೆಂಡತಿ. ಗಿರಿಜ ಹಾಸಿಗೆಯಲ್ಲಿ ಮುದುಡಿಕೊಂಡು ಮಲಗಿದಳು.

ಬೆಳಗ್ಗೆ ಹೊತ್ತುಮೂಡಿ ಎರಡು ಗಳಿಗೆ ಕಳೆದರೂ ಗಿರಿಜ ಏಳುವ ಸೂಚನೆ ಕಂಡುಬರಲಿಲ್ಲ. ಆಕೆಯ ಉಸಿರಿನ ಬಿಸಿ ಕಂಡೇ ಶೇಷಗಿರಿಯಪ್ಪ ಹೆದರಿದರು. “ಹುಡುಗಿಗೆ ಜ್ವರ ಬಂದಿದೆ... ಒಂದಿಷ್ಟು ಹುರಿದಕ್ಕಿ ಗಂಜಿ ಮಾಡು ಹೆದರಿಕೊಂಡದ್ದು ನಿಜ .. ಅದೇನು ಕಂಡಳೋ ದೇವರಿಗೆ ಗೊತ್ತು.... ಅಂತೂ ನಮ್ಮ ಗ್ರಹಗತಿ ನೆಟ್ಟಗಿಲ್ಲ. ದೇವರು ಆಕೆಯನ್ನು ಈ ಕಂಟಕದಿಂದ ಪಾರು ಮಾಡಿದರೆ ಸಾಕು .. ” ಎಂದು ಮತ್ತೆ ಶೇಷಗಿರಿಯಪ್ಪ ತಾವು ಮಾಡಿದ ಅಪರಾಧವನ್ನು ನೆನೆಸಿಕೊಂಡು ಹೇಳಿದರು. “ವನಜ ನಾಳೆ ಬೆಳಗ್ಗೆ ಬರುತ್ತೇನೆ ಎಂದಿದ್ದಾಳೆ. ಅಲ್ಲಿಯವರೆಗೆ ಏನೂ ಆಗದಿದ್ದರೆ ಸಾಕು... ಒಂದಿಷ್ಟು ಮೆಣಸಿನ ಕಾಳಿನ ಕಷಾಯವನ್ನಾದರೂ ಮಾಡಿಕೊಡು” ಎಂದು ಶೇಷಗಿರಿಯಪ್ಪ ಹೆಂಡತಿಯಲ್ಲಿ ಹೇಳಿದರು.

ನಾಲ್ಕು ಬೆಲ್ಲದಚಿಟ್ಟೆ .. ಎರಡು ಸೇರು ಅಡಿಕೆ . ಎರಡು ಕಟ್ಟು ಹಾಳೆಯ ಕಡ್ಡಿಯನ್ನು ಗಂಟು ಕಟ್ಟಿಕೊಂಡು ಹೊತ್ತಿಗೆ ಸರಿಯಾಗಿ ಕಾಳೂರಿನಿಂದ ಹೊರಟ ವನಜ, ಹೊತ್ತು ನೆತ್ತಿಗೆ ಬಂದಾಗ ಶುಂಠಿಕೊಪ್ಪಕ್ಕೆ ಬಂದಿದ್ದಳು.

"ಗಿರಿಜ ಹಾಸಿಗೆ ಹಿಡಿದಿದ್ದಾಳೆ" ಎಂಬ ಮಾತು ಕೇಳಿದಾಗಲೇ ಆಕೆ ಕಂಗಾಲಾಗಿದ್ದಳು. ಹತ್ತು ಬಾರಿ ಕೇಳಿದ್ದಳು. "ಅಯ್ಯ.... ಹೇಗೆ ಜ್ವರ ಬಂತು ....ಒಂದು ದಿನದಲ್ಲೆ ಜ್ವರ ಬರುವುದಕ್ಕೆ ಕಾರಣವೇನು?" ಎಂದು. ಪಡಸಾಲೆ ಯಲ್ಲಿ ಮಲಗಿದ್ದ ಮಗಳನ್ನು ಕಂಡಾಗ ವನಜಳಿಗೆ ದುಃಖ ಉಮ್ಮಳಿಸಿ ಬಂತು. ಎರಡು ದಿನದಲ್ಲೆ ಗಿರಿಜಳ ಸ್ಥಿತಿ ತೀರಾ ಕಂಗೆಟ್ಟಿತ್ತು. ತಾಯನ್ನು ಕಂಡಾಗ "ಅಮ್ಮ" ಎಂದು ಕರೆಯುವುದೂ ಅವಳಿಗೆ ಬೇಡವಾಗಿತ್ತು. ಜ್ವರದ ತಾಪ ತಾಳಲಾರದೆ ನರಳುವುದನ್ನು ಕಂಡು ವನಜ ಅತ್ತೇ ಬಿಟ್ಟಳು. "ಅಯ್ಯ.... ಏನಾಯ್ತು ನನ್ನ ಮಗಳಿಗೆ "ಎಂದು ಶೇಷಗಿರಿಯಪ್ಪನನ್ನೇ ಕೇಳಿದಳು. "ಚಾವಡಿ ಯಲ್ಲೆ ಮಲಗಿದ್ದಳು ವನಜಾ ....ಹತ್ತು ಗಂಟೆಯವರಿಗೆ ಪಡಶಾಲೆಯಲ್ಲಿ ದೀಪ ವಿತ್ತು. ಹನ್ನೊಂದು ಗಂಟೆಗೆ ಮೂತ್ರವಿಸರ್ಜನೆಗೆ ಹೋದವನು ಎರಡು ಬಾರಿ ಕರೆದಿದ್ದೆ. ಆಗ ಅವಳಿಗೆ ನಿದ್ದೆ ಬಂದಿತ್ತು. ಹೆದರಿಕೊಳ್ಳುವುದಕ್ಕೆ ಏನಿದೆ ಅಂತ. ಚಾವಡಿ ಇರುವುದು ಒಳಕೈಯಲ್ಲಿ. ಪಾತಾಳ ಅಂಕಣದ ಬಾಗಿಲು ಹಾಕಿದರೆ ಯಾರೂ ಒಳಬರುವಂತಿಲ್ಲ. ಹೀಗಿರುವಾಗ ಇವಕ್ಕೆ ನಾನು ಏನು ಹೇಳುವುದು. ಇದ್ದಕ್ಕಿದ್ದಂತೆ ಪಿಶಾಚಿ ಎಂದು ಕೂಗಿಕೊಂಡಳು ನೋಡು. ಒಟ್ಟಾರೆ ತುಂಬಾ ಹೆದರಿಕೊಂಡಿದ್ದಾಳೆ. ನೀನು ಮನೆಯಲ್ಲಿ ಇಲ್ಲದಿರುವಾಗ ....ನಮ್ಮ ಮನೆಯಲ್ಲಿದ್ದಾಗ ಇದು ಆಗಬಾರದಿತ್ತು.. ಅದೇ ನನಗೆ ಬೇಸರ. ಹೆದರಿಕೊಂಡಾಗ ನಾಲ್ಕು ದಿನ ಜ್ವರ ಬರುವುದು ಸಹಜ ಅನ್ನು. ... ದೇವರು ಆ ಬಗ್ಗೆ ಅನ್ಯಾಯ ಮಾಡಲಾರ. ಆದರೆ ನನ್ನ ಮನೆಯಲ್ಲಿ ಆಕೆ ಮಲಗಿದ್ದು ಹೀಗೆ ನಡೆದದ್ದು ನನಗೆ ದುಃಖವಾಗಿದೆ" ಎಂದು ಶೇಷಗಿರಿಯಪ್ಪ ಬಹಿರಂಗದಲ್ಲಿ ನಂಬುವಂತಹ ಮಾತನ್ನೆ ಹೇಳಿದರು. ವನಜ ಏನು ಹೇಳುತ್ತಾಳೆ? ಶೇಷಗಿರಿ ಯಪ್ಪನ ಮಾತನ್ನೆ ನಂಬಿದಳು. ಆದರೆ ಪಿಶಾಚಿ ಎಂದಾಗ ಮಾತ್ರ ಅವರ ಬಗ್ಗೆ ಅಂಜಿದ್ದಳು ವನಜ. ಎಲ್ಲಿಯಾದರೂ ಪ್ರೇತದ ಆಕರ್ಷಣೆ ಆಗಿದ್ದರೆ.... ಬ್ರಹ್ಮರಾಕ್ಷಸನ ಸೆಳೆಯಲ್ಲಿ ಸಿಲುಕಿದ್ದರೆ? ಭೂತದ ದೃಷ್ಟಿ ಬಿದ್ದಿದ್ದರೆ? ತಾನು ಮನೆಬಿಟ್ಟು ಕಾಳೂರಿಗೆ ಹೋದದ್ದೇ ಪ್ರಮಾದವಾಯ್ತು ಎಂದು ಅನಂತರ ಚಿಂತಿಸಿದಳು.

ಶೇಷಗಿರಿಯಪ್ಪ ಎಷ್ಟೇ ಒತ್ತಾಯಿಸಿದರೂ "ನಿಮಗೆಲ್ಲಾ ಸುಮ್ಮನೆ ತೊಂದರೆ... ರಾತ್ರಿಯೆಲ್ಲಾ ಕನವರಿಸುತ್ತಾಳೆ. ಹೆದರಿಕೊಂಡು ಕೂಗುತ್ತಾಳೆ.

ಇದರಿಂದ ನಿಮಗೂ ನಿದ್ದೆಯಿಲ್ಲ. ತೋಟದ ಮನೆ ಇರುವಾಗ ಆಕೆ ಅಲ್ಲಿರುವುದೇ ಒಳ್ಳೆಯದು” ಎಂದು ಮಗಳನ್ನು ತನ್ನ ತೋಟದ ಮನೆಗೆ ಕರೆದುಕೊಂಡು ಹೋದಳು.

ಮನೆಮದ್ದು ಮಾಡಿದಳು. ಯಾವುದೋ ಬೇರಿನ ಕಷಾಯ ಕುಡಿಸಿದಳು. ಶೇಷಗಿರಿಯಪ್ಪನೂ ಶ್ರಮವಹಿಸಿದರು. ದಿನವೆಲ್ಲಾ ತೋಟದ ಮನೆಯಲ್ಲಿದ್ದು ವನಜಳಿಗೆ ಧೈರ್ಯ ಹೇಳುತ್ತಿದ್ದರೂ ಮಗಳ ಸ್ಥಿತಿ ಕಂಡಾಗ ಆಕೆಗೆ ಭಯ ಆವರಿಸಿತು. ಹರಕೆ ಹೊತ್ತಳು. ಒಂದಲ್ಲ, ಎರಡಲ್ಲ.... ಪಂಜುರ್ಲಿಗೆ ಹೂವಿನ ಪೂಜೆ . ಗುಡಿಯ ದೈವಕ್ಕೆ ಎರಡು ಕೋಳಿ . ಶಿವನಿಗೆ ರುದ್ರಾಭಿಷೇಕ ...ಸಾಧ್ಯವಾದಷ್ಟು ಹರಕೆ ಹೇಳಿಕೊಂಡಳು. “ಗಿರಿಜ ಬೇಗ ಗುಣವಾದರೆ ಶಿವನಿಗೆ ಒಂದು ಬೆಳ್ಳಿಯ ಆರತಿಯನ್ನು ಮಾಡಿಸುತ್ತೇನೆ” ಎಂದು ಶೇಷಗಿರಿಯಪ್ಪನೂ ದೇವರಿಗೆ ವಚನ ಕೊಟ್ಟರು. ಆದರೂ ಪರಿಸ್ಥಿತಿ ಸುಧಾರಿಸಲಿಲ್ಲ. “ಹೌದು....ಪಿಶಾಚಿ ಅನ್ನುತ್ತಾರಲ್ಲ....ಆ ಕಮ್ತಿಯವರ ಮಗನಿಗೆ ಇವಳ ಮೇಲೆ ಮನಸ್ಸಿದ್ದ ವಿಚಾರ ನನಗೆ ಗೊತ್ತು ಗಿರಿಜ ಗುಡಿಗೆ ಹೋಗುತ್ತಿದ್ದಾಗ ಒಮ್ಮೆ ಬಯಲಿನ ಹತ್ತಿರ ಸಿಕ್ಕಿದ್ದನಂತೆ. ಅವನು ಮದುವೆಯಿಲ್ಲದೆ ಸತ್ತ. ನೋಡಿ.... ಅವನ ಪ್ರೇತವೇ ಹೀಗೆ ಪೀಡಿಸುತ್ತಿದೆಯೋ ಏನೋ....” ಎಂಬ ಸಂದೇಹ ವನಜಳದ್ದು. ಮಂತ್ರತಂತ್ರದಲ್ಲಿ ಪ್ರಸಿದ್ಧನಾದ ನಾಗಾಚಾರಿಯನ್ನು ಕರೆಯಿಸಿದರು ಶೇಷಗಿರಿಯಪ್ಪ. “ಈ ಪ್ರೇತವನ್ನು ಅರ್ಧ ಗಳಿಗೆಯಲ್ಲಿ ಓಡಿಸುತ್ತೇನೆ” ಎಂದು ಪೂಜೆಗೆ ಕುಳಿತ. ಎರಡು ಗುಂಬಳಕಾಯಿ ಒಡೆದ. ಓಕಳಿಯ ಕೆಂಪು ನೀರನ್ನು ಸುಳಿದು ತೆಂಕಿನ ದರೆಯತ್ತ ಚೆಲ್ಲಿದ. ಏನೇನೋ ಮಾಡಿ ಕೊನೆಗೆ ಒಂದು ತಾಯಿತವನ್ನು ಆಕೆಯ ಕೈಗೆ ಸುತ್ತಿದ. ಇಷ್ಟನ್ನು ಮಾಡಿ “ಇನ್ನು ಚಿಂತೆಯಿಲ್ಲ ಒಡೆಯ....ನಾಳೆ ಸೂರ್ಯೋದಯಕ್ಕೆ ಪ್ರೇತ ಬಿಡುತ್ತದೆ” ಎಂದು ನಾಲ್ಕು ಸೇರು ಅಕ್ಕಿ, ಐದು ರೂಪಾಯಿ ತೆಗೆದುಕೊಂಡು ಹೋದ. ಆದರೆ ಏನೂ ಪ್ರಯೋಜನವಾಗಲಿಲ್ಲ. ಶೇಷಗಿರಿಯಪ್ಪನಿಗೂ ಅದು ವಿಷಮಜ್ವರ ಎಂಬುದು ತಿಳಿಯಲಿಲ್ಲ. ವಾಯಿದೆ ಮುಗಿಯದೆ ಆ ಜ್ವರ ಹಿಂದಾಗುವುದಿಲ್ಲ ಎಂಬುದು ವನಜಳಿಗೂ ತಿಳಿಯಲಿಲ್ಲ. ಮದ್ದು ಯಾವ ಬದಲಾವಣೆಯನ್ನೂ ಮಾಡಿರಲಿಲ್ಲ. ನಾಗಾಚಾರಿಯ ಮಂತ್ರತಂತ್ರವೂ ಸಾರ್ಥಕವಾಗಿರಲಿಲ್ಲ. ಹದಿನೆಂಟು ದಿನ ಕಳೆದುಹೋಗಿತ್ತು. ಮಗಳು

ಉಳಿಯುವ ಭರವಸೆ ವನಜಳಿಗೆ ಕಾಣಲಿಲ್ಲ. ಏನೋ ಯೋಚಿಸಿಕೊಂಡಳು. ಯಾವುದೋ ಒಂದು ತೀರ್ಮಾನಕ್ಕೆ ಬಂದಳು. ತನ್ನ ನಿರ್ಧಾರವನ್ನು ತಾನೇ ಸಮರ್ಥಿಸಿಕೊಂಡಳು. ತನ್ನ ಮಗಳನ್ನು ಉಳಿಸಿಕೊಳ್ಳುವುದಕ್ಕೆ ಶಿವನ ಮರೆ ಹೋಗುವ ಯತ್ನ ಅವಳದು. ಅದಕ್ಕೂ ಒಂದು ನಿಯಮವಿದೆ. ಆ ಮಾರ್ಗದಲ್ಲಿ ಮುನ್ನಡೆಯುವುದಕ್ಕೆ ವನಜಳ ಮನಸ್ಸು ಪ್ರೋತ್ಸಾಹಿಸಿತು. "ಹೇಗಾದರೂ ಗಿರಿಜ ಬದುಕಿದ್ದರೆ ಸಾಕು... ಹೇಗಿದ್ದರೂ ಆಕೆ ಸಾಯುವುದು ಸಾಧ್ಯವೇ ಇಲ್ಲ" ಎಂದುಕೊಂಡಳು ವನಜ. ಅವಳ ಸೋದರತ್ತೆಯ ಮಗಳಿಗೆ ವೈಲಿಗೆಯಾದಾಗ ಆಕೆಯೂ ಉಳಿಯುವ ಭರವಸೆ ಕಾಣದೆ ಸೋದರತ್ತೆ ಕೊನೆಗೆ ಶಿವದೇವರ ಮುಂದೆ ಅಡ್ಡ ಬಿದ್ದು "ನನ್ನ ಮಗಳನ್ನು ಬಸವಿಯಾಗಿ ಬಿಡುತ್ತೇನೆ" ಎಂದು ಹರಕೆ ಹೊತ್ತಳು. ಆಕೆ ಬದುಕಿಕೊಂಡಳು. ಈಗ ಆ ಹುಡುಗಿ ಬಸವಿಯಾಗಿಯೇ ತಾವರೆ ಕೆರೆಯಲ್ಲಿದ್ದಾಳೆ. ಆ ಹರಕೆಯ ಪ್ರಭಾವ ವನಜಳನ್ನು ಎಚ್ಚರಿಸಿತು. ಬಹಳವಾಗಿ ಯೋಚಿಸಿದಳು. ಒಂದು ಗಂಟೆಕಾಲ ದೀರ್ಘವಾದ ಆಲೋಚನೆ ಮಾಡಿದಳು. ತಾನು ಹಾಗೆ ಮಾಡುವುದು ನ್ಯಾಯವೆ? ಅದರಿಂದ ಮಗಳಿಗೆ ದ್ರೋಹವಾಗುತ್ತದೆಯೆ? ಬಸವಿ ಬಿಟ್ಟು ನಾಳೆ ಕಂಡವರ ಹಿಂದೆ ಹೋಗು ಎನ್ನುವುದಕ್ಕೆ ಆಗ ನನ್ನ ಅಂತರ್ಯ ಒಪ್ಪುತ್ತದೆಯೆ? ಇದರಿಂದ ಗಿರಿಜಳ ಬದುಕೇ ಹದಗೆಡುವುದಾದರೆ ಆಕೆ ಬದುಕಿದ್ದೂ ಸಾರ್ಥಕವೇನು? ಎಂದು ಬಹಳವಾಗಿ ವಿವೇಚಿಸಿದಳು. "ಏನೇ ಆಗಲಿ.... ಮುಂದಿನದು ಮುಂದೆ. ನಾಳೆಯದನ್ನು ಕಂಡವರು ಯಾರು? ಮೊದಲು ಗಿರಿಜ ಬದುಕುವುದು ನನಗೆ ಬೇಕು" ಎಂದೇ ವನಜ ಸೀದಾ ಕೋಣೆಗೆ ಬಂದಳು. ಜೋಡು ತೆಂಗಿನಕಾಯಿಯನ್ನು ಸುಳಿದು....ಎರಡೂ ಕೈಜೋಡಿಸಿದಳು. ಗಟ್ಟಿ ಮನಸ್ಸು ಮಾಡಿದಳು. ಪಾಪ, ಗಿರಿಜಗಳಿಗೆ ಒಂದೂ ತಿಳಿದಿರಲಿಲ್ಲ. ಶೇಷಗಿರಿಯಪ್ಪ ಇನ್ನೂ ಬಂದಿರಲಿಲ್ಲ. ಮೆಲ್ಲನೆ ಅಂದೇಬಿಟ್ಟಳು "ದೇವರೆ... ನನ್ನ ಮಗಳನ್ನು ಕಾಪಾಡು....ಆಕೆಯ ಕೊರಳಲ್ಲಿರುವುದು ನೀನು ಕಟ್ಟಿದ ಕರಿಮಣಿ. ನಿನ್ನ ಹೆಂಡತಿಯನ್ನು ನೀನೇ ರಕ್ಷಿಸು. ನನ್ನಿಂದ ಯಾವ ಅಪರಾಧವೇ ನಡೆದಿರಲಿ... ನನ್ನ ಮಗಳನ್ನು ಬಸವಿಯಾಗಿ ಬಿಡುತ್ತೇನೆ. ಆಡಿದ ಮಾತಿಗೆ ತಪ್ಪುವುದಿಲ್ಲ. ಒಂದು ವರ್ಷ ಕಾಲ ಬಸವಿಯಾಗಿ ಬಿಟ್ಟು ನಿನ್ನ ಹರಕೆಯನ್ನು ಸಲ್ಲಿಸುತ್ತೇನೆ" ಎಂದು ವನಜ ಹರಕೆ ಒಪ್ಪಿಸಿದಳು. ಒಂದು ವರ್ಷ ಮಾತ್ರ

ಗಡವು ಕೊಟ್ಟಿದ್ದಳು. ಅದರಲ್ಲೂ ಆಕೆ ಮಗಳ ಭವಿಷ್ಯವನ್ನೇ ಯೋಚಿಸಿದ್ದಳು. ಅದು ಯಾವ ನ್ಯಾಯವೋ... ಗಿರಿಜಳನ್ನು ಬಸವಿಯಾಗಿ ಬಿಡುತ್ತೇನೆ ಎಂಬ ಹರಕೆಯಲ್ಲಿ ಏನು ಮಹತ್ವವಿದೆಯೋ.... ಇಪ್ಪತ್ತೊಂದನೆಯ ದಿನ ಜ್ವರಬಿಟ್ಟಿತು. ನಿಜವಾಗಿಯೂ ವನಜಳಿಗೆ ಹೋದ ಜೀವ ಬಂತು. ಮಗಳ ದೇಹ ಬಡಕಲಾಗಿ ನಿತ್ರಾಣವಿದ್ದರೂ ಜ್ವರ ಸಂಪೂರ್ಣ ಬಿಟ್ಟಿದ್ದರಿಂದ ಶಿವನನ್ನು ಮತ್ತೆ ಮತ್ತೆ ನೆನಸಿಕೊಂಡಳು ವನಜ.

* * * *

ಸಂಜುರ್ಗಿಯ ದಿವ್ವದ ಮನೆಯಲ್ಲಿ ಭಾರಿ ಹೂವಿನ ಪೂಜೆಯ ಸೇವೆ ನಡೆಯಿತು. ಗುಡ್ಡದ ದೆವ್ವಕ್ಕೆ ಎರಡು ಕೋಳಿಯನ್ನು ಆಹುತಿ ಕೊಡಲಾಯ್ತು. ಶೀನಗಿರಿಯಪ್ಪ ಬೆಳ್ಳಿಯ ಆರತಿಯನ್ನು ಮಾಡಿಸಿ ಗುಡಿಗೆ ಒಪ್ಪಿಸಿದರು. "ಇಷ್ಟೊಂದು ಹರಕೆ ಅಮ್ಮ ನನಗಾಗಿ ಹೇಳಿಕೊಂಡಿದ್ದಳು" ಎಂದು ಗಿರಿಜ ಮತ್ತೆ ತಿಳಿದುಕೊಂಡಳು. ಆದರೆ ಇನ್ನೊಂದು ಹರಕೆ ಬಾಕಿ ಇದೆ ಎನ್ನುವುದು ಗಿರಿಜಳ ಗಮನಕ್ಕೆ ಬಂದಿರಲಿಲ್ಲ. ಒಂದು ತಿಂಗಳಲ್ಲಿ ಗಿರಿಜ ಕೊಂಚ ಸುಧಾರಿಸಿದಳು. ಎದ್ದು ಓಡಾಡುವುದಕ್ಕೆ ತೊಡಗಿ... ಮಾತುಕತೆ ಆರಂಭಿಸಿದ ಮೇಲೆ ವನಜ ಆ ದಿನದ ಘಟನೆ ಬಗ್ಗೆ ಕೇಳಿದಳು. ಮಗಳ ಬಾಯಿಂದಲೇ ಸಂಪೂರ್ಣ ವಿಚಾರ ತಿಳಿಯುವ ಆಸೆ ಅವಳಿಗಿತ್ತು. ಆ ದಿನ ತಲೆ ಬಾಚುತ್ತಿದ್ದಾಗ ಮೆಲ್ಲನೆ ವಿಷಯದ ಕುರಿತು ಕೇಳುವ ಸಾಹಸ ಮಾಡಿದಳು.

"ನಾನು ಕಾಳೂರಿಗೆ ಹೋದದ್ದೆ ಅಪರಾಧವಾಯ್ತು...ನಿನ್ನನ್ನು ಕರೆದುಕೊಂಡು ಹೋಗಿದ್ದರೆ ಅನಾಹುತವೂ ಇರುತ್ತಿರಲಿಲ್ಲ. ಕೆಡುವ ಕಾಲಕ್ಕೆ ನನಗೆ ಆ ಬುದ್ಧಿ. ದೊಡ್ಡಮ್ಮ ಕೂಡಾ ಉರು ಹಾಕಿದಳು–ಏನೋ ಗಂಡಸರು ಇರುವ ಮನೆ ಎಂದು ಧೈರ್ಯವಾಗಿ ಹೋದೆ. ಬರುವಷ್ಟರಲ್ಲಿ ಇಷ್ಟೊಂದು ಅನರ್ಥ. ನನಗೆ ಅರ್ಥವೇ ಆಗಿರಲಿಲ್ಲ ಗಿರಿಜಾ...ಸತ್ಯವಾಗಿ ಹೇಳು ಗಿರಿಜಾ...ಆ ದಿನ ಏನು ನಡೆಯಿತು ?" ಎಂದು ವನಜ ಕೇಳಿದಳು.

ಘಟನೆಯ ಬಗ್ಗೆ ವರದಿ ಒಪ್ಪಿಸಿದಳು ಗಿರಿಜ.

"ನೀನು ಪಡಸಾಲೆಯಲ್ಲಿ ಮಲಗಬಾರದಿತ್ತೆ ?"

“ಅಯ್ಯನೇ ಹೇಳಿದರು, ಚಾವಡಿಯಲ್ಲಿ ಮಲಗು ಎಂದು”

“ಅದೇಕೆ....ಹಾಗೆ ಹೇಳಿದರು”

“ಗೊತ್ತಿಲ್ಲ....ನನಗೂ ಅದೇ ಸರಿಕಂಡಿತು. ಚಾವಡಿಗೆ ತಳಿ ಇರುವ್ರದರಿಂದ ಭಯವಿಲ್ಲ ಎಂದೇ ಮಲಗಿದೆ”

“ಹೌದು... ಪಿಶಾಚಿ ಎಂದು ಕನವರಿಸಿದೆಯಲ್ಲ...ಅದೇನು ಕಂಡೆ ಗಿರಿಜ....”

“ನಾನು ಕಣ್ಣು ತೆರೆದಾಗ ಕಪ್ಪಗಿನ ವ್ಯಕ್ತಿ ನಿಂತಂತೆ ಕಂಡಿತು”

“ಕತ್ತಲೆಯಲ್ಲಿ ಹೇಗೆ ತಿಳಿಯಿತು ?”

“ತಿಂಗಳ ಬೆಳಕಿತ್ತಲ್ಲ....ತಳಿಯ ಎಡೆಯಿಂದ ಬಂದ ಬೆಳಕಿನಲ್ಲಿ ನಾನು ಕಂಡದ್ದು”

“ ಆಮೇಲೆ... ?”

“ನಾನು ಗಟ್ಟಿಯಾಗಿ ಕೂಗಿದೆ....”

“ಒಂದೇ ಕೂಗಿಗೆ ಅಯ್ಯ ಬಂದರೇನು ?”

“ಇಲ್ಲ....ಮತ್ತೆ ನನ್ನ ಮುಖದ ಮೇಲೆ ವಸ್ತ್ರವನ್ನು ಮುಚ್ಚಿತ್ತು. ದಿಸ್ಸೆಯಿಂದ ಕೆಳಹಾರಿ ಪಡಸಾಲೆಯ ಬಾಗಿಲ ಬಳಿ ಬಂದು ಕೂಗಿದೆ ...”

“ಅದೇನು ರೂಪ ಗಿರಿಜ....”

“ನನಗೆ ಹೇಗಮ್ಮ ಗೊತ್ತಾಗಬೇಕು”

”ಪಾತಾಳ ಅಂಕಣದ ಬಾಗಿಲು ಹಾಕಿತ್ತೆ ?”

“ಹೌದು....”

“ಸರಿಯಾಗಿ ನಿನಗೆ ಏನೆಂದು ಕಾಣಲಿಲ್ಲವೆ ?”

“ಹಾಗೆ ಕಾಣುವುದಕ್ಕೆ ನನಗೆ ಎಲ್ಲಿದೆ ಧೈರ್ಯ. ಎಷ್ಟು ಹೆದರಿಕೊಂಡಿದ್ದೆ ಅಂದರೆ....ಅದು ನನಗೇ ಗೊತ್ತಮ್ಮ. ಏನೋ ನೆನಸಿಕೊಂಡೆ. ಆ ದಿನ ಕಮ್ತಿಯವರ ಮಗ ನೇಣುಹಾಕಿಕೊಂಡು ಸತ್ತಲ್ಲರ .. ಅದೇ ನೆನಪಿಗೆ ಬಂತು. ಅದು ಖಂಡಿತಾ ಪಿಶಾಚಿಯೇ ಇರಬೇಕು”

“ಬ್ರಾಹ್ಮಣರ ಮನೆಗೆ ಹೇಗೆ ಪಿಶಾಚಿ ಬರುತ್ತದೆ”

“ಯಾರೋ ಅನ್ನುತ್ತಿದ್ದರು ಗುಡಿಯಲ್ಲಿ... ಕಮ್ತಿಯವರ ಮಗ ಸತ್ತ ಮೇಲೆ ಬ್ರಹ್ಮರಾಕ್ಷಸ ಆಗಿದ್ದಾನೆ ಎಂದು”

"ಯಾರು ಹೇಳಿದರು...."

"ಗುಡಿಯಲ್ಲಿ ಯಾರೋ ಅಂದ ಮಾತು. ಅದು ನನ್ನ ಕಿವಿಗೆ ಬಿದ್ದಿತ್ತು. ಯಾರೋ ಗುಡಿಯ ಕೆರೆಯ ಏರಿಯ ಮೇಲೆ ಪ್ರೇತರೂಪ ಕಂಡಿದ್ದರಂತೆ. ನನಗೆ ಅದೇ ನೆನಪಿಗೆ ಬಂದು ಹೆದರಿಕೊಂಡದ್ದೇ ಹೀಗಾಗಲು ಕಾರಣ .." ಎಂದು ಗಿರಿಜ ಹೇಳಿದಳು.

"ಮುಖ್ಯ ನನ್ನ ಹಣೆಬರಹ. ನಿನಗೆ ಬಂದ ಜ್ವರ....ಜ್ವರ ಬಂದಾಗ ನೀನು ನರಳುವುದನ್ನು ನೋಡಿದರೆ ಬದುಕುವ ಆಸೆಯೇ ಇರಲಿಲ್ಲ ಗಿರಿಜ.... ಒಂದಲ್ಲ ಎರಡಲ್ಲ, ಎಲ್ಲಾ ಪ್ರಯತ್ನ ಮಾಡಿದರೂ ನಿನ್ನ ಬಗ್ಗೆ ಆಸೆ ಉಳಿಯಲೇ ಇಲ್ಲ....ಕೊನೆಗೆ .." ಅರ್ಧದಲ್ಲಿ ಮಾತು ನಿಲ್ಲಿಸಿದಳು ವನಜ. ಹೇಳುವುದಕ್ಕೆ ಏಕೋ ಅಂಜಿದಳು.

"ಏನಮ್ಮ....ಕೊನೆಗೆ ಎಂದು ಅರ್ಧದಲ್ಲಿ ಮಾತು ನಿಲ್ಲಿಸಿದೆ."

"ಹೇಳುವುದಕ್ಕೆ ಕಷ್ಟವಾಗುತ್ತದೆ ಗಿರಿಜ ..."

"ಹೇಳಮ್ಮ ನಾನು ಕೊನೆಗೆ ಬದುಕಿದ ಬಗೆ ಹೇಗೆ"

"ನೀನು ಉಳಿಯುವ ಭರವಸೆ ಕಾಣಲಿಲ್ಲ ಗಿರಿಜಾ. ದುಃಖ ತಡೆಯಲಾರದೆ ಶಿವನನ್ನು ಬೇಡಿಕೊಂಡೆ. ನಿನ್ನ ಮೇಲಿನ ಆಸೆಗಾಗಿ ದೇವರಿಗೆ ಒಂದು ಮಾತು ಕೊಟ್ಟಿದ್ದೇನೆ ಮಗು"

"ಯಾವ ಮಾತು...."

"ನಿನ್ನನ್ನು ಬಸವಿ ಬಿಡುವುದಾಗಿ ಹೇಳಿದ್ದೇನೆ"

"ಅಂದರೆ ಅದರ ಅರ್ಥ ಏನಮ್ಮ ..."

ವಿವರಿಸಿದಳು ವನಜ. ಗಿರಿಜಳ ಎದೆಯಲ್ಲಿ ಕೆಂಡವಿಟ್ಟಂತಾಯಿತು.

"ಅದು ಹೇಗಮ್ಮ ಆಗುತ್ತದೆ ..."

"ಒಂದು ವರ್ಷಕಾಲ ನೀನು ಬಸವಿಯಾಗಿ ಇರಲೇಬೇಕು ..."

"ಆ ಮೇಲೆ...."

"ಯಾರ ಆಶ್ರಯದಲ್ಲಾದರೂ ಬಿಡುತ್ತೇನೆ"

"ಅದು ನನ್ನಿಂದ ಆಗುತ್ತದೆಯೆ ?"

"ಹರಕೆ ಹೊತ್ತಿದ್ದೇನೆ. ಅದನ್ನು ಮರೆತರೆ ದೇವರು ಕೋಪಿಸಿಕೊಳ್ಳುತ್ತಾನೆ. ಈ ಕಾರ್ಯ ಎರಡು ದಿನ ಕಷ್ಟವಾಗುತ್ತದೆ. ನಾಲ್ಕು ಜನರ ಸೇವೆ

ಮಾಡಿದರೆ ಹರಕೆ ಸಂದಾಯದಂತೆ"

ಪಾಪ....ಅಮ್ಮನ ತೃಪ್ತಿಗಾಗಿ ಗಿರಿಜ ಒಪ್ಪಲೇಬೇಕಾಯ್ತು. ಆದರೂ ಆಕೆಗೆ ಸಂಕೋಚ.

"ಹೇಗಮ್ಮ ನಾನಾಗಿ ಗಂಡಸರ ಹಿಂದೆ ಹೋಗುವುದು"

"ಹೋಗಲೇಬೇಕು ಮಗು. ಈ ಸಂಪ್ರದಾಯವೇನೂ ಹೊಸತಲ್ಲ. ಇಂದಿಗೂ ಅದು ಆಚರಣೆಯಲ್ಲಿದೆ...."

"ನನಗೆ ಒಂದೂ ತಿಳಿಯುವುದಿಲ್ಲ... ಯಾವಾಗ ಯಾರ ಸೇವೆ ಮಾಡಬೇಕು ಎಂದು ನೀನೇ ಹೇಳಿಬಿಡು."

ಅಂದು ಸೋಮವಾರ. ವನಜ ಮಗಳನ್ನು ಕರೆದುಕೊಂಡು ಹೊತ್ತು ಕಂತುವ ಮುಂಚೆ ಮಕ್ಕಿ ಬಯಲಿನ ದಾರಿಯಲ್ಲಿ ಬಂದಳು. ಆಕೆಯ ಮನಸ್ಸಿಗೆ ರಾಜು ಹೆಗಡೆಯ ಬಳಿ ಮಗಳನ್ನು ಕಳುಹಿಸುವುದೇ ಯುಕ್ತವಾಗಿ ಕಂಡಿತು. ಅವನಿಗೂ ಗಿರಿಜಳ ಮೇಲೆ ಮನಸ್ಸಿತ್ತು. ಅದನ್ನು ತಿಳಿದೇ ವನಜ ಮಕ್ಕಿಯ ಅಂಗಣಕ್ಕೆ ಬಂದಳು. ರಾಜು ಹುಲ್ಲುಕುತ್ತರೆಯ ಬಳಿಯ ಮಂಚದಲ್ಲಿ ಕುಳಿತಿದ್ದ. "ನೋಡು....ಇದು ದೇವರ ಕೆಲಸ. ಆಚರಿಸಬೇಕಾದ್ದು ನಮ್ಮ ಕರ್ತವ್ಯ. ಹೆಗಡೆಯ ಮನೆತನ ದೊಡ್ಡದು. ಹುಡುಗ ಲಕ್ಷಣವಾಗಿದ್ದಾನೆ. ಒಂದೆ ಒಂದೆರಡು ಬಾರಿ ನಿನ್ನ ಬಗ್ಗೆ ಕೇಳಿದ್ದ. ಅವನ ಸೇವೆ ಮಾಡು ಗಿರಿಜಾ ... ಒಮ್ಮೆಯಾದರೂ ಈ ಕಾರ್ಯ ನಿನ್ನಿಂದ ಆಗಲಿ....ನಾನು ಮನೆಗೆ ಹೋಗುತ್ತೇನೆ. ಬೇಗ ಬಂದುಬಿಡು. ಬಯಲಿನ ದಾರಿಯಲ್ಲೇ ಬಾ...." ಎಂದು ವನಜ ಮಗಳನ್ನು ಬಿಟ್ಟು ಮನೆಯ ಹಾದಿ ಹಿಡಿದಳು. ಎಷ್ಟೋ ನೆಮ್ಮದಿಯಾಗಿತ್ತು ಅವಳಿಗೆ. ದೇವರಿಗೆ ಮಾತುಕೊಟ್ಟು ಅದನ್ನು ಉಳಿಸಿಕೊಂಡೆ ಎಂಬ ತೃಪ್ತಿಯಿಂದಲೇ ಮನೆಗೆ ಬಂದಳು.

ಹುಲ್ಲುಕುತ್ತರೆಯ ಬಳಿ ಬಂದಿದ್ದಳು ಗಿರಿಜ. ನಡೆಯುವುದಕ್ಕೆ ಕಾಲಿಗೆ ಶಕ್ತಿಯೇ ಇಲ್ಲವಾಗಿತ್ತು. ಎಂತಹ ನಂಬಿಕೆ ? ಎಂತಹ ಕಟುವಾದ ಹರಕೆ ? ಇದರಿಂದ ತಾನು ಬದುಕಿದ್ದು .. ಏನು ಪ್ರಯೋಜನವಾಯ್ತು ? ಬಸವಿಯಾಗಿ ಗಂಡಸರ ಹಿಂದೆ ಹೋಗುವ ಈ ನಂಬಿಕೆಗೆ ದೇವರ ಬೆಂಬಲವಿದೆಯೆ ? ಅಮ್ಮ ಶಿವನಿಗೆ ಮಾತುಕೊಟ್ಟಿದ್ದಳೆ ? ಮತ್ತೆ ಗಿರಿಜ ಯೋಚಿಸಲಿಲ್ಲ. ಹಿಂದೆ ನಿಂತಿದ್ದಳು. ಕೈಬಳೆಗಳ ಸದ್ದು ಕೇಳಿ ರಾಜು ಹೆಗಡೆ ಕತ್ತು ತಿರುಗಿಸಿ ನೋಡಿದ.

ಹೇಗಾಗಬೇಕು ? ಬಯಸಿದ ಹೆಣ್ಣು ಹಿಂದೆ ನಿಂತಿದ್ದಾಳೆ. ಸಂಜೆಯ [illegible] ಗುಡ್ಡದ ತಪ್ಪಲಿನಿಂದ ತಂಗಾಳಿ ಬೀಸುತ್ತಿತ್ತು. "ಏಕಮ್ಮ ಈ ಹೊತ್ತಿನಲ್ಲಿ ಇಲ್ಲಿಗೆ ಬಂದೆ?" ಎಂದ ಹೆಗಡೆ. ಗಿರಿಜ ಏನನ್ನೂ ಉತ್ತರಿಸಲಿಲ್ಲ. ನಾಲ್ಕು ಬಾರಿ ಕೇಳಿದ ರಾಜು. ಆ ಮುಖಭಾವದಿಂದಲೇ ಅವನಿಗೆ ಅರ್ಥವಾಗಿದ್ದರೂ ಮುಂದುವರಿಯುವುದಕ್ಕೆ ಭಯ. ಮತ್ತೆ ಮತ್ತೆ ಕೇಳಿದ. ಏನು ಕಂಡಿತೋ ....ಹತ್ತಿರ ಬಂದು ಕೈ ಹಿಡಿದೇಬಿಟ್ಟ. "ವನಜಮ್ಮ ನಿನ್ನನ್ನು ಕಳುಹಿಸಿರಬೇಕು ...ಎಂದೋ ಹೇಳಿದ್ಲೆ" ಎಂದ ಹೆಗಡೆ. "ಅಮ್ಮ ಅಮ್ಮ ನನ್ನನ್ನು ಬಿಟ್ಟು ಬಿಟ್ಟಿದ್ದಾಳೆ" ಎಂದಳು ಗಿರಿಜ ತೊದಲುಮಾತಿನಿಂದ. ಹಲ್ಲುಕತ್ತರಿಯು ಹಿಂದೆ ನಡೆದ ರಾಜು. ಗಿರಿಜ ಅವನ ಹಿಂದೆಯೇ ನಡೆದಳು.

೯

ಒಂಟೆತ್ತಿನ ಗಾಡಿಯ ಮೂಕಿಯ ಮೇಲೆ ಕುಳಿತು....ಕೈಯಲ್ಲಿ ಬಾರು ಕೋಲನ್ನು ಹಿಡಿದು .. ಪಕ್ಕದಲ್ಲಿ ಗಿರಿಜಳನ್ನು ಕುಳ್ಳಿರಿಸಿಕೊಂಡು ಎತ್ತಿನ ಬಾಲ ಜಿಗಿಸುತ್ತಾ ಸರ್ವೆ ತೋಪಿನ ದಾರಿಯಲ್ಲಿ ರಾಜು ಹೆಗಡೆ ಬರಾಕಿನಿಂದ ಹೋಗುವುದನ್ನು ಕಂಡು ಕಿಡಿಕಿಡಿಯಾದರು ಶೇಷಗಿರಿಯಪ್ಪ. ಎದೆಯಲ್ಲಿ ಕಿಚ್ಚು ಹೊತ್ತಿಕೊಂಡಿತು. ಅದರಲ್ಲೂ ಸುಡು ಬಿಸಿಲು ಬೇರೆ. ಕಂಬಳಕ್ಕೆ ಹೊರಟಿದ್ದರು. ಶುಂಠಿಕೊಪ್ಪದ ಸುಗ್ಗಿಗದ್ದೆಯ ಕಂಬಳ ಅಂದರೆ ಭಾರೀ ಮನರಂಜನೆಯ ಕಂಬಳ. ಆಸುಪಾಸಿನ ಹಳ್ಳಿಗೆಲ್ಲಾ ಅದೇ ದೊಡ್ಡದು. ಒಂದು ಜಾತ್ರೆ ನಡೆದಂತೆ ನಡೆಯುತ್ತದೆ. ಮೂರು ತಲೆಮಾರಿನಿಂದ ಹೆಗಡೆ ಮನೆಯವರು ಆ ಸಂಪ್ರದಾಯವನ್ನು ವೈಭವದಿಂದಲೇ ನಡೆಯಿಸಿಕೊಂಡು ಬಂದಿದ್ದರು. ಮರೆಬೈಲಿನ ಹೋರಿಗಳನ್ನು ನೋಡುವುದಕ್ಕೆ ಬರುವವರೇ ಹೆಚ್ಚು. ಕೆಸರು ಮಣ್ಣಿನಲ್ಲಿ ಕಾಲು ಹುಗಿಯುತ್ತಿದ್ದರೂ ಎರಡಾಳೆತ್ತರಕ್ಕೆ ನೀರಹನಿಗಳನ್ನು ಜಿಗಿಸಿ....ಜಿಗಿದು ಜಿಗಿದು ಕುಪ್ಪಳಿಸಿ ಓಡುವ ಹೆಗಡೆಯ ಅಯ್ಯನೂರಿನ ಕೋಣಗಳನ್ನು ನೋಡುವ ಆಸೆಯಿಂದ ಬರುವವರು ಅನೇಕರು. ಶೇಷಗಿರಿಯಪ್ಪನಿಗೂ ಕಂಬಳದ ಹುಚ್ಚು. ಅವರಿಗೂ ಆಮಂತ್ರಣ ಬಂದಿತ್ತು. ಉಂಡು ಹೊರಟರು ಅವರು. ಹತ್ತು ಮಂದಿ ಗಣ್ಯರು ಸೇರುವ ಜಾಗ. ಎಲೆವಸ್ತ್ರ ಹೊದೆದು ....ಕೈಯಲ್ಲಿ ನಾಗರ ಬೆತ್ತ ಹಿಡಿದು ಅರಸುಮರ್ಜಿಯಿಂದಲೇ ಹೊರಟಿದ್ದರು. "ಕಂಬಳಕ್ಕೆ ಬರುತ್ತೀಯಾ ಗಿರಿಜಾ" ಎಂದು ಬೆಳಿಗ್ಗೆ ಆಕೆ ಕೆರೆದಂಡೆಯ ಮೇಲೆ ರಸಿಕೆ ಅಲುಬುತ್ತಿದ್ದಾಗ ಕೇಳಿದ್ದಕ್ಕೆ "ನಂಗೆ ಇಷ್ಟ ಇಲ್ಲ ಅಯ್ಯ" ಎಂದಿದ್ದಳು.

ಹಾಗಿರುವಾಗ ರಾಜು ಹೆಗಡೆಯ ಗಾಡಿಯಲ್ಲಿ ಸರ್ಪ ತೋಪಿನ ದಾರಿಯಲ್ಲಿ ಹೋದದ್ದು ಕಂಡು ಅವರಿಗೆ ಕೋಪ ಕೆರಳಿತು. ಗಿರಿಜಳನ್ನು ಬಸವಿ ಬಿಟ್ಟಿರುವುದು ಅವರಿಗೆ ತಿಳಿಯದು. ಆಕೆಗೂ ಹೆಗಡೆಗೂ ಸಂಬಂಧ ಬೆಳೆದಿದೆ ಎಂಬ ವಿಚಾರ ಕೂಡಾ ಅವರಿಗೆ ಗೊತ್ತಿರಲಿಲ್ಲ. "ನೀನು ಬಸವಿ ಗಿರಿಜಾ... ಹತ್ತು ಮಂದಿ ಯ್ಯೋಗರ ಸೇವೆ ಮಾಡಬೇಕು" ಎಂದು ತಾಯಿ ಹೇಳಿದ ದಿನವೇ ಬೈಗಿನಲ್ಲಿ ರಾಜು ಹೆಗಡೆಯೊಂದಿಗೆ ಹುಲ್ಲು ಕುತ್ತರಿಯ ಹಿಂದಿನ ಕೋಡಿ ಮಂಚದ ಮೇಲೆ ಕುಳಿತಿದ್ದಳು.

ದರೆಯ ಬಳಿ ಹುಲುಸಾಗಿ ಬೆಳೆದಿದ್ದ ಪೊದೆಯ ಬಳಿ ನಿಂತು ಗಾಡಿ ಹೋಗುವುದನ್ನೇ ದಿಟ್ಟಿಸಿ ನೋಡಿದರು. ಸರ್ಪ ತೋಪಿನ ಒಳ ಹೋದ ಗಾಡಿ ....ಅಡ್ಡ ತಿರುವಿನಲ್ಲಿ ಮರೆಯಾದ ಮೇಲೆ ಶೇಷಗಿರಿಯಪ್ಪನ ಚಿತ್ತ ಕೆದರಿತು. ಏನನ್ನೋ ಎಣಿಸಿಕೊಂಡರು. ಕಂಬಳಕ್ಕೆ ಹೋಗುವ ಉತ್ಸಾಹ ಕಡಿಮೆ ಯಾಗಿತ್ತು. ಕಂಬಳ ಆಗಲೇ ಆರಂಭವಾಗಿತ್ತು. ಗರ್ನಾಲು ಹೊಟ್ಟಿದ ಸದ್ದು ಕೇಳಿಸಿತ್ತು. ಸಾಲದುದಕ್ಕೆ ಡೋಲು ಚಂಡೆಗಳ ನಾದ ಕಿವಿ ಮುಟ್ಟಿತು. "ಕಂಬಳದ ಮನೆ ಹಾಳಾಗಲಿ..." ಎನ್ನುತ್ತಾ ಬಂದ ದಾರಿಯಲ್ಲೇ ಹಿಂತಿರು ಗಿದರು. ಮನೆಗೆ ಬಂದವರು ಎಕ್ಕಡ ಬೀಸಾಡಿದರು. ಚತ್ರವನ್ನು ಮಾಡಿನ ಸೂರಿನಲ್ಲಿಟ್ಟರು. ಹೊದೆದಿದ್ದ ಎಲೆವಸ್ತ್ರವನ್ನು ಗೂಟದ ಮೇಲೆ ಹಾಕಿ ಸೀದಾ ತೋಟದ ದಾರಿಯಲ್ಲಿ ಬಂದರು. ಎರಡು ನಿಮಿಷದ ದಾರಿ. ನಲವತ್ತು ತೆಂಗಿನ ಮರದಾಚೆ ಕೆರೆಯ ದಂಡೆಯಲ್ಲಿ ಎರಡು ಕ್ಷಣ ನಡೆದರೆ ಸರಿ. ಮಡಲು ಹೆಣೆದು...ಬದಿ ಅಂಚು ಕಟ್ಟುತ್ತಿದ್ದ ವನಜ ರಾಯರು ಬರುವುದನ್ನು ಕಂಡು ಎದ್ದು ನಿಂತಳು.

"ಅಯ್ಯ. ನೀವು ಕಂಬಳಕ್ಕೆ ಹೋದಿರಿ ಎಂದು ಅಮ್ಮ ಹೇಳಿದರು" ಎಂದಳು ವನಜ

"ಯಾವಾಗ ಹೇಳಿದಳು ?"

"ಒಂದಿಷ್ಟು ಮೆಣಸಿನ ಕಾಳಿನ ನಾರು ಬೇಕಿತ್ತು.. ಆಗ ಹೋಗಿದ್ದೆ"

"ಹೋಗಬೇಕೆಂದಿದ್ದೆ ವನಜಾ...ಏಕೋ ಮೈ ನೆಟ್ಟಗಿಲ್ಲ. ಇದಿರಲಿ, ಗಿರಿಜ ಎಲ್ಲಿದ್ದಾಳೆ ?"

"ಅವಳು ಕಂಬಳಕ್ಕೆ ಹೋದಳಲ್ಲ!"

"ಯಾವಾಗ....?"

"ಎರಡು ಗಳಿಗೆ ಕಳೆಯಿತು."

"ಒಬ್ಬಳೇ ಹೋದಳೆ ?"

"ಜೊತೆಯಲ್ಲಿ ಲಕ್ಷ್ಮಿಯೂ ಇದ್ದಳಲ್ಲ ?"

"ಯಾವ ಲಕ್ಷ್ಮಿ....?"

"ಸೆರೆಗಾರನ ಸೊಸೆ"

"ಸತ್ಯ ಹೇಳು ವನಜಾ....ಎಷ್ಟು ದಿನದಿಂದ ಇದು ನಡೆಯುತ್ತಾ ಇದೆ ?"

"ಯಾವುದು ಬುದ್ಧಿ... ?" ವನಜ ಪಿಳಿಪಿಳಿ ಕಣ್ಣು ಬಿಡುತ್ತಾ ಕೇಳಿದಳು.

"ನಿನ್ನ ಮಗಳನ್ನು ಕಸುಬಿಗೆ ಇಳಿಸಿ...."

ಹಣೆಯ ಮೇಲೆ ಬೆರಳು ಹೊಡೆಯುತ್ತಾ ವನಜ ಹೇಳಿದಳು.

"ಅಯ್ಯೋ....ಆ ಪಾಪ ನನಗೇಕೆ ಸ್ವಾಮಿ .."

"ಹಾಗಿದ್ದರೆ ಹೆಗಡೆಯ ಗಾಡಿಯಲ್ಲಿ ಇಂದು ಅವಳನ್ನು ಕಂಡಿದ್ದೇನೆ, ಇದಕ್ಕೆ ಏನು ಹೇಳುತ್ತಿ ?"

"..........."

"ಏಕೆ... ನನ್ನ ಪ್ರಶ್ನೆಗೆ ಉತ್ತರ ಕೊಡು. ಹೆಗಡೆಯ ಜೊತೆ ಸರ್ಸಿ ತೋಪಿಗೆ ಹೋದದ್ದು ಏಕೆ ?"

ಆಗ ಸತ್ಯಸಂಗತಿ ಬಾಯಿಬಿಟ್ಟಳು ವನಜ.

"ನಾನು ಮಗಳನ್ನು ಬಸವಿ ಬಿಟ್ಟಿದ್ದೇನೆ" ಎಂದಳು ಮೆಲ್ಲನೆ.

ಶೇಷಗಿರಿಯಪ್ಪನ ಬಾಯಿಂದ ಮಾತೇ ಹೊರಡಲಿಲ್ಲ. ಐದು ನಿಮಿಷ ದಂಗುಬಡೆದು ಹೋಗಿದ್ದರು.

"ಏನು ಬಸವಿ ಬಿಟ್ಟೆಯಾ ?"

"ಹೌದು ಬುದ್ಧಿ...."

"ಯಾರನ್ನೂ ಕೇಳಿ ಬಿಟ್ಟೆ ?"

"ಯಾರನ್ನು ಕೇಳಲಿಲ್ಲ...."

"ಮತ್ತೆ....ಅಪ್ಪ ಎನಿಸಿಕೊಂಡ ನಾನಿರಲಿಲ್ಲವೆ . ವಿಚಾರ ನನಗೆ ತಿಳಿಸಿದ್ದರೆ...."

"ಹರಕೆ ಹೊತ್ತಿದ್ದೆ ಅಯ್ಯ...ಬಚ್ಚಿನಲ್ಲಿ ಮಗಳನ್ನು ಉಳಿಸಿಕೊಳ್ಳುವುದು

ನನಗೆ ಬೇಕಿತ್ತು."

"ಮೂದೇವಿ... ನಿನಗೆ ಅನ್ನ ಕೊಡುವವನು ನಾನು. ನನ್ನ ಆಶ್ರಯದಲ್ಲಿರುವಾಗ ಒಂದು ಮಾತು ತಿಳಿಸಿದ್ದರೆ..."

"ತಪ್ಪು ನನ್ನದು... ಕ್ಷಮಿಸಿಬಿಡಿ"

"ಹಾಳಾಯ್ತು ...ಹೋಗಲಿ ....ಬಸವಿಬಿಟ್ಟೆಯಲ್ಲ... ಬಿಡುವುದಾಗಿದ್ದರೆ ನನ್ನ ಬಳಿ ಬಿಡಬಾರದಿತ್ತೆ ?"

"ನೀವು. ನೀವು.. ಅವಳ ತಂದೆ ಸ್ವಾಮಿ....ಹೇಗಾಗುತ್ತದೆ ಹೇಳಿ"

"ಯಾವ ತಂದೆ. ಯಾರು ಮಗಳು ? ಆ ಸಂಬಂಧವೆಲ್ಲಾ ಬಸವಿ ಬಿಟ್ಟವರಿಗಿಲ್ಲ. ಆ ವಿಚಾರ ಹಿಂದಿನಿಂದ ಹೇಳುತ್ತೇನೆ. ಸಂಜೆ ನಾನೇ ಬಂದಾಗ ಏನಾದರೂ ಒಂದು ವ್ಯವಸ್ಥೆ ಮಾಡು" ಎಂದು ಹೇಳಿದರು ಶೇಷಗಿರಿಯಪ್ಪ. ರಾಯರ ಮನಸ್ಸನ್ನು ಅರ್ಥಮಾಡಿಕೊಂಡಿದ್ದಳು ವನಜ. ಆದರೆ ಅಪ್ಪ ಮಲಗುವ ಕೋಣೆಗೆ ಮಗಳನ್ನು ಬಸವಿಯಾಗಿ ಬಿಡುವುದಕ್ಕೆ ಅವಳು ಒಪ್ಪಲಿಲ್ಲ. ಸಂಜೆ ರಾಯರು ಬಂದಾಗಲೇ ಖಂಡಿತವಾಗಿಯೂ ಹೇಳಿದಳು, "ಅದು ಮಾತ್ರ ಆಗುವುದಿಲ್ಲ ಒಡೆಯಾ" ಎಂದು. ಶೇಷಗಿರಿಯಪ್ಪ ಎಷ್ಟೇ ಪ್ರಯತ್ನಿಸಿದರೂ "ನಿಮ್ಮ ಕೈಯಿಂದಲೇ ನಮ್ಮಿಬ್ಬರಿಗೂ ಎರಡು ಗುಟುಕು ವಿಷ ಕೊಡಿ ಸ್ವಾಮಿ.. ಅಂತೂ ಆ ವಿಚಾರ ಹೇಳಬೇಡಿ" ಎಂದು ವನಜ ಕಾಲು ಹಿಡಿದುಕೊಂಡಳು. ಆ ದಿನದಿಂದ ವನಜ ಬಹಳವಾಗಿ ಯೋಚಿಸಿದಳು. ಗಿರಿಜಳನ್ನು ಯಾರಾದರೂ ಯೋಗ್ಯರ ಆಶ್ರಯದಲ್ಲಿ ಬಿಡಬೇಕು. ಎಂದು. ಆವರೆ ಒಂದು ದಿನ ವನಜಳ ಬಯಕೆ ತಾನಾಗಿಯೇ ನೆರವೇರಿತು.

ಶುಂಠಿಕೊಪ್ಪದ ಜಾತ್ರೆಗೆಂದು ಮುಂದಾಗಿ ಸೋದರಮಾವನ ಮನೆಗೆ ಬಂದಿದ್ದರು ಮೊಗೆಬೆಟ್ಟಿನ ಸೋಮಯಾಜರು. ಜಾತ್ರೆಯ ಸಮಯ ಜನಗದ್ದಲ ಹೆಚ್ಚಿದ್ದರೂ ಸೋದರಳಿಯನನ್ನು ಚೆನ್ನಾಗಿಯೇ ಉಪಚರಿಸಿದ್ದರು ಶೇಷಗಿರಿಯಪ್ಪ. ಸ್ನಾನಕ್ಕೆ ವನಜಳಿಂದಲೇ ನೀರು ಕಾಯಿಸಿಟ್ಟಿದ್ದರು. ಆಗಿನ್ನೂ ಹರೆಯ. ಮದುವೆಯಾಗಿ ಐದು ವರ್ಷ ಕಳೆದಿತ್ತು. ಮೈ ಕೈ ತುಂಬಿಕೊಂಡು ಬೆಳೆದಿದ್ದರು. ಕಳೆದ ವರ್ಷ ಬಂದಾಗಲೇ ಅಯ್ಯ ಸ್ನಾನ ಮಾಡುತ್ತಿದ್ದಾಗ ತಾನೇ ಅವರನ್ನು ಕೇಳಬೇಕೆಂದಿದ್ದಳು ವನಜ. "ನಮ್ಮ ಹುಡುಗಿಯನ್ನು

ಬೇಕಿದ್ದರೆ ಕರೆದುಕೊಂಡುಹೋಗಿ ಸ್ವಾಮಿ .. ದೇವರಿಗೆ ಚಾಮರ ಬಿಸುವುದಕ್ಕೆ ಆಗುತ್ತದೆ" ಎಂದು ಸೋಮಯಾಜರಲ್ಲಿ ಬಾಯಿಬಿಟ್ಟು ಕೇಳುವ ಆಸೆಯಿತ್ತು. ಎಷ್ಟಾದರೂ ಬ್ರಾಹ್ಮಣರು....ಯೋಗ್ಯ ಮನೆತನದವರು... ಅಲ್ಲದೆ ಸಮ್ಮಿಪದ ಪೈಕಿ ಜನ. ಆದರೆ ಶೇಷಗಿರಿಯಪ್ಪನವರು ಏನಾದರೂ ತಿಳಿದುಕೊಳ್ಳುತ್ತಾರೆ ಎಂಬ ಭಯ ಬೇರೆಯಿತ್ತು. "ಆಗಲಿ....ಮುಂದಿನ ವರ್ಷ ನೋಡುವ" ಎಂದೇ ಸುಮ್ಮನಾಗಿದ್ದಳು. "ಜಾತ್ರೆಗೆ ಮೊಗೆಬೆಟ್ಟಿನವರು ಬರುತ್ತಾರೆಯೆ ?" ಎಂದು ಮೊದಲೇ ವಿಚಾರಿಸಿದ್ದಳು ರಾಯರಲ್ಲಿ. "ಗೊತ್ತಿಲ್ಲ ಬಂದರೂ ಬಂದಾನು" ಎಂದು ಉದಾಸೀನ ತೋರಿಸಿದ್ದರು ಶೇಷಗಿರಿಯಪ್ಪ. ಸೋಮಯಾಜರನ್ನು ಕಂಡು ಸಂತೋಷವಾದದ್ದು ವನಜಳಿಗೆ. ತನ್ನ ಮಗಳನ್ನು ಇವರ ಅಂಗೈಮೇಲೆ ಹಾಕಿದರೆ ಬೇರೆ ಯಾವ ಯೋಚನೆಯೂ ತನಗಿಲ್ಲವೆಂದುಕೊಂಡಳು. ಎರಡು ಬಾರಿ ಮಗಳಿಗೆ ಸೋಮಯಾಜರನ್ನು ತೋರಿಸಿ "ಇವರ ಸೇವೆ ಮಾಡು ಗಿರಿಜಾ ....ಪುಣ್ಯ ಬರುತ್ತದೆ" ಎಂದಳು. ಗಿರಿಜಳಿಗೂ ಮನಸ್ಸು ತೆರೆಯಿತು. ಗುಡಿಯ ಬಸವಕಲ್ಲಿನ ಹಿಂದೆ ಮಾಲೆ ಕಟ್ಟುತ್ತಿದ್ದಾಗ ಗಿರಿಜಳನ್ನು ಕಂಡಿದ್ದರು. ಮೂರನೆಯದಿನ ಬೆಳಗಿದ ಆರತಿಯನ್ನು ಕೈಯಲ್ಲಿ ಹಿಡಿದು ಪಾವಟಿಗೆಯಲ್ಲಿ ಬರುತ್ತಿದ್ದವಳು ಸೋಮಯಾಜರನ್ನು ಕಂಡು ಲಕ್ಷಣವಾಗಿ ನಕ್ಕಳು. ಸೋಮಯಾಜರ ಹೃದಯವನ್ನೇ ಹೊಕ್ಕಿತ್ತು—ಅವಳ ಆಕರ್ಷಕ ನಗುವಿನ ಮುಖ. ಅವರೂ ವ್ಯವಹಾರದಂತೆ ಮುಂದೆ ನಡೆದರು. ಕಟ್ಟೆಯಲ್ಲಿ ಕುಳಿತು ಜಪಮಾಡುತ್ತಿದ್ದಾಗಲೂ ಗಿರಿಜಳ ಬಗ್ಗೆ ಮನಸ್ಸು ಯೋಚಿಸುತ್ತಲೇ ಇತ್ತು. "ಮಾವನಂತೆ ತಾನೂ ಎಡ ಸಂಸಾರ ಹೂಡಿದರೆ ಹೇಗೆ?" ಎಂದಿತು ಅವರ ಮನಸ್ಸು.

ಜಾತ್ರೆಯ ಮುಂಚಿನದಿನ ರಾತ್ರಿ ತೋಟದ ದಾರಿಯಲ್ಲಿ ಸೋಮಯಾಜರು ಬರುತ್ತಿದ್ದಾಗ....ವನಜ ಮಗಳೊಂದಿಗೆ ಹೂವಿನ ಹೆಡಿಗೆ ಹಿಡಿದು ಬರುತ್ತಿದ್ದುದನ್ನು ಕಂಡರು. ಸೋಮಯಾಜರಿಗೆ ಏಕೋ ಅವರನ್ನು ಮಾತನಾಡಿಸುವ ಬಯಕೆ. ತನ್ನ ಅದೃಷ್ಟದಲ್ಲಿ ಉಪಪತ್ನಿ ಯೋಗವಿದ್ದರೆ ಅದೂ ಆಗಿಬಿಡಲಿ ಎಂದು ಸಂಕಲ್ಪಿಸಿಕೊಂಡೇ ವನಜಳನ್ನು ಮಾತನಾಡಿಸಿದರು. ತಟ್ಟನೆ ಮಗಳಲ್ಲಿ ಹೇಳಿದಳು "ಸ್ವಾಮಿಗಳಿಗೆ ನಮಸ್ಕಾರ ಮಾಡು" ಎಂದು. ಆ ವಿಚಿತ್ರ ಕ್ರಮ ಅವರಿಗೆ ಅರ್ಥವಾಗಲಿಲ್ಲ. ಆದರೆ ಕತ್ತಲೆಯಲ್ಲಿ ಗಿರಿಜಳ ಅಂಗೈ ಪಾದನೇವರಿಸಿದ ಸುಖ ದೊರಕಿತ್ತು. "ಮಗಳನ್ನು ಇನ್ನು ಯಾರ ಆಶ್ರಯ

ದಲ್ಲಿಯೂ ಬಿಡಲಿಲ್ಲವಲ್ಲ....ಇನ್ನು ಯಾವಾಗ ಅವಳು ನಿನ್ನಂತೆ ದೇವರಿಗೆ ಚಾಮರ ಬೀಸುವುದು" ಎಂದರು ಸೋಮಯಾಜರು. "ಅದು ದೇವರಿಗೆ ಬಿಟ್ಟ ಮಗು ಬುದ್ಧಿ....ನಿಮ್ಮ ದೇವಾಲಯದಲ್ಲಿ ಮಾಲೆಕಟ್ಟುವುದಕ್ಕೆ ಕರೆದುಕೊಂಡು ಹೋಗಿದ್ದರೆ ಸಂತೋಷವಾಗುತ್ತಿತ್ತು. ಬೇಕಿದ್ದರೆ ನಮ್ಮ ಮನೆಗೆ ಹೋಗಿ.... ಗಿರಿಜಳೂ ನಿಮ್ಮ ಜೊತೆ ಬರುತ್ತಾಳೆ. ನಾನು ಈ ಹೂವನ್ನು ಕೊಟ್ಟು ಬರುತ್ತೇನೆ" ಎಂದು ಸರಸರ ನಡೆದುಬಿಟ್ಟಳು ವನಜ. ಎಲ್ಲವೂ ನಾಟಕದಂತೆ ನಡೆದಿತ್ತು. ಬೇಡವೆಂದರೂ ಮನಸ್ಸು ಕೇಳಲಿಲ್ಲ. ಐದು ನಿಮಿಷದ ತರುವಾಯ ವನಜಳ ಮನೆಯ ಕೋಣೆಯಲ್ಲಿ ಬಣ್ಣದ ಚಾಪೆಯ ಮೇಲೆ ಸೋಮಯಾಜರು ಕುಳಿತಿದ್ದರು. ಗಿರಿಜ ಅವರ ಕಾಲು ಒತ್ತುವುದರಲ್ಲಿ ಮಗ್ನಳಾಗಿದ್ದಳು.

"ನಿನ್ನ ಹೆಸರು ...." ಎಂದು ಕೇಳಿದರು ಸೋಮಯಾಜರು.

"ಗಿರಿಜಾ...."

"ನಿಮ್ಮ ಮಾವ ಈಗ ಬಂದರೆ"

"ಅವರು ಹತ್ತು ಗಂಟೆಯ ಮೇಲೆ ಬರುತ್ತಾರೆ".

"ಹೌದು.. ನನಗೇಕೆ ಬಂತು ಈ ಬುದ್ಧಿ .."

"...........

"ಅಲ್ಲ ಗಿರಿಜಾ ...ಇವೆಲ್ಲಾ ಯಾವ ಜನ್ಮದ ಸಂಬಂಧ ಅಂತ. ನಾನು ಮೊಗೆಬಿಟ್ಟನಿಂದ ಬರುವುದು....ತೋಟದ ದಾರಿಯಲ್ಲಿ ನೀನು ಸಿಗುವುದು .. ಗಳಿಗೆಯ ಅನಂತರ ನಿನ್ನ ಜೊತೆ ಇಲ್ಲಿರುವುದು–ಇದು ಯಾವ ದೇವರಿನ ಪ್ರೀತಿ...." ಎಂದರು ಸೋಮಯಾಜರು.

ಅವರ ಸೇವೆಯಲ್ಲಿ ನಿರತಳಾಗಿದ್ದಳು ಗಿರಿಜ.

"ನಿನ್ನ ಕೊರಳಲ್ಲಿ ಕರಿಮಣಿ ಇದೆಯಲ್ಲ"

"ಹೌದು........"

"ನಿನ್ನ ಗಂಡ ಎಲ್ಲಿದ್ದಾನೆ"

"ಗುಡಿಯಲ್ಲಿ"

"ಯಾರದು...."

"ಶಿವ ದೇವರು...."

"ದೇವರು ನಿನ್ನ ಗಂಡನೆ ?"

"ಹೌದು....ನಾವು ಮಾಲಿಯರ ಜಾತಿಗೆ ಸೇರಿದವರು. ಮದುವೆಯಾಗು ವುದು ದೇವರನ್ನು...."

"ಮತ್ತೆ ನನ್ನನ್ನೇಕೆ ಬರಹೇಳಿದಳು ಅಮ್ಮ"

"ನನ್ನನ್ನು ಬಸವಿ ಬಿಟ್ಟಿದ್ದಾಳೆ ತಾಯಿ."

"ಬಸವಿ ಬಿಡುವುದೆಂದರೆ ...ಹೇಳು ಗಿರಿಜಾ"

ಹೇಳಿದಳು ಗಿರಿಜಾ.

"ಛಿ....ಮೂರ್ಖತನ... ಇದೆಂತಹ ಆಚಾರ ಗಿರಿಜಾ... ಖಂಡಿತಾ ನೀನು ಬಸವಿಯಾಗಿ ಬಾಳಬಾರದು. ನನ್ನ ಜೊತೆ ಬಾ ಗಿರಿಜಾ....ಕೊನೆತನಕ ನಿನ್ನ ಅನ್ನಕ್ಕೆ ತೊಂದರೆ ಮಾಡುವುದಿಲ್ಲ...."

ಗಟ್ಟಿಯಾಗಿ ಕಾಲು ಹಿಡಿದುಕೊಂಡಳು.

"ಅಮ್ಮ ಈಗ ಬರುತ್ತಾಳೆ ...ಅವಳಲ್ಲಿ ಒಂದು ಮಾತು ಹೇಳಬಿಡಿ. ನಿಮ್ಮ ಜೊತೆ ಬರುವುದಕ್ಕೆ ನನಗೂ 'ಇಷ್ಟ" ಎಂದಳು.

ವನಜಳಿಗಾದ ಸಂತೋಷ ಅಷ್ಟಿಷ್ಟಲ್ಲ.

ಆದರೆ ಗಿರಿಜಳನ್ನು ಕರೆದುಕೊಂಡು ಹೋಗುವ ವಿಚಾರ ಶೇಷಗಿರಿಯಪ್ಪ ನಿಗೆ ತಿಳಿದದ್ದು ಮಾತ್ರ ಭಾರೀ ಗಲಾಟೆಗೆ ಕಾರಣವಾಯಿತು. ಅಳಿಯನನ್ನು ಸಿಕ್ಕಾಪಟ್ಟೆ ಬೈದು ಹಂಗಿಸಿದರು. ಜಾತ್ರೆಯ ದಿನ ಸಂಜೆಯೇ ಗಾಡಿಯಲ್ಲಿ ಮೊಗೆಬೆಟ್ಟಿಗೆ ಹೋಗುವ ನಿರ್ಧಾರ ಮಾಡಿದ್ದರು ಸೋಮಯಾಜರು.

"ಇರಲಿ ಮಾವ....ಪ್ರೀತಿ ವಿಶ್ವಾಸದ ಮುಂದೆ ಬೇರೆ ಏನಿದೆ? ಅವ ಳಾಗಿಯೇ ಬರುತ್ತೇನೆ ಎಂದಳು. ಹೇಗೂ ನಮ್ಮ ಗುಡಿಯಲ್ಲೂ ಚಾಮರ ಬೀಸುವವರಿಲ್ಲ. ನನಗೂ ಆಕೆಯ ರೀತಿನೀತಿ ಹಿಡಿಸಿದೆ. ಸಂಜೆ ಹೋಗುವುದು ನಿಶ್ಚಯ" ಎಂದರು ಸೋಮಯಾಜರು. ಆದರೆ ಶೇಷಗಿರಿಯಪ್ಪ ಅಷ್ಟಕ್ಕೆ ಸುಮ್ಮನಾಗಲಿಲ್ಲ. ರಾಜು ಹೆಗಡೆಯನ್ನು ಕಂಡು "ನೋಡಪ್ಪ ...ನಿನ್ನ ಹುಡುಗಿ ಯನ್ನು ಮೊಗೆಬೆಟ್ಟಿನ ಬ್ರಾಹ್ಮಣ ಹೊಡೆದುಕೊಂಡು ಹೋಗುತ್ತಾನೆ....ನಿನ್ನ ಎದೆಯಲ್ಲಿ ಗಂಡು ರಕ್ತವಿದ್ದರೆ ಒಂದು ಕೈ ನೋಡು. ಸಂಜೆ ಗಾಡಿಯಲ್ಲಿ ಹೋಗುತ್ತಾನಂತೆ. ಊರಲ್ಲಿ ಸುಮ್ಮನೆ ಗಲಭೆಬೇಡ. ಗುಡ್ಡದ ದಾರಿಯಲ್ಲೇ ಗಾಡಿ ಉರುಳಿಸಿಬಿಡು" ಎಂದರು ಶೇಷಗಿರಿಯಪ್ಪ. ರಾಜು ಎದೆ ತಟ್ಟಿಕೊಂಡು "ಬಿಡುತ್ತೇನೆಯೇ" ಎಂದ. ಅಷ್ಟೇ ತೃಪ್ತಿ ಶೇಷಗಿರಿಯಪ್ಪನಿಗೆ. ಹುಡುಗಿ

ಕುಂತಿಕೊಪ್ಪದಲ್ಲಿರುವುದು ಅವರಿಗೆ ಬೇಕಾಗಿತ್ತು. ಕೊನೆಗೆ "ರಾಜು ಹೆಗಡೆಯಾದರೂ ಚಿಂತೆಯಿಲ್ಲ. ನನ್ನ ಸೋದರ ಅಳಿಯನ ಕೂಡೆ ಹೋಗುವುದು ನನಗೆ ಅವಮಾನ ಎಂದುಕೊಂಡರು ಅವರು".

ಹಿಂದಿನ ರಾತ್ರಿಯೇ ಒಕಳಿನೀರು ಮಾಡಿ...ಎರಡು ಗುಂಬಳಕಾಯಿ ಒಡೆದು... ಮಗಳ ಬಳಿ ತೆಗೆದಿದ್ದಳು ವನಜಮ್ಮ. ಎಷ್ಟಾದರೂ ಪರಊರಿಗೆ ಹೋಗುವವಳು....ದೇವಾಲಯದಲ್ಲಿ ಹತ್ತು ಜನರ ಮುಂದೆ ಇರಬೇಕಾದವಳು ....ಕೆಟ್ಟವರ ದೃಷ್ಟಿ ಬೀಳದಿರಲಿ ಎಂದೇ ವನಜ ಮುಂಜಾಗ್ರತೆ ವಹಿಸಿದ್ದಳು. ಲಕ್ಷಣವಾಗಿ ಅಡಿಗೆ ಮಾಡಿದ್ದಳು. ಕೆಸವಿನ ಸೊಪ್ಪಿನ ಪತ್ರೊಡೆಯೊಂದಿಗೆ ಕಡಲೆಯ ಪಾಯಸಮಾಡಿ ಬಡಿಸಿದ್ದಳು.

ಪತ್ತಲು ಸೀರೆಯನ್ನು ನೆರಿನೆರಿಯಾಗಿ ಸುತ್ತಿದಳು. ಉದ್ದದ ಜಡೆ ಹೆಣೆದುಕೊಂಡಳು. ಜಿಂಡುಮಲ್ಲಿಗೆಯ ಹೂ ಮುಡಿದಳು. "ಇದು ಗಾಡಿಯಲ್ಲಿ ತಿನ್ನುವುದಕ್ಕೆ... ಸೋಮಯಾಜರಿಗೆ ಕೊಡು" ಎಂದು ಸುರುಟಿದ ಪಾಳೆಯನ್ನು ಚೀಲದಲ್ಲಿ ತುರುಕಿ ಮಗಳ ಕೈಗೆ ಕೊಟ್ಟಳು. ಜೀರಿಗೆಯ ಡಬ್ಬದ ಒಳಗಿದ್ದ ಒಂದು ಬೆಳ್ಳಿಯ ರೂಪಾಯಿಯನ್ನು ಗಿರಿಜಳ ಅಂಗೈ ಮೇಲೆ ಹಾಕಿದಳು.

ತೋಟದ ತಿರುವಿನ ದಾರಿಯಲ್ಲಿ ನಿಂತಿದ್ದಳು ಗಿರಿಜ. ಸೋಮಯಾಜರು ಮುಂದಾಗಿಯೇ ಹೇಳಿದ್ದರು "ಮೂರು ಗಂಟೆಗೆ ಸರಿಯಾಗಿ ತೋಟದ ದಾರಿಯಲ್ಲಿ ಇದ್ದುಬಿಡು ...ಬಂದುಬಿಡುತ್ತೇನೆ" ಎಂದು. ಒಂದು ಗಳಿಗೆ ಹೆಚ್ಚು ಕಡಿಮೆಯಾಗಲಿಲ್ಲ. ಜೋಡೆತ್ತಿನ ಗಾಡಿ ಬಂದೇ ಬಿಟ್ಟಿತು. ಸಟಕ್ಕನೆ ಸೋಮಯಾಜರು ಕೆಳಗಿಳಿದು "ಗಾಡಿ ಹತ್ತು ಗಿರಿಜ. ಬೇಗ ಈ ಊರು ಬಿಡುವುದು ಒಳ್ಳೆಯದು" ಎಂದು ಅವಸರ ಮಾಡಿದರು. ಗಿರಿಜ ಗಾಡಿ ಹತ್ತಿದಳು. ವನಜಳ ಕಣ್ಣಿಂದ ನೀರು ಸುರಿಯಿತು. "ಅಳುವುದಕ್ಕೆ ಏನಾಗಿದೆ ವನಜಾ ....ಹುಡುಗಿ ಹೋಗುವುದು ನರಕಕ್ಕಲ್ಲ ...ಮೊಗೆಬೆಟ್ಟಿನ ಸೋಮಯಾಜರ ಮನೆಗೆ. ನನ್ನ ಹೆಂಡತಿ ಎರಡು ಹೊತ್ತು ಉಂಡರೆ ಗಿರಿಜಳೂ ಅಷ್ಟೇ ಊಟ ಮಾಡುತ್ತಾಳೆ. ನನ್ನಾಕೆ ನಿತ್ಯ ಪಾಯಸ ತಿಂದರೆ ಗಿರಿಜಳಿಗೂ ಪಾಯಸ ಬಡಿಸುತ್ತೇನೆ. ಅದಕ್ಕೆ ಅನುಮಾನವೇ ಬೇಡ. ಸಮಯವಾದರೆ ನೀನೂ ಒಮ್ಮೆ ಆ ಕಡೆ ಬಂದು ಹೋಗು. ಸೋನೆ ತಿಂಗಳಲ್ಲಿ ನನ್ನ ಮನೆಯಲ್ಲಿ ರಂಗಪೂಜೆಯಿದೆ. ಅದಕ್ಕೆ ಸರಿಯಾಗಿ ಬಾ... ಬರುತ್ತೇನೆ...." ಎಂದು ಸೋಮಯಾಜರು

ನೆಗೆದು ಒಂದೇಪಟ್ಟಿಗೆ ಗಾಡಿಯಲ್ಲಿ ಕುಳಿತು"ಬೇಗ ಬಿಡಪ್ಪ ಗಾಡಿಯನ್ನು" ಎಂದರು.

ಗಾಡಿಯ ಚಕ್ರ ಉರುಳಿತು. ಎತ್ತುಗಳು ಮೊಗೆಬೆಟ್ಟಿನ ದಾರಿಯಲ್ಲಿ ಓಡಿದವು. ಕೊರಕಲು ದಾರಿಯ ಪ್ರಯಾಣ. ಬಲವಾದ ಎತ್ತುಗಳಾದ್ದರಿಂದ ವೇಗವಾಗಿ ಗಾಡಿ ಮುಂದೆ ಮುಂದೆ ಹೋಯಿತು.

ಮೆಲ್ಲನೆ ಚೀಲದಿಂದ ಅಮ್ಮ ಕೊಟ್ಟಿದ್ದ ಹಾಳೆಯ ಮಡಿಕೆಯನ್ನು ಹೊರ ತೆಗೆದು ಸೋಮಯಾಜರ ಮುಂದಿಟ್ಟಳು. ಇಷ್ಟಾದರೂ ಗಿರಿಜಳಿಗೆ ನಾಚಿಕೆ. ಯಾವ ಮಾತನ್ನು ಆಡದೆ ತಲೆ ತಗ್ಗಿಸಿಯೇ ಕುಳಿತಿದ್ದಳು.

"ಏನದು ..."ಎಂದರು ಕೆದರಿಹೋಗಿದ್ದ ಜುಟ್ಟನ್ನು ಗಂಟುಹಾಕುತ್ತಾ.

"ಅಮ್ಮ....ನಿಮಗೆ ಕೊಡಲು ಹೇಳಿದ್ದಾಳೆ"

ಹಾಳೆಯ ಮಡಕೆಯನ್ನು ಬಿಡಿಸಿದರು. ಒಂದು ಕೊಬ್ಬರಿ....ನಾಲ್ಕು ಉಂಡೆ ಬೆಲ್ಲ .. ಎರಡು ಪಾವು ಅವಲಕ್ಕಿಯಿತ್ತು.

"ಆಗಲಿ....ಪ್ರೀತಿಯಿಂದ ಕೊಟ್ಟದ್ದು....ದಾರಿಯಲ್ಲಿ ನನಗೆ ತಿನ್ನುವ ಅಭ್ಯಾಸವಿಲ್ಲ. ಒಂದು ಉಂಡೆ ಬೆಲ್ಲವನ್ನು ನೀನು ತಿನ್ನು" ಎನ್ನುತ್ತಾ ಲಕ್ಷಣವಾಗಿ ಗಿರಿಜಳ ಕೈ ಮೇಲಿಟ್ಟು ಆಕೆಯನ್ನೆ ದಿಟ್ಟಿಸಿದರು.

ಇಳಿಯಲ್ಲಿ ಗಾಡಿ ಚಕ್ರ ಕುಸಿದು ಗಿರಿಜಳ ಮೈ ...ಕಟ್ಟಿದ ಬಿದಿರು ಅಟ್ಟಿಗೆ ತಾಗಿತು.

"ಎಂದಾದರೂ ಗಾಡಿ ಹತ್ತಿದ್ದಿಯಾ ಗಿರಿಜಾ...."

"ಹೂಂ...."

"ಶುಂಠಿಕೊಪ್ಪ ಬಿಟ್ಟು ನೀನು ಎಲ್ಲಿಗೂ ಹೋಗಿಲ್ಲವೆ ?"

"ಎರಡು ವರ್ಷದ ಹಿಂದೆ ಕಾಳೂರಿಗೆ ಹೋಗಿದ್ದೆ"

"ಯಾರಿದ್ದಾರೆ ಅಲ್ಲಿ"

"ನನ್ನ ದೊಡ್ಡಮ್ಮ...."

"ಒಬ್ಬಳೇ ಇದ್ದಾಳೇನು...."

"ಕಾಳೂರಿನ ಪಟೇಲರ ಮನೆಯಲ್ಲೆ ಇದ್ದಾಳೆ....ಎರಡು ಗಂಡು ಮಕ್ಕಳಿದ್ದಾರೆ"

"ಹೋ... ಹಾಗೇನು ? ಕಳೆದ ವರ್ಷ ನಾನು ಮಾವನ ಮನೆಗೆ ಬಂದಾಗ ನಿನ್ನನ್ನು ನೋಡಿದ ಹಾಗಿಲ್ಲವಲ್ಲ ..."

"ನಾನು ನೋಡಿದ್ದೇನೆ ..."

"ಎಲ್ಲಿ ?"

"ಅಯ್ಯನ ಜೊತೆ ಗುಡಿಗೆ ಬಂದಾಗ.... ಆ ದಿನ ನಾನೇ ಆರತಿಗೆ ಬತ್ತಿ ಹೊಸೆದದ್ದು...."

"ಛೀ ... ನಾನು ಕಂಡೇ ಇರಲಿಲ್ಲ, ಕಂಡಿದ್ದರೆ ಒಂದು ವರ್ಷದ ಹಿಂದೆಯೇ ನೀನು ಮೊಗೆಜೆಟ್ಟಿಗೆ ಬರಬಹುದಿತ್ತು. ಹೋಗಲಿ .. ನನ್ನ ಜೊತೆ ಬರುವುದಕ್ಕೆ ನಿನಗೆ ಮನಸ್ಸಿತ್ತೆ ?"

"ಹೌದು...."

"ಅದೇಕೆ.... ನನ್ನ ಬಗ್ಗೆ ನಿನಗೂ ಅಭಿಮಾನ ಬಂತೆ ?"

"ಹೂಂ... ಎಷ್ಟಾದರೂ ನಾವು ಮಾಲಿಯವರು- ಯಾರ ಆಶ್ರಯದಲ್ಲಾದರೂ ಇರಲೇಬೇಕು. ಅಲ್ಲದೆ ಈ ಜೀವನ ನನಗೆ ಸಾಕಾಗಿದೆ"

"ಯಾವ ಜೀವನ...."

"ಹೀಗೆ ಬಸವಿಯಾಗಿ ರಾತ್ರಿ ಅಲೆಯುವುದು"

"ಅದು ಯಾವ ಕ್ರಮ ಗಿರಿಜಾ.... ನನಗೆ ಅರ್ಥವೇ ಆಗಲಿಲ್ಲವಲ್ಲ"

"ಬೇಡ ... ಅದನ್ನು ಅರ್ಥಮಾಡಿಕೊಳ್ಳುವುದೂ ಬೇಡ . ಅದು ಅಮ್ಮ ಹರಕೆ ಹೊತ್ತದ್ದು"

"ಯಾವಾಗ....?"

"ಒಮ್ಮೆ ರಾತ್ರಿ ನಾನು ಹೆದರಿಕೊಂಡಾಗ ..."

"ಅಯ್ಯೋ ಪಾಪ, ಇದೆಂತಹ ಶಿಕ್ಷೆ ಗಿರಿಜಾ .. ನಂಬಿಕೆಗೂ ಒಂದು ಮಿತಿ ಬೇಡವೆ ? ಮೊದಲೇ ನಿಮ್ಮದು ದಾಸಿಯರ ಜೀವನ. ಅದರ ಮೇಲೆ ಹೀಗೆ ಬಸವಿ ಬಿಟ್ಟರೆ.... ನಿಜವಾಗಿಯೂ ನನಗೆ ದುಃಖವಾಗಿದೆ. ದೇವರು ಏನೋ ಒಂದು ಅವಕಾಶ ಕಲ್ಪಿಸಿದ. ಕನಸಿನಲ್ಲಿಯೂ ಭಾವಿಸಿರಲಿಲ್ಲ .. ನನ್ನ ನಿನ್ನ ಸಂಬಂಧ ಹೀಗೆ ಸುಲಭವಾಗಿ ಆಗುತ್ತದೆ ಎಂದು. ನನ್ನ ಮಾವನಿಗೆ ತುಂಬಾ ಕೋಪ ಬಂದಿದೆ. ಇನ್ನು ನನ್ನ ಹೆಂಡತಿ ಎಷ್ಟು ಚಂಡಿಯಾಗುತ್ತಾಳೋ.... ಇರಲಿ—ಒಂದು ಮಾತು ನಿನ್ನಲ್ಲಿ ಕೇಳುವುದಿದೆ."

“ಕೇಳಿ....”

“ಹೇಳುವುದಕ್ಕೆ ಸಂಕೋಚ ಪಡಬಾರದು ...”

“ನಿಮ್ಮಲ್ಲಿ ಹೇಳುವುದಕ್ಕೆ ಯಾವ ಸಂಕೋಚವೂ ನನಗಿಲ್ಲ”

“ಅಷ್ಟು ಅಭಿಮಾನವೆ ?”

“ಅಮ್ಮ ಹೇಳಿದ್ದಾಳೆ... ನೀವೇ ನನ್ನ ಪಾಲಿಗೆ ದೇವರು ಎಂದು”

“ಅಮ್ಮ ಹೇಳುವುದಿರಲಿ....ನೀನು ಹಾಗೆ ತಿಳಿದುಕೊಂಡೆಯಾ ?”

“ಹೌದು....ನೀವು ನನ್ನ ದೇವರು”

“ಅಷ್ಟಿದ್ದರೆ ಸಾಕು ಗಿರಿಜಾ....ನೀನು ನನ್ನ ಎರಡನೆಯ **ಹೆಂಡತಿ.** ನಾನು ಮನುಷ್ಯ. ಅವರಲ್ಲೂ ಬ್ರಾಹ್ಮಣನಾಗಿ ಹುಟ್ಟಿದ್ದೇನೆ. ನಿನ್ನನ್ನು ನನ್ನ ದೈಹಿಕ ಸುಖಕ್ಕಾಗಿಯೇ ಬಯಸುವುದಿಲ್ಲ. ಆದರೆ ನೀನು ಬಸವಿಯಾಗಿ ಬಾಳುವುದು ನನಗೆ ಇಷ್ಟವಿಲ್ಲ. ಒಂದು ಹೆಣ್ಣು ಜೀವ ಕಂಡವರಿಂದ ಕೆಟ್ಟು ಹಾಳಾಗುವುದಕ್ಕಿಂತ .. ಅದಕ್ಕಿಂತ ಉತ್ತಮ ಜೀವನ ಕಲ್ಪಿಸಲು ನನ್ನಿಂದಾಗುವುದಾದರೆ... ಅದೇ ನನಗೆ ನ್ಯಾಯವಾಗಿ ಕಾಣುತ್ತದೆ. ನೋಡು... ನಿನಗೆ ಪಾಪ ಎಂದರೆ ಏನೆಂದು ಗೊತ್ತೆ ?”

“ಇಲ್ಲ ...”

“ಪುಣ್ಯ ಎಂದರೆ .. ”

“ಅಮ್ಮ ಆಗಾಗ ಹೇಳುತ್ತಾಳೆ”

“ಏನೆಂದು... ”

”ಆದಷ್ಟು ಪುಣ್ಯ ಮಾಡು ಅಂದು”

“ಪುಣ್ಯ ಸಂಪಾದಿಸುವಂತಹ ಕೆಲಸ ಮಾಡಿದ್ದೆಯಾ ?”

“ಹೂಂ...”

“ಯಾವಾಗ....”

“ಅಮ್ಮ ನನ್ನನ್ನು ಬಸವಿ ಬಿಟ್ಟ ದಿನ”

“ಅದನ್ನೇ ನಿನ್ನ ತಾಯಿ ಪುಣ್ಯ ಅಂದಳೇನು ?”

“ಹೌದು ”

“ಅಜ್ಞಾನ....ತೀರಾ ಅಜ್ಞಾನ....ಅಂದರೆ ಈಗ ನೀನಿರುವುದು ಯಾರಿಗಾಗಿ....”

"ನಿಮ್ಮ ಸೇವೆ ಮಾಡುವುದಕ್ಕೆ"

"ಇದನ್ನು ಯಾರು ಹೇಳಿದರು"

"ನನ್ನ ಅಮ್ಮ...."

"ಹೋಗಲಿ, ಹಾಗೆ ನಿನ್ನನ್ನು ಬಸವಿ ಬಿಟ್ಟಳಲ್ಲ.. ಏಕೆ? ಏನು? ಎಂದು ಕೇಳಿದೆಯಾ?"

"ಕೇಳಿದೆ.... ಅದು ಧರ್ಮ ಎಂದಳು. ಹರಕೆ ಹೊತ್ತ ಮೇಲೆ ಅದನ್ನು ಆಚರಿಸಬೇಕು ಎಂದಳು."

"ಸತ್ಯ ಹೇಳು....ಆಮೇಲೆ ಎಷ್ಟು ಜನರ ಬಳಿ ಬಸವಿ ಹೋಗಿದ್ದಿ"

"ದಮ್ಮಯ್ಯ ....ಅದನ್ನು ಮಾತ್ರ ಕೇಳಬೇಡಿ"

"ಹೇಳು ಚಿಂತೆಯಿಲ್ಲ...."

"ಬೇಡ .. ಮರೆತುಬಿಡಿ. ಮತ್ತೆ ಮತ್ತೆ ಆ ವಿಚಾರ ಬೇಡ. ಹೇಳುವುದಿದ್ದರೆ ನಿಮ್ಮೂರ ವಿಚಾರ ಹೇಳಿ. ನಿಮ್ಮ ಮನೆಯವರ ಬಗ್ಗೆ ಹೇಳಿ.... ಕೇಳುತ್ತೇನೆ"

ಮತ್ತೆ ಸೋಮಯಾಜರು ಆ ಬಗ್ಗೆ ಕೇಳಲಿಲ್ಲ. ಗಾಡಿ ಆಗಲೇ ಬಹು ದೂರ ಬಂದಿತ್ತು. ಮಾತಿನ ಬರದಲ್ಲಿ ಒಂದೂ ತಿಳಿಯಲಿಲ್ಲ.

"ಯಾವೂರಯ್ಯ ಇದು ..." ಎಂದು ಗಾಡಿಯವನನ್ನು ಕೇಳಿದರು.

"ಕರಿಗುಡ್ಡದ ದಾರಿ ಸ್ವಾಮಿ ..."

"ಎಷ್ಟು ದೂರ ಬಂದೆವು...."

"ಒಂದು ಮೈಲಿ...."

"ಇನ್ನು ಯಾವಾಗ ಮೊಗೆಬೆಟ್ಟಿಗೆ ಹೋಗುವುದು ?"

"ಈ ದಾರಿ ತುಂಬಾ ಮೋಸ ಬುದ್ಧಿ....ಹೊತ್ತು ಕಂತಿ ಎರಡು ಗಳಿಗೆ ಕಳೆಯುವುದರಲ್ಲಿ ಖಂಡಿತಾ ಹೋಗುತ್ತೇನೆ...."

"ಹೂಂ ... ಸರಿ...."ಎಂದು ಸೋಮಯಾಜರು ಗಿರಿಜಳತ್ತ ಮುಖಮಾಡಿ ಮತ್ತೆ ಏನನ್ನೋ ಹೇಳುವುದಕ್ಕೆ ತೊಡಗಿದರು. ಅವರ ಮಾತಿನಿಂದ ಗಿರಿಜಳ ಮುಖ ಅಂಗೈ ಅಗಲವಾಗಿತ್ತು. ತಮ್ಮ ಸಂಸಾರ...ತನ್ನ ಹೆಂಡತಿಯ ಸ್ವಭಾವ....ತಮಗಿರುವ ಆಸ್ತಿ ಮನೆ ಮಠಪಾಟು....ಶಿವದೇವಾಲಯದಿಂದ

ಬರುವ ಉತ್ಪತ್ತಿ-ಮುಂದೆ ಗಿರಿಜಳೊಂದಿಗೆ ಎಡಸಂಸಾರ ಹೂಡುವ ರೀತಿ ನೀತಿ .. ಗಂಡುಮಕ್ಕಳಾದರೆ ಸರಕಾರದಿಂದ ಹಡುಭೂಮಿಯನ್ನು ದರಖಾಸ್ತು ಪಡೆದು ಅಲ್ಲಿ ವ್ಯವಹಾರಮಾಡುವ ತಮ್ಮ ಗುರಿ. ಹೆಣ್ಣು ಹುಟ್ಟಿದರೆ ಸಂಗೀತ ಮತ್ತು ನರ್ತನ ಕಲಿಸುವ ಆಸೆಯ ಬಗ್ಗೆ ವಿವರವಾಗಿ ಹೇಳುತ್ತಲೇ ಇದ್ದರು. ಗಿರಿಜ ಕೇಳುತ್ತಲೇ ಇದ್ದಳು. 'ತಾನು ದೇವರ ಹೆಂಡತಿಯಾದದ್ದು ಸುಳ್ಳಲ್ಲ....ಆ ದೇವರೆ ಇವರು' ಎಂದುಕೊಂಡಳು.

ಎರಡು ನಿಮಿಷ ಕಳೆದಿತ್ತು. ಸೋಮಯಾಜರ ಮನಸ್ಸನ್ನು ಕದಡುವಂತಹ ಘಟನೆ ನಡೆಯಿತು. ಗಾಡಿ ಬಯಲು ದಾರಿಯಲ್ಲಿ ಬರುತ್ತಿದ್ದಾಗಲೇ ಪಕ್ಕದ ದರೆಯ ಮೇಲೆ ಕುಳಿತಿದ್ದ ರಾಜು ಹೆಗಡೆ ಕೈಯಲ್ಲಿ ಸೋಟೆ ಹಿಡಿದೇ ಕೆಳಹಾರಿದ. ಇನ್ನೊಂದು ವ್ಯಕ್ತಿ ಅವನ ಹಿಂದಿನಿಂದಲೇ ಬಂದಿದ್ದ. ಹೆಗಡೆ ಕೈಯಲ್ಲಿದ್ದ ಸೋಟೆಯನ್ನು ಮೇಲೆತ್ತಿ "ಗಾಡಿ ನಿಲ್ಲಿಸು" ಎಂದು ಕೂಗಿದ. ಚಕ್ಕನೆ ಸೋಮಯಾಜರು ಮುಂದೆ ನೋಡಿದರು. ಹೆಗಡೆಯ ಗುರುತು ಅವರಿಗಿರಲಿಲ್ಲ. ಆದರೆ ಗಿರಿಜ ಮಾತ್ರ ಹೆದರಿಕೊಂಡಳು. ಹೆಗಡೆಯ ಜೊತೆ ಹೊಡಿಮಂಚದ ಮೇಲೆ ಇದ್ದ ರಾತ್ರಿಯನ್ನು ನೆನೆಸಿಕೊಂಡು 'ಮುಂದೇನಪ್ಪ ಗತಿ ?' ಎಂದು ಗಾಡಿಯಲ್ಲಿ ಮುದುಡಿಕೊಂಡು ಅವನ ಕಣ್ಣಿನಿಂದ ಮರೆಯಾದಳು.

"ಗಾಡಿ ನಿಲ್ಲಿಸು ಸುಬ್ಬ....ಈ ದಾರಿಯಲ್ಲಿ ಹಗಲು ದರೋಡೆ ಇದೆಯೇ?"

"ಥೂ...ಇವನ ಮನೆ ಹಾಳಾಯ್ತು ಬುದ್ಧಿ...ಕೆಳಹಿತ್ತಲಿನ ಹೆಗಡೆಯ ಮೊಮ್ಮಗ. ಇವನ ಅಪ್ಪನ ಮನೆ ಚಾರ್ಮಕ್ಕಿ. ಬಿಡಿ–ಇವನ ಪುಂಡಾಟಿಕೆಗೆ ಹೆದರಿಕೊಂಡರೆ ಈ ಊರಲ್ಲಿ ಬದುಕುವುದೇ ಕಷ್ಟ .. ನೀವು ಗಾಡಿ ಇಳಿಯಿರಿ ಸ್ವಾಮಿ....ಏನೆಂದು ವಿಚಾರಿಸಿ. ಹೆದರಬೇಡಿ....ನಾನಿದ್ದೇನೆ ..." ಎಂದ ಗಾಡಿ ಸುಬ್ಬ.

ಸುಬ್ಬನ ಮಾತಿನಿಂದ ಎದೆ ಬಡಿತ ಕಡಿಮೆಯಾದದ್ದು ಗಿರಿಜಳಿಗೆ. ಆದರೂ ಆಕೆಗೆ ಅನುಮಾನ. ಎಲ್ಲಿ ಹಿಂದಿನ ಕತೆಯನ್ನೆಲ್ಲಾ ಹೇಳಿ ಸೋಮಯಾಜರ ಮನಸ್ಸು ಕಡಿಯುತ್ತಾನೋ ಎಂದು. ಯಾವ ಆಪತ್ತು ಒದಗದಂತೆ ಶಿವನನ್ನು ಬೇಡಿಕೊಂಡಳು.

ಸೋಮಯಾಜರು ದಿಟ್ಟಹೆಜ್ಜೆಯಿಂದ ಮುಂದೆ ಬಂದರು.

"ಯಾರು ನೀನು ..." ಎಂದರು ವಿನಯದಿಂದ.

"ಗಾಡಿಯಲ್ಲಿ ಇದ್ದಾಳೆ ನೋಡಿ .. ಆಕೆಯನ್ನೇ ಕೇಳಿ" ರಾಜು ಹೆಗಡೆ ಗಟ್ಟಿಯಾಗಿಯೇ ಹೇಳಿದ.

"ಅವಳಿಗೆ ನಿನ್ನ ಪರಿಚಯವಿದೆಯೇ?"

"ಹೂಂ .. ಆಕೆಗೂ ನನಗೂ ಒಂದು ರೀತಿಯ ಸಂಬಂಧವಿದೆ."

"ಒಂದು ರೀತಿಯ ಸಂಬಂಧ ಎಂದರೆ...."

"ಅವಳನ್ನೇ ಕೇಳಿ"

"ಏಕೆ.... ನೀನೇ ಹೇಳಿಬಿಡು"

"ಆ ಬಸವಿಯನ್ನು ಮೊದಲು ಕಟ್ಟಿಕೊಂಡವನು ನಾನು."

"ಏನಾಯ್ತು....ಅದು ಮೊದಲಾಯ್ತು....ಈಗ ಆ ಸಂಬಂಧವನ್ನು ನಾನು ಬೆಳೆಸಿದ್ದೇನೆ."

"ಅದು ಹೇಗೆ ಆಗುತ್ತೆ ಅಂತ"

"ಏಕೆ ಆಗಬಾರದು ಅಂತ"

"ನನ್ನ ಹುಡುಗಿಯನ್ನು ಹೇಗಯ್ಯ ಹೊಡೆದುಕೊಂಡು ಹೋಗುತ್ತಿ?"

"ನನ್ನ ಹುಡುಗಿ ಅಂದರೆ... ಅವಳ ಬಗ್ಗೆ ಕೇಳುವ ಅಧಿಕಾರ ನಿನಗೆಲ್ಲಿದೆ?"

"ನಿಮ್ಮಗೆಲ್ಲಿದೆ ಮೊದಲು ಹೇಳಿ"

"ನಾನೇನೂ ನಿಮ್ಮ ಹುಡುಗಿಯನ್ನು ಕರೆದುಕೊಂಡು ಹೋಗುವುದಿಲ್ಲ. ಆಕೆಗೆ ಬಂಗಾರದ ಬಾಳ್ವೆ ಕೊಡುತ್ತೇನೆಂಬ ನಂಬಿಕೆ ನನಗಿದೆ."

"ಅರೆ.. ನನಗಿಂತಲೂ ಹೆಚ್ಚಿನ ಸುಖ ನೀವು ಕೊಡುವ್ರೆ?"

"ಏಕೆ ಅನುಮಾನವೇ?"

"ಕುಂಠಿಕೊಪ್ಪದ ಹೆಗಡೆ ಮನೆತನದವನು ನಾನು ಎರಡು ಕೋರ್ಜಿ ಭೂಮಿ ನನ್ನ ಪಾಲಿಗಿದೆ."

"ನಾನು ಯಾರು ಗೊತ್ತೆ?....ಮೊಗೆಬೆಟ್ಟಿನ ಸೋಮಯಾಜರ ಮನೆ ನನ್ನದು. ಮೂರು ಕೋರ್ಜಿ ಭೂಮಿ ಅಲ್ಲದೆ ಎರಡು ಎಕರೆ ತೆಂಗಿನ ತೋಟವಿದೆ ..."

ಆ ಮಾತು ಕೇಳಿ ಹೆಗಡೆಗೆ ಸಿಟ್ಟು ಬಂತು.

"ನಿಮ್ಮಲ್ಲಿ ನನಗೇಕೆ ಮಾತು....ಹೇಳಿದ್ದೇನೆ.. ಹುಡುಗಿನ್ನ ಕೆಳಗಿಳಿಸಿಬಿಡಿ... ಇಲ್ಲ ನಾನೇ ಇಳಿಸಬೇಕಾಗುತ್ತದೆ."

ಆಗ ನೋಡಬೇಕಿತ್ತು ಸೋಮಯಾಜರನ್ನು. ಮೈಮೇಲಿದ್ದ ವಸ್ತ್ರವನ್ನು ಸೊಂಟದಲ್ಲಿ ಬಿಗಿಯುತ್ತಾ,

"ನಿನ್ನ ಸೊಕ್ಕು ಮುರಿಯದಿದ್ದರೆ ನಾನು ಬ್ರಾಹ್ಮಣನೇ ಅಲ್ಲ. ಆಕೆಯನ್ನು ಮುಟ್ಟುವುದಿರಲಿ....ಗಾಡಿ ಹತ್ತಿರ ಸುಳಿದೆ ಎಂದಾದರೆ ಮತ್ತೆ ನೀನು ಶಂಂತಿಕೊಪ್ಪ ಕಾಣುವುದಿಲ್ಲ. ಹೇಳಯ್ಯ...ನಿನಗೆ ಒಂದಿಷ್ಟಾದರೂ ನ್ಯಾಯ ಗೊತ್ತಿದೆಯೆ? ಎದೆಯಮೇಲೆ ಕೈಯಿಟ್ಟು ಹೇಳು....ಈ ಹುಡುಗಿ ನಿನಗೆ ಬೇಕಿದ್ದರೆ...ನೀನು ತಿಳಿದುಕೊಂಡಂತೆ ಆಕೆ ಬಸವಿ ಎಂದು ಉಪಯೋಗಿಸುವುದಕ್ಕಲ್ಲ. ನನ್ನ ಮುಂದೆಯೇ ಆಕೆಯ ಕೊರಳಲ್ಲಿ ಕರಿಮಣಿಸುತ್ತು. ಹೆಂಡತಿ ಎಂದು ಪರಿಗ್ರಹಿಸು. ನಿನ್ನ ಅರ್ಧ ಹಿಸೆಯನ್ನು ಆಕೆಯ ಹೆಸರಿಗೆ ಬರೆಯಿಸು. ಈಗ ಇವಳನ್ನು ನಿನ್ನ ಜೊತೆಯಲ್ಲಿ ಕಳುಹಿಸುತ್ತೇನೆ. ನನಗೂ ಲಕ್ಷಣವಾದ ಹೆಂಡತಿಯಿದ್ದಾಳೆ. ಎರಡು ಮಕ್ಕಳ ತಂದೆ ಬೇರೆ. ಅವಳನ್ನು ನನ್ನ ಸುಖಕ್ಕಾಗಿ ಕರೆದುಕೊಂಡು ಹೋಗುತ್ತಿದ್ದೇನೆ ಎಂದು ಭಾವಿಸಬೇಡ. ಸುಮ್ಮನೆ ಗಲಾಟೆ ಬೇಡ....ಹೂಂ....ಹೋಗು" ಎನ್ನುತ್ತಾ ಸರಸರ ನಡೆದು ಗಾಡಿ ಹತ್ತಿದರು ಸೋಮಯಾಜರು. ಎತ್ತುಗಳ ಬಾಲ ಜಿಗಿಸಿದ ಸುಬ್ಬ. ರಸ್ತೆಯ ಇಳಿಯಲ್ಲಿ ಗಾಡಿ ಉರುಳಿತು. ಮತ್ತೆ ರಾಜು ಹೆಗಡೆಯ ಬಾಯಿಂದ ಮಾತೇ ಹೊರಡಲಿಲ್ಲ. ಆಡುವುದಕ್ಕೆ ಉಸಿರೇ ಇಲ್ಲವಾಗಿತ್ತು. ಸೋಮಯಾಜರ ಮಾತಿನಲ್ಲಿ ಒಂದಿಷ್ಟು ನ್ಯಾಯ ಕಂಡಿತು. ಅದನ್ನು ಅರ್ಥ ಮಾಡಿಕೊಂಡನೋ ಏನೋ....ಜಲ್ಲಿಯ ರಾಶಿಯ ಮೇಲೆ ಕುಳಿತು ಗಾಡಿ ಹೋಗುವುದನ್ನೇ ದಿಟ್ಟಿಸಿದ.

ಗೊಳ್ಳೆಂದು ಅಳುತ್ತಾ ಸೋಮಯಾಜರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡಳು ಗಿರಿಜ.

"ಬಿಡು....ಆದದ್ದು ಆಗಿಹೋಯ್ತು...." ಎಂದರು ಸೋಮಯಾಜರು.

"ಅಯ್ಯ....ಈ ನಾಡವರ ರಾಪೇ ಹಾಗೆ....ಎಲ್ಲಾ ಬಾಯಲ್ಲಿ ಮಾತ್ರ ಒಂದು ಮಾತು ಹೇಳಿದಿರಿ ನೋಡಿ...ಆ ಬುದ್ಧಿ ನಮ್ಮ ಶಂಂತಿಕೊಪ್ಪದ ಜನಕ್ಕೆ ಇದ್ದಿದ್ದರೆ.. ಆ ಮಾತು ಬೇರೆಯಿತ್ತು. ಮುಖ್ಯವಾಗಿ ಗಿರಿಜಮ್ಮ ಪುಣ್ಯ ಮಾಡಿದ್ದಾರೆ" ಎಂದ ಗಾಡಿ ಸುಬ್ಬ. ಬಹಳ ಸಮಯದತನಕ ಯಾರದೂ ಮಾತಿಲ್ಲ. ಸೋಮಯಾಜರು ಅದನ್ನೇ ಯೋಚಿಸುತ್ತಿದ್ದರು. ಆ ಘಟನೆ

ಗಿರಿಜಳ ಎಳೆ ಮನಸ್ಸಿನ ಮೇಲೆ ಭೀಕರ ಪರಿಣಾಮವನ್ನೇ ಉಂಟುಮಾಡಿತ್ತು. ಮುಖ ಬಾಡಿಸಿಕೊಂಡು ಒದ್ದೆ ಕಣ್ಣಿನಿಂದ ಮುದುಡಿಕೊಂಡು ಕುಳಿತಿದ್ದಳು. ಅವಳ ಆಗಿನ ಸ್ಥಿತಿ ಕಂಡು ಸೋಮಯಾಜರು ಮೆಲ್ಲನೆ ಅವಳ ಪಕ್ಕಕ್ಕೆ ಬಂದು ತಲೆ ನೇವರಿಸುತ್ತಾ,

"ಗಿರಿಜಾ....ಮನಸ್ಸಿಗೆ ನೆಮ್ಮದಿಯಿಲ್ಲದಿದ್ದರೆ ವಿಶ್ರಾಂತಿ ತೆಗೆದುಕೋ. ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಹುಂಡಿಕೊಪ್ಪದ ನೀರಿನ ಋಣ ತಪ್ಪಿತು. ಇನ್ನು ಮೊಗೆಬೆಟ್ಟಿನ ಅನ್ನ ನೀರಿನ ಋಣ" ಎಂದು ಸಂತೈಸಿದರು. ಇದ್ದುದರಲ್ಲಿ ಸಮಾಧಾನ ತಂದುಕೊಂಡಳು ಗಿರಿಜ.

ಗಾಡಿ ಮೊಗೆಬೆಟ್ಟಿಗೆ ಬಂದಾಗ ರಾತ್ರಿ ಎಂಟು ಗಂಟೆಯಾಗಿತ್ತು.

೧೦

“ನಾನಿರುವಾಗ ಈ ಮನೆಯಲ್ಲಿ... ಆ ಬಸವಿಯನ್ನೇಕೆ ಕರೆದುಕೊಂಡು ಬಂದದ್ದು? ರುಕ್ಮಿಣಿ ಇನ್ನು ಸತ್ತಿಲ್ಲವಲ್ಲ. ಮದುವೆಯಾಗಿ ಐದು ವರ್ಷ ಕಳೆದಿಲ್ಲ... ಅಷ್ಟು ಬೇಗ ಹಳಸಿತೆ ನನ್ನ ಜೀವ? ನೋಡಿದವರು ಕೈ ತಟ್ಟಿ ನಗುವಂಥ ಕ್ಕಾಯ್ತು... ನೀವು ಮಾಡಿದ ಕೆಲಸ. ಮೊದಲೇ ಈ ಊರ ಜನರು ಬ್ರಾಹ್ಮಣರೆಂದರೆ ಮೂಗು ಮುರಿಯುತ್ತಾರೆ. ಇನ್ನು ಕೇಳುವುದೇ ಬೇಡ. ಶುಂಠಿಕೊಪ್ಪದಲ್ಲಿ ಯಾರದೋ ಎಂಜಲು ತಿಂದು ಬಿದ್ದಿದ್ದ ಮಾಲೆಯರ ಹೆಣ್ಣನ್ನು ತಂದು ಮನೆಯಲ್ಲಿ ಇಟ್ಟುಕೊಂಡಿದ್ದಾರೆ ಎಂದು ನಾಳೆ ಗುಸುಗುಸು ಪ್ರಾರಂಭವಾಗುತ್ತದೆ ನೋಡಿ. ಆಮೇಲೆ ಅನುಭವಿಸುವವರು ನೀವು. ತವರಿನವರಿಗೆ ಈ ವಿಚಾರ ತಿಳಿದರೆ ನನ್ನ ಗೌರವ ಏನು ಉಳಿಯಿತು? ಯಾವುದು ಕಡಿಮೆಯಾಗಿತ್ತು ನನ್ನಲ್ಲಿ?... ಆ ಮಾದೇವಿಯನ್ನು ತಂದು ನನ್ನ ಕಣ್ಣಮುಂದೆ ಸಂಸಾರ ಮಾಡುವುದಕ್ಕೆ. ಯಾವ ಸುಖದ ಕೊರತೆಯಾಗಿತ್ತು ನಿಮಗೆ? ಹೇಳಿ... ಅದಕ್ಕೆ ಶುಂಠಿಕೊಪ್ಪದ ಜಾತ್ರೆಗೆ ಹೋಗುತ್ತೇನೆ ಎಂದು ನಾಲ್ಕುದಿನದಿಂದ ಹಾರಾಡಿದ್ದು. ಈಗ ತಿಳಿಯಿತಲ್ಲ ನಿಮ್ಮ ಗುಟ್ಟು. ವೈದಿಕರಾಗಿ... ದೇವಾಲಯದ ಅರ್ಚಕರಾಗಿ ಈ ಕಾರ್ಯಕ್ಕೆ ನಿಮ್ಮ ಮನ ಒಪ್ಪಿದ್ದು.... ಮುಖ್ಯ ನನ್ನ ಪ್ರಾರಬ್ಧ” ಎಂದು ಗೋಳೋ ಅತ್ತಳು ರುಕ್ಮಿಣಿ. ಸೆರಗು ಪೂರ ಒದ್ದೆಯಾಗಿತ್ತು. ಅತ್ತು ಅತ್ತು ಕಣ್ಣು ಕೆಂಪಾಗಿತ್ತು. ಮೂಗಿನಲ್ಲಿ ಇಳಿಯುವ ಸಿಂಬಳ ಮತ್ತೆ ಮತ್ತೆ ಸೆರಗಿನಲ್ಲಿ ಹಿಂಗಿಹೋಗಿತ್ತು. ಗಾಡಿ ಇಳಿದು ಜಗಲಿಗೆ ಬಂದಿದ್ದರು. ಗಿರಿಜ ಇನ್ನು ಅಂಗಳದಲ್ಲಿ ನಿಂತಿದ್ದಳು. ಐದು ನಿಮಿಷದಲ್ಲಿ ವಿಚಾರ ತಿಳಿದ

ರುಕ್ಮಿಣಿ ಹಾರಾಡುವುದಕ್ಕೆ ತೊಡಗಿದ್ದಳು. ವಿರೋಧಿಸುವಷ್ಟು ಸಹನೆ ಕೂಡಾ ಇದ್ದಿರಲಿಲ್ಲ. "ಕಟ್ಟೆಯಲ್ಲಿ ನೀರಿನ ತೊಟ್ಟಿಯಿದೆ ಕಾಲು ತೊಳೆದು ಬಾ" ಎಂದು ಸೋಮಯಾಜರು ಹೇಳಿದಾಗಲೇ ಗಿರಿಜ ಬಾವಿಯ ಕಟ್ಟೆಯತ್ತ ನಡೆದಳು. "ಅವಳು ಯಾರು?" ಎಂದು ನಾಲ್ಕು ಬಾರಿ ರುಕ್ಮಿಣಿ ಒತ್ತಿ ಒತ್ತಿ ಕೇಳಿದ ಮೇಲೆ ಮೆಲ್ಲನೆ ಹೇಳಿದ್ದರು ಗಿರಿಜಳ ಚರಿತ್ರೆಯನ್ನು. ಹೆಂಡತಿಯಾದವಳು ಸಹಿಸುತ್ತಾಳೆಯೆ? "ನನಗೆ ಆಕೆಯ ಬಗ್ಗೆ ತುಂಬಾ ಅಭಿಮಾನವಿದೆ ರುಕ್ಕು. ನೀನು ಏನೂ ತಿಳಿಯದಿದ್ದರೆ ಒಂದು ಮಾತು ಹೇಳುತ್ತೇನೆ. ಗಿರಿಜ ಈ ಮನೆಯಲ್ಲಿರುವುದು ನನಗೆ ಬೇಕು" ಎಂದು ಸೋಮಯಾಜರು ಹೆದರಿಕೊಂಡೇ ಹೇಳಿದ್ದರು. ಸಿಡಿಲು ಬಡಿದಂತೆ ಒಂದೇ ಉಸಿರಿನಲ್ಲಿ ಕೆಂಡದಂತಹ ಮಾತು ಹೇಳಿದ್ದಳು ರುಕ್ಮಿಣಿ. ಅದೂ ಗಿರಿಜಳಿಗೆ ಕೇಳಿಸುವಂತೆ. "ಬಾ ಗಿರಿಜಾ..." ಎಂದು ಸ್ವಾಗತಿಸಲಿಲ್ಲ. "ಕುಡಿಯುವುದಕ್ಕೆ ಬಾಯಾರಿಕೆ ಬೇಕೆ?" ಎಂದು ಕೇಳಲಿಲ್ಲ. ತನಗಿಂತಲೂ ಸುಂದರಿಯಾಗಿದ್ದ ಗಿರಿಜಳನ್ನು ಕಂಡಾಗಲೇ ಕೆರಳಿದ್ದಳು. ಗಿರಿಜಳ ಸ್ಥಿತಿ ಶೋಚನೀಯವಾಗಿತ್ತು. ಚೆದುರಿಯ ವೇಷದಲ್ಲಿ ರುಕ್ಮಿಣಿಯ ಮುಖ ಕಂಡಳು. ಅರ್ಧ ಗಳಿಗೆ ಕೂಡಾ ಕಳೆದಿರಲಿಲ್ಲ. ಮನೆಯ ಪರಿಸ್ಥಿತಿ ಹೀಗಾದರೆ ಮುಂದೆ ಗತಿ ಏನು? ಎಂದು ಖೇದವಾಗಿ ಯೋಚಿಸಿದಳು. "ಆಗಲಿ ನಿಮಗೆ ನಿಮ್ಮ ಸುಖವೇ ಹೆಚ್ಚಾದರೆ ಅದನ್ನೇ ನೋಡಿ. ನಾನು ಹೇಗೂ ನಿಮ್ಮ ಹೆಂಡತಿ. ನೀವು ಕಟ್ಟಿದ ಮಾಂಗಲ್ಯ ನನ್ನ ಕುತ್ತಿಗೆಯಲ್ಲಿರುವಾಗ ನಿಮ್ಮ ಮನಸ್ಸನ್ನು ನೋಯಿಸುವುದಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಒಂದು ಮನೆಯಲ್ಲಿ ಇಬ್ಬರು ಗಂಡಸರು ಹೇಗಾದರೂ ಇರುತ್ತಾರೆ. ಆದರೆ ಒಬ್ಬರಿಗೆ ಇಬ್ಬರು ಹೆಂಡಂದಿರು ಇರುವುದು ನ್ಯಾಯವೆ? ಸುಮ್ಮನೆ ನನ್ನ ಕಣ್ಣಿಂದ ನೀರಿಳಿಸಬೇಡಿ. ನನ್ನ ಸುಖ ಬೇಡವಾದರೆ... ಒಂದು ಗುಟುಕು ವಿಷ ಕೊಡಿ. ನಿಮ್ಮ ಪಾದದ ಮೇಲೆ ತಲೆಯಿಟ್ಟು ಪ್ರಾಣ ಬಿಡುತ್ತೇನೆ" ಎಂದು ಬಿಕ್ಕಿ ಬಿಕ್ಕಿ ಅತ್ತಳು ರುಕ್ಮಿಣಿ. ಗಿರಿಜಳಿಗೆ ತಡೆಯುವುದಕ್ಕಾಗಲಿಲ್ಲ. ಕಂಬದ ಮರೆಯಲ್ಲಿ ನಿಂತು ಸೆರಗಿನಿಂದ ಮುಖ ಮುಚ್ಚಿಕೊಂಡು ಅತ್ತಳು. "ಈ ಮನೆಯ ನೀರಿನ ಋಣ ನನಗಿದೆಯೆ?" ಎಂದುಕೊಂಡಳು. ಆದರೆ ಸೋಮಯಾಜರು ತಾಳ್ಮೆ ವಹಿಸಿದರು. ರುಕ್ಮಿಣಿಯ ಅಂತರಂಗವನ್ನು ಚೆನ್ನಾಗಿ ಅರಿತಿದ್ದರು. "ನೋಡು ರುಕ್ಮಿಣಿ, ಈ ವಿಚಾರದಲ್ಲಿ ನಾನು

ತಪ್ಪಾಗಿ ವರ್ತಿಸಿಲ್ಲ. ಹತ್ತು ದಿನ ಹೋಗಲಿ .. ಇಂತಹ ಇನ್ನಿಬ್ಬರು ಹುಡುಗಿಯರು ಇದ್ದರೆ ಕರೆದುಕೊಂಡು ಬನ್ನಿ ಎಂದು ನೀನೇ ಹೇಳುತ್ತಿ. ನನಗೂ ದೇವರು ಒಂದಿಷ್ಟು ಜ್ಞಾನ ಕೊಟ್ಟಿದ್ದಾನೆ. ಯಾವುದು ಹಾಳು? ಯಾವುದು ಒಳ್ಳೆಯದು ಎಂದು ತಿಳಿಯುವಷ್ಟು ವಿವೇಕ ನನಗಿದೆ. ನನ್ನ ಸುಖಕ್ಕಾಗಿ ಗಿರಿಜ ಬಂದದ್ದಲ್ಲ. ಇದರಲ್ಲಿ ನಿನ್ನ ಹಿತದ ಪ್ರಶ್ನೆಯೂ ಇದೆ. ಕಳೆದ ತಿಂಗಳು ನೀನೇ ಅಂದಿಲ್ಲವೆ? ಈ ಮಕ್ಕಳನ್ನು ಹಾಕಿಕೊಂಡು ಮನೆ ಕೆಲಸ ಮಾಡುವುದಕ್ಕೆ ತೊಂದರೆ .. ನನ್ನ ಸಹಾಯಕ್ಕೆ ಈ ಮನೆಯಲ್ಲಿ ಒಂದು ಜನ ಇದ್ದಿದ್ದರೆ ಎಂದು. ಆ ಮಾತು ನಿನಗೆ ನೆನಪಿದೆಯೆ?" ಎಂದರು ಸೋಮಯಾಜರು. ಆದರೂ ರುಕ್ಮಿಣಿಯ ಕೋಪದ ಕಾವು ಇಳಿದಿರಲಿಲ್ಲ. "ಅದಕ್ಕೆ ಈ ಬೀದಿ ಬಸವಿ ಬೇಕಿತ್ತೆ? ಯಾರು ಮುಟ್ಟಿದ ಎಂಜಲೋ....ಯಾರ ಅಂಗಳದಲ್ಲಿ ಬಿದ್ದಿದ್ದ ಹೊಲಸು ಜೀವವೋ...ಈ ಮನೆಯೇ ಮೈಲಿಗೆಯಾಯ್ತು. ವೈದಿಕ ಮನೆತನಕ್ಕೆ ದ್ರೋಹವಾಗಿದೆ. ನಾಳೆ ಇವಳು ಗುಡಿಯಲ್ಲಿ ಚಾಮರ ಹಿಡಿದರೆ ದೇವರು ಅಲ್ಲಿರುತ್ತಾನೆಂಬ ಭರವಸೆ ನನಗಿಲ್ಲ" ಎಂದು ಮತ್ತೆ ಉಡಾಯಿಸಿದಳು ರುಕ್ಮಿಣಿ. ಗಿರಿಜ ಎಲ್ಲವನ್ನೂ ಕೇಳಿಸಿಕೊಂಡಿದ್ದಳು. ಸೋಮಯಾಜರ ಉತ್ಸಾಹ ಮಣ್ಣು ಪಾಲಾಗಿತ್ತು. "ಹಸಿವೆಯಾಗುತ್ತಿದೆ....ಎಲೆ ಹಾಕು" ಎಂದರು. ಅವರಿಗೆ ಅನ್ನ ಬಡಿಸಿದರೂ ಗಿರಿಜಳಿಗೆ ಸೋಮಯಾಜರೇ ಎಲೆ ಹಾಕಿ ಊಟ ಬಡಿಸಿದರು. "ಆ ಕೆಟ್ಟವಳಿಗೆ ನಾನು ಅನ್ನ ಹಾಕುವುದಿಲ್ಲ" ಎಂದು ರುಕ್ಮಿಣಿ ಹೇಳಿದ ಮೇಲೆ ಸೋಮಯಾಜರೇ ಜಗಲಿಯ ಮೂಲೆಯಲ್ಲಿ ಗಿರಿಜಳಿಗೆ ಎಲೆ ಹಾಕಿದ್ದರು. ಚಿಮಣಿದೀಪದ ಹೊಗೆಯಲ್ಲಿಯೇ ಗಿರಿಜ ಎರಡು ತುತ್ತು ಉಂಡಿದ್ದಳು. ಸೆಗಣಿ ನೀರು ಚೆಲ್ಲಿ ಮತ್ತೆ ಕಂಬದ ಮರೆಯಲ್ಲಿ ಕುಳಿತಳು. ಸೋಮಯಾಜರು ಪಡುಕೋಣೆಯ ಬಾಗಿಲು ತೆರೆದು "ಈ ಕೋಣೆಯಲ್ಲಿ ಮಲಗು. ಏನೂ ಭಯ ಬೇಡ. ನಾಲ್ಕು ದಿನದಲ್ಲಿ ಎಲ್ಲಾ ಸರಿ ಮಾಡುತ್ತೇನೆ. ನಾಳೆ ಆಕೆಯ ಸಿಟ್ಟು ತಣಿಯುತ್ತದೆ. ಆಮೇಲೆ ನೀನು ಮಾತುಕತೆಯಾಡಿದರೆ ಸಾಕು. ನಾವು ಪಡಸಾಲೆಯಲ್ಲಿ ಮಲಗುತ್ತೇನೆ. ರಾತ್ರಿಹೊತ್ತು ಏನೂ ಹೆದರಿಕೆಯಿಲ್ಲ. ಇಲಿ ಹೆಗ್ಗಣದ ಕಾಟವಿದೆ. ಆಗಾಗ ಬೆಕ್ಕು ಬರುವುದುಂಟು. ಯಾವುದಕ್ಕೂ ದೇವರಿದ್ದಾನೆ" ಎಂದು ಆಕೆಯನ್ನು ಕೋಣೆಯಲ್ಲಿ ಮಲಗಿಸಿದರು ಸೋಮಯಾಜರು. ಏನೋ ಹೇಳಿದಳು ಗಿರಿಜ.

ಸೋಮಯಾಜರು ಕಿವಿಗೆ ಹಾಕಿಕೊಂಡಿರಲಿಲ್ಲ. ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಒದ್ದಾಡುತ್ತಿದ್ದಳು ಗಿರಿಜ. ಅರ್ಧರಾತ್ರಿಯತನಕ ಹೆಂಡತಿಯನ್ನು ಸಮಾಧಾನಿಸುವುದೇ ಆಯ್ತು ಸೋಮಯಾಜರಿಗೆ. ಬೆಳಗಾದರೆ ಗಿರಿಜಳಿಗೆ ಕೋಣೆಯ ಬಾಗಿಲು ತೆಗೆಯುವುದಕ್ಕೆ ಭಯ. ಕಟ್ಟೆಗೆ ಮುಖ ತೊಳೆಯುವುದಕ್ಕೆ ಹೋಗುವುದಕ್ಕೂ ನಾಚಿಕೆ. ಸೋಮಯಾಜರೇ ಬಂದು ವಿಚಾರಿಸಬೇಕು. ಅವರೇ ಕಾಫಿ ತಿಂಡಿ ತಂದುಕೊಡಬೇಕು. ಹೀಗೆ ಮೂರು ದಿನ ಕಳೆಯಿತು. ರುಕ್ಮಿಣಿಯನ್ನು ಮಾತನಾಡಿಸುವ ಗಿರಿಜಳ ಬಯಕೆ ಮಾತ್ರ ಇನ್ನೂ ಕೈಗೂಡಿರಲಿಲ್ಲ. ರುಕ್ಮಿಣಿ ಮುಖ ಕೂಡಾ ನೋಡಿರಲಿಲ್ಲ. ಗಿರಿಜಳ ಪಾಡು ನಾಯಿಗಿಂತಲೂ ಕಡೆಯಾಗಿತ್ತು. ಹೀಗಾದರೆ ಮುಂದೆ ಇರುವುದು ಹೇಗೆ ಎಂಬ ದುಃಖ? ತುಂಡಿಕೊಪ್ಪದಲ್ಲಿ ಬಸವಿಯಾಗಿಯೇ ರಾತ್ರಿ ಜಿಲಿಯುತ್ತಿದ್ದರೂ ಇಲ್ಲಿಗಿಂತ ಹೆಚ್ಚಿನ ಸುಖ ಕಂಡಿದ್ದೇನೆ ಎನ್ನುವ ತೃಪ್ತಿ–ಮೊಗೆಬೆಟ್ಟಿಗೆ ಬಂದ ಅನಂತರ ಅನುಭವದ ಮೂಸೆಯಲ್ಲಿ ಸುಳಿದಾಡಿತು. ರುಕ್ಮಿಣಿಯಮ್ಮ ಒಮ್ಮೆಯಾದರೂ ತನ್ನ ಮುಖ ಕಂಡಿದ್ದರೆ .. ಒಂದು ಬಾರಿಯಾದರೂ ಮಾತು ಆಡಿಸಿದ್ದರೆ .. ಎಂಬ ಕಳವಳದಲ್ಲಿಯೇ ಗಿರಿಜ ಮೂರು ದಿನ ಕಳೆದಳು. "ನಿಮ್ಮ ಹೆಂಡತಿಗೆ ಬೇಡವಾಗಿದ್ದರೆ ನಾನು ಮರಳಿ ತುಂಡಿಕೊಪ್ಪಕ್ಕೆ ಹೋಗುತ್ತೇನೆ. ನನ್ನಿಂದ ಈ ಮನೆಯಲ್ಲಿ ಯಾರಿಗೂ ತೊಂದರೆ ಬೇಡ. ನನ್ನ ಮುಖ ನೋಡುವುದೂ ಅವರಿಗೆ ಬೇಡವಾಗಿದ್ದರೆ ನಾಳೆ ಒಂದು ಗಾಡಿ ಮಾಡಿಸಿ ನನ್ನನ್ನು ಕಳುಹಿಸಿಕೊಡಿ. ಅಲ್ಲಿ ನನ್ನ ಬಾಗ್ಯಕ್ಕೆ ಅಮ್ಮನಾದರೂ ಇದ್ದಾಳೆ. ಇಲ್ಲ ನಾಳೆಯಿಂದ ನಾನು ಗುಡಿಯಲ್ಲೇ ಇರುತ್ತೇನೆ. ಅಲ್ಲೇ ಒಂದಿಷ್ಟು ಅನ್ನ ಬೇಯಿಸಿಕೊಂಡು ದೇವರ ಸೇವೆಮಾಡಿಕೊಂಡಿರುತ್ತೇನೆ" ಎಂದು ಸೋಮಯಾಜರ ಕಾಲು ಹಿಡಿದುಕೊಂಡು ಹೇಳಿದ್ದಳು ಗಿರಿಜ. ಆದರೆ ಮೂರನೆಯ ದಿನ ಗಿರಿಜ ತನ್ನ ಅಭಿಪ್ರಾಯ ಬದಲಾಯಿಸಿದ್ದಳು. "ನೋಡಿ ... ರುಕ್ಮಿಣಿಯಮ್ಮನ ಬಾಯಿಂದ ನೀನು ನಮ್ಮ ಜೊತೆಯಲ್ಲೇ ಇರು ಗಿರಿಜಾ ಎನ್ನುವ ಮಾತು ನಾನು ಕೇಳಬೇಕು. ಶಿವನ ಕೃಪೆಯಿದ್ದರೆ ಆ ಮಾತು ಕೇಳಿಯೇ ಕೇಳುತ್ತೇನೆ. ನೀವು ಮೊನ್ನೆ ಅಂದಿರಲ್ಲ–ಇವರಲ್ಲಿ ನಿನ್ನ ಸುಖ ಕೂಡಾ ಇದೆ ಎಂದು. ನಾಳೆಯಿಂದ ಅವರ ಸೇವೆ ಮಾಡಿ ನೋಡುತ್ತೇನೆ. ಈ

ಯೋಚನೆ ನನ್ನ ತಲೆಯಲ್ಲಿ ಸುಳಿಯಬೇಕಾದರೆ ನಾಲ್ಕು ದಿನ ಬೇಕಾಯ್ತು ನೋಡಿ. ಆ ನನ್ನ ಪ್ರಯತ್ನದಲ್ಲಿ ಗೆದ್ದರೆ ಸರಿ ...ಇಲ್ಲ ಕ್ಷೇತ್ರದ ಕೆರೆಯಲ್ಲಿ ಮುಳುಗಿ ಸಾಯುತ್ತೇನೆ" ಎಂದು ಹೇಳಿದಾಗ ಸೋಮಯಾಜರಿಗೆ ಅದು ಸರಿಯಾಗಿ ಕಂಡಿತು. "ಹಾಗೆ ಮಾಡು ಗಿರಿಜಾ....ಅಂತೂ ನಮ್ಮನ್ನು ಬಿಟ್ಟು ಹೋಗಬೇಡ" ಎಂದರು. ಗಿರಿಜ ಹಾಗೆ ಅಭಿಪ್ರಾಯ ಬದಲಾಯಿಸಿದ್ದು ಅವರಿಗೆ ಸಂತೋಷವಾಗಿತ್ತು.

ರುಕ್ಮಿಣಿಯ ಕಲ್ಲುಹೃದಯ ಕರಗುವುದಕ್ಕೆ ದೀರ್ಘಕಾಲ ಬೇಕಾಗಿರಲಿಲ್ಲ. ಗಿರಿಜಳ ಸ್ವಭಾವದ ಪರಿಚಯವಾಗತೊಡಗಿತ್ತು. ಬೆಳಿಗ್ಗೆ ಹೊತ್ತಾರೆ ಎದ್ದು ಮನೆ ಜಗುಲಿಯನ್ನೆಲ್ಲಾ ಸಾರಿಸಿ ..ಅಂಗಳದ ಕಸವನ್ನೆಲ್ಲಾ ಎತ್ತಿ ಗುಡಿಸಿ ಲಕ್ಷಣವಾಗಿ ರಂಗವಲ್ಲಿ ಬರೆದು .. ಹಂಡೆತುಂಬ ಬಿಸಿನೀರು ಕಾಯಿಸಿ ...ಕಟ್ಟಿಯ ತೊಟ್ಟಿಗೆ ನೀರು ಹಾಕಿ ಮುಸುರೆಯ ಪಾತ್ರೆಗಳನ್ನೆಲ್ಲಾ ತೊಳೆದು .. ಒಂದು ಬುಟ್ಟಿ ಹೂ ತಂದು ಜಗಲಿಯ ಮೇಲಿಟ್ಟು... ಕೊಟ್ಟಿಗೆಯಲ್ಲಿದ್ದ ಕಪಿಲೆಗೆ ಹುಲ್ಲು ಹಾಕುತ್ತಿದ್ದಾಗ ರುಕ್ಮಿಣಿ ಹೊರಬಂದು ನೋಡುತ್ತಾಳೆ....ಅಂಗಣ ಚೊಕ್ಕವಾಗಿತ್ತು. ರಂಗವಲ್ಲಿ ಆಕರ್ಷಕವಾಗಿತ್ತು. ಬಚ್ಚಲು ಮನೆಗೆ ಹೋದರೆ ಅಂಡೆ ತುಂಬ ಬಿಸಿನೀರು. ಹಲ್ಲು ಉಜ್ಜುವುದಕ್ಕೆ ಮಾವಿನ ಎಲೆ ಬೇರೆ ಮುಂದಾಗಿ ಇಟ್ಟಿದ್ದಳು. ವಾಸನೆ ಬರುತ್ತಿದ್ದ ಬಚ್ಚಲು ಮನೆಯ ಕಲ್ಲಿಗೆ ಮರಳು ಹಾಕಿ ತೆಂಗಿನ ಕತ್ತದಿಂದ ತಿಕ್ಕಿದ್ದಳು. ಎಲ್ಲವನ್ನೂ ಗಮನಿಸಿದ್ದಳು ರುಕ್ಮಿಣಿ. ಮಾಡುವುದಕ್ಕೆ ಒಂದೂ ಕೆಲಸವಿರಲಿಲ್ಲ. ಅಡಿಗೆ ಮನೆಗೆ ಬಂದು ಕಾಫಿಗೆ ನೀರಿಟ್ಟಳು. ತೊಳೆದ ಪಾತ್ರೆ ಹೊಳೆಯುತ್ತಿತ್ತು. ಅಟ್ಟದ ಮೇಲಿದ್ದ ಕಟ್ಟಿಗೆಯನ್ನು ಗಿರಿಜಳೇ ತಂದು ಒಲೆಯ ದಿನ್ನೆಯ ಮೇಲಿಟ್ಟಳು. ಇಷ್ಟಾದರೂ ರುಕ್ಮಿಣಿ ಯಾವ ಮಾತನ್ನೂ ಆಡಿರಲಿಲ್ಲ. ಗಿರಿಜಳೂ ಅಷ್ಟೆ. ಮನೆಕೆಲಸದಲ್ಲಿ ಆಕೆಯ ಗಮನ. ಮಗುವಿನ ಮಲಮೂತ್ರವನ್ನೂ ತಾನೇ ತೆಗೆದಳು. ಹಟ್ಟಿಯ ಸೆಗಣಿಯನ್ನು ಗೊಬ್ಬರದ ರಾಶಿಗೆ ಹಾಕಿ ಕರುವಿನ ಮೈ ಉಜ್ಜುತ್ತಾ ನಿಂತಾಗ "ಕಾಫಿ ಕುಡಿ ಗಿರಿಜಾ" ಎಂದರು ಸೋಮಯಾಜರು. ರುಕ್ಮಿಣಿಯಮ್ಮನೆ ಕರೆಯುತ್ತಾರೆ ಎನ್ನುವ ನಿರೀಕ್ಷಣೆಯಿತ್ತು. ಆದರೆ ಸೋಮಯಾಜರು ಕರೆದಿದ್ದರು. "ಅಯ್ಯ....ಅಮ್ಮನ ಕೈಯಿಂದಲೇ ನಾನು ಕಾಫಿ ಕುಡಿಯುವುದು. ಅವರ ಬಾಯಿಂದಲೇ ಗಿರಿಜ ಕಾಫಿ ಕುಡಿ ಎನ್ನುವ ಮಾತು ಬರಬೇಕು"

ಎಂದಳು ಗಿರಿಜ. ಸೋಮಯಾಜರು ಒಳಹೋದರು. ರುಕ್ಮಿಣಿಯಮ್ಮನೇ ಹೊರಬಂದು ಹೇಳಿದರೆ ಕಾಫಿ ಕುಡಿಯುವ ಸಂಕಲ್ಪ ಗಿರಿಜಳದ್ದು. ಹತ್ತು ನಿಮಿಷ. ಕಪಿಲೆಗೆ ಹುಲ್ಲು ತಿನ್ನಿಸುತ್ತಲೇ ಇದ್ದಳು. ರುಕ್ಮಿಣಿಯಮ್ಮ ಕೈಯಲ್ಲಿ ಗಿಂಡಿ ಹಿಡಿದು ಹೊರಬಂದದ್ದನ್ನು ಕಂಡಳು ಗಿರಿಜ. "ಗಿರಿಜಾ.... ಇಲ್ಲಿ ಬಾ" ಎಂದಳು ರುಕ್ಮಿಣಿ. ಅಂಗಳದಲ್ಲಿ ನಿಂತಿದ್ದಳು. "ಜಗಲಿಗೆ ಬಾ" ಎಂದಳು ರುಕ್ಮಿಣಿ. ಮೇಲೆ ಬಂದಳು ಗಿರಿಜ. ಗಿಂಡಿಯನ್ನು ಮುಂದೆ ಹಿಡಿದು "ಕಾಫಿ ಕುಡಿ" ಎಂದಳು. ಗಿರಿಜಳ ಕಣ್ಣಿಂದ ಬಳಬಳ ನೀರಿಳಿಯಿತು. ಬಗ್ಗಿ ರುಕ್ಮಿಣಿಯ ಕಾಲು ಹಿಡಿದವಳು ಎರಡು ನಿಮಿಷ ಕದಲಲೇ ಇಲ್ಲ. "ಇನ್ನು ಈ ಸ್ವರ್ಗದ ಋಣ ತಪ್ಪಿದರೂ ಚಿಂತೆಯಿಲ್ಲ ಅಮ್ಮ, ಯಾವ ನರಕಕ್ಕಾದರೂ ಹೋಗುತ್ತೇನೆ. ಆದರೆ ನಿಮ್ಮ ಬಾಯಿಂದ ಒಂದು ಮಾತು ಬಂತು ನೋಡಿ ... ಆ ಭಾಗ್ಯ ನನ್ನ ಜನ್ಮಜನ್ಮದ ಪುಣ್ಯ" ಎಂದಳು. ಬಾಗಿಲ ಮರೆಯಲ್ಲಿ ನಿಂತಿದ್ದ ಸೋಮಯಾಜರಿಗೆ ಎಲ್ಲಿಲ್ಲದ ಸಂತೋಷ. "ಹಿಂದು ಆದದ್ದು ಆಗಿ ಹೋಯ್ತು. ಹಳೆಯದನ್ನು ನೆನೆಸಿಕೊಳ್ಳುವುದೇ ಬೇಡ. ನಿನ್ನ ಹೃದಯ ಇಷ್ಟು ಮೆತ್ತಗೆ ಎಂದು ನನಗೆ ತಿಳಿದಿರಲಿಲ್ಲ. ನೀನು ಮಾಡುವ ಈ ಕೆಲಸ ನನಗೆ ಋಣಭಾರವಾಗಿದೆ. ಎರಡು ದಿನ ಅಡಿಗೆ ಮಾಡಿ ತಿನ್ನುವುದೇ ಆಯ್ತು ನನ್ನ ಕೆಲಸ. ನೀನಿರುವುದೇ ನನಗೆ ಹಿತವಾಗಿ ಕಾಣುತ್ತದೆ ಗಿರಿಜಾ. ಮನೆ ಕೆಲಸಕ್ಕೆ ಹೆಂಗಸರಿದ್ದರೆ ಎಷ್ಟು ಸುಖ ಎಂಬುದು ಈಗ ತಿಳಿಯಿತು" ಎಂದು ರುಕ್ಮಿಣಿ ಹೇಳಿದಾಗ ಗಿರಿಜಳ ಮುಖ ಅಂಗೈ ಅಗಲವಾಗಿತ್ತು. ಕಾಫಿ ಕುಡಿದಳು. ಸೆರಗಿನಿಂದ ಮುಖ ಒರಸಿಕೊಳ್ಳುತ್ತಾ, "ಮುಂದೆ ಈ ಮನೆಯ ಎಲ್ಲಾ ಕೆಲಸ ನನಗಿರಲಿ ತಾಯಿ. ಅಡಿಗೆ ಮಾತ್ರ ನಿಮ್ಮದು. ನನ್ನನ್ನು ಮನೆಕೆಲಸದವಳೆಂದೇ ತಿಳಿಯಿರಿ. ನಿಮ್ಮ ಯಜಮಾನರ ಹೃದಯ ಹೂವಿಗಿಂತಲೂ ಮೆತ್ತಗೆ. ನೀವು ಕೂಡಾ ಬಂಗಾರದಂತಹ ಹೆಂಗಸು. ಒಂದು ಮನೆಯಲ್ಲಿ ಇಬ್ಬರು ಹೆಂಗಸರು ಇರುವುದು ಹೇಗೆ ಎಂಬ ಸಂದೇಹ ನಿಮ್ಮದು. ಅದು ನನಗೂ ಹೊಳೆದಿದೆ. ನಿಮ್ಮ ಸಂಸಾರದ ಸುಖಮಾರ್ಗದಲ್ಲಿ ಮುಳ್ಳಾಗಿರುವುದು ನನಗೂ ಬೇಡವಾಗಿದೆ. ಆದರೆ ನಾನು ಈ ಮನೆಯ ಬೆಳಕು ಆರಿಸಲು ಬಂದಿಲ್ಲ. ಆ ಬೆಳಕಿಗೆ ನನ್ನದೂ ಒಂದು ಹಣತೆಯನ್ನು ಸೇರಿಸುತ್ತೇನೆ. ಅದು ನಿಮ್ಮ ಸೇವೆ........ಅವರ ಸೇವೆ. ಹೇಗೂ ನಾನು ರಂಡೆಕೊಪ್ಪ ಬಿಟ್ಟು

ಬಂದಾಯ್ತು. ನನ್ನ ಕಣ್ಣೀರಿನ ಕತೆ ಹೀಗಿದೆ ತಾಯಿ" ಎಂದು ಎಲ್ಲವನ್ನೂ ವಿವರಿಸಿದಳು ಗಿರಿಜ. "ನಿಮ್ಮ ಗಂಡನ ಸುಖವನ್ನು ಮಾತ್ರವಲ್ಲ ...ನಿಮ್ಮ ಸುಖವನ್ನು ಯೋಚಿಸಿದ್ದೇನೆ. ನೀವು ಹಾಕುವ ಅಡ್ಡಪಂಕ್ತಿಯ ಎರಡು ಹೊತ್ತಿನ ಅನ್ನ ನನಗೆ ಹೆಚ್ಚಲ್ಲ....ನಿಮ್ಮ ಪ್ರೀತಿವಿಶ್ವಾಸ ನನಗೆ ಬೇಕು. ನಿಮ್ಮ ಯಜಮಾನರನ್ನು ನನ್ನ ಹಾಸಿಗೆಗೆ ಕರೆದು ನಿಮಗೆ ದ್ರೋಹ ಬಗೆಯುವ ಇರಾದೆ ನನಗಿಲ್ಲ. ಅವರು ಮುಂದೆ ಕೂಡಾ ನಿಮ್ಮವರೆ. ನಿಮ್ಮ ಬಾಯಿಂದ ಗಿರಿಜಾ....ನೀನು ಇಲ್ಲೇ ಇದ್ದುಬಿಡು ಎನ್ನುವ ಒಂದು ಮಾತು ಬಂದರೆ ಸಾಕು ..." ಎಂದು ಗಿರಿಜ ಹೇಳಿದಳು.

ರುಕ್ಮಿಣಿಯ ಮನಸ್ಸು ಹತ್ತಿಯಂತೆ ಹಾರಾಡಿತು. ಅದು ತನ್ನ ಗತಿಯನ್ನು ತಾನಾಗಿಯೇ ಬದಲಿಸಿತ್ತು. ತಿಳಿದುಕೊಂಡಷ್ಟು ಪರಿಸ್ಥಿತಿ ಕಠಿಣವಾಗಿರಲಿಲ್ಲ. ಗಿರಿಜ ಅವಳು ತಿಳಿದುಕೊಂಡಂತೆ ಕುಲಗೆಟ್ಟ ಹೆಣ್ಣಾಗಿರಲಿಲ್ಲ. ಆಕೆಯ ದೇಹದಲ್ಲಿ ಉತ್ತಮ ಕುಲದ ರಕ್ತವೇ ಹರಿಯುತ್ತಿರಬೇಕು. ಗಿರಿಜ ಬಂದಮೇಲೆ....ಎರಡು ದಿನದಿಂದ....ಅವಳು ಮಾಡುವ ಕೆಲಸ....ಅವಳ ವಿಶ್ವಾಸದ ವ್ಯವಹಾರ....ಗಂಭೀರ ನಡೆನುಡಿ ...ಕಾರ್ಯನಿಷ್ಠೆಯನ್ನು ಕಂಡಾಗ ಅವಳಿರುವುದೇ ತನಗೆ ಹೆಚ್ಚು ಅನುಕೂಲವಾಗಿ ಕಂಡಿತು. ಬಿಸಿ ನೀರು ಕಾಯಿಸಿ ರುಕ್ಮಿಣಿಯನ್ನು ಸ್ನಾನಮಾಡಿಸುವುದಕ್ಕೆ ಅವಳಿಗೆಷ್ಟು ಉತ್ಸಾಹ? ಬಟ್ಟೆಗಳನ್ನು ಒಗೆಯುವುದಕ್ಕೆ ಗಿರಿಜಳಿಗೆ ಎಷ್ಟು ಆನಂದ? ಎಲ್ಲಾ ಕಾರ್ಯದಲ್ಲೂ ಆಕೆಗೆ ಶ್ರದ್ಧೆ. ಎರಡು ಮಕ್ಕಳನ್ನು ಆಕೆ ಎತ್ತಿಕೊಂಡು ಆಡಿಸುವುದನ್ನು ಕಂಡಾಗಲಂತೂ ರುಕ್ಮಿಣಿಗೆ "ಗಿರಿಜ ಇದ್ದರೆ ನನಗೆ ತುಂಬಾ ಅನುಕೂಲ" ಎಂದುಕೊಂಡಳು. ದಿನವೂ ಪಡಸಾಲೆಯಲ್ಲಿ ತಮ್ಮಿಬ್ಬರ ಹಾಸಿಗೆಯನ್ನು ಅವಳೇ ಹಾಸಿ....ತಾಂಬೂಲದ ಹರಿವಾಣವನ್ನು ತಲೆದಿಸೆಯಲ್ಲಿಟ್ಟು.... ಕಟ್ಟೆಯಿಂದ ತಂಬಿಗೆಯಲ್ಲಿ ನೀರು ತಂದು ಕಿಟಕಿಯ ಅರೆಯಲ್ಲಿಟ್ಟು ತನ್ನ ಕೋಣೆಗೆ ಹೋಗಿ ಮಲಗುತ್ತಿದ್ದಳು. ಒಂದು ದಿನವಾದರೂ ಸೋಮಯಾಜರು ಆಕೆಯ ಕೋಣೆಗೆ ಹೋದದ್ದನ್ನು ರುಕ್ಮಿಣಿ ಕಂಡಿರಲಿಲ್ಲ. ಏನು ಕಂಡಿತೋ–ಗಿರಿಜಳ ತಲೆ ನೇವರಿಸುತ್ತಾ "ಗಿರಿಜಾ....ಕೆಟ್ಟ ಕಾಲದಲ್ಲಿ ಏನೋ ಅಂದೆ. ಆಡಬಾರದ್ದನ್ನು ಆಡಿವೆ. ನಿನ್ನ ಮನಸ್ಸಿಗೆ ಎಷ್ಟು ನೋವಾಯಿತೋ ಏನೋ. ಇಷ್ಟು ದಿನ ನಿನ್ನನ್ನು ಮಾತನಾಡಿಸುವುದಕ್ಕೆ ನನ್ನ ತೆಗಲೆ ಬಿಡಲಿಲ್ಲ. ಮುಖ ನೋಡುವುದಕ್ಕೆ

ಸೊಕ್ಕು ಬಿಡಲಿಲ್ಲ. ನೀನು ಗಾಡಿ ಇಳಿದಾಗಲೇ ನನ್ನ ಬಾಯಿಂದ ಬರಬಾರದ ಮಾತು ಬಂತು. ಹೆಣ್ಣಿಗೆ ಸಂದೇಹವೇಒಂದು ರೋಗ. ಅದಕ್ಕೆ ಮದ್ದೆಲ್ಲಿದೆ ಹೇಳು? ನೀನು ಸೂಳೆ ಎಂದೇ ಭಾವಿಸಿದ್ದೆ. ಮಾಲೆಯರನ್ನು ಮನೆಗೆ ತಂದರೆ ಮಾರಿ ಬಂದಂತೆ ಎಂದು ಯಾರೋ ಹೇಳಿದ್ದರು. ನಿನ್ನನ್ನು ಶುಂಠಿಕೊಪ್ಪ ದಿಂದ ಕರೆದುಕೊಂಡು ಬರುವ ವಿಚಾರ ನನಗೆ ತಿಳಿದೇ ಇರಲಿಲ್ಲ. ನಾನಿರು ವಾಗಲೇ ನಿನ್ನ ಜೊತೆ ಎಡಸಂಸಾರಮಾಡುವುದು ನನಗಾದರೂ ಹೇಗೆ ಸಮಾ ಧಾನವಾಗುತ್ತದೆ ಹೇಳು. ನಾಳೆ ನಿನ್ನ ಗಂಡನೇ ಮನೆಗೆ ಇನ್ನೊಂದು ಹೆಣ್ಣನ್ನು ಕರೆದು ತಂದರೆ ನೀನು ಸಮ್ಮತಿಸುತ್ತೀಯಾ ಗಿರಿಜಾ.... ಆ ದೃಷ್ಟಿಯಿಂದ ಕೋಪಿಸಿಕೊಂಡೆ ಹೊರತು ನಿನ್ನಲ್ಲಿ ಮತ್ಸರವಿಲ್ಲ. ನಿನ್ನ ಸ್ವಭಾವ ತಿಳಿದ ಮೇಲಂತೂ ನಿನ್ನಲ್ಲಿ ಯಾವ ಅನುಮಾನವೂ ಇಲ್ಲ. ಅವರು ನನ್ನವರು. ಮುಂದೆ ಕೆಲವು ಕಾಲ ನಿನ್ನವರಾದರೂ ನನಗೆ ಯೋಚನೆಯಿಲ್ಲ. ನನ್ನ ಗಂಡನ ಪ್ರೀತಿಯನ್ನು ನೀನು ಕಸಿದುಕೊಳ್ಳುವುದಿಲ್ಲ ಎನ್ನುವ ವಿಚಾರ ದಲ್ಲಿ ಸಂಪೂರ್ಣ ನಂಬಿಕೆಯಿದೆ. ನಿನ್ನನ್ನು ಖಂಡಿತಾ ಪ್ರೀತಿಸುತ್ತೇನೆ. ನೀನು ನಮ್ಮ ಜೊತೆಯಲ್ಲೇ ಇದ್ದುಬಿಡು" ಎಂದಳು ರುಕ್ಮಿಣಿ. ಮತ್ತೆ ಗಿರಿಜ ಬಗ್ಗಿ ನಮಸ್ಕರಿಸಿದಳು. ಆಗ ಮಾತ್ರ ಸೆರಗು ಜಾರಿದ್ದರಿಂದ ಅವಳ ಕೊರಳಲ್ಲಿದ್ದ ಕರಿಮಣಿ ರುಕ್ಮಿಣಿಗೆ ಕಾಣಿಸಿತು. ಏಕೋ ಹೆದರಿದಳು. ಗಿರಿಜಳಿಗೆ ಮದುವೆ ಯಾಗಿದೆ ಎಂಬ ವಿಚಾರದ ಬಗ್ಗೆ ನಿದರ್ಶನ ದೊರಕಿದಾಗ ರುಕ್ಮಿಣಿ ಹೆದರಿದಳು. ತನ್ನ ಗಂಡ ವಿವಾಹಿತ ಹುಡುಗಿಯನ್ನೇ ಕರೆದುಕೊಂಡು ಬಂದದ್ದು....ರುಕ್ಮಿ ಣಿಯ ಮನಸ್ಸು ಮತ್ತೆ ಕೆರಳಿತು. ಒಂದೂ ಅರ್ಥವಾಗಲಿಲ್ಲ. ಕೊಂಚ ಏರಿದ ಏನಿಯಲ್ಲಿ ಕೇಳಿದಳು.

"ಹೌದು....ಒಂದು ವಿಚಾರ ಮಾತ್ರ ನನಗೆ ಗೊತ್ತಾಗಲಿಲ್ಲ"

"ಯಾವುದು ಅಮ್ಮ....?"

"ನಿನ್ನ ಕತೆಯೇ ನನಗೆ ಒಗಟಾಗಿದೆ ಗಿರಿಜಾ"

"ಹೇಳಿ ತಾಯಿ ..."

"ಶುಂಠಿಕೊಪ್ಪದಲ್ಲಿ ಏನು ಗಲಾಟೆ ಮಾಡಿ ಬಂದಿದ್ದಾರೆ ಅವರು ಅಂತ...."

"ಯಾರು....?"

"ನಮ್ಮವರು ..."

"ಇನ್ನೂ ಸಂದೇಹವೇ ತಾಯಿ....?"

"ನಿನಗೆ ಮದುವೆಯಾಗಿದೆ ಗಿರಿಜಾ...."

"ಹೌದು...."

"ಮತ್ತೆ....ಗಂಡನನ್ನು ಬಿಟ್ಟು ಬಂದೆಯಾ....ಅವರಾದರೂ ಹೇಗೆ ಕರೆದು ಕೊಂಡು ಬಂದರು?"

"................"

"ಹೇಳು ಗಿರಿಜಾ... ನಡೆದದ್ದು ಏನು .. ನಿನ್ನ ಗಂಡ ಎಲ್ಲಿದ್ದಾನೆ?"

"ಶುಂಠಿಕೊಪ್ಪದಲ್ಲಿ...."

"ಏನು ಶುಂಠಿಕೊಪ್ಪದಲ್ಲಿಯೆ?"

"ಹೂಂ...."

"ಯಾರವನು?"

"ಶಿವ ದೇವರು ತಾಯಿ...."

"ಅಂದರೆ....?"

"ನಾನು ದೇವರ ಹೆಂಡತಿ ಅಮ್ಮ. ನನ್ನ ಮದುವೆಯಾದದ್ದು ಶುಂಠಿ ಕೊಪ್ಪದ ಶಿವದೇವರ ಜೊತೆ"

"ಇದು ಯಾವ ಸಂಪ್ರದಾಯ ಗಿರಿಜಾ... ?"

"ನಮ್ಮ ಜಾತಿಯ ಕ್ರಮ ಹಾಗೆ ತಾಯಿ"

"ನಾನು ನಿಜವಾಗಿಯೂ ತಪ್ಪು ತಿಳಿದುಕೊಂಡೆ...."

"ಚಿಂತೆಯಿಲ್ಲ ...ಬೇರೆ ಯಾರೂ ಕರಿಮಣಿ ಕಟ್ಟಿದ್ದಲ್ಲ...."

"ಛಿ! .. ಏನೇನೋ ಭಾವನೆ ಬಂತು ಮೊದಲು....ಹಾಗಿದ್ದರೆ ಸರಿ" ಎಂದು ರುಕ್ಮಿಣಿ ಕೊನೆಗೆ ಸಮಾಧಾನಪಟ್ಟುಕೊಂಡಳು.

ಒಂದು ವಾರದಲ್ಲೇ ಪರಿಸ್ಥಿತಿ ಸುಧಾರಿಸಿತು. ಗಿರಿಜ ಮನೆಯವಳಾಗಿಯೇ ಓಡಾಡುವುದಕ್ಕೆ ಆರಂಭಿಸಿದಳು. "ನಿಮ್ಮ ದೇವರ ಹೆಂಡತಿ ಚಿಂತೆಯಿಲ್ಲ" ಎಂದು ರುಕ್ಮಿಣಿ ಹೇಳಿದ ಮೇಲೆ ಸೋಮಯಾಜರು, "ಇನ್ನು ಗಿರಿಜಳ ಮೇಲೆ ಸಿಟ್ಟಾಗುವುದಿಲ್ಲ ಎಂಬ ಸಮಾಧಾನ ನನಗಿದೆ. ನಾನು ಹೇಳಿಲ್ಲವೆ? ನನ್ನ ಸುಖಕ್ಕಾಗಿ ಆಕೆಯನ್ನು ಕರೆದುಕೊಂಡು ಬಂದಿಲ್ಲ ಎಂದು. ಗಿರಿಜಳ

ಸ್ವಭಾವವೇ ಹಾಗೆ. ಯಾರ ಮನಸ್ಸನ್ನೂ ನೋಯಿಸುವುದಿಲ್ಲ. ನನ್ನ ಮಾವನದ್ದೇ ವೈರಕ್ತ್ಯ. ಅದನ್ನು ಯೋಚಿಸಿಯೇ ಈ ಏರ್ಪಾಟು ಮಾಡಿದೆ. ಆಕೆಯ ತಾಯಿ ನಮ್ಮ ಮಾವನ ಎಡ ಸಂಸಾರ. ಹೇಗೂ ದೇವಾಲಯದಲ್ಲಿ ಚಾಮರ ಬೀಸುವವರಿಲ್ಲ. ನಿನಗೂ ಹೊರಕೆಲಸಕ್ಕೆ ಬೇರೆ ಜನರಿರಲಿಲ್ಲ. ಇವನ್ನೆಲ್ಲಾ ಯೋಚಿಸಿದ ಮೇಲೆ ...ಈ ವ್ಯವಸ್ಥೆ. ಎರಡು ವರ್ಷ ಹೋಗಲಿ ....ತೋಟದಲ್ಲಿ ಬೇರ ಮನೆ ಮಾಡುತ್ತೇನೆ" ಎಂದರು. ರುಕ್ಮಿಣಿ ಆ ಮಾತಿಗೆ ಏನನ್ನೂ ಹೇಳದೆ ಅಡಿಗೆ ಮನೆಗೆ ಹೋದಳು.

೧೧

ಕೋಳಿಪಡೆ ರುದ್ರ ಹೆಗಡೆ ಎಂದರೆ ಜೊಗೆಬೆಟ್ಟಿನ ಬಯಲು ಮಕ್ಕಿಗೆ ತುಂಡರಸ ಇದ್ದ ಹಾಗೆ. ಭಾರಿ ಉಡಾಪಿಯ ಮನುಷ್ಯ. ಎಲ್ಲರಿಗೂ ಅನ್ನವನೇ ಹೊರತು ತಾನು ಅನ್ನಿಸಿಕೊಂಡು ಬದುಕಿದವನೇ ಅಲ್ಲ. ನ್ಯಾಯವನ್ನ ಎಣಿಸುವುದಕ್ಕೆ ಅವನಿಗೆ ಸಮಯವೇ ಸಿಕ್ಕಿರಲಿಲ್ಲ. ಯಾರಾದರೂ "ಹೆಗಡೆಯವರೆ ಇದು ನ್ಯಾಯವೆ?" ಎಂದು ಕೇಳಿದರೆ ಕೈಯಲ್ಲಿದ್ದ ನಾಗರಬೆತ್ತವನ್ನೆತ್ತಿ ಗರಗರ ತಿರುಗಿಸುತ್ತಾ "ನ್ಯಾಯ... ಹಾಗಂದರೆ ಏನದು?" ಎಂದು ಪ್ರಶ್ನೆ ಹಾಕುತ್ತಾನೆ. ಧರ್ಮ ಎಂದರೆ ಅವನೇ ಮೂಗು ಮುರಿಯುತ್ತಾನೆ. ಹುಟ್ಟಿದ್ದು ಅಮವಾಸ್ಯೆಯ ರಾತ್ರಿಯಂತೆ. ಆದೂ ಹೆಗ್ಗಡತಿ ಹೆರಿಗೆಯ ಸಮಯ ಅನುಭವಿಸಿದ ವೇದನೆ ಅಷ್ಟಿಷ್ಟಲ್ಲ. ಹುಟ್ಟುವಾಗಲೇ ತಾಯಿಗೆ ಕಷ್ಟ ಕೊಟ್ಟ ಜೀವ ಅದು. ಆ ತರುವಾಯ ಎಂಟು ವರ್ಷದವನಿದ್ದಾಗ ಗಾಡಿ ಹೊಡೆಯುತ್ತಿದ್ದ ಕೊರಗನ ದೆಸೆಯಿಂದ ಬೀಡಿ ಕದ್ದು ಹುಲ್ಲುಕುತ್ತರೆಯಲ್ಲಿ ಅಡಗಿ ಸೇದುತ್ತಿದ್ದಾಗ ತಂದೆ ಬಂದರೆಂದು ಬೀಡಿ ಮುಂಡನ್ನು ಹುಲ್ಲಿನ ಎಡೆಯಲ್ಲಿಟ್ಟು ತಲೆ ತಪ್ಪಿಸಿಕೊಂಡಾಗ ಹುಲ್ಲಿನ ಮೆದೆಯೇ ಬೆಂಕಿಗೆ ಆಹುತಿಯಾಗಿ ಹೋಗಿತ್ತು. ಹನ್ನೆರಡು ವರ್ಷ ಪ್ರಾಯದಲ್ಲೇ ಕೋಳಿ ಪಡೆಯ ಹುಚ್ಚು. ಹುಂಜವನ್ನು ತಾನೇ ಎತ್ತಿಕೊಂಡು ತನ್ನ ಪರಿವಾರದೊಂದಿಗೆ ಹತ್ತಿರದ ಗ್ರಾಮಗಳಿಗೆ ಆಗಾಗ ಹೋಗುತ್ತಾನೆ. ಅಲ್ಲದೆ ತಾಳಮದ್ದಳೆ, ಯಕ್ಷಗಾನ ಬಯಲಾಟವೆಂದರೆ ರುದ್ರನಿಗೆ ತುಂಬಾ ಖಯಾಲು. ಅವನ ತಾಳಮದ್ದಳೆಯ ಗುಂಪು ಇರುವುದೇ ತಪ್ಪಲಿನ ಹೊನ್ನೆ ಮರದ ಅಡಿಯಲ್ಲಿ. ಹೆಗಡೆಯ ತಂದೆಗೆ

ಅದು ಇಷ್ಟವಿಲ್ಲದ ಕಾರಣ ತಾಳಮದ್ದಳೆಗಳನ್ನು ಬಯಲಿನ ಒಕ್ಕಲು ಮನೆಗಳಲ್ಲೇ ಏರ್ಪಡಿಸುತ್ತಾನೆ. ತಾಳಮದ್ದಳೆಯ ಅರ್ಥ ಹೇಳುವುದರಲ್ಲಿ ಹೆಗಡೆಯದೇ ಒಂದು ಹೊಸ ವಿಧಾನ. ಅದು ಸಂಪೂರ್ಣ ಭಾಷೆಯ ಕೊಲೆ. ಪುರಾಣದ ಮಹತ್ವಕ್ಕೆ ಅವಮಾನ. ರಾಮ ರಾವಣ ಯುದ್ಧದಲ್ಲಿ ಆವನೇ ರಾವಣನ ಪಾತ್ರ ವಹಿಸುತ್ತಾನೆ. ಹಾಡಿಮನೆ ಸೀನ ಅರ್ಥ ಹೇಳುವುದರಲ್ಲಿ ಪ್ರವೀಣ. ಹಾಗಾಗಿ ಅವನು ಶ್ರೀರಾಮನ ಅರ್ಥ ಹೇಳುತ್ತಾನೆ. ಆದರೆ ಹೆಗಡೆಗೆ ಸಿಟ್ಟು ಹೆಚ್ಚು. ಯುದ್ಧದಲ್ಲಿ ರಾವಣನೇ ಸೋಲುವುದು ನ್ಯಾಯವಾಗಿದ್ದರೂ ತಾಳಮದ್ದಳೆಗಳಲ್ಲಿ ಶ್ರೀರಾಮನನ್ನು ಸೋಲಿಸಿ ಬೈದು ಹಂಗಿಸಿ ತನ್ನ ಎದೆ ತಟ್ಟಿಕೊಂಡು "ಹೇಗಿದೆ ನನ್ನ ಅರ್ಥ... ಇನ್ನು ರಾಮನಿಗೆ ಉಳಿಗಾಲವೇ ಇಲ್ಲ" ಎನ್ನುತ್ತಾನೆ ಹೆಗಡೆ. ಹದಿನೇಳನೆಯ ವರ್ಷದಲ್ಲಿ ದನ ಮೇಯಿಸುತ್ತಿದ್ದ ಹುಡುಗಿಯರ ಮೇಲೆ ಕೈಮಾಡುತ್ತಿದ್ದ ಎಂದು ಸುದ್ದಿ. ಗುಡ್ಡೆಗೆ ಸೊಪ್ಪಿಗೆ ಬಂದಿದ್ದ ಸೆರೆಗಾರನ ಮಗಳನ್ನು ಜಡ್ಡುಮುಳ್ಳಿನ ಹಕ್ಕಲಕ್ಕೆ ಎಳೆದುಕೊಂಡು ಹೋಗಿ ಬಾಯಿಗೆ ಬಟ್ಟೆ ತುರುಕಿಸಿ, ಮಾನ ದಿಕ್ಕುಪಾಲು ಮಾಡಿದ ಎನ್ನುತ್ತಾರೆ ಕೆಲವರು. "ನಿನ್ನ ಅಪ್ಪನಿಗೆ ಹೇಳಿ ನಾಳೆ ಗಲಾಟೆ ಮಾಡಿದರೆ ನೋಡು .. ಕುತ್ತಿಗೆಗೆ ಕಲ್ಲು ಕಟ್ಟಿ ಕೆರೆಯ ನೀರಿನಲ್ಲಿ ಮುಳುಗಿಸುತ್ತೇನೆ" ಎಂದು ಹೆದರಿಸಿದ್ದನಂತೆ. ಹುಡುಗಿ ಹೆದರಿಕೊಂಡಳು. ಮತ್ತೆ ಹೇಳಿದ್ದ "ನಿತ್ಯ ಸಂಜೆ ಸೊಪ್ಪಿಗೆ ಬರುವವಳು ಸರ್ವೆತೋಪಿನ ಪಡುದರೆಯ ಹತ್ತಿರ ಬಾ" ಎಂದು. ಸೆರೆಗಾರನ ಮಗಳು ಮದುವೆಯಾಗಿ ನೈಲಾಡಿಗೆ ಹೋಗುವ ತನಕ ಹೆಗಡೆಗೆ ಹೆದರಿಕೊಂಡು ಸರ್ವೆತೋಪಿನ ದರೆಯ ಬಳಿ ಹೋದದ್ದು ಸತ್ಯ. ತಂದೆ ಸತ್ತಮೇಲೆ ಅವನೇ ಯಜಮಾನ. ಹೆಣ ಸುಟ್ಟು ಬಂದವನೇ ಮೊದಲು ಪತ್ತಾಸಿನ ಬೀಗ ಒಡೆದು ಹಣದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದ. ಹದಿನಾರನೆಯ ದಿನ ಉಗ್ರಾಣಿ ಬೆಟ್ಟನ ಸೂಳೆಯರನ್ನು ಮನೆಗೆ ಕರೆಯಿಸಿ ಕೋಳಿಪಲ್ಯ ತುಪ್ಪದ ಅನ್ನ ಮಾಡಿಸಿ ಅವರಿಗೆ ತಿನ್ನಿಸಿದ್ದನ್ನು ಕಂಡು ಹೆಗ್ಗಡತಿ ಅದನ್ನು ವಿರೋಧಿಸಿದಳು. ಆದರೆ ಅದನ್ನು ಗಮನಿಸಲೇ ಇಲ್ಲ ಹೆಗಡೆ. ತನ್ನ ಸುಖದ ಬಗ್ಗೆ ಯೋಚಿಸಿದನೇ ಹೊರತು ನ್ಯಾಯ ಧರ್ಮದ ಬಗ್ಗೆ ಅವನಿಗೆ ವಿಶ್ವಾಸವೇ ಇರಲಿಲ್ಲ. ಮನೆಯ ಹೆಬ್ಬಾಗಿಲಿನ ಜಾಗವೇ ಅವನ ದರಬಾರಿನ ಸ್ಥಾನ. ಅಂಗಳದಲ್ಲಿ ದೊಡ್ಡ ಕೋಳಿ ಗೂಡು.

ಜಾತಿ ಕೋಳಿ ಸಾಕುತ್ತಾನೆ. ತಾನೇ ಜೂಜಿಗೆ ಬಗಲಲ್ಲಿ ಕೋಳಿಗಳನ್ನು ಎತ್ತಿ ಕೊಂಡು ಹೋಗುತ್ತಾನೆ. ಒಕ್ಕಲು ಆಳುಗಳೆಲ್ಲಾ ವರ್ಷಕ್ಕೆ ಎರಡು ಕೋಳಿ ನಜರು ಕೊಡಬೇಕು. ಹೆಂಡ ಇಳಿಸುವವರು ವಾರಕ್ಕೆ ಎರಡು ಕೊಡ ಹೆಂಡ ವನ್ನು ರಿಯಾತಿ ದರದಲ್ಲಿ ಅವನಿಗೆ ಕೊಡುವುದನ್ನು ತಪ್ಪಿಸಬಾರದು. "ಹೆಗಡೆ ಯವರೇ, ಹಾಗಲ್ಲ . ಹೀಗೆ" ಎಂದರೆ ಕೈಕಾಲು ಮುರಿಸಿ ಹಕ್ಕಲದಲ್ಲಿ ಎಸೆಯು ತ್ತಾನೆ. ಕೊರಗನ ಮಗ ಕೋಳಿ ಪಡೆ ನಡೆಯುತ್ತಿದ್ದಾಗ ಹೆಗಡೆಯನ್ನು ಅವ ಮಾನಿಸಿದ ಎಂದು ನಡುಗುಡ್ಡಕ್ಕೆ ಅವನನ್ನು ಕರೆದುಕೊಂಡುಹೋಗಿ, ಚೆನ್ನಾಗಿ ಹೆಂಡ ಕುಡಿಸಿ ಅವನ ತಲೆ ಒಡೆದು ಹೊಂಡ ತೆಗೆದು ಹುಗಿಸಿ ಮೇಲೆ ಕರಿಕಲ್ಲಿನ ರಾಶಿ ಹಾಕಿ ಮನೆಗೆ ಬಂದವ ರುದ್ರ ಹೆಗಡೆ. ಕೊರಗನ ಮಗ ಎಲ್ಲಿಗೆ ಹೋದ ಎಂದು ನಾಲ್ಕು ದಿನ ಜನ ಆಡಿಕೊಂಡರು. ಕೊರಗ ಪಂಜುರ್ಲಿಯ ದೈವದ ಪಾತ್ರಿಯಲ್ಲಿ "ನನ್ನ ಮಗ ಎಲ್ಲಿಗೆ ಹೋಗಿದ್ದಾನೆ ಹೇಳಿ ದೇವರು" ಎಂದು ಕೇಳಿದಾಗ ದೈವ "ನಿನ್ನ ಮಗ ಈ ಊರಿನ ತೆಂಕುದಿಕ್ಕಿನಲ್ಲೆ ಇದ್ದಾನೆ...." ಎಂದಿತು. ದೈವ ಹೇಳಿ ಎರಡು ವರ್ಷವಾದರೂ ಮಗ ಮಾತ್ರ ಮರಳಿ ಬಂದಿರ ಲಿಲ್ಲ. ತೆಂಕುದಿಕ್ಕಿನಲ್ಲಿ ಇದ್ದದ್ದು ಹೊಂಡದಲ್ಲಿ ಅವನ ಮೂಳೆಯ ರಾಶಿ ಮಾತ್ರ. ರುದ್ರ ಹೆಗಡೆಯ ಹೆಂಡತಿ ನುನೆ ಜಾರ್ಮುಕ್ಕಿ. ಉಪ್ಪರಿಗೆ ಮನೆ ತೇಜಪ್ಪ ಶೆಟ್ಟಿಯ ಹಿರಿಯ ಮಗಳು ರುಕ್ಕವನ್ನು ಮದುವೆಯಾಗಿದ್ದರೂ ಆನಂತರ ಕಂಡವರ ಹೆಣ್ಣು ಮಕ್ಕಳನ್ನು ಬಯಸುವುದನ್ನು ಮಾತ್ರ ಬಿಡಲಿಲ್ಲ. ಯಾರನ್ನು ಎಲ್ಲಿ ಏನು ಮಾಡಿದ್ದನೋ....ಮರ್ಯಾದಿಯಾಗಿ ಬಾಯಿಮುಚ್ಚಿ ಕೊಂಡವರೂ ಇದ್ದರು. ಒಕ್ಕಲು ಅನಂತ ಒಂದು ದಿನ ಗದ್ದೆ ಹೂಟೆ ಮಾಡುತ್ತಿದ್ದಾಗ ಹೆಗಡೆ ಅಂಚಿನಲ್ಲಿ ನಿಂತೇ "ಸಂಜೆ ದುರ್ಗಿಯನ್ನು ಮನೆಗೆ ಕಳುಹಿಸು... ಹೆಗ್ಗಡತಿ ಊರಲ್ಲಿ ಇಲ್ಲ" ಎಂದ. ಅನಂತನಿಗೆ ಸಿಟ್ಟು ಬಂತು. ಹೆಂಡತಿಯನ್ನು ಮನೆಗೆ ಕಳುಹಿಸುವಂತೆ ಹಗಲುಹೊತ್ತಿನಲ್ಲಿ ಗದ್ದೆಯ ಅಂಚಿನಲ್ಲಿ ನಿಂತು ಅಷ್ಟು ಗಟ್ಟಿ ಯಾಗಿ ಹೇಳುವುದೆ ? ಹೆಗಡೆಗೆ ಆ ಮಾತು ಅಂದಿದ್ದರೆ..? "ಬುದ್ಧಿ ನಿಮ್ಮ ಹೆಗ್ಗಡತಿಯನ್ನು ನನ್ನ ಜೋಪಡಿಗೆ ಕಳುಹಿಸಿ" ಎನ್ನುವ ಧೀರ ಒಬ್ಬ ಹುಟ್ಟಿದ್ದರೆ? ... ಅನಂತ ಒಂದೇ ಮಾತು ಹೇಳಿದ "ನನ್ನ ಎದೆಯಲ್ಲಿ ರಕ್ತ ಇದೆ ಸ್ವಾಮಿ ... ನನಗೂ ದೇವರು ಮೀಸೆ ಕೊಟ್ಟಿದ್ದಾನೆ" ಎಂದುಬಿಟ್ಟ. ಅದರ ಪರಿಣಾಮ ಮನೆಯ ಅಂಗಣದಲ್ಲಿದ್ದ ಬತ್ತದ ತಿರಿಯಿಂದ ಆರು ಮಾನಿಗೆ ಬತ್ತವನ್ನು

ಕೊಳ್ಳಿ ಹೊಡೆದರು ಹೆಗಡೆಯ ಪೈಕಿಯವರು. ಇಷ್ಟಾದರೂ ಆ. ಹೆಗಡೆಯು ಲಿಲ್ಲ. ನಾಲ್ಕು ದಿನದ ತರವಾಯ ಇಬ್ಬರು ಗಂಡಾಳುಗಳೊ ಗುಡಿಗೆ ಬರು ಮನೆಗೆ ಬಂದ ಹೆಗಡೆ. ದುರ್ಗಿ ಹಸಿಮೀನನ್ನು ಬೇಯಿಸುತ್ತಿ ವರ್ಮ ಬರು ಹೆಡಿಗೆಗೆ ಹುರಿ ಬಿಗಿಯುತ್ತಿದ್ದ. ಮೊದಲಿನಿಂದಲೂ ಪ್ರಸಾದ ಕೊಡು" ಹೆಂಡತಿಯ ಮೇಲೆ ಕಣ್ಣು. ಹೆಗಡೆಯವರನ್ನು ಕಂಡಾಗಲೆಲ್ಲ ಸಲು "ನಿನ್ನ ಬಿದ್ದ. ಇಬ್ಬರು ಅವನ ರಟ್ಟೆ ಹಿಡಿದಾಗಲೇ ಹೆಗಡೆ ಅಡಿಗೆ ಕ್ಕೇನೆ" ಎಂದು ಏನಾಗಿತ್ತೋ.... ಅಡಿಗೆಯ ಮನೆಯ ಬಾಗಿಲು ಹಾಕಿದ್ದನ್ನು ಮಲಗುವ ಸೋಗೆ ಅನಂತ. ಒಂದು ಘಂಟೆಯಾದರೂ ಬಾಗಿಲು ತೆರೆದಿರಲಿಲ್ಲ. ಹೋಗಿ ದು. ಮಡದಿಯ ಮಾನ ರಕ್ಷಿಸುವುದಕ್ಕೆ ಆಳುಗಳ ಬಂಧನದಿಂದ ಬಿಡಿಸಿಕೊಳ್ಳುವಂತಿರ ಲಿಲ್ಲ. ಆದರೆ ಮಾರನೆಯ ರಾತ್ರಿಯೇ ತೋಟದ ಕೆರೆಗೆ ಹಾರಿ ದುರ್ಗಿ ಪ್ರಾಣ ಕಳೆದುಕೊಂಡಳು. ಹಜಾರದಲ್ಲಿ ಕುಳಿತು ಪಟ್ಟಾಂಗ ಹೊಡೆಯುತ್ತಿದ್ದ ಹೆಗಡೆಗೆ ಸುದ್ದಿ ಬಂತು "ದುರ್ಗಿ ಸತ್ತಳು" ಎಂದು. ಆಗ ಮಾತ್ರ ಹೆಗಡೆ ಹೆದರಿದ. ಹುಡುಗಿ ಅಷ್ಟು ಮುಂದುವರಿಯುತ್ತಾಳೆ ಎಂದು ಭಾವಿಸಿರಲಿಲ್ಲ. ಎರಡುದಿನ ಅವನಿಗೂ ಅದೇಕೋ ಭಯ ಹುಟ್ಟಿತ್ತು. ಮುಂದೆ ಇಂತಹ ಕಾರ್ಯಗಳನ್ನು ಮಾಡುವಾಗ ಯೋಚಿಸಿ ಮಾಡುತ್ತೇನೆ ಎಂದುಕೊಂಡ. ಅನಂತ ನಿತ್ಯ ದೆವ್ವದ ಮನೆಗೆ ಹೋಗಿ ಇಂದಿಗೂ ಶಾಪ ಹೊಡೆಯುತ್ತಾನೆ. ದೆವ್ವಕ್ಕೆ ಅಡ್ಡಬಿದ್ದು "ನಿನಗೆ ಶಕ್ತಿಯಿರುವುದಾದರೆ ಹೆಗಡೆಯ ಎದೆ ಬಗೆದು ರಕ್ತ ಕುಡಿ... ಅವನ ಹೆಂಡತಿಯ ಮಾನವನ್ನು ತೊಳೆದುಹಾಕು" ಎಂದು ಬೇಡಿಕೊಳ್ಳುತ್ತಾನೆ. ಆದರೆ ಹೆಗಡೆ ಮಾತ್ರ ಚೆನ್ನಾಗಿ ಬದುಕಿಯೇ ಇದ್ದ. ಆದರೆ ಅನಂತನಿಗೆ ಮಾತ್ರ ಯಾರಿಂದಲೂ ನ್ಯಾಯ ದೊರಕಿರಲಿಲ್ಲ.

ಹೆಗಡೆಯ ಪಿತ್ತಜ್ಜನ ಜನ್ಮಸ್ಥಳ ಗುಳ್ಳಾಪುರ. ಮೊಗೆಬೆಟ್ಟು ಅವನ ಹೆಂಡತಿ ಮನೆ. ಗುಳ್ಳಾಪುರದಲ್ಲಿ ಅವನ ಸ್ಥಿತಿಗತಿ ತೃಪ್ತಿಕರವಾಗಿಲ್ಲವಾದ್ದರಿಂದ ತನ್ನ ಸಂಸಾರದೊಂದಿಗೆ ಮೊಗೆಬೆಟ್ಟಿಗೆ ಬಂದ. ಆಗ ಇದ್ದ ಆಸ್ತಿ ಎಂದರೆ ಕೇವಲ ಹತ್ತು ಮುಡಿ ಗದ್ದೆ ಮಾತ್ರ. ಆ ತರುವಾಯ ಬಯಲಿನ ಪೂರ್ವಕ್ಕೆ ಚಾಚಿದ ವಿಶಾಲ ಹಡುಭೂಮಿಗಳನ್ನು ತನ್ನದಾಗಿ ಮಾಡಿಕೊಂಡ. ಇದ್ದ ಸರ್ವೆ ಕಲ್ಲುಗಳನ್ನೆಲ್ಲಾ ಗುಡ್ಡದ ತಪ್ಪಲಿನ ಕಣಿವೆಯ ಬಳಿ ಸಾಗಿಸಿ, ಆ ಭೂಮಿಯನ್ನು ಸಾಗು ಮಾಡಿಸಿದ. ಕ್ರಮೇಣ ಅದು ಬೇಸಾಯಕ್ಕೆ ಯೋಗ್ಯ

ತ್ತದೆ ಎಂದು ಮೊದಲು ಮೊದಲು ಪೂಜೆಗೆ ಉತ್ಸಾಹದಿಂದ ಬರುತ್ತಿದ್ದ ಬ್ರಾಹ್ಮಣರು ಕೊನೆಗೆ ಅವನ ರಂಗಪೂಜೆಗೆ ಬರುವುದನ್ನೇ ಬಿಟ್ಟರು. ಅದೂ ಹೆಗಡೆಗೆ ಕೋಪ. "ಈ ಬ್ರಾಹ್ಮಣರ ಮಕ್ಕಳಿಗೆ ತಲೆಯ ಮೇಲೆ ಕೋಡು. ಗಟ್ಟಿಯಾಗಿ ಒಂದು ಮುಷ್ಟಿ ಅರಳು ತಿನ್ನುವ ಯೋಗ್ಯತೆಯಿಲ್ಲ ...ನನ್ನ ಪೂಜೆಗೆ ಬರುವುದಕ್ಕೆ ಇವರಿಗೆ ಅಮುಸಣಿ" ಎಂದು ಕೂಗಾಡುತ್ತಾನೆ. ಆಮೇಲೆ ಸೋಮಯಾಜರು ಸಮಾಧಾನದ ನಾಲ್ಕು ಮಾತು ಹೇಳುತ್ತಾರೆ. "ಇಲ್ಲ ಹೆಗಡೆಯವರೆ....ನಮ್ಮವರಿಗೆಲ್ಲಾ ನಿಮ್ಮ ರಂಗಪೂಜೆಗೆ ಬರುವ ಆಸೆಯಿದೆ. ಸೋಣೆ ಆರತಿಯಲ್ಲಿ ನಿಮ್ಮದೇ ಭಾರೀ ಪೂಜೆ ಎಂದು ಅವರೇ ಹೇಳುತ್ತಾರೆ. ಆದರೆ ಬಂದಾಗ ಕುಳಿತುಕೊಳ್ಳುವುದಕ್ಕೆ ಜಾಗವೆಲ್ಲಿದೆ ? ನಿಮ್ಮವರೇ ಗುಡಿ ತುಂಬಿಬಿಡುತ್ತಾರೆ. ಈ ಗದ್ದಲದಲ್ಲಿ ಹೆಂಗಸರು ಮಕ್ಕಳು ಹೇಗೆ ಬರುತ್ತಾರೆ ?" ಎಂದು ಸೋಮಯಾಜರು ಅವನನ್ನು ಸಂತೈಸುತ್ತಾರೆ. ಆದರೂ ಹೆಗಡೆಯ ಸಿಟ್ಟು ಇಳಿದಿರಲಿಲ್ಲ. "ಈ ಜನಿವಾರ ಹಾಕುವ ಜಾತಿಯೇ ಅಷ್ಟು....ತಿನ್ನುವುದು ಕಬ್ಬಕ್ಕಿ ಹುಳಿ.. ಬಾಯಲ್ಲಿ ಆಡುವುದು ಮಹಾಧರ್ಮ...." ಎಂದು ಹೇಳಿದ್ದನ್ನು ಸೋಮಯಾಜರು ಕೇಳಿಸಿಕೊಂಡಿದ್ದರು.

ಗಿರಿಜಳನ್ನು ಚಾಮರ ಬೀಸುತ್ತಿದ್ದಾಗಲೇ ರುದ್ರ ಹೆಗಡೆ ಕಂಡದ್ದು. ಅದೂ ಅವನ ಹೂವಿನ ಪೂಜೆಯ ದಿನ. ಹೆಗಡೆಯು ತನ್ನ ಪರಿವಾರದೊಂದಿಗೆ ದೇವಾಲಯಕ್ಕೆ ಬಂದಿದ್ದ. ಸೋಮಯಾಜರು ಮೊದಲೇ ಗಿರಿಜಳಲ್ಲಿ "ಆರತಿಗೆ ಬೇಗ ಬತ್ತಿ ಹೊಸೆದು ನೀನು ಗುಡಿಯ ಒಳಗೇ ಇದ್ದು ಬಿಡು....ಇಂದು ಹೆಗಡೆ ಬರುತ್ತಾನೆ" ಎಂದಿದ್ದರು. "ಯಾವ ಹೆಗಡೆಯೋ ಬರಲಿ....ನನಗೇನು...?" ಎಂದು ಹೇಳಿದ್ದಳು ಗಿರಿಜ. "ಹಾಗಲ್ಲ ಮಾರಾಯ್ತಿ... ಎಲ್ಲಾ ಕುಡುಕರ ಸಹವಾಸ....ಕೋಳಿ ತಿಂದು ಬೆಳೆದ ಮೈಯವರು. ಅದಕ್ಕೆ ಮುಂಜಾಗ್ರತೆ ಹೇಳಿದೆ" ಎಂದು ಸೋಮಯಾಜರು ಹೇಳಿದರು. ಸೋಮಯಾಜರು ಆರತಿ ಎತ್ತುತ್ತಿದ್ದಂತೆ ಗಿರಿಜ ಹಿಂದೆ ನಿಂತು ಚಾಮರ ಬೀಸುತ್ತಿದ್ದಳು. ಹೆಗಡೆ ಆಕೆಯನ್ನು ಕಂಡ. ಅರ್ಧ ಗಳಿಗೆ ನೋಡುತ್ತಲೇ ಇದ್ದ. ಚಾಮರದ ಗಾಳಿ ಸೋಮಯಾಜರ ಮೈಸೋಂಕುವುದನ್ನು ಗಮನಿಸಿ ಹೊಟ್ಟೆ ಉರಿದುಕೊಂಡ. "ಹುಡುಗಿ ಚೆನ್ನಾಗಿದ್ದಾಳೆ" ಎಂಬ ಭಾವನೆ ಅವನಿಗೆ ಬಂದದ್ದೇ ಅಪರಾಧವಾಯ್ತು ! ಆಕೆಯ ಲಕ್ಷಣವಾದ ಮೈಕಟ್ಟು....ಆಕರ್ಷಕ ರೂಪವನ್ನು ಕಂಡಾಗ ಹೆಗಡೆ

“ಈ ಹುಡುಗಿ ಎಲ್ಲಿಂದ ಬಂದಳು ? ಹೇಗೆ ಬಂದಳು ? ಯಾವಾಗ ಬಂದಳು?” ಎಂದು ತನ್ನಲ್ಲೇ ಪ್ರಶ್ನೆ ಹಾಕಿಕೊಂಡ. ಆ ಹೊತ್ತಿನಲ್ಲಿ ದೇವರನ್ನೇ ಮರೆತು ಬಿಟ್ಟ. ಅವನಿಗೆ ಗಿರಿಜಳದ್ದೇ ಯೋಚನೆ. ಏನೇನೋ ನೆನಸಿಕೊಂಡ.... ಆಕೆಯ ಜೊತೆ ಮಾವಿನ ತೋಪಿನಲ್ಲಿ ಇದ್ದರೆ ಹೇಗೆ...? ಬಯಲಿನ ಹುಲ್ಲು ಕುತ್ತರೆಯ ಹರವಿನಲ್ಲಿ ತಿಂಗಳ ಬೆಳಕು ಇದ್ದ ದಿನ ಈ ಹುಡುಗಿಯೊಂದಿಗೆ ಇರುವುದು ಎಷ್ಟು ಹಿತವಾದೀತು ? ಇಲ್ಲ–ಆಕೆಯನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಜೋಡೆತ್ತಿನ ಗಾಡಿಯಲ್ಲಿ ಕುಂದಾಪುರದ ಸಂತೆಗೆ ಹೋಗುವುದು ಎಷ್ಟು ಸಂಭ್ರಮದ ಅವಕಾಶ ? ಬೇಡ....ರಾತ್ರಿ ಹಜಾರದ ನನ್ನ ಮಂಚಕ್ಕೆ ಬಂದರೆ ....ಆಕೆಗೂ ಹೆಂಡ ಕುಡಿಸಿದರೆ ಹೇಗೆ ? ಇನ್ನೂ ಏನೇನೋ ಯೋಚನೆಗಳಲ್ಲಿಯೇ ಇದ್ದ ಹೆಗಡೆ. “ಈ ಬ್ರಾಹ್ಮಣ ಮಕ್ಕಳಿಗೆ ಎಲ್ಲಿ ಸಿಗುತ್ತಾರೆ ಇಷ್ಟು ಒಳ್ಳೆಯ ಹುಡುಗಿಯರು ? ಈ ಬ್ರಾಹ್ಮಣ ಎಲ್ಲಿಂದ ಕರೆದುಕೊಂಡು ಬಂದ ? ಎಷ್ಟು ದಿನ ಆಯ್ತು ಈ ದೇವಾಲಯಕ್ಕೆ ಬಂದು ? ಯಾರೂ ನನಗೆ ಈ ವಿಚಾರ ತಿಳಿಸಲಿಲ್ಲವೇಕೆ ? ಹೋಗಲಿ–ಬಯಲು ಮಕ್ಕಿಯ ಹೆಗಡೆಯನ್ನು ನೋಡುವ ಮನಸ್ಸಾದರೂ ಇವಳಿಗೆ ಏಕೆ ಬರಲಿಲ್ಲ ?” ಎಂದುಕೊಂಡ ಹೆಗಡೆ ತನ್ನ ಪಕ್ಕದಲ್ಲಿ ಕುಳಿತಿದ್ದ ಸೀನನ ಕಿವಿಯಲ್ಲಿ, “ಏನಯ್ಯ....ಆ ಬ್ರಾಹ್ಮಣನ ಹಿಂದೆ ನಿಂತಿದ್ದಾಳಲ್ಲ ...ಯಾರವಳು ?” ಎಂದ. ಯಾವುದೋ ಗುಂಗಿನಲ್ಲಿದ್ದ ಸೀನ ತಟ್ಟನೆ, “ಚಾಮರ ಬೀಸುವವಳು ಬುದ್ಧಿ” ಎಂದ. ಅಷ್ಟಕ್ಕೆ ಸಿಟ್ಟು ಬಂತು ಹೆಗಡೆಗೆ. ಅವನ ತೋಳನ್ನು ಗಟ್ಟಿಯಾಗಿ ಚಿವುಟಿ, “ಅದು ನನಗೆ ಗೊತ್ತಯ್ಯ... ಯಾರು ಎಂದು ಕೇಳಿದೆ” ಎಂದ ಮತ್ತೆ. “ಗೊತ್ತಿಲ್ಲ ಸ್ವಾಮಿ ... ನಾನು ಕೂಡಾ ಇಂದೇ ಕಂಡದ್ದು” ಎಂದು ಹೇಳಿದ ಸೀನ. ಅದು ಯಾವ ನ್ಯಾಯವೋ... ದೇವಾಲಯ ಎಂಬುದನ್ನು ಮರೆತ ಹೆಗಡೆ “ಹೌದು ... ನಿನಗೆ ನಾನು ಹೇಳಿದ್ದು ಮರೆತುಹೋಯ್ತು ? ಏನು ಹೇಳಿದ್ದೆ ? ಈ ಊರಿಗೆ ಯಾವ ಹುಡುಗಿಯರೇ ಬರಲಿ....ಮೊದಲು ನನಗೆ ತಿಳಿಸಬೇಕು ಎಂದದ್ದು ನೆನಪಿದೆಯೆ ? ಹೇಳೋ ಮಗನೆ ... ಹೆಗಡೆಗೆ ಈ ಮಾಲೆಯ ಹುಡುಗಿಯ ಸಂಪರ್ಕ ಬೇಕು ಎಂಬುದು ನಿನಗೆ ಗೊತ್ತಾಗಲಿಲ್ಲವೆ ? ಮೂರ್ಖ ...ನಿಜವಾಗಿಯೂ ನೀನು ಮೂರ್ಖ. ಕೋಳಿಪಲ್ಯ ತಿನ್ನುವಾಗ...ಹೆಂಡ ಕುಡಿಯುವಾಗ ಮಾತ್ರ ನಿನಗೆ ನನ್ನ ನೆನಪು ...” ಎಂದು ಒಟಗುಟ್ಟಿದ. ಸೀನ ತಲೆ ತುರಿಸಿಕೊಂಡ. “ಬಿಡಿ ಸ್ವಾಮಿ

....ಈಗ ಮುಳುಗಿಹೋದದ್ದೇನು ? ಇನ್ನು ನಾಲ್ಕು ದಿನ ತಡವಾಯ್ತು ಅಷ್ಟೆ ....ಎಲ್ಲಿಗೆ ಹೋಗುತ್ತಾಳೆ ?" ಎಂದು ಪರಿಸ್ಥಿತಿ ವಾತಾವರಣವನ್ನು ಅರಿತು ಹೇಳಿದ ಸೀನ. ಹೆಗಡೆಯ ನಿರ್ಧಾರದ ಮುಂದೆ ಏನಿದೆ ? ಸಂಕಲ್ಪಿಸಿಕೊಂಡ ಮೇಲೆ ಮುಗಿದೇ ಹೋಯ್ತು. ಹೆಗ್ಗಡತಿ ಮುಂದೆಯೇ ಕುಳಿತಿದ್ದಳು. ಹೆಗಡೆಯ ಮನಸ್ಸನ್ನು ಆಕ್ರಮಿಸಿಕೊಂಡಿತ್ತು ಗಿರಿಜಳ ರೂಪ. ಸೊಂಟದಲ್ಲಿ ಸೀರೆಯ ಸೆರಗನ್ನು ಬಿಗಿದು...ಕೈಬಳೆಗಳನ್ನು ಮೇಲೆ ಸರಿಸಿ ಚಾಮರ ಬೀಸುತ್ತಿದ್ದ ಅವಳನ್ನು ಕಂಡು ಉದ್ರೇಕಗೊಂಡಾಗ ಹೆಗಡೆ "ಓ ಸೀನಾ....ಈ ಹುಡುಗಿ ನನಗೇ ಬೇಕೇ ಬೇಕು" ಎಂದ. "ಆಗಲಿ ಸ್ವಾಮಿ... ದೇವರು ನಡೆಸಲಿ" ಎಂದ ಅವನು.

ಪೂಜೆ ಮುಗಿಯಿತು. ಮಂಗಳಾರತಿಯನ್ನು ಹಿಡಿದು ಗುಡಿಯ ಹೊರ ಬಂದರು ಸೋಮಯಾಜರು. ಬೆಳ್ಳಿಯ ಒಂದು ರೂಪಾಯಿಯನ್ನು ಠಣ್ ಎಂದು ಹರಿವಾಣದತ್ತ ಎಸೆದ ಹೆಗಡೆ. ಗರ್ಭಗುಡಿಯ ಒಳಗಿದ್ದ ಗಿರಿಜಳ ಗಮನ ತನ್ನೆಡೆಗೆ ಎಳೆಯುವುದಕ್ಕೆ ಬಹಳವಾಗಿ ಪ್ರಯತ್ನಿಸಿದ. ಆದರೆ ಆಕೆ ಒಮ್ಮೆಯೂ ಹೆಗಡೆಯ ಮುಖ ನೋಡುವುದಕ್ಕೆ ಮನಸ್ಸುಮಾಡಿರಲಿಲ್ಲ. ಸೋಮಯಾಜರನ್ನೆ ಕೇಳಿದ "ಈ ಅಮ್ಮ ಯಾರು ಸ್ವಾಮಿ....ಯಾವಾಗ ಬಂದ್ರು... ನನಗೆ ಗೊತ್ತೇ ಇರಲಿಲ್ಲ" ಎಂದು. ಸೋಮಯಾಜರು ಆಕೆಯ ಪರಿಚಯ ಹೇಳಿದರು. "ಹೋ....ಶುಂಠಿಕೊಪ್ಪದವರೆ ...ನನ್ನ ಸೋದರತ್ತೆಯ ಮಗ ರಾಜು ಹೆಗಡೆಯ ಊರು ಅನ್ನಿ....ಬಹಳ ಸಂತೋಷ ಬುದ್ಧಿ. ಈ ಗುಡಿಯಲ್ಲಿ ಚಾಮರ ಬೀಸುವವರು ಇಲ್ಲದೆ ಏಕೋ ನನಗೂ ಬೇಸರವಾಗಿತ್ತು. ಈಗ ಸರಿಹೋಯ್ತು ಅನ್ನಿ....ಲಕ್ಷಣವಾದ ಹುಡುಗಿ ಸೋಮಯಾಜರೆ" ಎಂದ ಹೆಗಡೆ. ಗಟ್ಟಿಯಾಗಿ "ಅಮ್ಮ....ದಕ್ಷಿಣೆ ತೆಗೆದುಕೊಳ್ಳಿ" ಎಂದು ಕರೆದ. ಗಿರಿಜ ಅಲ್ಲಿಂದಲೇ ಉತ್ತರಿಸಿದಳು "ಆ ಸಂಪ್ರದಾಯವೇ ಇಲ್ಲ ಹೆಗಡೆಯವರೆ ... ನಾವು ದಕ್ಷಿಣೆ ಹಿಡಿಯುವ ಜಾತಿಯವರೇ ಅಲ್ಲ ..." ಎಂದಳು. "ಹಾಗೆನ್ನ ಬೇಡಿ ತಾಯಿ .. ಇಂದು ನನ್ನ ಹೂವಿನ ಪೂಜೆ...." ಎಂದ ಹೆಗಡೆ. "ದೇವರ ಡಬ್ಬಕ್ಕೆ ಹಾಕಿ ಹೆಗಡೆಯವರೆ .. ಅದು ನನಗೆ ಸಂದಾಯವಾದಂತೆ" ಎಂದು ಗಿರಿಜ ಹೇಳಿದಾಗ ಹೆಗಡೆಗೆ ಕೋಪ ಕೆದರಿತು. ಆದರೂ ಸುಮ್ಮನಾದ. ತಾನು ತಿಳಿದುಕೊಂಡಷ್ಟು ಕಾರ್ಯ ಸುಲಭವಲ್ಲ ಎಂಬುದು ಹೆಗಡೆಗೆ ಮತ್ತೆ ತಿಳಿ

ಯಿತು. ಗುಡಿಯ ಬಾಗಿಲು ಹಾಕಿ ಗಿರಿಜಳ ಜೊತೆಯಲ್ಲಿ ಸೋಮಯಾಜರು ಮನೆಗೆ ಹೊರಟರು. "ನನ್ನ ಹುರಿಮಾಸೆಗಿಂತ ಈ ಹಾರವನ ಜುಟ್ಟೇ ಚಂದವಾಗಿ ಕಂಡಿತೆ ಇವಳಿಗೆ" ಎಂದುಕೊಂಡ ಹೆಗಡೆ. ಮನೆಯ ದಾರಿಯಲ್ಲಿ ಬರುತ್ತಿದ್ದಾಗ ಹೆಗಡೆ ಮತ್ತೆ ಮತ್ತೆ ಅದನ್ನೇ ನೆನೆಸಿಕೊಂಡ. ಸೀನ ಅವನ ಜೊತೆಯಲ್ಲೇ ಬಂದಿದ್ದ.

"ಏನು ಬುದ್ಧಿ....ಇಂದೇಕೋ ತಾವು ಒಂದು ರೀತಿ ಆಗಿದ್ದೀರಿ?" ಎಂದು ಕೇಳಿದ ಸೀನ.

"ನೀನೇ ಹೇಳು....ಆಗುವುದು ಸ್ವಾಭಾವಿಕ ಅಲ್ಲವೆ ?"

"ಬಿಡಿ ಸ್ವಾಮಿ....ಅದನ್ನು ಮನಸ್ಸಿಗೇಕೆ ಹಚ್ಚಿಕೊಳ್ಳಬೇಕು ?"

"ಅಲ್ಲ ಸೀನ....ಆ ಹೆಣ್ಣಿನ ಸೊಕ್ಕು ನೋಡು...."

"ಹೂಂ .. ಹೆದರಿಕೊಳ್ಳುವ ಜಾತಿ ಅಲ್ಲ ಹೆಗಡೆಯವರೆ .."

"ಬಿಡಯ್ಯ...ಎಂತಹ ಹುಲಿಗಳನ್ನೇ ಬಗ್ಗಿಸಿದ್ದೇನೆ...ಇವಕ್ಕೆ ಹೆದರುತ್ತೆನೆಯೆ ? ಸರಿಯಾಗಿ ಕಣ್ಣು ಬಿಟ್ಟರೆ ನನ್ನ ಮುಂದೆಯೇ ಪ್ರಾಣಬಿಡುತ್ತದೆ.... ಆದರೆ ಒಂದು ವಿಚಾರ ಸೀನ. ಈ ಕಾರ್ಯಕ್ಕೆ ನಿನ್ನ ಸಹಾಯ ಅಗತ್ಯ. ನೀನು ಮನಸ್ಸು ಮಾಡಿದರೆ ನನ್ನ ಕೆಲಸ ಸುಗಮವಾದಂತೆ....ಮಾತ್ರ ಆಕೆ ನನ್ನ ಮಂಚಕ್ಕೆಬರಬೇಕು .."

"ಆಗಲಿ ಬುದ್ಧಿ ...ಬೆಳಿಗ್ಗೆ ಮನೆಕಡೆ ಬರುತ್ತೇನೆ" ಎಂದು ಸೀನ ತನ್ನ ಮನೆಯ ಹಾದಿ ಹಿಡಿದ.

೧೨

ರುದ್ರ ಹೆಗಡೆ ತನ್ನ ಮನೆಯ ಹಿಂದಿನ ಕಸಿ ಮಾವಿನ ಮರದಲ್ಲಿ ಲಕ್ಷಣವಾಗಿ ಬೆಳೆದಿದ್ದ ಬಾದಾಮಿ ಕಾಯಿಗಳನ್ನು ಇಳಿಸಿ....ಅದನ್ನು ಒಂದು ಬೀಳು ಬುಟ್ಟಿಯಲ್ಲಿ ತುಂಬಿಸಿ ಒಕ್ಕಲು ಲಿಂಗನ ತಲೆಯ ಮೇಲಿಟ್ಟು "ಗಿರಿಜಮ್ಮನಿಗೆ ಕೊಟ್ಟು ಬಾ....ನಮ್ಮ ತೋಟದಲ್ಲಿ ಬೆಳೆದದ್ದು ಎಂದು ಹೇಳು. ಮತ್ತೆ ಬೇಕಿದ್ದರೆ ಒಂದು ವಾರ ಬಿಟ್ಟು ನೀಲಂ ಜಾತಿಯ ಹಣ್ಣುಗಳನ್ನು ಕಳುಹಿಸುವುದಾಗಿ ಹೇಳು" ಎಂದು ಲಿಂಗನನ್ನು ಕಳುಹಿಸಿಕೊಟ್ಟ. ಮಾವಿನಕಾಯಿ ತುಂಬಿದ್ದ ಹೆಡಿಗೆಯನ್ನು ಕಂಡು ಗಿರಿಜಳಿಗೆ ಎಲ್ಲಿಲ್ಲದ ಸಿಟ್ಟುಬಂತು. "ಏನಪ್ಪ ....ಇದೆಲ್ಲಾ ಯಾವ ಕ್ರಮ ಅಂತ.! ನಿನ್ನ ಯಜಮಾನರಿಗೆ ನನ್ನ ಪರಿಚಯ ಕೂಡಾ ಇಲ್ಲ. ನಾನು ಕಂಡದ್ದು ಸೋಣೆ ಆರತಿಯ ದಿನ ಮಾತ್ರ. ಹಾಗಿರುವಾಗ ಈ ವ್ಯವಹಾರ ಮಾಡುವುದಕ್ಕೆ ಏನು ಕಾರಣ ? ನನ್ನನ್ನು ಏನೆಂದು ತಿಳಿದುಕೊಂಡಿದ್ದಾರೆ ನಿನ್ನ ಒಡೆಯರು....ಹೇಳಪ್ಪ ...ಇನ್ನೊಬ್ಬರ ವಸ್ತುವನ್ನು ಬಯಸುವ ಸ್ವಭಾವವೇ ನನಗಿಲ್ಲ ..ಸಂತೆಯಲ್ಲಿ ಮಾರಿದರೆ ನಾಲ್ಕು ಪಾವಲಿ ದುಡ್ಡು ಸಿಗುತ್ತದೆ ಎಂದು ಹೇಳು" ಎಂದು ಗಿರಿಜ ಅಂದೇಬಿಟ್ಟಳು. ನಿಂಗ ಎಷ್ಟೇ ಕೇಳಿಕೊಂಡರೂ "ನಿನ್ನ ಹೆಗಡೆಯವರು ಕೆಟ್ಟ ಮನಸ್ಸಿನಿಂದ ಇದನ್ನು ಕಳುಹಿಸಿದ್ದಾರೆ. ಅದು ನನಗೆ ಬೇಡ" ಎಂದು ಖಂಡಿತವಾಗಿ ಗಿರಿಜ ಹೇಳಿದ ಅನಂತರ ಮರಳಿ ನಿಂಗ ಹೆಡಿಗೆಯನ್ನು ಹೊತ್ತು ಹೆಗಡೆಯ ಮನೆಗೆ ಬಂದ. ನಿಂಗ ಏನನ್ನೂ ಹೇಳದಿದ್ದರೂ ಹೆಡಿಗೆಯನ್ನು ಕಂಡೇ ರುದ್ರನಿಗೆ ಸಿಟ್ಟುಬಂತು. ಒಮ್ಮೆ ಆರ್ಭಟಿಸಿದ. "ಏನಂದಳು...." ಎಂದು ಕೇಳಿದ. ಹೇಳಿದ ನಿಂಗ.

"ಸಂತೆಯಲ್ಲಿ ಮಾರಿ ನಾಲ್ಕು ಪಾವಲಿ ದುಡ್ಡು ಸಂಪಾದಿಸಬೇಕಂತೆ ಬುದ್ಧಿ" ಎಂದು ಸಿಂಗ ಆಕೆ ಹೇಳಿದ ಮಾತನ್ನು ಹೆಗಡೆಗೆ ಅರ್ಥವಾಗುವಂತೆ ಹೇಳಿದ. ಆಗ ನೋಡಬೇಕಿತ್ತು ಹೆಗಡೆಯ ಕೋಪವನ್ನು. ಚರ್ರೆಂದು ಬಾಯಲ್ಲಿದ್ದ ತಾಂಬೂಲದ ರಸವನ್ನು ಹೊರ ಉಗುಳಿ....ದವಡೆಯ ಎಡೆಯಲ್ಲಿಟ್ಟ ಹೊಗೆ ಸೊಪ್ಪಿನ ಉಂಡೆಯನ್ನು "ತಫ್" ಎಂದು ತೆಂಗಿನ ಕಟ್ಟೆಯತ್ತ ಉಗಿದು...ಗಟಗಟನೆ ಮೂರು ಲೋಟ ನೀರು ಕುಡಿದ. ತಾನು ಕಳುಹಿಸಿದ್ದ ಮಾವಿನಕಾಯನ್ನು ಮರಳಿ ಕಳುಹಿಸಬೇಕಾದರೆ...ಸಂತೆಯಲ್ಲಿ ಮಾರಿ ನಾಲ್ಕು ಕಾಸು ಸಂಪಾದಿಸುವಂತೆ ಹೇಳಿ ನನ್ನನ್ನು ಅವಮಾನಿಸಬೇಕಾದರೆ ಹುಡುಗಿ ಎಂತಹ ಸೊಕ್ಕಿನವಳು ? ಅವಳಿಗೆಷ್ಟು ರಾಪು ? ಎಂದು ಹೆಗಡೆ ಆ ಸಂಜೆ ಎಲ್ಲಾ ಅದನ್ನೇ ಯೋಚಿಸಿಕೊಂಡು ಕಿಡಿಕಿಡಿಯಾದ. "ದೇವರ ಗುಡಿಯಲ್ಲಿ ಚಾಮರ ಬೀಸಿಕೊಂಡು....ಬಡ ಬ್ರಾಹ್ಮಣನ ಮನೆಯಲ್ಲಿ ಬಿದ್ದ ಎಂಜಲು ಅನ್ನ ತಿಂದುಕೊಂಡಿರುವ ಈ ಹೆಣ್ಣಿಗೆ ಇಷ್ಟು ದಿಮಾಕು ಎಂದಾದರೆ....ಆಗುವುದಾಗಲಿ.. ಒಂದು ಕೈ ನೋಡಿಯೇ ಬಿಡುತ್ತೇನೆ" ಎಂದು ಹೆಗಡೆ ತನ್ನಲ್ಲೇ ತೀರ್ಮಾನಿಸಿಕೊಂಡ

ಮಾರನೆದಿನ ತನ್ನ ಗೆಳೆಯ ಸೀನನನ್ನು ಕರೆಯಿಸಿದ. ಮಕ್ಕಿ ಬಯಲಿನಿಂದ ಸೋಮಯಾಜರ ಮನೆಯ ಹಿಂದಿನ ತೋಟದಲ್ಲಿರುವ ಗಿರಿಜಳ ಮನೆಗೆ ಅವನನ್ನೇ ರಾಯಭಾರಿಯಾಗಿ ಕಳುಹಿಸಿ ಇನ್ನೊಮ್ಮೆ ಪ್ರಯತ್ನ ಮಾಡುವ ಯೋಜನೆ ಹೆಗಡೆಯದು. ಸೀನನ ಮುಂದೆ ಎರಡು ಬಾಟಲಿ ಹೆಂಡವನ್ನಿಟ್ಟು ....ಅವನ ಜೇಬು ತುಂಬಾ ಕೈಯಾಡಿಸಿ ಪೇಟೆಯಿಂದ ತಂದಿದ್ದ ಆನೆಯ ಗುರುತು ಇರುವ ಸಿಗರೇಟು ಒಂದನ್ನು ಸೀನನಿಗೆ ಕೊಟ್ಟು ಬೆಂಕಿ ಕಡ್ಡಿ ಗೀರುತ್ತಾ "ನೋಡಪ್ಪ ಒಂದು ಕಾರ್ಯ ನಿನ್ನಿಂದ ಆಗಬೇಕಿತ್ತು. ಆ ಹುಡುಗಿಗೆ ಬಾಯಿ ಬಿಟ್ಟು ಹೀಗೆ ಮಾಡುತ್ತಿದ್ದೇನೆ ಎಂದು ಕನಸಿನಲ್ಲಿಯೂ ಎಣಿಸಬೇಡ. ಆ ರಂಡೆಯ ಸಹವಾಸದ ಮನೆ ಹಾಳಾಯಿತು. ಗಟ್ಟಿಯಾಗಿ ನಾನು ಉಸಿರು ಬಿಟ್ಟರೆ ತಿರುಗಿಕೊಂಡು ಬೀಳುತ್ತದೆ. ನನ್ನ ಮುಂದೆ ನಿಲ್ಲುವ ಯೋಗ್ಯತೆ ಅದಕ್ಕೆಲ್ಲಿದೆ . ಗಟ್ಟಿಯಾಗಿ ಆಕೆಯ ತೋಳನ್ನು ಹಿಡಿದರೆ ಮತ್ತೆ ಎಣ್ಣೆ ಹಾಕಿ ಕಾಸು ಕೊಡಬೇಕು ಬಿಡು. ಆದರೆ ನನ್ನನ್ನು ಅವಮಾನಿಸಿದಳು ನೋಡು . ತಾನು ಮಹಾ ಪತಿವ್ರತೆ ಎಂದುಕೊಳ್ಳುತ್ತಾಳೆ ನೋಡು . ಅದಕ್ಕೆ ಒಂದು ಕೈನೋಡುವ ಮನಸ್ಸು. ಹೆಗಡೆಯ ದರ್ಪ ಅವಳಿಗೆ ತೋರಿಸಬೇಕು ಎಂದು ಸಂಕಲ್ಪಿಸಿ

ಕೊಂಡಿದ್ದೇನೆ. ಒಂದು ಬಾರಿ ಅದರ ಎದೆಯ ಮೇಲೆ ಕೈಯಾಡಿಸಿದರೆ ಸರಿ.... ಮತ್ತೆ ಆ ನಾಯಿಯ ಮುಖದ ಮೇಲೆ ಎಂಜಲು ಉಗಿಯದಿದ್ದರೆ ಹೇಳು.... ನೀನು ಇಷ್ಟನ್ನು ಮಾಡು ಸೀನ. ಹೋಗಿ ಒಂದು ಮಾತು ಕೇಳು. ನನ್ನ ಅಭಿಪ್ರಾಯ ಹೀಗಿದೆ ಎಂದು ತಿಳಿಸು. ನನ್ನ ಬಗ್ಗೆ ವಿವರಣೆ ಕೊಡು. ಆಕೆ ಹೆದರಿಕೊಳ್ಳುವಂತೆ ಹಿಂದೆ ನಡೆದ ಘಟನೆಯನ್ನೆಲ್ಲಾ ವಿವರವಾಗಿ ಹೇಳು" ಎಂದ ಹೆಗಡೆ. ಸೀನನಿಗೆ ಮನಸ್ಸಿಲ್ಲದಿದ್ದರೂ "ಆಗಲಿ ಸ್ವಾಮಿ....ಹೇಳುತ್ತೇನೆ" ಎಂದ.

ಸಂಜೆ ಸೂರ್ಯ ಕೆಳಗಿಳಿದು ತಂಪಿನ ವಾತಾವರಣ ಹುಟ್ಟಿತ್ತು. ಆ ಹೊತ್ತಿನಲ್ಲಿ ಸೀನ ಹೆಗಡೆಯ ದೂತನಾಗಿ ಗಿರಿಜಮ್ಮನ ಮನೆಗೆ ಬಂದ. ಮನೆಯ ಬಾಗಿಲಿಗೆ ಬೀಗ ಹಾಕಿತ್ತು. ತುಳಸಿ ಕಟ್ಟೆಯ ಪಕ್ಕದಲ್ಲೆ ಹೆಡೆ ಕೊಂತಳಿಕೆಯ ರಾಶಿಯಿತ್ತು. ಅದಕ್ಕೆ ಮರೆಯಾಗಿ ಕುಳಿತು ಬೀಡಿಗೆ ಬೆಂಕಿ ಹಚ್ಚಿದ.

ಹೊತ್ತು ಕಂತುವುದಕ್ಕೆ ಸರಿಯಾಗಿ ಗಿರಿಜ ಮನೆಗೆ ಬಂದಳು. ಸೋಮಯಾಜರ ಮನೆಯಿಂದಲೇ ಆಕೆ ಬಂದಿದ್ದಳು. "ಹಾಗಲಕಾಯಿ ಗೊಜ್ಜು ಮಾಡಿದ್ದೇನೆ....ನಿನಗೂ ಆಗುತ್ತದೆ" ಎಂಮ ರುಕ್ಮಿಣಿ ಒಂದಿಷ್ಟು ಗೊಜ್ಜನ್ನು ಪಾತ್ರದಲ್ಲಿ ತುಂಬಿಸಿ ಕೊಟ್ಟಿದ್ದಳು. ಆದನ್ನು ಅಂಗೈ ಮೇಲಿಟ್ಟು ಮೇಲೆ ಸೆರಗು ಮುಚ್ಚಿ ಮನೆ ಅಂಗಳಕ್ಕೆ ಬಂದಿದ್ದಳು ಗಿರಿಜ. ಸೀನ ಒಮ್ಮೆ ಕೆಮ್ಮಿದ. "ಯಾರು.... ?" ಎಂದು ತಟ್ಟನೆ ಕೇಳಿದಳು ಗಿರಿಜ. "ನಾನು ತಾಯಿ.." ಎನ್ನುತ್ತಾ ಸೀನ ಕಟ್ಟೆಯ ಮರೆಯಿಂದ ನಾಲ್ಕು ಹೆಜ್ಜೆ ಮುಂದೆ ಬಂದ.

ಅಪರಿಚಿತ ವ್ಯಕ್ತಿ. ಮುಖ ಕೂಡಾ ತುಂಬಾ ಗಡುಸಾಗಿತ್ತು. ಕೆಂಪಡರಿದ ಸೀನನ ಕಣ್ಣನ್ನು ಕಂಡೇ ಹೆದರಿದಳು ಗಿರಿಜ. ಯಾರಿವನು ? ಏಕೆ ಬಂದ ? ಹೆಗಡೆಯವನ ಕಡೆಯವನಾಗಿದ್ದರೆ....

"ಯಾರಪ್ಪ ನೀನು... " ಎನ್ನುತ್ತಾ ಗಿರಿಜ ಜಗಲಿಯ ಮೆಟ್ಟಿಲ ಮೇಲೆ ನಿಂತು ಕೇಳಿದಳು.

"ಕೆಳ ಹಿತ್ತಲು ತಾಯಿ...."

"ಎಲ್ಲಿದೆ ಅದು... ನಾನು ಹೆಸರು ಕೇಳಿಯೇ ಇಲ್ಲವಲ್ಲ"

"ಬಯಲು ಮಕ್ಕಿಯ ಮೂಡಿಗಿದೆ ಅಮ್ಮ....ಎಡತೊರೆಯ ಕಲ್ಲುಸಂಕದ ವರೆಗೆ ಇರುವುದೆಲ್ಲಾ ಕೆಳ ಹಿತ್ತಲು"

"ಯಾರ ಸೈಕಿ ನೀನು....ನಿನ್ನನ್ನು ನೋಡಿಯೇ ಇಲ್ಲವಲ್ಲ"

"ನಾನು ನಿಮ್ಮನ್ನು ನೋಡಿದ್ದೇನೆ"

"ಎಲ್ಲಿ....ಯಾವಾಗ ನೀನು ನೋಡಿದ್ದು ?"

"ಗುಡಿಯಲ್ಲಿ... ನೀವು ಚಾಮರ ಬೀಸುವವರಲ್ಲವೇ ?"

"ಹೋ....ಹಾಗೆ ಪರಿಚಯ ಅನ್ನು. ಗುಡಿ ಎಂದ ಮೇಲೆ ಎಲ್ಲರೂ ಬರುತ್ತಾರೆ. ನಮ್ಮನ್ನು ನೋಡುವುದರಲ್ಲಿ ವಿಶೇಷ ಏನಿದೆ ? ಹೌದು... ಯಾರ ಕಡೆ ಯವನು ನೀನು"

"ಹೆಗಡೆಯ ಒಕ್ಕಲು"

"ಯಾವ ಹೆಗಡೆ"

"ಮೊನ್ನೆ ಸೋಣೆ ಆರತಿ ಮಾಡಿಸಿದರಲ್ಲ....ರುದ್ರ ಹೆಗಡೆಯ ಕಡೆ ಯವನು"

ಗಿರಿಜಳ ಮೈ ಬೆವರಿತು. ಒಂದೆಡೆ ಕೋಪ ಬಂತು. ಇನ್ನೊಂದೆಡೆ ದುಃಖವಾಯ್ತು. ಸುಖವಾಗಿ ಬದುಕುವುದಕ್ಕೆ ಸುಗಮವಾದ ದಾರಿಯಿಲ್ಲ ಎನ್ನುವ ನಂಬಿಕೆ ಆಗಲೇ ಬಂದಿತ್ತು. ಬದುಕಿನ ದಾರಿಯಲ್ಲಿನ ಕಲ್ಲುಮುಳ್ಳನ್ನು ತುಳಿದೇ ಆಕೆ ಮುಂದೆ ಹೋಗಬೇಕಾಗಿತ್ತು. ಮತ್ತೆ ಇದ್ದುದರಲ್ಲೇ ಎದೆ ಗಟ್ಟಿ ಮಾಡಿಕೊಂಡಳು.

"ಹೌದು... ನೀನು ಏಕೆ ಬಂದದ್ದು ?" ಎಂದು ಗಿರಿಜ ಆವನನ್ನೇ ಕೇಳಿದಳು.

"ಹೆಗಡೆಯವರೇ ಕಳುಹಿಸಿದರು..."

"ಎಲ್ಲಿಗೆ...."

"ನಿಮ್ಮನ್ನು ನೋಡಿಕೊಂಡು ಬಾ ಅಂದರು ತಾಯಿ"

"ವಿಕಪ್ಪ...ವಿಚಿತ್ರವಾಗಿದೆ. ಹೆಗಡೆಯವರ ಗುರುತೇ ನನಗಿಲ್ಲ. ಅವರ ಹೆಸರನ್ನು ಕೂಡ ನಾನು ಕೇಳಿಲ್ಲ. ಹಾಗಿರುವಾಗ...ನನ್ನನ್ನು ನೋಡಿಕೊಂಡು ಬಾ ಎಂದು ಜನ ಕಳುಹಿಸಿದ್ದಾರಲ್ಲ....ಇದರ ಅರ್ಥವೇನು ?"

"ಅವರು ನಿಮ್ಮನ್ನು ನೋಡಿದ್ದಾರೆ ಅಮ್ಮ. ನೀವು ಕೂಡಾ ರಂಗ ಪೂಜೆಯ ದಿನ ನೋಡಿದ್ದೀರಲ್ಲ..."

"ಇರಬಹುದು... ಆದರೆ ಅವರೇ ಹೆಗಡೆ ಎಂದು ನನಗೇನು ಗೊತ್ತು ?

ನಾನು ಯಾರನ್ನೂ ಹೆಚ್ಚಾಗಿ ಗಮನಿಸುವುದಿಲ್ಲ. ಹೋಗಲಿ ನೀನು ಬಂದ ಕಾರಣವನ್ನಾದರೂ ತಿಳಿಸು ..."

"ಒಂದು ವಿಚಾರ ತಿಳಿಸಿದ್ದಾರೆ ..."

"ಅದೇ ಹೇಳಿಬಿಡಪ್ಪ ಹೆಗಡೆಯವರಿಗೆ ನನ್ನಿಂದ ಏನಾಗಬೇಕು ?"

"ಮೊನ್ನೆ ಕಸೆ ಮಾವಿನಹಣ್ಣು ಕಳುಹಿಸಿದ್ದಾರಂತಲ್ಲ "

"ಹೌದು... ಮರಳಿ ಕಳುಹಿಸಿದ್ದೇನೆ."

"ಅದು ಅವರಿಗೆ ಬೇಸರವಾಗಿದೆ."

"ಇರಬಹುದು---ಹಾಗೆ ಮಾಡಿದ್ದು ನನಗೆ ಸಂತೋಷವಾಗಿದೆ."

"ನಿಮ್ಮ ಬಗ್ಗೆ ತುಂಬ ಹಚ್ಚಿಕೊಂಡಿದ್ದಾರೆ ಅಮ್ಮ....ಅವರಿಗೆ ನಿಮ್ಮನ್ನು ಕಂಡರೆ ಪ್ರೀತಿ. ಹಗಲು ರಾತ್ರಿ ಅದೇ ಯೋಚನೆಯಲ್ಲಿದ್ದಾರೆ."

"......"

"ಹೇಳಿ ತಾಯಿ ...ಯಾವಾಗ ಬರಲಿ ಎಂದು ತಿಳಿದು ಬರುವಂತೆ ಹೇಳಿದ್ದಾರೆ."

ಆ ಮಾತನ್ನು ಮೊದಲೇ ನಿರೀಕ್ಷಿಸಿದ್ದಳು ಗಿರಿಜ. ಸುಮ್ಮನೆ ಮುಖ ಸಿಂಡರಿಸಿಕೊಂಡು ನಿಂತಳು. ಯಾವ ಮಾತನ್ನು ಆಡಲಿಲ್ಲ. ಆಡುವುದಕ್ಕೆ ಏನಿದೆ ? ಎಷ್ಟು ಹೊತ್ತಾದರೂ ಆಕೆ ಏನನ್ನೂ ಹೇಳದೆ ಸುಮ್ಮನೆ ನಿಂತದ್ದನ್ನು ನೋಡಿ ಸೀನ,

"ಏಕೆ ತಾಯಿ ..ಸುಮ್ಮನೆ ನಿಂತರಲ್ಲ" ಎಂದ.

"ಮತ್ತೆ ಇದಕ್ಕೆ ಏನು ಹೇಳುವುದು ?"

"ನಿಮ್ಮ ಅಭಿಪ್ರಾಯ ತಿಳಿಸಿ ..."

"ಅಲ್ಲ, ಅವರಿಗೆ ನನ್ನ ಮೇಲೆ ಮನಸ್ಸಾಗಿದೆ ಅಂದರೆ....ನನಗೆ ಆ ಮನಸ್ಸೇ ಇಲ್ಲವಲ್ಲ. ಹಾಗಿರುವಾಗ ಯಾವ ಉತ್ತರ ಕೊಡುವುದು ?"

"ಈ ವ್ಯವಹಾರದಲ್ಲಿ ನನ್ನದೇನೂ ಇಲ್ಲ ಅಮ್ಮ . ಅವರ ಭೂಮಿಯಲ್ಲಿದ್ದೇನೆ. ಸ್ವಾಮಿಕಾರ್ಯ ಎಂದು ಬಂದಿದ್ದೇನೆ."

"ಅಲ್ಲ....ಒಬ್ಬರ ಮೇಲೆ ಇನ್ನೊಬ್ಬರಿಗೆ ಮನಸ್ಸಾಗಿದೆ ಅಂದರೆ ಅರ್ಥವೇನು ? ಹೀಗೆ ಹೇಳಿಕಳುಹಿಸುವುದರಲ್ಲಿ ಯಾವ ನ್ಯಾಯವಿದೆ ? ಕಂಡವರ ಹೆಣ್ಣುಮಕ್ಕಳ ಮೇಲೆ ಮನಸ್ಸು ಮಾಡಿದರೆ ಅದು ಹೇಗೆ ಸಾಧ್ಯ ಅಂತ. ಹೆಗಡೆಯವರಿಗೆ

ನನ್ನ ಮೇಲೆ ಪ್ರೀತಿ ಇದ್ದರೆ .. ನಾನು ಒಬ್ಬರ ಆಶ್ರಯದಲ್ಲಿರುವಾಗ ಆ ಮಾತು ಹೇಳಿಕಳುಹಿಸುವುದೆ ? ಹೇಳಪ್ಪ .. ನೀನೇ ಯೋಚಿಸು. ದೇವರು .. ಧರ್ಮ ನೀತಿಯಲ್ಲಿ ನಿನಗೆ ನಂಬಿಕೆಯಿದ್ದರೆ ನಿನ್ನ ಯಜಮಾನರಿಗೆ ನೀನೇ ಉತ್ತರ ಹೇಳಬಹುದಿತ್ತು. ನಿನಗೂ ಆ ಭಗವಂತ ಬುದ್ಧಿ ಶಕ್ತಿ ಕೊಟ್ಟಿದ್ದರೆ ಈ ಬಲಾತ್ಕಾರದ ಬಗ್ಗೆ ವಿಚಾರಮಾಡು. ಮೊನ್ನೆಯೇ ನನ್ನ ರೀತಿನೀತಿ ಹೇಳಿದ್ದೆ. ನಾನು ಬಿಡುಸೂಳೆಯಲ್ಲ. ಮಾಲೆಯರ ಜಾತಿಯವಳಾದರೂ ನನ್ನದೇ ಒಂದು ನಿಯತ್ತಿನ ಮಾರ್ಗದಲ್ಲಿ ಇದ್ದೇನೆ. ನನ್ನ ಕೊರಳಲ್ಲಿ ಕರಿಮಣಿ ಕಟ್ಟಿದ್ದು ಶಿವದೇವರು. ಇದಕ್ಕೆ ನನ್ನ ಒಪ್ಪಿಗೆ ಖಂಡಿತಾ ಇಲ್ಲ."

"ಸರಿಯಾಗಿ ಯೋಚಿಸಿ ಅಮ್ಮ....ಹೆಗಡೆ ಭಾರಿ ಕುಳ. ಮೊಗೆಬೆಟ್ಟಿಗೆ ದೊಡ್ಡ ಆಸಾಮಿ. ಎರಡು ಕೋರ್ಜಿ ಅಕ್ಕಿ ಗೇಣಿ ಬರುವ ಭೂಮಿ ಇದೆ. ದೇವರು ಸಂಪತ್ತು ಕೊಟ್ಟಿದ್ದಾನೆ. ಆರೋಗ್ಯ ಕೊಟ್ಟಿದ್ದಾನೆ. ನಿಮ್ಮನ್ನು ಬಚಾಯಿಸುವ ಮನಸ್ಸಿದೆ ಎಂದ ಮೇಲೆ ಈ ಒಳ್ಳೆಯ ಆಶ್ರಯವನ್ನು ಏಕೆ ಬಿಡುತ್ತೀರಿ. ಮೊದಲು ಸೆರೆಗಾರನ ಮಗಳು ಹೀಗೆ ಅಂದಳು... ಮತ್ತೆ ಹೆಗಡೆ ಆಕೆಯನ್ನು ತನ್ನ ಮಂಚಕ್ಕೆ ಕರೆದುಕೊಂಡು ಬಂದದ್ದನ್ನು ಎಣಿಸಿದರೆ ನಾಲಿಗೆ ಒಣಗುತ್ತದೆ ತಾಯಿ. ಆ ವಿಚಾರದಲ್ಲಿ ಅವರು ತುಂಬಾ ಕೆಟ್ಟವರು. ಎಣಿಸಿದರೆ ಮುಗಿಸಿಯೇ ತೀರುತ್ತಾರೆ. ಒಳ್ಳೆಯದೋ ಕೆಟ್ಟದ್ದೋ ನೀವು ಬದುಕಿರುವಷ್ಟುದಿನ ಅವರ ಸಹವಾಸದಲ್ಲಿ ಇರುವುದೇ ಸರಿ ಎಂದು ಕಾಣುತ್ತದೆ. ಸಿಟ್ಟು ಬಂದರೆ ಯಾವುದಕ್ಕೂ ಮನಸ್ಸು ಮಾಡುತ್ತೇನೆ ಎಂದು ಎದೆ ತಟ್ಟಿಕೊಂಡಿದ್ದಾರೆ. ನೀವು ಒಪ್ಪದಿದ್ದರೆ ನಾಳೆ ಮನೆ ನುಗ್ಗುವುದಕ್ಕೆ ಅವರು ಹೇಸುವುದಿಲ್ಲ. ಅದಕ್ಕೆ ಹೇಳಿದೆ... ಚೆನ್ನಾಗಿ ಯೋಚಿಸಿ... ಹೇಗೂ ನಿಮ್ಮ ಕುಲಕಸಬು...."

"ಏನಪ್ಪ....ಅನ್ನುವುದಕ್ಕೆ ನಿನಗೆಲ್ಲಿಂದ ಬಂತು ನಾಲಿಗೆ ? ಇದಕ್ಕೆ ನಿನ್ನ ಪ್ರೋತ್ಸಾಹವೆ ? ಇದನ್ನು ಕೇಳುವವರು ಯಾರು ಇಲ್ಲವೆ ಈ ಊರಲ್ಲಿ ? ಹೆಗಡೆ ಯಾರೇ ಇರಲಿ... ನನ್ನ ಜೀವ ತೆಗೆದರೂ ಅದು ಮಾತ್ರ ಸಾಧ್ಯವಿಲ್ಲ. ಮೊಗೆಬೆಟ್ಟಿನ ಎಲ್ಲಾ ಭೂಮಿಯನ್ನು ನನ್ನ ಹೆಸರಿಗೆ ಬರೆಯಿಸಿದರೂ .. ಎರಡು ಮಣ ಬಂಗಾರ ಕೊಟ್ಟರೂ ಹೆಗಡೆಯ ಮುಖ ನೋಡುವುದಿಲ್ಲ. ಈ ಉಡಾಪಿಗೆ ಹೆದರುವ ಹೆಂಗಸೇ ನಾನಲ್ಲ. ಮತ್ತೆ ಹೇಳು .. ನನ್ನ ಮೇಲೆ ಕೈ ಮಾಡಿದ ಎಂದಾದರೆ ನಾನು ಸುಮ್ಮನಿರುವುದಿಲ್ಲ. ಕುಂದಾಪುರದಲ್ಲಿ ನನ್ನವರಿದ್ದಾರೆ

ಅವರಿಗೆ ಹೇಳಿ ಪೋಲಿಸರನ್ನು ಕರೆಯಿಸಿ ಹೆಗಡೆಯ ದರ್ಪ ಅಡಗಿಸುತ್ತೇನೆ. ಈ ಮಾತನ್ನು ಅಂಗವಸ್ತ್ರದಲ್ಲಿ ಗಂಟು ಹಾಕಿಕೋ.... ನನ್ನ ವಿಚಾರ ನಿನಗೂ ತಿಳಿಯದು. ಹೆಣ್ಣಿನ ಸಿಟ್ಟನ್ನು ಸುಮ್ಮನೆ ಕೆರಳಿಸಬೇಡ. ನಾಲ್ಕು ದಿನ ಮಾನವಂತ ಬಾಳ್ವೆ ಮಾಡುವವರನ್ನು ಕೆಣಕಬೇಡ ಎಂದು ಹೆಗಡೆಗೆ ಹೇಳು" ಎಂದು ಗಟ್ಟಿಯಾಗಿ ಆವೇಶದ ಮಾತು ಹೇಳಿದ ಗಿರಿಜ ಅವಸರದ ಹೆಜ್ಜೆಯಿಂದ ಜಗಲಿಗೆ ಬಂದು ಬೀಗ ತೆಗೆದು ಒಳನಡೆದುಬಿಟ್ಟಳು. ಎಷ್ಟು ಹೊತ್ತು ಕಾದರೂ ಗಿರಿಜ ಮತ್ತೆ ಹೊರಬರಲಿಲ್ಲ. ಆಕೆಯ ಮಾತಿಗೆ ದಂಗಾಗಿ ಹೋಗಿದ್ದ ಸೀನ. ನಿಜವಾಗಿಯೂ ಅವನ ಕೈ ಬೆರಳು ಮೂಗಿನ ಮೇಲಿತ್ತು. ಗಿರಿಜಮ್ಮನ ಧೈರ್ಯಕ್ಕೆ ಮೆಚ್ಚಿಕೊಂಡ. ಹೆಗಡೆಯ ವ್ಯವಹಾರದಲ್ಲಿ ತಿರುಳಿಲ್ಲ ಎಂಬುದು ಅವನಿಗೂ ತಿಳಿಯಿತು. ಗಿರಿಜಮ್ಮನ ಮಾತಿನಲ್ಲಿ ಒಂದಿಷ್ಟು ತಿರುಳು ಕಂಡಿತೋ ಏನೋ.... ಬೀಡಿಗೆ ಬೆಂಕಿ ಹಚ್ಚಿ ದಮ್ಮು ಎಳೆಯುತ್ತಾ ಬಯಲು ಮಕ್ಕಿಗೆ ಬಂದ.

ರಾತ್ರಿ ಸೋಮಯಾಜರು ಬಂದಾಗ ಅವರ ಮುಂದೆ ಹೇಳಿಕೊಂಡು ಕಂಬನಿಸುರಿಸಿದಳು. "ನನಗೆ ಇನ್ನೇನೂ ಬೇಡ .... ನಿಮ್ಮ ಪ್ರೀತಿ ವಿಶ್ವಾಸ ಉಳಿಸಿಕೊಂಡು ನಾಲ್ಕು ಕಾಲ ಮರ್ಯಾದೆಯಿಂದ ಬಾಳಿದರೆ ಸಾಕು. ಹೆಗಡೆಯ ಮಾರಿಕಣ್ಣು ನನ್ನ ಮೇಲೆ ಬಿದ್ದಿದೆ. ಜನ ಕಳುಹಿಸಿದ್ದಾನೆ. ಒಪ್ಪದಿದ್ದರೆ ಮುಂದೆ ತೊಂದರೆ ಎನ್ನುತ್ತಾನೆ. ಬಂದಿದ್ದ ಅವನ ಒಕ್ಕಲು ಬೆದರಿಸಿ ನನ್ನನ್ನು ಒಪ್ಪಿಸುವ ಕಾರ್ಯ ನಡೆದಿದೆ. ಮನಸ್ಸು ಮುರಿದೇ ಹೋಗಿದೆ ಅಯ್ಯ .... ಇವರಿಗೆಲ್ಲಾ ಹೆದರಿಕೊಳ್ಳುತ್ತೇನೆಯೆ ? ಎಲ್ಲಿಂದ ಬಂತೋ ನನಗೆ ಸಿಟ್ಟು ... ಹೆಗಡೆಯ ಮಾನವನ್ನು ಕಾಲಡಿ ಹಾಕಿ ತುಳಿದು ನಾಲ್ಕು ಮಾತು ಹೇಳಿದ್ದೇನೆ. " ಎಂದಳು.

"ತುಂಬಾ ಕೆಟ್ಟವನು ಗಿರಿಜಾ... ನ್ಯಾಯ ನಿಯತ್ತು ಅವನಿಗೆ ಗೊತ್ತೇ ಇಲ್ಲ. ಮುಂದೆ ಹೀಗಾಗುತ್ತದೆ ಎಂದು ಆ ದಿನವ ಅವನ ಮರ್ಜಿ ಕಂಡೇ ತಿಳಿದುಕೊಂಡೆ."

"ಅಯ್ಯೋ ಬಿಡಿ ಸ್ವಾಮಿ.... ಹೆದರಿಸುವುದಕ್ಕೆ ಅವನ ಅನ್ನದ ಋಣ ನನಗಿಲ್ಲ. ನಾನು ಸತ್ತರೂ ಚಿಂತೆಯಿಲ್ಲ.... ಅವನಿಗೆ ಬುದ್ಧಿ ಕಲಿಸದಿದ್ದರೆ ನೋಡಿ... ಏನೋ ಅಂದುಕೊಂಡಿದ್ದಾನೆ."

"ದೇವರು ಎಂದೂ ನಮ್ಮ ಕೈಬಿಡುವುದಿಲ್ಲ. ಈ ನಿನ್ನ ಒಳ್ಳೆಯ ಮನಸ್ಸೇ ನಿನ್ನನ್ನು ಕಾಪಾಡುತ್ತದೆ"

"ಜನ ಕಳುಹಿಸುವುದಕ್ಕೂ ಒಂದು ರೀತಿ ನೀತಿಯಿಲ್ಲವೆ? ಭಯ ಹುಟ್ಟಿಸಿದರೆ ನಾನು ಒಪ್ಪುತ್ತೇನೆ ಅಂದುಕೊಂಡಿರಬೇಕು ಆ ಕಾಲ ಈಗ ಎಲ್ಲಿದೆ ಅಯ್ಯ? ಈ ಊರಲ್ಲಿ ಅವನನ್ನು ಕೇಳುವವರೇ ಇಲ್ಲ. ಅವನದ್ದೇ ರಾಪು. ಅವನು ಮಾಡಿದ್ದೇ ಮಾಪು. ಒಂದು ಸಮಯ ಈ ಭಾಗದಲ್ಲಿ ನನಗೆ ಕೆಟ್ಟದ್ದೇ ಆಯ್ತು ಅನ್ನಿ.. ಹೆಗಡೆಯ ಮುಂದೆಯೇ ಪ್ರಾಣಬಿಡುತ್ತೇನೆ...." ಎಂದಳು ಗಿರಿಜ.

"ಎಂತಹ ಮಾತು ಗಿರಿಜಾ....ಅಷ್ಟೇನು ಬಂತು ಕೇಡು?"

"ಹಾಗಲ್ಲ.. ನನ್ನ ಮಾನ ಉಳಿಸಿಕೊಳ್ಳುವುದಕ್ಕೆ ಈ ಮಾತು ಹೇಳಿದೆ. ಅಂತಹ ಪ್ರಸಂಗದಲ್ಲಿ ದೇವರೇ ನನಗೆ ದ್ರೋಹ ಬಗೆದರೆ ಈ ಜೀವಹಿಡಿದು ಮತ್ತೇಕೆ ಬದುಕಬೇಕು? ಅದಕ್ಕೆ ಹೇಳಿದೆ ಅಯ್ಯ....ನಿಮ್ಮ ಆಶ್ರಯದಲ್ಲಿದ್ದೇನೆ. ಇನ್ನು ಬೇರೆ ಕೆಟ್ಟದ್ದನ್ನು ಎಣಿಸುವುದಿಲ್ಲ. ಹೆಗಡೆ ಅಲ್ಲ....ಯಾರೇ ಬಂದರೂ ನಾನು ಹೆದರುವುದಿಲ್ಲ. ರಾತ್ರಿಹೊತ್ತು ತೋಟದ ಮನೆಯಲ್ಲಿ ನಾನು ಒಬ್ಬಳೇ ಇದ್ದಾಗ ಬಂದರೂ ಮುಂದಿನ ಕ್ರಮ ನಾನು ಯೋಚಿಸಿದ್ದೇನೆ. ನಾಲ್ಕು ದಿನ ಕಷ್ಟವಾದರೂ ಚಿಂತೆಯಿಲ್ಲ.. ನೀವೇ ಕುಂದಾಪುರಕ್ಕೆ ಹೋಗಿ ಪೋಲೀಸರನ್ನು ಕರೆದುಕೊಂಡು ಬರುವುದೇ ಒಳ್ಳೆಯದು ..." ಎಂದಳು ಗಿರಿಜ. ಅವಳ ಮಾತಿಗೆ ತನ್ನ ಬಗ್ಗೆ ಇಟ್ಟಿರುವ ಪ್ರೀತಿ ವಿಶ್ವಾಸಕ್ಕೆ ಸೋಮಯಾಜರ ಹೃದಯ ತುಂಬಿ ಬಂತು. ಕಣ್ಣು ಒದ್ದೆಯಾಗಿದ್ದಾಗಲೇ ಗಿರಿಜಳ ತಲೆ ನೇವರಿಸಿದರು.

o o o o o

ಹೆಗಡೆಗೆ ಸಿಟ್ಟು ಬಂದರೆ ಮುಗಿಯಿತು....ದಮ್ಮಿನ ಮೇಲೆ ದಮ್ಮು ಎಂದು ನಾಲ್ಕು ಸಿಗರೇಟನ್ನು ಸೇದಿದ್ದ. ಕಣ್ಣು ಕೆಂಪಗೆ ಮಾಡಿಕೊಂಡು ಹುರಿಮೀಸೆಯ ಮೇಲೆ ಕೈಯಾಡಿಸುತ್ತಾ ದೊಪ್ಪನೆ ಮಂಚದ ಮೇಲೆ ಕುಳಿತು ಕಾಲು ಕುಣಿಸತೊಡಗಿದ್ದ. ನೆತ್ತಿ ಬಿರಿಯುವಷ್ಟು ಅವನ ಅಭಿಮಾನ ಕೆದರಿತ್ತು. ಹಣೆ ಒಡೆಯುವಷ್ಟು ತಲೆ ಬಿಸಿಯಾಗಿತ್ತು. ಹಿಮಾಲಯವನ್ನೇ

ತಬ್ಬಿಕೊಂಡರೂ ಅವನ ಹೊಟ್ಟೆಯ ಉರಿ ಆರುವಂತಿರಲಿಲ್ಲ. ದೇವಸ್ಥಾನದಲ್ಲಿ ಚಾಮರ ಬೀಸಿಕೊಂಡು ಇರುವ ಹೆಣ್ಣು ನನ್ನನ್ನು ಹಾಗೆ ಅವಮಾನಿಸುವುದೇ ? ಕುಂದಾಪುರದಿಂದ ಪೋಲೀಸರನ್ನು ಕರೆಯಿಸುತ್ತಾಳೆಯೇ ? ಎಷ್ಟು ದರ್ಪ ಆ ಪೋರಿಗೆ ? ಹುಲಿ ಮುಂದೆ ಇಲಿ ನಿಂತು ಆರ್ಭಟಿಸುವುದೆ ? ಪೋಲೀಸರನ್ನು ಕರೆಯಿಸುತ್ತೇನೆ ಎನ್ನಬೇಕಾದರೆ ಆಕೆಯ ಎದೆಯಲ್ಲಿ ಎಷ್ಟು ಕೆಚ್ಚಿರಬೇಕು ? ಆ ಮಾತು ಹೇಳುವವರು ನಾಗಬೆಟ್ಟನಲ್ಲಿ ಇಂದಿನತನಕ ಯಾರಿದ್ದರು ?

"ಏನೋ ...ಆ ಮಾತು ಹೇಳಿದಾಗ ಎರಡು ಹೊಡೆತ ಕಪಾಳಕ್ಕೆ ಬಿಗಿಯ ಬಾರದಿತ್ತೆ ?" ಎಂದು ಗಟ್ಟಿಯಾಗಿ ಒದರಿದ ಹೆಗಡೆ. ಸೀನ ಪರಿಸ್ಥಿತಿಯನ್ನರಿತೇ ಮಾತನಾಡಿದ್ದ.

"ಹೇಗಾಗುತ್ತದೆ ಬುದ್ಧಿ....ಹೆಂಗಸರನ್ನು ಹೊಡೆದ ಅಭ್ಯಾಸವೇ ನನಗಿಲ್ಲ" ಎಂದ ಮೆಲ್ಲನೆ.

"ನಿನ್ನ ಮನೆ ಹಾಳಾಯ್ತು....ಆ ಮಾತು ಕೇಳಿಕೊಂಡು ಬಂದೆಯಲ್ಲ...."

"ಹೋಗಲಿ ಸ್ವಾಮಿ ...ಸುಮ್ಮನೆ ಈ ಚಿಕ್ಕ ವಿಚಾರಕ್ಕೆ ನೀವೇಕೆ ಇಷ್ಟು ಹಾರಾಡಬೇಕು. ಅವಳೇನು ಅರಸುಮಗಳೇ ? ಸ್ವರ್ಗದಿಂದ ಬಂದವಳೆ ? ಗುಡಿಯಲ್ಲಿ ಕೆಲಸ ಮಾಡುವ ಹೆಂಗಸು. ಅಯ್ಯ....ಒಂದು ಮಾತು ಹೇಳು ತ್ತೇನೆ."

"ಹೇಳು....ನನಗೆ ಅನುಕೂಲವಾಗುವ ಮಾತನ್ನೆ ಹೇಳು"

"ದೇವರು ನಿಮಗೆ ಏನು ಕೊರತೆ ಮಾಡಿದ್ದಾನೆ"

"ಏನೋ....ಅದನ್ನು ಹೇಳುವುದಕ್ಕೆ ನೀನು ಬೇಕೆ ?"

"ಹಾಗಲ್ಲ ಸ್ವಾಮಿ.......ಇಂತಹ ಹುಡುಗಿಯರನ್ನು ನೀವು ಎಷ್ಟು ನೋಡಿಲ್ಲ....ಮುಂದೆ ನೋಡುವುದಿಲ್ಲ"

"ಆಹಾ... ಯಾರಿಗೆ ಹೇಳುತ್ತಿ ಈ ಮಾತನ್ನು. ಆಕೆಗೆ ಹೆದರಿಕೊಂಡು ಈಗ ಈ ಮಾತು ಹೇಳುವುದೆ ? ಗಿರಿಜ ಯಾರೇ ಇರಲಿ....ಆಕೆ ಏನೇ ಇದ್ದರೂ ನನಗೆ ಬೇಕೇ ಬೇಕು. ಮುಂದಿನ ಮಾತನ್ನು ಹೇಳು"

"ಬೇಡ ಅಯ್ಯ....ಮುಖದ ಮೇಲೆ ಎಂಜಲು ಉಗಿದು ಬಿಟ್ಟುಬಿಡಿ."

"ಇನ್ನೊಮ್ಮೆ ಈ ಮಾತು ಹೇಳು... ಗೊಬ್ಬರದ ರಾಶಿಯ ಮೇಲೆ ಕೆಡೆಯುತ್ತೇನೆ ನೋಡು. ಆವಳಿಂದ ಅನ್ನಿಸಿಕೊಂಡು ಸುಮ್ಮನಿರುವುದೇ ?

ನೀನು ಗಂಡಾಗಿ ಈ ಮಾತು ಹೇಳುವುದೆ ? ನೋಡಯ್ಯ....ಬೇಕು ಬೇಡ ಎನ್ನುವ ಪ್ರಶ್ನೆ ಬೇರೆ... ಆದರೆ ಹಠ ಸಾಧಿಸುವುದೇ ನನ್ನ ಉದ್ದೇಶ. ಇಷ್ಟೆಲ್ಲಾ ಬಾಯಿ ಬಡಿದುಕೊಂಡಳು ನೋಡು....ಆ ಬಾಯಿ ಒಳಗೆ ನನ್ನ ಹುರಿಮೀಸೆ ತುಂಬಿಸದಿದ್ದರೆ ನೋಡು....ಏನೋ ಅಂದುಕೊಂಡಿದ್ದಾಳೆ ..."

"ನಿಮ್ಮ ಮನಸ್ಸು ಸ್ವಾಮಿ....ನನ್ನದೇನೂ ಅಭ್ಯಂತರವಿಲ್ಲ. ಒಂದು ಕೈ ನೋಡುವ ಯೋಚನೆ ನಿಮಗಿದ್ದರೆ ಯುಕ್ತ ಕಂಡಂತೆ ಮಾಡಿ."

"ಹಾಗಲ್ಲ ಮಾರಾಯ....ನಾಳೆ ನಾವು ಈ ಊರಲ್ಲಿ ತಲೆ ಎತ್ತಿ ತಿರುಗಬೇಕು. ಆಕೆಯ ಮಾತಿಗೆ ಹೆದರಿಕೊಂಡು ಸುಮ್ಮನಿದ್ದರೆ ನಾಳೆ ಅವಳು ಗುಡಿಯಲ್ಲಿ ನಮ್ಮನ್ನು ಹತ್ತು ಜನರ ಮುಂದೆ ತೆಗಳುತ್ತಾಳೆ. ಅದಕ್ಕೆ ನಾವು ಬುದ್ಧಿ ಕಲಿಸಬೇಕು.... ...ಸಾಯುವತನಕ ಆಕೆ ಮರೆಯಬಾರದು........ಅಷ್ಟು ಮಾಡುತ್ತೇನೆ ನೋಡು....ಇವತ್ತು ರಾತ್ರಿಯೇ ಆ ಕೆಲಸ ಮಾಡುತ್ತೇನೆ. ನೀವು ಯಾರೂ ಬೇಡ. ಎಷ್ಟು ಹೊತ್ತು ಅವಳ ಸೊಕ್ಕು ಮುರಿಯುವುದಕ್ಕೆ. ಲಕ್ಷಣವಾಗಿ ಬನ್ನಿ ಹೆಗಡೆಯವರೆ ಎನ್ನುವುದಕ್ಕೆ ಅದಕ್ಕೆಲ್ಲಿದೆ ಯೋಗ್ಯತೆ? ನನ್ನ ಎದೆಯ ಮೇಲೆ ಒರಗುವುದಕ್ಕೆ ಅದರ ಹಣೆಯಲ್ಲಿ ಬರೆದಿಲ್ಲ."

"ಒಂದು ವಿಚಾರ ಅಯ್ಯ ...ನಿಮ್ಮ ಮಾತಿಗೆ ಅಡ್ಡಿ ಬರುವುದಿಲ್ಲ. ಆದರೆ ಹುಡುಗಿ ತುಂಬಾ ಮೆದುಸ್ವಭಾವದವಳು. ಹೆಚ್ಚು ಕಡಿಮೆಯಾದರೆ ನಾಳೆ ಕೆರೆ ಬಾವಿ ಹಾರಿ ಪ್ರಾಣಬಿಡುತ್ತಾಳೆ. ಹಾಗೆಂದು ಅವಳೇ ಹೇಳಿಕೊಂಡಿದ್ದಾಳೆ. ಅದು ಮಾಲೆಯರ ಹೆಣ್ಣು.........ನಾಳೆ ಜಗಳವಾಗಿ ಬಂದರೂ ಮುಂದೆ ತಾಪತ್ರಯ. ಹಿಂದೆ ನಾವು ಇಬ್ಬರನ್ನು ಕೊಂದದ್ದು ನೆನಪಿದೆ. ಅನಂತನ ಹೆಂಡತಿ ಪ್ರಾಣ ಬಿಟ್ಟಳು ನೋಡಿ....ಆ ಪಾಪ ಮಾತ್ರ ಮುಂದೆ ಬೇಡ."

"ಇಲ್ಲ ನೀನ....ನನ್ನ ಹೆಬ್ಬಾಗಿಲಿಗೆ ಬೆಂಕಿ ಬಿದ್ದಮೇಲೆ ನನಗೂ ಬುದ್ಧಿ ಬದಲಾಯಿಸಿದೆ. ಪ್ರಾಣ ತೆಗೆದುಕೊಳ್ಳುವ ಹೆಂಗಸಾದರೆ ನನಗೂ ಏಕೋ ಬೇಡವೆನಿಸುತ್ತದೆ. ದುರ್ಗಿಯನ್ನು ನೆನಸಿಕೊಂಡರೆ ಇಂದಿಗೂ ಭಯವಾಗುತ್ತದೆ. ಅಷ್ಟೊಂದು ಮುಂದುವರಿಯುವುದಿಲ್ಲ. ನನ್ನ ಸಿಟ್ಟು ಇಳಿಯಬೇಕು ....ಅದಕ್ಕೆ ಅವಳ ಹಮ್ಮು ಇಳಿಸಬೇಕು. ಆ ಮುಂಡೆಯ ಸಹವಾಸಕ್ಕೆ ಆಸೆ ಪಡುವ ಆಸಾಮಿ ನಾನಲ್ಲ. ಆದರೆ ಒಮ್ಮೆ ಹೆಗಡೆಯ ಹಠ ತೋರಿಸಿಯೇ ತೋರಿಸುತ್ತೇನೆ. ಮುಂದೆ ಅವಳ ಮುಖ ಕೂಡಾ ನೋಡುವುದಿಲ್ಲ ...ಹಾಳಾಗಿ

ಹೋಗಲಿ... ಅಷ್ಟು ದೊಡ್ಡ ದೊಡ್ಡ ಮಾತು ಹೇಳಿದಳು ನೋಡು .. ನನ್ನ ಪಿತ್ತ ಕೆನರಿದೆ. ಅದಕ್ಕೆ ಬೇರೆ ಮದ್ದಿಲ್ಲ. ಪೋಲೀಸರನ್ನು ಕರೆಯಿಸುತ್ತೇನೆ ಎನ್ನುವ ಮಾತು ಅವಳ ಬಾಯಿಂದ ಬರಬಾರದಾಗಿತ್ತು. ಅದಕ್ಕೆ ಪಣ ತೊಟ್ಟಿದ್ದೇನೆ. ಒಂದು ಹೆಣ್ಣಿಗೆ ಇಷ್ಟು ಎದೆಗಟ್ಟಿತನವಿದೆ ಎಂದಾದರೆ...ಎದೆ ತುಂಬ ಕೂದಲಿರುವ ನನಗೆ ಎಷ್ಟು ಕೆಚ್ಚಿರಬೇಡ...."

"ಹಾಗಲ್ಲಾ ಸ್ವಾಮಿ .. ರಾತ್ರಿ ಆಕೆಯ ಮನೆ ನುಗ್ಗಿದರೆ...."

"ಖಂಡಿತಾ ಇಂದೇ ಆ ಕಾರ್ಯ ಮಾಡುತ್ತೇನೆ"

"ಹೌದು....ನಾಳೆ ಬೆಳಿಗ್ಗೆ ಅವಳ ಹೆಣ ಬಾವಿಯಲ್ಲಿದ್ದರೆ...."

"ಬಿಡಯ್ಯ....ಅವಳ ಹಣೆಯಲ್ಲಿ ಆಯುಸ್ಸು ಬರೆದದ್ದು ನಾನಲ್ಲ."

"ಆ ಪಾಪ ಬೇಡ ಎಂದು ಕೈ ಮುಗಿಯುತ್ತೇನೆ"

"ಛಿ! ನಿನಗೆ ದೇವರು ಏಕೆ ಗಂಡು ಜನ್ಮ ಕೊಟ್ಟ. ನಾನು ಮಾಡುವ ಕಾರ್ಯಕ್ಕೆ ನಿನ್ನದೇನು ಅಪಶಕುನ. ನಿನ್ನನ್ನು ಮುಂದೆ ಯಾವ ಕೆಲಸಕ್ಕೂ ಕರೆಯುವುದಿಲ್ಲ....ಸರಿತಾನೆ?"

"ಅಯ್ಯೋ....ಹಾಗೆನ್ನಬೇಡಿ ಸ್ವಾಮಿ ...ಹೇಳಿದೆ ಎಂದು ನನ್ನ ಮೇಲೆ ಸಿಟ್ಟಾಗಬೇಡಿ. ನೀವು ಹೇಳಿದರೆ ಯಾವ ಕೆಲಸವನ್ನೂ ನಾನು ಮಾಡುತ್ತೇನೆ. ನಿಮ್ಮ ಅನ್ನ ತಿಂದ ಜೀವವಿದು. ನಿಮಗೆ ಹೇಗೆ ಸರಿಕಾಣುತ್ತದೋ ಅದನ್ನೆ ಮಾಡಿ ಬುದ್ಧಿ...."

"ಅದಕ್ಕೆ ನಿನ್ನ ಬೆಂಬಲವಿದೆಯೆ?"

"ನೀವು ನನ್ನ ಗುರು ...ಅಲ್ಲ ಎನ್ನುವುದಕ್ಕೆ ನಾಲಗೆ ಎಲ್ಲಿದೆ?"

"ಈಗ ನೀನು ನೂರಕ್ಕೆ ನೂರು ಗಂಡು" ಎಂದು ಹೆಗಡೆ ಬೆನ್ನು ತಟ್ಟಿದ. ಹೆಂಡದ ರುಚಿಯನ್ನು ನೆನೆಸಿಕೊಂಡ ನೀನ ಹೆಗಡೆಯ ಮಾತನ್ನು ಒಪ್ಪಲೇಬೇಕಾಗಿತ್ತು.

೧೩

ಮಹಾಶಿವರಾತ್ರಿಯ ಉಪವಾಸ ವ್ರತಕ್ಕೆಂದು ಮುಡಿ ಕಟ್ಟಿ ಇಟ್ಟಿದ್ದ ಸುಗ್ಗಿ ಪೈರಿನ ಎರಡು ಕಳಸಿಗೆ ಬತ್ತವನ್ನು ಮುಂಚಿನ ದಿನವೇ ಚರಿಗೆಯಲ್ಲಿಟ್ಟು ಬೇಯಿಸಿ, ಅವಲಕ್ಕಿ ತಯಾರಿಸುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮುಂದಾಗಿ ಮಾಡಿದ್ದಳು ಹೆಗ್ಗಡತಿ. ಅವಲಕ್ಕಿ ಕುಟ್ಟುವ ಗಂಗನಲ್ಲಿ ಬೆಳಗ್ಗೆಯೇ ಹೇಳಿದ್ದಳು "ಏನೋ, ಇಂದಿನ ಅವಲಕ್ಕಿ ಹೆಂಡ ಕುಡಿಯುವವರಿಗೆ ಉಪ್ಪುಗರಿ ಮಾಡುವುದಕ್ಕಲ್ಲ....ಶಿವರಾತ್ರಿಯ ಉಪವಾಸಕ್ಕೆ. ಬೆಳಗ್ಗೆ ತಂಗಳ ತಿನ್ನಬೇಡ. ಈ ಒಂದು ದಿನವಾದರೂ ಬ್ಯಗೆ ಬಂಗುಡಿಯನ್ನು ಮುಟ್ಟಬೇಡ ಮಾರಾಯ. ಬೇಗ ಕೆರೆಯಲ್ಲಿ ಸ್ನಾನಮಾಡಿ ಒದ್ದೆ ಸೀರೆಯಿಂದಲೇ ಬಂದು ಬಿಡು. ಮತ್ತೆ ಒರಳು ಹತ್ತಿರ ಇರುವಾಗ ಎಲೆ, ಹೊಗೆಸೊಪ್ಪು ಒಂದನ್ನೂ ತಿನ್ನಬಾರದು. ಹೊತ್ತು ನೆತ್ತಿಗೆ ಬರುವುದಕ್ಕೆ ಸರಿಯಾಗಿ ನಾನು ಒಲೆಗೆ ಬೆಂಕಿ ಹಾಕುತ್ತೇನೆ" ಎಂದು. ಆದರೆ ಗಂಗ ಬರುವಾಗಲೇ ಸೂರ್ಯ ಪಡುವಣ ಬಾನಿನಲ್ಲಿ ಕೆಳಗಿಳಿದಿದ್ದ. "ಸ್ನಾನಕ್ಕೆ ಕೆರೆಗೆ ಹೋಗಿದ್ದೆ .. ತಡವಾಯ್ತು" ಎಂದು ಉತ್ತರ ಹೇಳಿದರೂ ಹೆಗ್ಗಡತಿ, "ಬೇಗ ಬಾ ಅಂದರೆ ನೀನೆಲ್ಲಿ ಸತ್ತಿದ್ದೆ ಹೇಳು... ಎರಡು ಕಳಸಿಗೆ ಬತ್ತ ಹಾಕಿದ್ದೇನೆ. ಇಷ್ಟು ತಡವಾಗಿ ಬಂದರೆ ಇದು ಮುಗಿಯುವುದು ಯಾವಾಗ ..." ಎಂದು ಗೊಣಗಿಕೊಂಡಳು.

ಹೊರಿಯೊಟ್ಟೆಯಲ್ಲಿ ಎರಡು ಮುಷ್ಟಿ ನೆನೆಹಾಕಿದ ಬತ್ತವನ್ನು ಚೆಲ್ಲಿ ... ಒಲೆಯ ಬೆಂಕಿ ಮುಂದೆಮಾಡಿ ಹುರಿಯುವುದಕ್ಕೆ ಆರಂಭಿಸಿದಳು ಹೆಗ್ಗಡತಿ. ಹತ್ತು ನಿಮಿಷ ಕಳೆದಿತ್ತು. ಇನ್ನೂ ಒರಳಿಗೆ ಹಾಕಿದ ಬತ್ತವನ್ನು ಗಂಗ

ಕುಟ್ಟಿರಲಿಲ್ಲ. ಎರಡನೆಯ ಬಾರಿ ಸೆನೆಬತ್ತವನ್ನು ಚರಿಗೆಯಿಂದ ಮುಷ್ಟಿಯಲ್ಲಿ ತೆಗೆಯುತ್ತಿದ್ದಂತೆ ಕೊಟ್ಟಿಗೆಯ ಬಾಗಿಲಿನಿಂದ ಗಿರಿಜ ಒಳಬರುತ್ತಿದ್ದುದನ್ನು ಕಂಡು ಹೆಗ್ಗಡತಿಗೆ ತುಂಬಾ ಆಶ್ಚರ್ಯವಾಯ್ತು. ಸರಿಯಾಗಿ ಕಣ್ಣುಬಿಟ್ಟು ನೋಡಿದಳು. ಗಿರಿಜ ಬಂದಿರುವುದು ನಿಜವಾಗಿತ್ತು. ಬತ್ತ ಹುರಿಯುವುದನ್ನು ಇಟ್ಟು ಆ ಕಡೆಯೇ ದಿಟ್ಟಿಸಿದಳು. ಗಿರಿಜ ಎಂದೂ ಬಂದವಳಲ್ಲ. ಬರುವ ಗತ್ಯವೇನೂ ಆಕೆಗಿಲ್ಲ. ಹೆಗ್ಗಡತಿಗೂ ಕರೆಯಿಸಿಕೊಳ್ಳುವ ಅವಕಾಶವೇ ರಲಿಲ್ಲ. ಒಮ್ಮೆಯೂ ಆಕೆ "ಏನು ಹೆಗ್ಗಡತಿಯವರೆ" ಎಂದು ಕೇಳಿದವ

ಒಂದೆರಡು ಬಾರಿ ಗುಡಿಯ ಕಲ್ಲುಮಂಟಪದಲ್ಲಿ ಆಕೆ ಹೂಸರ ಕಟ್ಟು ದ್ದಾಗ ಹೆಗ್ಗಡತಿ ಕಂಡಿದ್ದರೂ "ಏನಮ್ಮ.." ಎಂದು ಹೆಗ್ಗಡತಿಯೂ ವಿಚಾರಿಸಿದವಳಲ್ಲ. ರಂಗಪೂಜೆಯ ದಿನ....ಜಾತ್ರೆಯ ಸಮಯ ಮಾತ್ರ ಗಿರಿಜಳನ್ನು ಕಂಡಿದ್ದಳು ಹೆಗ್ಗಡತಿ. "ಇವಳು ರುದ್ರಹೆಗಡೆಯ ಹೆಂಡತಿ" ಎಂದು ಬೊಟ್ಟು ಮಾಡಿ ತೋರಿಸಿದ್ದರು ಸೋಮಯಾಜರು. ಪರಿಚಯ ಮಾತುಕತೆ ಇರಲೇ ಇಲ್ಲ. ಬಯಲುಮಕ್ಕಿಯ ಹೆಗಡೆಯ ಮನೆಯನ್ನು ಗಿರಿಜ ಕಂಡದ್ದು—ಕೊಡಿ ತಿಂಗಳಲ್ಲಿ ಹೆಗಡೆಯ ಅಗೆಗದ್ದೆಯಲ್ಲಿ ನಡೆದ ಬಯಲಾಟದ ದಿನ. ರುಕ್ಮಿಣಿಯ ಜೊತೆ ಅವಳು ಆಟ ನೋಡುವುದಕ್ಕೆ ಹೋಗಿದ್ದಳು. ಅದೂ ರಾತ್ರಿ ಹೊತ್ತು. ತಿಂಗಳ ಬೆಳಕಿನಲ್ಲಿ ಕಂಡದ್ದು. ಆಮೇಲೆ ಗಿರಿಜ ಆ ಮನೆಯತ್ತ ಮುಖ ಕೂಡಾ ಹಾಕಿರಲಿಲ್ಲ. ಹಾಗಾಗಿ ಗಿರಿಜ ಅನಿರೀಕ್ಷಿತವಾಗಿ ಬಂದದ್ದು ಹೆಗಡತಿಗೆ ಎಲ್ಲಿಲ್ಲದ ಕುತೂಹಲ. ಸೆರಗಿನಿಂದ ಎದೆ ಮುಚ್ಚಿಕೊಂಡು....ಕೊರಳಲಿದ್ದ ಚಕ್ರ ಸರ ಹೊರಕಾಣುವಂತೆ ಮೇಲೆಳೆದುಕೊಂಡಳು.

ಅವಲಕ್ಕಿ ಕುಟ್ಟುತ್ತಿದ್ದ ಗಂಗ ಒರಲು ಬಾಯಲ್ಲಿ ಒನಕೆಯಿಟ್ಟು—ಸೆರಗಿನಿಂದ ಮುಖದ ಬೆವರು ಒರಸಿಕೊಳ್ಳುತ್ತಾ "ಏನಮ್ಮ—ಸೋಮಯಾಜರ ಜನ ಇಲ್ಲಿಗೆ ಬಂದಿದ್ದಾರೆ. ಈ ಅಮ್ಮನನ್ನು ಎಲ್ಲಿಯೂ ಕಂಡದ್ದೇ ಇಲ್ಲವಲ್ಲ. ಬಯಲು ಮಕ್ಕಿಯ ದಾರಿಯ ಗುರುತು ಹೇಗೆ ಸಿಕ್ಕಿತು ಹೇಳಿ. ಇನ್ನೊಬ್ಬರ ಮನೆಯಲ್ಲಿ ಅವರನ್ನು ನಾನು ಕಂಡದ್ದು ಇದೇ ಮೊದಲು" ಎಂದಳು. "ಹೌದು ....ನಮ್ಮ ಮನೆಗೂ ಬಂದವರಲ್ಲ. ಅದೇ ನನಗೂ ಆಶ್ಚರ್ಯ ಗಂಗಾ. ಎಂದೂ ಬಾರದವರು ಈ ಸುಡು ಬಿಸಿಲಿನಲ್ಲಿ ಇಂದೇಕೆ ಬಂದರು?" ಎಂದಳು ಹೆಗ್ಗಡತಿ. ಕೊಟ್ಟಿಗೆಯ ಬಾಗಿಲಿನಿಂದ ಒಳ ಬಂದ ಗಿರಿಜ ಚಾವಡಿಯ ಅಡಿಕೆ

ತಟ್ಟಿಯ ಬಳಿ ನಿಂತೇ ಸುತ್ತಲೂ ದೃಷ್ಟಿ ಹೊರಳಿಸಿದಳು. ಅವಳ ಕಣ್ಣು ಹೆಗಡೆಯನ್ನು ಹುಡುಕುತ್ತಿತ್ತೋ ಏನೋ—ಹೆಬ್ಬಾಗಿಲ ಸಡಿಯಲ್ಲಿ ಯಾರೂ ಕಾಣಿಸಲಿಲ್ಲ. ಕೋಳಿಯ ಹಿಂಡು ಅಂಗಣದ ನೆಲ್ಲು ಹೆಕ್ಕುವುದನ್ನು ಮಾತ್ರ ಕಂಡಳು. ಹೆಗ್ಗಡತಿಗೆ ದೀರ್ಘಕಾಲ ಸುಮ್ಮನಿರುವುದಾಗಲಿಲ್ಲ. ಒಲೆಯ ಮುಂದೆ ಕುಳಿತೇ "ಬನ್ನಿ ಅಮ್ಮ ಹೊರಿಯೊಟ್ಟಿಗೆ ಬತ್ತ ಹಾಕಿದ್ದೇನೆ. ಚಾವಡಿಗೇ ಬಂದುಬಿಡಿ. ಮನೆಯಲ್ಲಿ ಯಾರೂ ಗಂಡಸರಿಲ್ಲ" ಎಂದಳು ಹೆಗ್ಗಡತಿ ಗಟ್ಟಿಯಾಗಿ. ನೆಮ್ಮದಿಯ ಉಸಿರೆಳೆದಳು ಗಿರಿಜ. ಹೆಗಡೆ ಮನೆಯಲ್ಲಿ ಇಲ್ಲದಿರುವುದು ಕಾಲಿನ ಚುರುಕು ಹೆಚ್ಚಿಸಿತ್ತು. ಸರಸರ ನಡೆದು ಬಂದಳು. ಆಕೆಯ ಲಕ್ಷಣವಾದ ರೂಪ ಕಂಡು ಹೆಗ್ಗಡತಿಗೆ ಮನಸ್ಸು ತುಂಬಿ ಬಂತು. ತಾನು ಕುಳಿತಿದ್ದ ಮರದ ಮಣೆಯನ್ನು ಪಕ್ಕಕ್ಕೆ ಸರಿಸಿ "ಕುಳಿತುಕೊಳ್ಳಿ ಅಮ್ಮ .. ತೊಳೆದ ಮಣೆ. ಸಣ್ಣ ಮನೆ ಎಂದು ಏನೂ ಸಂಕೋಚ ಬೇಡ. ಬೆಳಗ್ಗೆ ನಾನೇ ಈ ಚಾವಡಿಯನ್ನು ಸಾರಿಸಿ ಒರೆಸಿದ್ದೇನೆ. ಶಿವರಾತ್ರಿ ಬಂತು ನೋಡಿ. ಒಂದಿಷ್ಟು ಅವಲಕ್ಕಿ ಬೇಕಾಗಿತ್ತು. ಸ್ನಾನ ಮಾಡಿ ಮಡಿ ಸೀರೆ ಉಟ್ಟುಕೊಂಡು ನಾನೇ ಕುಳಿತೆ, ಹುರಿಯುವುದಕ್ಕೆ...." ಎಂದಳು ಹೆಗ್ಗಡತಿ. ಎರಡು ಮಾರು ದೂರದಲ್ಲಿ ಕುಳಿತಳು ಗಿರಿಜ. ಗಿರಿಜಳಿಗೆ ಯಾವ ಮಾತೂ ಬೇಕಿರಲಿಲ್ಲ. ಹೆಗ್ಗಡತಿಯ ಉಪಚಾರದ ವೈಭವದ ಬಗ್ಗೆ ಅವಳ ಗಮನವೂ ಇದ್ದಿರಲಿಲ್ಲ. [illegible] ಹೆಗಡೆಯ ಬಗ್ಗೆ ಅವನ ಹೆಂಡತಿಯಲ್ಲಿ ಹೇಳುವುದಕ್ಕೆ ಆಕೆ ಬಂದಿದ್ದಳು.

"ಏನಮ್ಮ .. ತಾವು ಮೊಗೆಬೆಟ್ಟಿಗೆ ಬಂದು ಎರಡು ವರ್ಷವಾಯಿತು. ಒಮ್ಮೆ ಈ ಮನೆಗೆ ಬರುವ ಮನಸ್ಸು ನಿಮಗಾಗಿಲ್ಲ. ಹೋಗಲಿ .. ನನಗಾದರೂ ನಿಮ್ಮ ಮನೆ ತನಕ ಬರುವ ಮನಸ್ಸು ಬಂತೆ ? ಮನೆ ಬಿಟ್ಟು ಎಲ್ಲಿಗೂ ಹೋಗುವುದಕ್ಕಾಗುವುದಿಲ್ಲ ನೋಡಿ. ನಾಲ್ಕು ಹೆಜ್ಜೆ ನಡೆದರೆ ಸಾಕು .. ಕಾಲು ಗಂಟು ಹಿಡಿದುಕೊಳ್ಳುತ್ತದೆ" ಎಂದಳು ಹೆಗ್ಗಡತಿ. ಗಿರಿಜಳಿಗೆ ಆ ಮಾತು ಕೇಳಿಸಿತೋ ಇಲ್ಲವೋ "ಹೂಂ....ಅಂ" ಎನ್ನುತ್ತಿದ್ದಳೇ ವಿನಹ ಹೆಗ್ಗಡತಿಯನ್ನು ಕಂಡಾಗ ಮಾತನಾಡುವ ಹುಮ್ಮಸವೇ ಇಲ್ಲವಾಗಿತ್ತು. ಆ ಮನೆಯಲ್ಲಿ ಹೆಚ್ಚುಕಾಲ ಇರುವ ಮನಸ್ಸು ಅವಳಿಗಿರಲಿಲ್ಲ.

"ಏ ಗಂಗಾ ... ತೋಟದಲ್ಲಿ ಸಿಂಗ ಇದ್ದರೆ ಕೆಂದಾಳಿ ಮರದಿಂದ ಎರಡು ಸೀಯಾಳ ತೆಗೆಯುವಂತೆ ಹೇಳು" ಎಂದಳು ಸುಮ್ಮನೆ ನಿಂತಿದ್ದ ಗಂಗನಲ್ಲಿ.

ಒನಕೆಯನ್ನು ಗೋಡೆಗೆ ಆನಿಸಿ ಗಂಗ ಚಾವಡಿಯ ಮೆಟ್ಟಲು ಇಳಿದಳು.

"ಬೇಡ....ಸುಮ್ಮನೆ ತೊಂದರೆ ತೆಗೆದುಕೊಳ್ಳಬೇಡಿ. ಎಳೆನೀರು ನನ್ನ ದೇಹಕ್ಕೆ ಆಗುವುದೇ ಇಲ್ಲ" ಎಂದಳು ಗಿರಿಜ.

"ಛೆ....ಬಂದವರಿಗೆ ಬಾಯಾರಿಕೆ ಕೊಡುವುದು ಬೇಡವೆ? ನಾನೇನು ಕೊಡಲಿ ಹೇಳಿ? ಸೆಟ್ಟರ ಮನೆ ನೀರು ನಿಮಗಾಗುವುದಿಲ್ಲ. ಹಾಗಿರುವಾಗ.... ತೋಟದಲ್ಲಿ ತೆಂಗಿನ ಮರವಿದೆ. ಮರ ಹತ್ತಿ ಬೊಂಡ ಇಳಿಸುವುದಕ್ಕೆ ಜನವಿದೆ. ಹಾಡಿಯ ಮರದಿಂದ ಕೋತಿಗಳ ಹಿಂಡು ಬಂದರೆ ಗೊನೆಗೊನೆ ಸೀಯಾಳ ಹಾಳಾಗುತ್ತದೆ. ಅದನ್ನೆಲ್ಲಾ ನೋಡಿದರೆ ನಿಮ್ಮ ಹೊಟ್ಟೆ ತಣ್ಣಗೆ ಮಾಡಿದರೆ ಪುಣ್ಯವಾದರೂ ಬರುತ್ತದೆ ..."

ಮತ್ತೆ ಗಿರಿಜ ಬೇಡ ಎನ್ನುವ ಶ್ರಮಕ್ಕೆ ಹೋಗಲಿಲ್ಲ.

"ಹೌದು....ಇಷ್ಟು ದಿನದಮೇಲಾದರೂ ನಮ್ಮ ಮನೆಗೆ ಬರುವ ಮನಸ್ಸು ಬಂತಲ್ಲ...ಅದೇ ಸಂತೋಷ. ಬರುವ ತಿಂಗಳು ಅಗೆಗದ್ದೆಯಲ್ಲಿ ಮಂದರ್ತಿ ಮೇಳದ ಆಟ ಇದೆ ಅಮ್ಮ. ಹೇಳಿಕಳುಹಿಸುತ್ತೇನೆ...ಖಂಡಿತಾ ಬನ್ನಿ. ಹೆಬ್ಬಾಗಿಲ ಮೂಡಿಗೆ ಬೆಂಚು ಹಾಕಿಸಿಬಿಡುತ್ತೇನೆ" ಎಂದಳು ಹೆಗ್ಗಡತಿ.

"ಆಗಲಿ....ನೀವು ಪ್ರೀತಿಯಿಂದ ಕರೆಯುವುದು ಹೆಚ್ಚು. ನಾನು ಬರುವುದು ಹೆಚ್ಚಲ್ಲ"

"ಸೋಮಯಾಜರು ಆರೋಗ್ಯವೆ?"

"ಹೂಂ...."

"ನಿಮ್ಮ ತವರುಮನೆ ಶುಂಠಿಕೊಪ್ಪ ಅಂತಲ್ಲ...ಅಲ್ಲಿ ಯಾರಿದ್ದಾರೆ?"

"ನನ್ನ ತಾಯಿ ಇದ್ದಾಳೆ....ನನ್ನ ದೊಡ್ಡಮ್ಮ ಒಬ್ಬರು ಕಾಳೂರಿನಲ್ಲಿದ್ದಾರೆ"

"ಇನ್ನೂ ನಿಮಗೆ ಮಕ್ಕಳಿಲ್ಲ....ಬಿಡಿ...ಮುಂದೆ ಆಗುತ್ತವೆ ಅಮ್ಮ. ನಮ್ಮ ಸೋಣೆ ಆರತಿಯ ದಿನ ನಿಮ್ಮನ್ನು ಗುಡಿಯಲ್ಲಿ ನೋಡಿದೆ. ಆಮೇಲೆ ನನಗೆ ಗೊತ್ತಾಯ್ತು...ನೀವು ಸೋಮಯಾಜರ ಕಡೆಯವರು ಎಂದು. ಆಗಲಿ ತಾಯಿ....ಇಬ್ಬರ ಮನಸ್ಸು ಒಂದೇ ಆಗಿದ್ದು ನಾಲ್ಕು ಕಾಲ ಸುಖವಾಗಿ ಬಾಳಿದರೆ ಸಾಕು"

"ಅದೇ ಸಂದೇಹ ಆಗಿದೆ ನನಗೆ"

"ಯಾವುದು ಹೇಳಿ...."

"ಈ ಊರಲ್ಲಿ ಸುಖವಾಗಿ ಬಾಳುವುದಕ್ಕೆ ಸಾಧ್ಯವೆ ಎಂದು ?"

"ಏಕೆ ಅಷ್ಟು ಅನುಮಾನ"

"ಅಲ್ಲ....ನಾನು ಹೆಣ್ಣಾಗಿ ದೇವರಿಗೆ ಚಾಮರ ಬೀಸಿಕೊಂಡು ಒಬ್ಬರ ಆಶ್ರಯದಲ್ಲಿ ಇರುವುದಕ್ಕೆ ಈ ಊರಿನ ಜನ ಬಿಡುತ್ತಾರೆಯೆ ?"

"ಎಂತಹ ಮಾತು ತಾಯಿ ? ನಿಮ್ಮ ಮೇಲೆ ಯಾರಿಗಿದೆ ಮತ್ಸರ ?"

"ಅದನ್ನೇ ಹೇಳುವುದಕ್ಕೆ ಬಂದೆ ನೋಡಿ ..."

"ಯಾರಲ್ಲಿ...."

"ನಿಮ್ಮಲ್ಲಿ... ನಿನ್ನೆ ಬರಬೇಕೆಂದಿದ್ದೆ. ಮನೆಯಿಂದ ಹೊರಟು ತೋಟದ ಸುತ್ತಿಗೆ ಬಂದಾಗ ಏಕೋ ಹೊಟ್ಟೆ ತೊಳಸಿತು. ಹಾಗೆ ಮನೆಗೆ ಹೋದೆ. ಹೌದು ...ಆ ಹೆಂಗಸು ಎಷ್ಟು ಹೊತ್ತಿಗೆ ಬರುತ್ತಾಳೆ" ಎಂದು ಗಿರಿಜ ಏಕೋ ಆ ಕಡೆ ಈಕಡೆ ನೋಡಿದಳು.

"ಏಕೆ....ಅವಳಿಂದ ಏನಾಗಬೇಕಿತ್ತು ?"

"ಏನೂ ಆಗಬೇಕಾಗಿಲ್ಲ. ಅವಳಿದ್ದರೆ ನಾನು ಬಂದ ಕೆಲಸವೇ ಆಗುವುದಿಲ್ಲ"

"ಹಾಗೇನು .. ಹೇಳಿ ತಾಯಿ. ಅವಳು ಬರುವುದು ಇನ್ನೂ ತಡವಾಗುತ್ತದೆ. ಕೆಂಪಾಳಿ ಮನೆಯಿರುವುದು ತೋಟದ ಬದಿಯಲ್ಲಿ. ಆ ಸಿಂಗ ಎಲ್ಲಿ ಸತ್ತಿದ್ದಾನೋ....ಬಂದರೂ ಚಿಂತೆಯಿಲ್ಲ ಅಮ್ಮ. ಹೇಳಿದರೆ ದೂರ ಹೋಗುತ್ತಾಳೆ ಗಂಗ" ಎಂದಳು ಹೆಗ್ಗಡತಿ. ಗಿರಿಜ ಬಂದ ಕಾರಣ ತಿಳಿಯುವ ಉತ್ಸಾಹ ಅಧಿಕವಾಗಿತ್ತು: ಹೆಗ್ಗಡತಿಗೆ ಒಂದೂ ಅರ್ಥವಾಗಲಿಲ್ಲ. ಮತ್ತೆ ಗಿರಿಜ ತಡಮಾಡಲಿಲ್ಲ.

"ಹೆಗಡೆಯವರು ಎಲ್ಲಿ ?"

"ಕೋಳಿಪಡೆ ಎಂದು ಕೆಮೂರಿಗೆ ಹೋಗಿದ್ದಾರೆ ..."

"ಯಾವಾಗ ಬರುತ್ತಾರೆ ?"

"ಅಯ್ಯೋ ....ಅವರು ಬರುವುದೇ ಹೊತ್ತು ನಾಲ್ಕು ಜಾವ ಕಳೆದಮೇಲೆ. ಬಿಸಿ ಅನ್ನ ಉಣ್ಣುವ ಯೋಗವೇ ಅವರಿಗಿಲ್ಲ ತಾಯಿ"

"ಹಾಗಿದ್ದರೆ ಸರಿ.... ನಿಮ್ಮ ಗಂಡನ ಬಗ್ಗೆ ಹೇಳುವುದಕ್ಕೆ ಬಂದೆ ನೋಡಿ. ಅವರ ಬಗ್ಗೆ ಯಾರ ಹತ್ತಿರ ಹೇಳುವುದು ಹೇಳಿ. ದೇವರಿಗೆ ಅಡ್ಡಬಿದ್ದೆ. ಪ್ರಯೋಜನವಾಗಲಿಲ್ಲ. ಸೋಮಯಾಜರು "ಹೆಗಡೆಯ ಸಹವಾಸವೇ ಅಪಾಯ" ಎನ್ನುತ್ತಾರೆ. ಇನ್ನು ಯಾರ ಕಾಲು ಹಿಡಿಯುವುದು. ಕೊನೆಗೆ ನಿಮ್ಮ ಬಳಿ ಬಂದಿದ್ದೇನೆ. ನನ್ನ ಮಾನ ಉಳಿಸಿಕೊಳ್ಳುವುದಕ್ಕೆ ನಿಮ್ಮನ್ನು ನೋಡಲು ಬಂದೆ ಹೆಗ್ಗಡತಿಯವರೆ ?"

ತಬ್ಬಿಬ್ಬಾದಳು ಹೆಗ್ಗಡತಿ. ವಿಷಯ ತನ್ನ ಗಂಡನ ಬಗ್ಗೆ ಬಂದಾಗ ಆಕೆಗೆ ಕಳಕಳಿಯಾಯ್ತು. ಗಿರಿಜಮ್ಮನಿಗೂ ಅವರಿಗೂ ಯಾವ ವ್ಯವಹಾರ ವಿದೆ? ಎಲ್ಲಿಯಾದರೂ .. ? ಅದು ಹೊಸ ವಿಚಾರವೇನೂ ಅಲ್ಲ. ಹೆಂಡತಿಯ ಮುಂದೆಯೇ ಸೆರೆಗಾರನ ಮಗಳನ್ನು ಮನೆಗೆ ಕರೆದುಕೊಂಡು ಬಂದಿದ್ದ ಹೆಗಡೆ. ದರೆಬೈಲಿಗೆ ಹೋದಾಗ ಪೂಜಾರಿಯ ಸೊಸೆಯನ್ನು ಕೆಣಕಿ ಗಲಾಟೆಮಾಡಿ ಬಂದ ಸುದ್ದಿ ಅವಳ ಕಿವಿಗೂ ಬಿದ್ದಿತ್ತು. ಹಾಗೆ ಏನಾದರೂ ನಡೆದಿದ್ದರೆ ...?

"ಹೇಳಿ ತಾಯಿ.... ಅವರಿಂದ ನಿಮಗೇನಾದರೂ ತೊಂದರೆ ಆಗಿದ್ದರೆ ಹೇಳಿ"

"ಹೇಳುತ್ತೇನೆ ನೋಡಿ, ಅವರ ರೀತಿನೀತಿ ದೇವರು ಮೆಚ್ಚುವ ಕೆಲಸವೇ ಅಲ್ಲ. ಒಂದು ಪ್ರಾಣಿಗಾದರೂ ನ್ಯಾಯ ನಿಯತ್ತಿನ ಬಗ್ಗೆ ಹೇಳಿದರೆ ಅರ್ಥ ವಾಗುತ್ತದೆ... ಆದರೆ ನಿಮ್ಮವರಿಗೆ..." ಎನ್ನುತ್ತಾ ಗಿರಿಜ ಅಳುವುದಕ್ಕೆ ಆರಂಭಿ ಸಿದಳು. ಹೆಗ್ಗಡತಿಗೆ ತಿಳಿದು ಹೋಯ್ತು. ಏನೋ ನಡೆದಿದೆ. ತನ್ನ ಗಂಡ ಗಿರಿಜಮ್ಮನನ್ನು ಬಯಸಿರಬೇಕು. ದಿನಾ ಬೆಳಗಾದರೆ ಅವರಿವರು ಬಂದು, "ನಿಮ್ಮ ಯಜಮಾನರು ಹೀಗೆ ಮಾಡಿದರು" ಎಂದು ಕಣ್ಣೀರು ಇಡುವುದನ್ನು ನೋಡಿ ನೋಡಿ ಬೇಸತ್ತಿದ್ದಳು ಹೆಗ್ಗಡತಿ. ಗಿರಿಜಮ್ಮನ ಕಂಬನಿ ಕಂಡಾಗ ಆಕೆಗೂ ದುಃಖವಾಯ್ತು.

"ಏನಮ್ಮ .... ಅವರೇನು ಮಾಡಿದರು?" ಎಂದಳು ಹೆಗ್ಗಡತಿ.

"ನಿಮ್ಮನ್ನು ನಂಬಿದ್ದೇನೆ ಹೆಗ್ಗಡತಿಯವರೆ? ನನ್ನಂತೆ ನಿಮ್ಮದೂ ಹೆಣ್ಣು ಹೃದಯ. ನಿಮ್ಮ ಕೊರಳಲ್ಲಿಯೂ ಕರಿಮಣಿ ಇದ್ದು ಅದರ ಮಹತ್ವ ನಿಮಗೆ ನಾನು ಹೇಳಬೇಕಾಗಿಲ್ಲ. ನನ್ನ ಕುತ್ತಿಗೆಯ ಮಾಂಗಲ್ಯ ಮುಟ್ಟಿ ಹೇಳುತ್ತೇನೆ ... ನಾನು ದೇವರ ಹೆಂಡತಿಯಾದರೂ ಸೋಮಯಾಜರೇ ನನ್ನ ಗಂಡ. ದೇವಾಲಯದಲ್ಲಿ ಹೂಮಾಲೆ ಕಟ್ಟಿದರೂ ನಾನು ನಿಯತ್ತು ಬಿಟ್ಟವ

ಕಿಲ್ಲ. ಇನ್ನೊಬ್ಬರನ್ನು ಕರೆಯುವುದಿರಲಿ...ಮುಖ ಕೂಡಾ ನಾನು ನೋಡುವುದಿಲ್ಲ. ಹಾಗಿರುವಾಗ ನಿಮ್ಮ ಯಜಮಾನರು ..." ಎಂದು ಕಂಬನಿಸುರಿಸುತ್ತಾ ಎಲ್ಲವನ್ನೂ ಹೇಳಿದಳು ಗಿರಿಜ. ಕೇಳುತ್ತಿದ್ದಂತೆ ಹೆಗ್ಗಡತಿಯ ಕಣ್ಣು ಒದ್ದೆಯಾಯ್ತು. ಗಿರಿಜಳ ಮಾತು ಅವಳ ಎದೆ ನಾಟಿತ್ತು. ಹೃದಯದಲ್ಲಿ ಹುದುಗಿದ್ದ ಅನುಕಂಪದ ಕಟ್ಟೆ ಒಡೆದಾಗ ಹೆಗ್ಗಡತಿ,

"ಅಯ್ಯೋ ದೇವರೇ.... ಅವರ ಗಂಡುಜನ್ಮಕ್ಕೆ ಬೆಂಕಿಹಾಕು. ಯಾವಾಗ ಅವರಿಗೆ ಬುದ್ಧಿ ಬರುತ್ತದೋ .. ಯಾವ ಜನ್ಮಕ್ಕೆ ಅವರಿಗೆ ದೇವರು, ಗುರು ಹಿರಿಯರಲ್ಲಿ ಭಕ್ತಿ ಬರುತ್ತದೋ " ಎಂದು ಗೋಗರೆದಳು.

"ಯಾವಾಗಮ್ಮ ಇದು ನಡೆದದ್ದು ...?"

"ಮೊನ್ನೆ ರಾತ್ರಿ"

"ಎಷ್ಟು ಹೊತ್ತಿಗೆ.!..?"

"ಹೊತ್ತು ತಿಳಿಯದು. ಸೋಮಯಾಜರು ಹೋಗಿ ಅರ್ಧ ಗಂಟೆಯಾಗಿತ್ತು."

"ಆ ದಿನ ಬಂದು ಹೋದವರು ಯಾವಾಗ ಬಂದರೋ.... ಮತ್ತೆ ನನಗೆ ನಿದ್ದೆ ಬಂದಿತ್ತು. ನನಗೆ ಹೇಗೆ ಗೊತ್ತಾಗಬೇಕು ಹೇಳಿ. ಕೇಳಿದರೆ ನೂರಾರು ವ್ಯವಹಾರ ಹೇಳುತ್ತಾರೆ. ರಾತ್ರಿ ಹೊತ್ತು ನಾನು ಹೆಚ್ಚಿಗೆ ಯಾವ ಮಾತನ್ನೂ ಆಡುವುದಿಲ್ಲ. ಮನುಷ್ಯ ಚೆನ್ನಾಗಿರುವುದಿಲ್ಲ. ದಿನಾ ಕುಡಿಯುತ್ತಾರೆ. ಹಾಳಾದ್ದು, ಮುಚ್ಚಿ ನನ್ನ ಹಣೆಬರಹ. ನಿಜವಾಗಿಯೂ ಇದನ್ನೆಲ್ಲಾ ಕೇಳಿದ ಮೇಲೆ ಇವನ್ನು ಇಷ್ಟಕ್ಕೆ ಬಿಡುವುದಿಲ್ಲ. ಮೊನ್ನೆ ರಾತ್ರಿ ಅವರೇ ಬಂದು ಬಾಗಿಲು ತಟ್ಟಿದರೆ?"

"ಹೂಂ... ನಾನು ತೆರೆಯುವುದಿಲ್ಲ ಎಂದೆ. ಒಮ್ಮೆ ಆರ್ಭಟಿಸಿದರು. ಜೀವ ತೆಗೆಯುವುದಾಗಿ ಹೆದರಿಸಿದರು. ಆದರೂ ನಾನು ಜಗ್ಗಲಿಲ್ಲ. ಬಾಗಿಲನ್ನು ಗಟ್ಟಿಯಾಗಿ ಒದ್ದು ಮುರಿಯುವ ಯತ್ನ ಮಾಡಿದಾಗ ಹಿಂದಿನ ಬಾಗಿಲನ್ನು ತೆರೆದು ಕತ್ತಲೆಯಲ್ಲಿ ದರೆಹತ್ತಿ . ಮುಳ್ಳಿನ ಬೇಲಿಯನ್ನು ಹಾರಿ ಸೋಮಯಾಜರ ಮನೆಗೆ ಹೋದೆ."

"ಅಬ್ಬಾ ....ಅಷ್ಟು ಕೆಲಸಮಾಡಿದರೆ?" ಎಂದು ಉದ್ವೇಗದಿಂದ ಕೇಳಿದಳು ಹೆಗ್ಗಡತಿ.

"ನೀವೇ ಯೋಚಿಸಿ ತಾಯಿ... ನಿಮಗೆ ಶರಣು ಬಂದಿದ್ದೇನೆ. ಸೆರಗನ್ನು ಮುಂದೆ ಚಾಚಿ ಬೇಡಿಕೊಳ್ಳುತ್ತೇನೆ. ಅವರನ್ನು ಈ ಊರನಲ್ಲಿ ಕೇಳುವವರು ಯಾರೂ ಇಲ್ಲ. ಅದಕ್ಕೆ ನಿಮ್ಮಲ್ಲಿಗೆ ಬಂದೆ. ನೀವೂ ಸುಮ್ಮನಾದರೆ ಈ ಜೀವ ಕೆರೆಯ ತಳ ಕಾಣುತ್ತದೆ..." ಎಂದು ಮತ್ತೆ ಅತ್ತಳು ಗಿರಿಜ.

"ಸಾಯುವುದಕ್ಕೆ ಏನಾಗಿದೆ ಅಮ್ಮ ನಿಮಗೆ....?"

"ಮತ್ತೆ ಕೇಳುವವರು ಯಾರು? ಅವರದ್ದೇ ನಡೆಯುವುದಾದರೆ, ಹೇಗೆ ನಾನು ಬದುಕುವುದು?"

"ಛೆ!....ನೀವು ವಿಚಾರ ತಿಳಿಸಿದ ಮೇಲೆ ಮುಗಿಯಿತು ತಾಯಿ. ಇನ್ನು ನಿಮಗೆ ಯಾವ ಚಿಂತೆಯೂ ಬೇಡ. ಅವರು ಯಾರೇ ಇರಲಿ....ಎಷ್ಟಾದರೂ ನನ್ನ ಗಂಡ. ಅವರು ಮಾಡಿದ್ದೇ ನ್ಯಾಯ ಎನ್ನುವವಳು ನಾನಲ್ಲ. ಆದಷ್ಟು ಹಿಡಿತದಲ್ಲಿಟ್ಟೇ ಬಾಳಿದವಳು ನಾನು. ಹೊರಗಡೆ ಏನಾಗುತ್ತದೆ ಎಂದು ನನಗಾದರೂ ಹೇಗೆ ತಿಳಿಯಬೇಕು? ನನ್ನ ಕಿವಿಗೆ ಬಿದ್ದರೆ ಮತ್ತೆ ಸುಮ್ಮನಿರುವುದಿಲ್ಲ. ಅಧರ್ಮ ಎಣಿಸಿದರೆ ಎಷ್ಟು ದಿನ ನಡೆಯುತ್ತದೆ? ನಾಳೆ ದೇವರೇ ಶಿಕ್ಷೆ ಕೊಡುತ್ತಾನೆ. ನನ್ನ ತವರಿನಲ್ಲಿ ಅಂಕಯ್ಯ ಸೆಟ್ಟರು ಅಂತ ಒಬ್ಬರಿದ್ದಾರೆ. ಯಾರಿಗೋ ಮಂತ್ರ ಮಾಟ ಮಾಡಿಸಿದರು ನೋಡಿ...ಹಾಸಿಗೆಯಲ್ಲಿ ಮಲಗಿ ಆರುವರ್ಷವಾಯ್ತು. ಸಾಲದೇನು? ಬೆನ್ನು ತುಂಬಾ ಹುಣ್ಣಾಗಿದೆ ತಾಯಿ. ಮಾಡಿದ ಪಾಪ ಎಲ್ಲಿಗೆ ಹೋಗುತ್ತದೆ? ಒಂದಿಷ್ಟು ಕಾಲ ನಡೆಯುತ್ತದೆ. ನೀವು ಕೇಳಿರಬಹುದು. ಚಾರ್ಮಕ್ಕಿಯ ಮುತ್ತಯ್ಯ ಕಂಡವರ ಆಸ್ತಿ ಮನೆಯನ್ನು ದಿವಾಳಿ ತೆಗೆದ ಎನ್ನುತ್ತಾರೆ. ಈಗ ಎರಡೂ ಕಣ್ಣು ಕಳೆದುಕೊಂಡು ಬೀಡಿ ಕುಡಿಯುವುದಕ್ಕೆ ಚಿಕ್ಕಾಸು ಇಲ್ಲದೆ ಒದ್ದಾಡುತ್ತಿದ್ದಾನೆ. ಇದನ್ನೆಲ್ಲಾ ನಮ್ಮವರು ಇನ್ನೂ ಎಣಿಸಿಲ್ಲ ತಾಯಿ. ಖಂಡಿತಾ ಇದನ್ನು ವಿಚಾರಿಸುತ್ತೇನೆ.... ಮುಂದೆ ನಿಮ್ಮ ತಂಟೆಗೆ ಬಾರದಂತೆ ನೋಡಿಕೊಳ್ಳುವ ಹೊಣೆ ನನ್ನದು. ಮಾಂಗಲ್ಯ ಮುಟ್ಟಿ ಹೇಳುತ್ತೇನೆ "

"ಅಷ್ಟು ಮಾಡಿ....ನಿಮ್ಮ ಪುಣ್ಯ. ನಿಮ್ಮ ಹೃದಯ ಇಷ್ಟು ಮೆತ್ತಗೆ ಎಂದು ನನಗೆ ತಿಳಿದೇ ಇರಲಿಲ್ಲ. ಎರಡು ವರ್ಷವಾದರೂ ಒಮ್ಮೆಯೂ ನಿಮ್ಮನ್ನು ಕಂಡು ಮಾತನಾಡಿಸದೇ ಇದ್ದದ್ದು ದೊಡ್ಡ ಅಪರಾಧ ನನ್ನದು. ದೇವರು. ಒಬ್ಬರನ್ನಾದರೂ ಈ ಊರಲ್ಲಿ ಇನ್ನೊಬ್ಬರ ಮನಸ್ಸನ್ನು ಅರ್ಥಮಾಡಿ

ಕೊಳ್ಳುವಂತೆ ... ಸದ್ಗುಣ ಮಾರ್ಗದಲ್ಲಿ ನಡೆಯುವಂತೆ ಮಾಡಿದನಲ್ಲ .. ಅದೇ ನನಗೆ ಸಂತೋಷ. ನೀವಾದರೂ ನೀತಿ ನಿಯತ್ತನ್ನು ಪಾಲಿಸುವುದರಿಂದಲೇ ಬೆಳಿಗ್ಗೆ ಸೂರ್ಯ ಮೂಡುತ್ತಾನೆ. ಮತ್ತೆ ಕಂತುತ್ತಾನೆ" ಎಂದು ಗಿರಿಜ ತುಂಬಾ ಮೆಚ್ಚುಗೆಯ ಮಾತಿನಿಂದ ಹೆಗ್ಗಡತಿಯನ್ನು ಹೊಗಳಿದಳು.

"ಬಿಡಿ ಅಮ್ಮ ...ಇದರಲ್ಲಿ ನನ್ನದೇನಿದೆ? ಯಾರಾದರೂ ನನ್ನನ್ನು ಬಂದು ಕೆಣಕಿದರೆ.... ಅವರಿಗೆ ಹೇಗಾಗಬೇಕು? ಹಾಗೆ ಅಲ್ಲದೆ ಇನ್ನೆಷ್ಟರ ಬದುಕು? ಅದನ್ನು ಅರ್ಥಮಾಡಿಕೊಂಡಿದ್ದರೆ ಈ ಅನರ್ಥವೇ ಇರುತ್ತಿರಲಿಲ್ಲ."

"ಮನಸ್ಸಿಗೆ ಬೇಸರವಾಯ್ತು" ಎಂದಳು ಗಿರಿಜ.

"ಯಾರಿಗೆ...?

"ನಿಮಗೆ...."

"ನನಗೇಕೆ ಬೇಸರವಾಗುತ್ತದೆ"

"ಹೀಗೆ ಹೇಳಿದೆನೆಂದು...."

"ನನ್ನದು ಬಿಡಿ ತಾಯಿ. ನಿಮಗಾದ ಬೇಸರಕ್ಕಿಂತ ನನ್ನದೇನೂ ಹೆಚ್ಚಲ್ಲ. ನನ್ನ ಗಂಡನ ಬಗ್ಗೆ ಸಂತೋಷ ಪಡುವ ವಿಚಾರ ನೀವು ಕೇಳಲಿಲ್ಲ. ಹಾಗೆಂದು ಅದನ್ನು ನೀವು ಹೇಳದಿದ್ದರೆ ನನಗಾದರೂ ಹೇಗೆ ತಿಳಿಯುತ್ತಿತ್ತು. ಬೇಸರಪಟ್ಟುಕೊಳ್ಳುವಂತಹ ಸುದ್ದಿಯೇ ಕಿವಿಗೆ ಬಿತ್ತು ..."

"ಹಾಗಿದ್ದರೆ ನಾನು... ಬರುತ್ತೇನೆ"

"ಎಲ್ಲಿ ಆ ಗಂಗ ಬರಲೇ ಇಲ್ಲವಲ್ಲ" ಎಂದು ಗೊಣಗಿದಳು ಹೆಗ್ಗಡತಿ.

"ಅಯ್ಯೋ ಎಳನೀರು ಕುಡಿದ ತೃಪ್ತಿಗಿಂತ ಹೆಚ್ಚಾಯ್ತು ನಿಮ್ಮ ಮಾತು"

"ಇರಿ... ಈಗ ಬರುತ್ತಾಳೆ. ಅವಳ ಕ್ರಮವೇ ಹಾಗೆ. ಒಂದು ಕೆಲಸ ಹೇಳಿದರೆ ಎಲೆ ಅಡಿಕೆ ತಿಂದೇ ಬರುವುದು ..." ಎನ್ನುತ್ತಾ ಗಟ್ಟಿಯಾಗಿ ಕೂಗಿದಳು. ಆದರೆ ಗಂಗಳ ಸುಳಿವೇ ಇಲ್ಲ.

"ಇನ್ನೊಮ್ಮೆ ಬರುತ್ತೇನೆ... ಇಂದು ದೇವಾಲಯದಲ್ಲಿ ಸಂಜೆ ಮಹಾ ಮಂಗಳಾರತಿ ಇದೆ. ಬತ್ತಿ ಹೊಸೆಯುವ ಕೆಲಸವೇ ಆಗಿಲ್ಲ ... ಸಮಯ ಮಾಡಿಕೊಂಡು ಬರುತ್ತೇನೆ"

"ಆಗಲಿ ಅಮ್ಮ.... ನೀವು ಹೇಳಿದ್ದು ನನ್ನ ನೆನಪಿನಲ್ಲಿದೆ. ಹೋಗಿಬನ್ನಿ" ಎಂದಳು ಹೆಗ್ಗಡತಿ.

ಅವಸರದ ಹೆಜ್ಜೆಯಿಂದ ಮೆಟ್ಟಲು ಇಳಿದಳು ಗಿರಿಜ. ಅವಳನ್ನೇ ನೋಡುತ್ತಾ ಕುಳಿತಿದ್ದ ಹೆಗ್ಗಡತಿಗೆ ತುಂಬಾ ಬೇಸರವಾಗಿತ್ತು. ತನ್ನ ಗಂಡನ ವರ್ತನೆಯ ಬಗ್ಗೆ ನೆತ್ತಿ ಬಿರಿಯುವಷ್ಟು ಕೋಪ ಬಂದಿತ್ತು. ರಾತ್ರಿ ಹೊತ್ತು ಹೋಗಿ ಹಾಗೆ ಬಾಗಿಲು ತಟ್ಟುವುದೆ? ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕುವುದೆ? ಒಬ್ಬರನ್ನು ನಂಬಿ ಅವರ ಆಶ್ರಯದಲ್ಲಿರುವಾಗ ಹೀಗೆ ಮನಸ್ಸಿಲ್ಲದ ಹೆಣ್ಣು ಮಕ್ಕಳನ್ನು ಬಲಾತ್ಕರಿಸುವುದು ಯಾವ ನ್ಯಾಯ? ಇದು ದೇವರು ಮೆಚ್ಚುವಂತಹ ಕಾರ್ಯವೇ?

" ಅವರು ಬರಲಿ...." ಎಂದುಕೊಂಡಳು ಹೆಗ್ಗಡತಿ.

ಬಂದವಳು ಗಂಗ. ಆದರೆ ಗಿರಿಜಹೊರಟುಹೋಗಿದ್ದಳು.

"ಏನೇ....ಎಲ್ಲಿ ಸತ್ತಿದ್ದೆ ಇಷ್ಟು ಹೊತ್ತು" ಎಂದು ಗುಡುಗಿದಳು ಹೆಗ್ಗಡತಿ.

" ಬಿಡಿ ಅಮ್ಮ ...ಕೆಂದಾಳಿಸೀಯಾಳ. ನೀವೇ ಒಂದು ಕುಡಿದುಬಿಡಿ" ಎಂದಳು ಗಂಗ.

೧೪

ಮೂರು ದಿನ ಹುಳಿ ಮಜ್ಜಿಗೆಯ ಕುಡಿಕೆಯಲ್ಲಿಟ್ಟು, ನೆನೆಯಿಸಿದ ಹೊಗೆ ಸೊಪ್ಪನ್ನು ಮತ್ತೆ ಒರಳು ಕಲ್ಲಿಗೆ ಹಾಕಿ ಲವಂಗ, ದಾಲಚೀನಿಯ ಕೆತ್ತೆಯೊಂದಿಗೆ ಚೆನ್ನಾಗಿಯೇ ಕುಟ್ಟಿ ಬರ್ಜರಿಯಾಗಿ ತಯಾರಿಸಿದ್ದ ಗುಡಾಕಿನ ಉಂಡೆಯನ್ನು ಅಂಗೈ ಮೇಲೆ ಹಾಕಿಕೊಂಡಿದ್ದ ಹೆಗಡೆಗೆ ಹೆಂಡತಿ ಮೇಲೆ ನೆತ್ತಿ ಏರುವಷ್ಟು ಕೋಪ ಬಂದಿತ್ತು. “ಏನು ರಾಪು ಈ ಪೋರಿಗೆ....ಮುಂದೆ ಬಾಯಿ ತೆರೆಯಲಿ....ಹಮ್ಮು ಇಳಿಸದಿದ್ದರೆ ನಾನು ಹೆಗಡೆಯೇ ಅಲ್ಲ” ಎನ್ನುತ್ತಾ ಒಮ್ಮೆ ಜೋರಾಗಿ ಹಲ್ಲು ಕಡಿದು ಕೊಂಡವನಿಗೆ ಬುದ್ಧಿ ಎಲ್ಲಿಗೆ ಹೋಗಿತ್ತೋ.... ಏನನ್ನೋ ಯೋಚಿಸುತ್ತಿದ್ದವನು ಒಂದಿಷ್ಟು ಹೆಚ್ಚಿಗೆ ಸುಣ್ಣವನ್ನು ಗುಡಾಕಿಗೆ ಸವರಿ ಬಾಯಿಗೆ ಹಾಕಿಕೊಂಡ. ಗುಡಾಕಿನ ಜೋರಿಗೆ ತಲೆ ತಿರುಗತೊಡಗಿತು. ಪಿತ್ತವಿಕಾರದಿಂದ ಹೆಗಡೆ ಕಂಗಾಲಾದ. ಇದ್ದಕ್ಕಿದ್ದಂತೆ ಎಕದು ಮರುಕಳಿಸಿದಾಗ ನಡುಮನೆಯಿಂದಲೇ ಕೂಗಿದ “ಒಂದು ತಂಬಿಗೆ ನೀರು” ಎಂದು. ಗಂಡನ ಮೇಲೆ ಮೊದಲೇ ಕಿಡಿಕಿಡಿಯಾಗಿದ್ದ ರುಕ್ಕು ಕೇಳಿಸಿಕೊಂಡರೂ ಅವನ ಕರೆಗೆ ಹೂಂ ಆಂ ಎನ್ನಲಿಲ್ಲ. ಹೆಗಡೆಗೆ ತಡೆಯುವುದಕ್ಕಾಗಲಿಲ್ಲ. ತಾನೇ ಬಾವಿಯ ಕಟ್ಟೆಗೆ ನಡೆದು ಬಾಯಲ್ಲಿದ್ದ ಉಂಡೆಯನ್ನು ಹೊರ ಉಗುಳಿದ. ಹೊಟ್ಟೆಯಲ್ಲಿ ಇದ್ದುದೆಲ್ಲಾ ವಾಂತಿಯಾಯ್ತು. ಚೆನ್ನಾಗಿ ಬಾಯಿ ಮುಕ್ಕಳಿಸಿಕೊಂಡು ಒಂದು ತಂಬಿಗೆ ನೀರು ಕುಡಿದ. ಮುಖ ಬೆವರುತ್ತಲೇ ಇತ್ತು. “ಈ ಗುಡಾಕಿನ ಮನೆ ಹಾಳಾಯ್ತು. ಯಾವ ಮಗ ಗುಡಾಕಿಗೆ ಲವಂಗ, ದಾಲಚೀನಿ ಹಾಕಿದ್ದು ....ಸ್ವಲ್ಪ ಕಡಿಮೆ ಮಾಡಿದ್ದರೆ ಅವನ ಗಂಟೇನು ಹೋಗುತ್ತಿತ್ತು” ಎಂದು ಗಟ್ಟಿ

ಯಾಗಿ ಒದರಿಕೊಂಡ. ಇಷ್ಟಾದರೂ ಹೆಗ್ಗಡತಿ ಹೊರಬಂದು ವಿಚಾರಿಸಲೇ ಇಲ್ಲ. ಹೆಗಡೆ ಮನೆಗೆ ಬಂದಾಗಲೇ ಅವಳು ಮುಖ ಗಂಟುಹಾಕಿಕೊಂಡಿದ್ದಳು. ಅಡಿಗೆ ಮನೆ ಹೊಸಿಲ ಬಳಿ ನಿಂತು ಹೆಗಡೆ "ಎರಡು ಲೋಟ ಮಜ್ಜಿಗೆಯಿದ್ದರೆ ಕೊಡು" ಎಂದ ಗಟ್ಟಿಯಾಗಿ. ಆ ಆರ್ಭಟಕ್ಕೆ ಹೆದರುವ ಹೆಂಗಸು ಹೆಗ್ಗಡತಿಯಲ್ಲ. "ಎಲ್ಲಿದೆ ಮಜ್ಜಿಗೆ..." ಎಂದು ಗಂಡನನ್ನೆ ಕೇಳಿದಳು. "ನಿನ್ನ ಯಜಮಾನಿಕೆಯಲ್ಲಿ ಅದಕ್ಕೂ ಬರಗಾಲ ಬಂತಲ್ಲ" ಎಂದು ಮೂದಲಿಸಿದ ಹೆಗಡೆ. ಹೆಗ್ಗಡತಿ ಅದಕ್ಕೆ ಪ್ರತಿಯಾಗಿ ಅಂದೇ ಬಿಟ್ಟಳು, "ಹೋ....ಹಾಲು ಮಜ್ಜಿಗೆ ಅನ್ನುವುದಕ್ಕೆ ನಿಮ್ಮ ದರಬಾರಿನಲ್ಲಿ ನಾಲ್ಕು ಎಮ್ಮೆ ಕಟ್ಟಿದ್ದೀರಲ್ಲ... ಸಾಕು....ಮೊಲೆ ಎಳೆದರೆ ಹನಿ ಹಾಲು ಇಲ್ಲ. ಇರುವ ಬಡಕಲು ದನಕ್ಕೆ ಹೊಟ್ಟೆಗೆ ಸರಿಯಾಗಿ ಹಿಂಡಿ ಹಾಕುವ ಯೋಗ್ಯತೆಯಿಲ್ಲ" ಎಂದಳು ಹೆಗ್ಗಡತಿ ಅಷ್ಟೇ ಬಿರುಸಾಗಿ. ಹೆಗ್ಗಡತಿ ಅಷ್ಟು ರೇಗುವುದಕ್ಕೆ ಕಾರಣ ...ಸಂಜೆ ಗಿರಿಜಮ್ಮ ಬಂದು ಕಣ್ಣೀರು ಹಾಕಿದ್ದು. ಆ ಸಿಟ್ಟೇ ಇಷ್ಟು ಒರಟತನಕ್ಕೆ ಕಾರಣವಾಗಿತ್ತು. ಅದನ್ನು ಮತ್ತಷ್ಟು ಬೆಳೆಯಿಸಿದ ಘಟನೆ ಇನ್ನೊಂದು ಅದು ಹೆಗಡೆಯ ವರ್ತನೆ. ಹೆಗಡೆ ಸಂಜೆ ಕೋಳಿ ಪಡೆಯಲ್ಲಿ ತಾನು ಗೆದ್ದಿದ್ದ ಎರಡು ಕೋಳಿಯನ್ನು ಮುಂದಾಗಿ ಮನೆಗೆ ಕಳುಹಿಸಿ ಪಲ್ಯ ತಯಾರಿಸುವಂತೆ ಹೇಳಿ ಕಳುಹಿಸಿದ. ಆಳು ಬರುವಾಗ ಕತ್ತಲಾಗಿತ್ತು. ಆಗಷ್ಟೆ ಅವಲಕ್ಕಿಯ ತಯಾರಿಕೆ ಮುಗಿದಿತ್ತು. "ಅಯ್ಯ ಹೇಳಿದ್ದಾರೆ....ರಾತ್ರಿಯೇ ಪಲ್ಯ ಆಗಬೇಕಂತೆ" ಎಂದಾಗ ಹೆಗ್ಗಡತಿಗೆ ಸಿಟ್ಟು ಬಂತು. ಕೋಳಿಯನ್ನು ಬೀಳು ಬುಟ್ಟಿಯಲ್ಲಿ ಹಾಕಿ ಮೇಲೆ ಮರಿಗೆ ಮುಚ್ಚಿ ಪಾತಾಳ ಅಂಕಣದಲ್ಲಿಟ್ಟು ಊಟಕ್ಕೆ ತೊಗರಿಯ ಗೊಜ್ಜು ಮಾತ್ರ ಮಾಡಿದ್ದಳು. ಹೆಗಡೆ ಪಡೆ ಮುಗಿಸಿ ಬರುವಾಗ ಕತ್ತಲಾಗಿ ಮೂರು ಗಳಿಗೆ ಕಳೆದಿತ್ತು. ಬಂದವನು ಮೊದಲು ಕೇಳಿದ ಕೋಳಿ ಪಲ್ಯದ ಬಗ್ಗೆ. ರುಕ್ಕು ಗಂಡನ ಪ್ರಶ್ನೆಗೆ ಒರಟಾಗಿ ಉತ್ತರಿಸಿದ್ದಳು. "ಕತ್ತಲಾದ ಮೇಲೆ ಕೋಳಿ ಕೋಣ ಕಳುಹಿಸಿದರೆ ಪಲ್ಯ ಮಾಡುವುದಕ್ಕಾಗುತ್ತದೆಯೆ? ನನಗಿರುವುದು ಎರಡು ಕೈ. ಪಲ್ಯ ತಿನ್ನುವ ಆಸೆಯಿರುವವರು ಹೊತ್ತು ನಾಲ್ಕು ಗಳಿಗೆ ಇರುವಾಗಲೇ ಕಳುಹಿಸಬೇಕಿತ್ತು" ಎಂದಳು. ಆ ಮಾತು ಹೆಗಡೆಗೆ ವಿಪರೀತವಾಗಿ ಕಂಡಿತು. ಹೆಂಡತಿಯ ಒರಟುತನಕ್ಕೆ ಸಿಟ್ಟು ಬಂತು. ಸೀದಾ ಬಂದವನೆ ಗುಡಾಕಿನ ಡಬ್ಬಕ್ಕೆ ಕೈ ಹಾಕಿದ. ಹೆಂಡತಿಯ ಮನಸ್ಸಿನ ಗತ್ತನ್ನು

ಚೆನ್ನಾಗಿ ಅರ್ಥಮಾಡಿಕೊಂಡಿದ್ದ. ಆಕೆ ಎಷ್ಟೋ ಬಾರಿ ಮುನಿಸಿಕೊಂಡದ್ದನ್ನು ಅವನೇ ಕಂಡಿದ್ದ. "ನಿಮ್ಮ ಹುರಿಮೀಸೆಗೆ ಹೆದರುವ ಹೆಂಗಸು ನಾನಲ್ಲ ... ನ್ಯಾಯಕ್ಕೆ ನ್ಯಾಯ. ಅನ್ಯಾಯಕ್ಕೆ ಎದೆ ಬಗೆದು ರಕ್ತ ಕುಡಿಯುತ್ತೇನೆ" ಎನ್ನುತ್ತಿದ್ದಳು ಹೆಗ್ಗಡತಿ. ಹಾಗಾಗಿ ಹೆಂಡತಿಯನ್ನು ಹೆದರಿಸುವ ಗೋಜಿಗೆ ಹೆಗಡೆ ಹೋಗಿರಲಿಲ್ಲ.

ರಾತ್ರಿ ಸರಿಯಾಗಿ ಊಟಮಾಡುವುದಕ್ಕೂ ಹೆಗಡೆಗೆ ಮನಸ್ಸಿರಲಿಲ್ಲ. ತೊಗರಿಯ ಗೊಜ್ಜನ್ನು ಹಾಗೆ ಎಲೆಯ ಬದಿಗೊತ್ತಿ ಒಂದಿಷ್ಟು ಮಜ್ಜಿಗೆ ಮಾತ್ರ ಹೆಚ್ಚಾಗಿ ಹಾಕಿಸಿಕೊಂಡ. ಊಟಕ್ಕೆ ಕುಳಿತಾಗಲೂ ರುಕ್ಕು ಯಾವ ಮಾತನ್ನೂ ಆಡಿರಲಿಲ್ಲ. ಹೆಗಡೆಗೂ ಮಾತನಾಡುವ ಉತ್ಸಾಹವಿರಲಿಲ್ಲ. ಗಿರಿಜಮ್ಮನ ಬಗ್ಗೆ ಗಂಡನಲ್ಲಿ ವಿಚಾರಿಸುವುದಕ್ಕೆ ಸಮಯ ಕಾದಿದ್ದಳು ಹೆಗ್ಗಡತಿ. ಇದು ಯಾವುದೂ ಹೆಗಡೆಗೆ ತಿಳಿದೇ ಇರಲಿಲ್ಲ. ಕುಟುಂ ಎಂದು ಮಿಡಿಯೊಂದನ್ನು ದವಡೆಯಲ್ಲಿಟ್ಟು ಕಡಿದು ಎರಡು ಲೋಟ ನೀರು ಕುಡಿದು ಕೈತೊಳೆಯುವುದಕ್ಕೆ ಕಟ್ಟೆಗೆ ಹೋದ.

ಮಂಚದ ಮೇಲೆ ಮಲಗಿದ್ದರೂ ಹೆಗಡೆಗೆ ಇನ್ನೂ ನಿದ್ದೆ ಬಂದಿರಲಿಲ್ಲ. ಹೆಗ್ಗಡತಿ ಬಂದವಳು ತನ್ನ ಹಾಸಿಗೆ ಬಿಡಿಸಿದಾಗಲೂ ಪರಿಸ್ಥಿತಿಯಲ್ಲಿ ಯಾವ ಸುಧಾರಣೆಯೂ ಕಂಡುಬರಲಿಲ್ಲ. ರುಕ್ಕುವಿನ ಕಪಾಲಕ್ಕೆ ನಾಲ್ಕು ಬಿಗಿಯುವಷ್ಟು ಸಿಟ್ಟು ಇನ್ನೂ ಹೆಗಡೆಗೆ ಇತ್ತು.

ದೀಪ ಸಣ್ಣಗೆ ಉರಿಯುತ್ತಿತ್ತು. ಹಾಸಿಗೆಯ ಮೇಲೆ ಕುಳಿತ ರುಕ್ಕು ಎತ್ತಲೋ ಮುಖ ತಿರುಗಿಸಿಕೊಂಡು ಮನಸ್ಸಿಲ್ಲದ ಮನಸ್ಸಿನಿಂದ ಹೇಳಿದಳು,

"ಸಂಜೆ ಗಿರಿಜಮ್ಮ ಬಂದಿದ್ದರು ..." ಎಂದು. ಅದನ್ನು ಹೇಳಲೇಬೇಕಾಗಿತ್ತು. ಗಿರಿಜಮ್ಮ ಬಂದಿರುವ ವಿಚಾರವನ್ನು ಗಂಡನಿಗೆ ತಿಳಿಸಲೇಬೇಕಾಗಿತ್ತು.

ಗಿರಿಜ ಬಂದಿದ್ದಳು ಎಂದಿದ್ದಾಗ ಹೆಗಡೆಯ ಕಿವಿ ನೆಟ್ಟಗಾಯ್ತು. ಟಕ್ಕನೆ ಮಂಚ ಬಿರಿಯುವಷ್ಟು ಜೋರಾಗಿ ಮಗ್ಗಲು ಹೊರಳಿಸಿದ. ಇದನ್ನು ರುಕ್ಕು ಚೆನ್ನಾಗಿ ಗಮನಿಸಿದಳು. ಗಿರಿಜಮ್ಮನ ಹೆಸರು ಗಂಡನ ಕಿವಿಯ ಮೇಲೆ ಬಿದ್ದಾಗ ಆದ ಬದಲಾವಣೆಯನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡಳು ಹೆಗ್ಗಡತಿ. ಕೆಲವು ಕಾಲ ಹೆಗಡೆಗೆ ಏಕೋ ಬುದ್ಧಿಗೆ ರೋಗ ಹಿಡಿಯಿತು. ಗಿರಿಜ ಏಕೆ

ಬಂದಿದ್ದಳು ? ಏನು ಕೆಲಸವಿತ್ತು ? ಅದನ್ನೇಕೆ ರುಕ್ಕು ನನ್ನಲ್ಲಿ ಹೇಳಿದಳು ? ಎಂದು ಹೆಗಡೆ ತನ್ನಲ್ಲೆ ಪ್ರಶ್ನೆ ಹಾಕಿಕೊಂಡ. ಆದರೂ ಬಿಗುಮಾನ ಬಿಟ್ಟು ಕೇಳಿದ,

"ಏಕೆ ಬಂದದ್ದು.... ?" ಎಂದು. ಹೆಗಡೆಗೆ ಆ ಸಂದರ್ಭದಲ್ಲಿ ಹೆಂಡತಿ ಯೊಡನೆ ಮಾತನಾಡದೆ ವಿಧಿಯಿರಲಿಲ್ಲ.

"ನೀವೇ ಹೇಳಿ... ಏಕೆ ಬಂದಿರಬಹುದು ?" ಎಂದು ಕೊಂಕಿಸಿದಳು ಹೆಗ್ಗಡತಿ.

"ನನಗೇನು ಗೊತ್ತು, ನಿನ್ನ ಮತ್ತು ಅವಳ ವ್ಯವಹಾರ.... ?"

"ಹೋ... ಏನಿದೆ ಅವಳ ಜೊತೆ ಸ್ನೇಹ ಬೆಳೆಯಿಸುವುದಕ್ಕೆ... ಅದೂ ಅವಳು ಹೆಣ್ಣಾಗಿ...." ಎಂದಳು ಹೆಗ್ಗಡತಿ.

"ಏನೇ ನಿನ್ನ ಮಾತಿನ ಅರ್ಥ...." ಎಂದ ಹೆಗಡೆ ಗಡುಸಾಗಿ.

"ಆ ಮಾತಾಯಿಯ ಜೊತೆ ನಾನೇಕೆ ವ್ಯವಹಾರ ಮಾಡುತ್ತೇನೆ. ಅವರ ಬಗ್ಗೆ ಯೋಚಿಸುವವರು ಬೇರೆ ಇದ್ದಾರೆ...."

"ಮತ್ತೇಕೆ ಬಂದಿದ್ದಳು....?"

"ನಿಮಗೆ ಗೊತ್ತಿರಬೇಕಲ್ಲ...."

"ನಾನಿಲ್ಲದಾಗ ಯಾರಾದರೂ ಬಂದರೆ ನನಗೆ ಹೇಗೆ ತಿಳಿಯುತ್ತದೆ ?"

"ಅಯ್ಯೋ.... ಪಾಪ...."

"ಯಾರು... ಯಾರಿಗೆ ಅಯ್ಯೋ ಅಂದಿ ?"

"ನಿಮಗೆ .. ನಿಮ್ಮ ಎಳೆಯ ಬುದ್ಧಿ ಕಂಡು ನನಗೂ ಪಾಪ ಕಂಡಿತು. ಹೌದು ...ಆ ಗಿರಿಜಮ್ಮನ ಪರಿಚಯ ನಿಮಗಿಲ್ಲವೆ ?"

"ನೋಡಿದ್ದೇನೆ ..."

"ಕಳೆದ ವಾರ ಎರಡು ಹೆಡಿಗೆ ಕಸೆ ಮಾವಿನಕಾಯಿ ಕಳುಹಿಸಿದ್ದೀರಂತೆ" ! ಎಂದಳು ಹೆಗ್ಗಡತಿ ಗಂಡನನ್ನು ಹೀಯಾಳಿಸಲು. ಆ ಮಾತು ಹೆಗಡೆಯ ಎದೆ ನಾಟಿತ್ತು. ತಾಳ್ಮೆ ಹದಗೆಡುವಷ್ಟು ಲಕ್ಷಣವಾಗಿ ಹೆಗ್ಗಡತಿ ಆ ಮಾತು ಹೇಳಿದ್ದಳು.

"ನಾನು ಹೇಳಿದ್ದು ನಿಜವೆ ? ಇಷ್ಟೆಲ್ಲಾ ನಿಮ್ಮ ವ್ಯವಹಾರ ಇರುವಾಗ ನಿಮ್ಮನ್ನು ತೊಟ್ಟಿಲ ಮಗು ಎಂದು ನಾನು ಹೇಗೆ ಭಾವಿಸುವುದು ? ಗಿರಿಜಮ್ಮ

ಬಂದಿದ್ದರು ಎಂದಾಗ ಮತ್ತೆ ನಾಟಕ ಆಡುತ್ತೀರಲ್ಲ....ಇದನ್ನೆಲ್ಲಾ ಯಾರಲ್ಲಿ ಹೇಳುತ್ತೀರಿ ?"

"ಏನೇ ನಿನ್ನ ಮಾತು ..." ಎಂದು ಕೂಗಿದ ಹೆಗಡೆ.

"ಯಕ್ಷಗಾನ ಅರ್ಥ ಹೇಳುವವರಿಗೆ ನನ್ನ ಮಾತು ಅರ್ಥವಾಗುವುದಿಲ್ಲವೆ ?"

"ತಥ್ ನಿನ್ನ ಬಾಯಿಗೆ ಬೆಂಕಿ ಹಾಕ. ಕೆನ್ನೆಗೆ ತಪರಾಕಿ ಕೊಡುತ್ತೇನೆ ನೋಡು. ಸುಮ್ಮನೆ ನನ್ನನ್ನು ಕೆರಳಿಸಬೇಡ. ಗಂಡಸರ ವ್ಯವಹಾರದಲ್ಲಿ ನಿನ್ನದೇನು ಹಂಚಾಯ್ತಿ ಅಂತ. ಪಾಪ ಅಂತ ಸುಮ್ಮನಿದ್ದರೆ ನಿನ್ನ ನಾಲಿಗೆ ಉದ್ದ ಆಗ್ತಾ ಇದೆ. ಜಂಬೇನಾಗಿದೆ ನಿನಗೆ. ಬೆಳಗ್ಗೆ ಎದ್ದು ಯಾರ ಮುಖ ನೋಡಿದ್ದೆ. ಅಬ್ಬಬ್ಬಾ.. ನಿನ್ನ ಉಡಾಪಿಗೆ ತಡೆಯೇ ಇಲ್ಲ. ಕೋಳಿ ಪಲ್ಯ ಮಾಡು ಎಂದು ಹೇಳಿದ್ದರೆ ಗಂಡನ ಮಾತು ನಿನಗೆ ಕಸಕ್ಕೆ ಸಮವಾಯ್ತು."

"ಮತ್ತೆ ನೀವು ಕೋಳಿ ಕಳುಹಿಸುವುದು ಯಾವಾಗ ...ಕತ್ತಲಾದ ಮೇಲೆ ಕಳುಹಿಸಿದರೆ ಪಲ್ಯ ಮಾಡುವುದಕ್ಕೆ ಅದೇನು ಬೆಂಡೆಕಾಯಿ ? ಈಗ ಮುಳುಗಿ ಹೋದದ್ದೇನು ?"

"ಹೋ ಇಲ್ಲಿಯವರೆಗೂ ಬಂತೆ.. ಸರಿ. ಮಜ್ಜಿಗೆ ಕೇಳಿದರೆ ನನ್ನ ಮನೆತನವನ್ನು ಅವಮಾನಿಸಿದಿ. ಎಷ್ಟಾದರೂ ನಿನ್ನದು ಹೆಗ್ಗಡತಿತನ ನೋಡು" ಎಂದು ಹೆಗಡೆ ಮುಖ ಗಂಟುಹಾಕಿದ.

"ನಾನೆಲ್ಲಿ ಹೆಗ್ಗಡತಿತನ ತೋರಿಸಿದೆ ?"

"ಮತ್ತೆ ಆ ಹೆಂಗಸಿನ ಬಗ್ಗೆ ಏಕೆ ಕೇಳಿದೆ ?"

"ಕೇಳಬಾರದಿತ್ತೆ ... ?"

"ನನ್ನಲ್ಲಿ ಕೇಳುವುದಕ್ಕೆ ಏನಿದೆ ?"

"ಅದು ನಿಮಗೆ ಗೊತ್ತಿರುವ ವಿಚಾರ....ತಿಳಿದೂ ಕೇಳುತ್ತೀರಲ್ಲ..."

"ಅದೇನು ವಿಚಾರ ನನಗೇನು ಗೊತ್ತು....ನಿನ್ನ ಅಭಿಪ್ರಾಯವೇನು ?"

"ಮೊನ್ನೆ ನೀವೇ ಸೀನನನ್ನು ಕಳುಹಿಸಿದ್ದೀರಲ್ಲ ...ರಾಯಭಾರಕ್ಕೆ."

"ಅದನ್ನು ಆ ರಂಡೆ ನಿನ್ನಲ್ಲಿ ಹೇಳಿದಳೆ ?"

"ಅವಳನ್ನೇಕೆ ಹಾಗೆ ರಂಡೆ ಅನ್ನುತ್ತೀರಿ....?"

"ಮತ್ತೆ ಇದನ್ನೆಲ್ಲಾ ನಿನ್ನಲ್ಲಿ ಹೇಳುವುದೇಕೆ ?"

"ಹೇಳಿದ್ದರೆ ತಪ್ಪೇನು ? ಅವಳಿಗೂ ನಾಲ್ಕು ಕಾಲ ಬದುಕುವ ಆಸೆಯಿದೆ. ಸತ್ಯ ಹೇಳಿ... ನಿನ್ನೆ ರಾತ್ರಿ ಅವಳ ಮನೆಗೆ ಹೋಗಿ ಗಲಾಟೆ ಮಾಡಿದ್ದು ನಿಜವೆ ?"

"ನೋಡು .. ಇನ್ನು ನನಗೆ ಸಿಟ್ಟು ತಡೆಯುವುದಿಲ್ಲ. ಸುಮ್ಮನೆ ಗಲಾಟೆಗೆ ಕಾರಣವಾಗುತ್ತದೆ. ತೆಪ್ಪಗೆ ಮಲಗಿಕೊಂಡುಬಿಡು. ಆ ಬ್ರಾಹ್ಮಣನ ಎಂಜಲು ತಿನ್ನುವ ಹೆಂಗಸಿನ ಮನೆಗೆ ಹೋಗುವುದಕ್ಕೆ ನಾನೇನು ಬಿಡಿ ಹೆಗಡೆಯಲ್ಲ."

"ಆಹಾ... ಮಾಡಿಕೊಂಡು ಈಗ ಗೌರವದ ಮಾತು ಹೇಳುತ್ತೀರಾ ? ಎಂಜಲು ತಿನ್ನುವ ಹೆಂಗಸು ಯಾರು ? ಅದಕ್ಕೆ ಮಾವಿನಕಾಯಿ ಕಳುಹಿಸಿದಿರಾ ? ಸೀನನನ್ನು ಅಷ್ಟು ದೂರ ಕಳುಹಿಸಬೇಕಿತ್ತೆ ? ರಾತ್ರಿ ಹೊತ್ತು ಹೋಗಿ ಬಾಗಿಲು ಮುರಿಯುತ್ತೇನೆ ಎಂದು ಗೌಜುಮಾಡಬೇಕಿತ್ತೆ ? ನಿಮ್ಮ ಸ್ವಭಾವ ನನಗೆ ತಿಳಿಯದೆ ?"

"ತಥ್.... ಮುಖದ ಮೇಲೆ ಗುದ್ದುತ್ತೇನೆ ನೋಡು... "

"ಜೀವ ತೆಗೆಯಿರಿ.... ನಿಮಗೆ ಅದೇನು ಮಹಾ... ಆದರೆ ಇದರ ಬಗ್ಗೆ ನನಗೆ ನ್ಯಾಯ ಬೇಕು. ನಾಳೆ ಈ ಊರಿನಲ್ಲಿ ಇನ್ನೊಂದು ಹೆಣ್ಣು ನಮ್ಮ ಮನೆಗೆ ಬಂದು ಕಣ್ಣೀರು ಹಾಕುವುದನ್ನು ಖಂಡಿತಾ ಸಹಿಸುವುದಿಲ್ಲ. ಅದು ಇಂದೇ ಕೊನೆಗಾಣಬೇಕು. ಮೊದಲು ನೀವು ಒಂದಿಷ್ಟು ನ್ಯಾಯ ಕಲಿತುಕೊಳ್ಳಿ...."

"ಗಂಡಸರನ್ನು ಮರ್ಯಾದಿಯಿಂದ ಕಾಣುವುದನ್ನು ನೀನು ಕಲಿ."

"ಅದನ್ನು ನೀವು ಹೇಳಬೇಕಾಗಿಲ್ಲ. ಇಂತಹ ಕೆಲಸಮಾಡುವುದಕ್ಕೆ ನಿಮಗೆ ನಾಚಿಕೆಯಿಲ್ಲವಂತೆ.... ಮತ್ತೆ ಮರ್ಯಾದಿ ಬಗ್ಗೆ ದೊಡ್ಡ ಮಾತು ಹೇಳುತ್ತೀರಿ. ಆ ಹೆಂಗಸು ಬಂದು ಕಣ್ಣೀರು ಹಾಕಿದಳಲ್ಲ.... ನನ್ನ ಮುಂದೆಯೇ ಪ್ರಾಣ ಬಿಡುತ್ತೇನೆ ಎಂದು ಅತ್ತಳಲ್ಲ.... ಹೀಗೆ ರಾತ್ರಿ ಹೊತ್ತು ಹೋಗಿ ಹೆದರಿಸುವುದೆ ? ನಿಮ್ಮ ಗಂಡಸು ಜನ್ಮಕ್ಕೆ ಬೆಂಕಿಹಾಕ.... ನಾಳೆ ಯಾರಾದರೂ ನನಗೆ ಹೆದರಿಸಿದರೆ...."

"ಬಿಡೆ... ಹೆಗಡೆಯ ಮನೆಗೆ ಬರುವ ಗಂಡಸು ಯಾರಿದ್ದಾರೆ ಈ ಊರಲ್ಲಿ .... ಹಾಗೆ ಬಂದರೆ ಸಿಗಿದು ತೋರಣ ಕಟ್ಟುತ್ತೇನೆ"

"ಹಾಗೆ ನಿಮ್ಮನ್ನು ಕಟ್ಟುವವರು ಯಾರೂ ಇಲ್ಲ ನೋಡಿ. ಗಿರಿಜಮ್ಮನ

ಗಂಡಸಿಗೆ ಆ ಶಕ್ತಿಯಿದ್ದರೆ ಅದರ ಕತೆಯೇ ಬೇರೆ ಇತ್ತು. ಪಾಪ....ಅವರು ಬ್ರಾಹ್ಮಣರು."

"ಏನೆಂದೆ ...?"

"ಹೂಂ ...ನೀವು ಮಾಡಿದ್ದೇ ಆಟ ಈ ಊರಲ್ಲಿ. ಯಾರಾದರೂ ಇಬ್ಬರು ನಾಳೆ ನಿಮ್ಮ ರಟ್ಟೆ ಹಿಡಿದು ಕೇಳಲಿ....ಆಗ ಎಲ್ಲಿಗೆ ಹೋಗುತ್ತದೆ ನಿಮ್ಮ ದಮ್ಮು ಎಂದು ತಿಳಿಯುತ್ತಿತ್ತು. ಎಲ್ಲರೂ ಸೋಮಯಾಜರಂತಹ ಪುಕ್ಕರಿರುತ್ತಾರೇನು ? ಊರಿನ ಹೆಣ್ಣು ಮಕ್ಕಳೆಲ್ಲಾ ಸೆರೆಗಾರನ ಮಗಳಂತಾಗಲು ಸಾಧ್ಯವೆ ? ಕೆಲವರಿಗೆ ಇನ್ನೂ ಧರ್ಮದ ನೆನಪಿದೆ."

"ನಿನ್ನ ಕರ್ಮ....ಎಲ್ಲಿಲ್ಲದ ತಲೆನೋವು...." ಎನ್ನುತ್ತಾ ಹೆಗಡೆ ಮುಸು ಕೆಳೆದುಕೊಂಡ.

"ನನಗೆ ಒಂದು ಸಮಾಧಾನದ ಮಾತು ಹೇಳಿ."

"ನಿನ್ನನ್ನು ಸಮಾಧಾನಿಸುವುದಕ್ಕೆ ನನ್ನಿಂದ ಸಾಧ್ಯವಿಲ್ಲ."

"ಸಾಧ್ಯವಿದೆ... ನಾಳೆಯಿಂದ ಹೆಣ್ಣು ಮಕ್ಕಳನ್ನು ಓೕಗೆ ಪೀಡಿಸುವುದನ್ನು ನೀವು ಬಿಡುತ್ತೀರಾ...."

"...................."

"ಆ ಗಿರಿಜಮ್ಮನ ಮನೆಯ ಅಂಗಳಕ್ಕೆ ನೀವು ಹೋದದ್ದು ನನಗೆ ಗೊತ್ತಾದರೆ ಮುಂದೆ ಚೆನ್ನಾಗಿರುವುದಿಲ್ಲ ನೋಡಿ... ಹೇಳಿದ್ದೇನೆ. ಮುಂದೆ ಹೆಂಡತಿ ಮಕ್ಕಳನ್ನು ಕಳೆದುಕೊಳ್ಳುವುದನ್ನು ನೀವೆ ಅನುಭವಿಸಬೇಕಾಗುತ್ತದೆ."

"ಅಂದರೆ... ಸರಿಯಾಗಿ ಹೇಳು."

"ನೀವು ಹೀಗೆ ಮಾಡಿದರೆ....ನಾನು ಮಕ್ಕಳನ್ನು ಕರೆದುಕೊಂಡು ತವರಿಗೆ ಹೋಗುತ್ತೇನೆ."

"ಏಕೆ ಆ ಮಾತು ಹೇಳುತ್ತಿ. ಮುಂದೆ ನನ್ನಿಂದ ಯಾರಿಗೂ ತೊಂದರೆಯಿಲ್ಲ....ನೀನು ತವರಿಗೂ ಹೋಗುವುದು ಬೇಡ ...ಸರಿ ತಾನೆ ..."

"ಹಾಗೆ ಬನ್ನಿ ...ದೇವರು ನಿಮಗೆ ಅಷ್ಟು ಬುದ್ಧಿ ಕೊಟ್ಟರೆ ಸಾಕು ..." ಎಂದಳು ಹೆಗ್ಗಡತಿ.

೧೫

ದರಿಗೆ ಹಸಿಮಣ್ಣನ್ನು ಮೆತ್ತಿ ಒಪ್ಪ ಹಾಕುತ್ತಿದ್ದ ಕಾಳಾಚಾರಿಯನ್ನು ಹುಡುಕಿಕೊಂಡು ರುದ್ರಹೆಗಡೆ ಬಾಳೆ ಹಿತ್ತಲಿನ ಏರಿಯ ಮೇಲೆ ಬಂದ. "ಅಪ್ಪಯ್ಯ ದರೆ ಹಾಕುವುದಕ್ಕೆ ಬೆಳಿಗ್ಗೆಯೇ ಹಿತ್ತಲಿಗೆ ಹೋದರು" ಎಂದು ಆಚಾರಿಯ ಮಗ, ಕಾಯಿಕತ್ತವನ್ನು ಬಿಸಿಲಿಗೆ ಒಣಹಾಕುತ್ತಿದ್ದವನು ಹೇಳಿದಾಗ ಹೆಗಡೆಗೆ ಏಕೋ ಆಶ್ಚರ್ಯವಾಯ್ತು. ಆಚಾರಿಯ ಸ್ಥಿತಿ ಇಷ್ಟಕ್ಕೆ ಬಂತೆ ? ಎಂದುಕೊಂಡೇ ಹಿತ್ತಲಿನ ದಾರಿಯಲ್ಲಿ ನಡೆದ. ಕಾಳಾಚಾರಿಯ ಮನೆಯಿರುವುದು ಕುಂದಾಪುರಕ್ಕೆ ಹೋಗುವ ಹೆದ್ದಾರಿಯ ತೆಂಕಿನ ವಿಶಾಲ ಮೈದಾನದ ಉತ್ತರಕ್ಕಿರುವ ಹೊಂಡದಲ್ಲಿ. ಅದೂ ಮೂರಂಕಣದ ಹುಲ್ಲಿನ ಮನೆ. ಕೈ ತುಂಬ ಸಂಪಾದನೆಯಿದ್ದರೂ ಆಚಾರಿಯ ಮನೆ ಮಾಡು ಹೆಂಚು ಕಂಡಿರಲಿಲ್ಲ. ಆಚಾರಿಯನ್ನು ಹೆಗಡೆ ಕಂಡದ್ದು ಕುಂದಾಪುರದ ಸಂತೆಯಲ್ಲಿ. ಹಸಿಮೆಣಸಿನ ವ್ಯಾಪಾರಕ್ಕೆ ಬಂದಿದ್ದ ಹೆಗಡೆ. ಆಗಲೇ ಯಾರೋ "ಇವರು ಬಯಲುಮಕ್ಕಿಯ ರುದ್ರಹೆಗಡೆ" ಎಂದು ಆಚಾರಿಗೆ ಪರಿಚಯ ಮಾಡಿಸಿದರು. ಆಚಾರಿ ತನ್ನ ಬಗ್ಗೆ ತಾನೇ ಹೆಗ್ಗಳಿಕೆಯ ಮಾತು ಹೇಳಿಕೊಂಡೇ ಕೊನೆಯಲ್ಲಿ "ಮಂತ್ರ ಮಾಟ ವಶೀಕರಣ ಕಾರ್ಯ ಆಗಬೇಕಿದ್ದರೆ ಬನ್ನಿ ಸ್ವಾಮಿ" ಎಂದಿದ್ದ. ಅದೇ ನೆನಪು ಹೆಗಡೆಗೆ. ಮಂತ್ರ ಮಾಟದಲ್ಲಿ ಆಚಾರಿ ಪ್ರಚಂಡ ಎಂಬ ಸುದ್ದಿ ಹೆಗಡೆಯ ಕಿವಿಗೂ ಬಿದ್ದಿತ್ತು. ಕತ್ತಲಾದ ಮೇಲೆ ಅವನ ಬಗ್ಗೆ ಯಾರಾದರೂ ಏನಾದರೂ ಅಂದರೆ "ಈ ಹೊತ್ತಿನಲ್ಲಿ ಅವನ ಸುದ್ದಿಯೇ ಬೇಡ" ಎಂದು ಕೈ ಮುಗಿಯುತ್ತಾರೆ. ಹೆಗಡೆಗೆ ಈಗ ಆಚಾರಿಯ ಸಹಾಯ ಬೇಕಿತ್ತು.

ಮೂರು ವರ್ಷದ ಅನಂತರ ಅವನನ್ನು ಕಾಣಲು ಹೊರಟಿದ್ದ. ವಶೀಕರಣ ವಿದ್ಯೆಯಿಂದ ಗಿರಿಜಳನ್ನು ತನ್ನವಳಾಗಿ ಮಾಡಿಕೊಳ್ಳುವ ಹಂಬಲ. ಅದಲ್ಲವಾದರೆ ಮಂತ್ರ ಮಾಟದಿಂದ ಅವಳನ್ನು ಮಣ್ಣು ಮುಕ್ಕಿಸುವ ಯತ್ನ ಹೆಗಡೆಯದು

ಕಾಳಾಚಾರಿಯನ್ನು ಆ ಸ್ಥಿತಿಯಲ್ಲಿ ಕಾಣುವ ನಿರೀಕ್ಷೆ ಹೆಗಡೆಗೆ ಇರಲಿಲ್ಲ. ಕುಂದಾಪುರದ ಸಂತೆಯಲ್ಲಿ ಕಂಡಿದ್ದಾಗ ಹೆಗಡೆಯ ಗಂಡುಹೃದಯ ಕೂಡಾ ಹಿಂಡಿಹೋಗಿತ್ತು. ಹಾಗಿತ್ತು ಆಗಿನ ಆಚಾರಿಯ ವೇಷ. ಕೆಂಪಿನ ಸಿಲುವಂಗಿ ...ಕೊರಳಲ್ಲಿ ರುದ್ರಾಕ್ಷಿಮಾಲೆ.... ಹಣೆಯಲ್ಲಿ ವಿಭೂತಿ ನಾಮ....ಕಿವಿಯಲ್ಲಿ ಹರಳಿನ ಒಂಟಿ....ಗಂಭೀರ ಮುಖಮುದ್ರೆಯಿಂದ ಇದ್ದ ಆಚಾರಿ ಇಂದು ಅರ್ಧ ಪಂಚೆ ಸುತ್ತಿಕೊಂಡು ಮೈ ಕೈ ತುಂಬ ಮಣ್ಣು ಮೆತ್ತಿಸಿಕೊಂಡು ದರೆ ಹಾಕುವುದನ್ನು ಕಂಡಾಗ ಹೆಗಡೆಗೆ ಅನುಮಾನಬಂತು. ಆಚಾರಿ ಏಕೆ ಹೀಗಾದ ? ಎಂದು ತನ್ನಲ್ಲಿಯೇ ಪ್ರಶ್ನೆ ಹಾಕಿಕೊಂಡ. ಆದರೂ ಆಚಾರಿಯ ಹಿಂದೆ ನಿಂತು ಗಟ್ಟಿಯಾಗಿ,

“ನಮಸ್ಕಾರ....” ಎಂದ ಹೆಗಡೆ.

“ಯಾರು ..?” ಎನ್ನುತ್ತಾ ಕೈಯಲ್ಲಿದ್ದ ಹಾರೆಯನ್ನು ಎತ್ತಿ ದಿನ್ನೆಯ ಮೇಲಿಟ್ಟು ಕತ್ತು ತಿರುಗಿಸಿ ನೋಡಿದ ಆಚಾರಿ.

“ನಾನು .. ಮಕ್ಕಿ ಮನೆಯವನು ...”

“ಹೋ ಹೆಗಡೆಯವರು. ಕುಂದಾಪುರ ಸಂತೆಯಲ್ಲಿ ನಿಮ್ಮನ್ನು ಕಂಡದ್ದು...”

“ನೆನಪಿದೆಯೆ ?”

“ಛೆ ! ಹೇಗೆ ಮರೆಯುವುದಕ್ಕೆ ಸಾಧ್ಯ . ಆಮೇಲೆ ತಮ್ಮ ದರ್ಶನವೇ ಇಲ್ಲ.”

“ತಾವೇ ಹೇಳಿದ್ದೀರಲ್ಲ....ಏನಾದರೂ ಕಾರ್ಯ ಆಗಬೇಕಿದ್ದರೆ ಬನ್ನಿ ಎಂದು”

“ಹಾಗಿದ್ದರೆ ತಾವು ಒಂದು ಕೆಲಸದ ಮೇಲೆ ಬಂದಹಾಗಾಯ್ತು”

“ಹೌದು ಆಚಾರ್ರೆ .. ಅದಿರಲಿ .. ತಾವೇ ಈ ಕೆಲಸಕ್ಕೆ ಕೈ ಹಾಕಿದ್ದೀರಲ್ಲ”

"ಮನೆ ಕೆಲಸ ಸ್ವಾಮಿ... ನನಗೂ ಮಾಡುವುದಕ್ಕೆ ಬೇರೆ ಕೆಲಸವಿಲ್ಲ. ಈ ಜನರನ್ನು ನಂಬಿ ಕೆಲಸ ಮಾಡಿಸುವುದೂ ಮೂರ್ಖತನ. ಒಂದಿಷ್ಟು ಹೊತ್ತು ಹಾರೆ ಹಿಡಿದರೆ ನನಗೂ ಸಲೀಸು. ಇಲ್ಲ ಎಂದರೆ ಕೈ ಕಾಲು ಗಂಟು ಹಾಗೆ ಹಾಗೆ ಹಿಡಿದುಕೊಳ್ಳುತ್ತದೆ."

"ನೀವು ಏನೇ ಅನ್ನಿ ಆಚಾರ್ರೆ... ನಿಮ್ಮನ್ನು ಈ ಸ್ಥಿತಿಯಲ್ಲಿ ನೋಡುವುದು ನನಗೆ ಏಕೋ ಸರಿಬೀಳುವುದಿಲ್ಲ. ಹೋಗಲಿ .. ಈಗ ನಾನು ಬಂದಿರುವುದು ಒಂದು ಜರೂರಿನ ಕೆಲಸದ ಮೇಲೆ. ನಿಮ್ಮನ್ನು ನೋಡುವ ತರಾತುರಿ ಅಷ್ಟಿಷ್ಟಲ್ಲ. ಅದು ನನಗೇ ಗೊತ್ತಿರುವ ವಿಚಾರ."

ಆಚಾರಿ ಎಲ್ಲವನ್ನೂ ಗ್ರಹಿಸಿಕೊಂಡ. ಹೆಗಡೆಗೆ ಯಾರದೋ ಮನೆ ತೆಗೆಯುವ....ಇಲ್ಲ ಯಾರನ್ನೋ ಆಹುತಿ ತೆಗೆದುಕೊಳ್ಳುವುದಕ್ಕೆ ನನ್ನ ಸಹಾಯ ಬೇಕಾಗಿದೆ ಎಂಬುದು ಆಚಾರಿಗೆ ತಿಳಿದುಹೋಗಿತ್ತು. ಮೆಲ್ಲನೆ ಕೇಳಿದ,

"ಹೆಗಡೆಯವರೆ....ನನ್ನಿಂದ ಏನಾಗಬೇಕು ?"

"ಭಾರಿ ಉಪಕಾರ ಆಗಬೇಕಾಗಿದೆ"

"ಯಾವ ರೀತಿಯ ಉಪಕಾರ...."

"ಅದನ್ನು ಬಾಯಿಬಿಟ್ಟು ಹೇಳಬೇಕೆ ಆಚಾರ್ರೆ....ಮತ್ತೇಕೆ ಬರುತ್ತೇನೆ. ನಿಮ್ಮಲ್ಲಿಗೆ"

"ಹಾಗಲ್ಲ... ನನ್ನ ವಿಚಾರ ನಿಮಗೆ ಏನೂ ತಿಳಿದಿಲ್ಲವೆ ?"

"ತಿಳಿದೇ ಬಂದಿದ್ದೇನೆ...."

"ಅದಲ್ಲ....ಒಂದು ವರ್ಷದ ಈಚಿನ ವಿಚಾರ ..."

"ಏನು ಸ್ವಾಮಿ ಅದು....,,

"ಕ್ಷಮಿಸಬೇಕು ಹೆಗಡೆಯವರೆ....ಮಂತ್ರ ಮಾಟ ಮಾಡಿಸುವುದನ್ನು ಈಗ ಸಂಪೂರ್ಣ ಬಿಟ್ಟಿದ್ದೇನೆ...."

"ಆಂ....ಯಾವಾಗಿನಿಂದ ಮಾರಾಯ್ರೆ...."

"ತಮಗೆ ಯಾವ ವಿಚಾರವೂ ಗೊತ್ತಿಲ್ಲವೆ...."

"ಇಲ್ಲವಲ್ಲ...."

"ನನ್ನ ಮಗಳು ಸತ್ತುಹೋದ ಮೇಲೆ

"ಅರೆ.... ಯಾವಾಗ ಸತ್ತಳು....?"

"ಕಳೆದ ವರ್ಷ.... ನಿಮ್ಮ ಕಿವಿಗೆ ಸುದ್ದಿ ಬಿದ್ದಿಲ್ಲವೆ.... ಸಿಪಾಯಿಗಳು ಬಂದು ಹುಡುಗಿಯನ್ನು ಕೊಂದರು ಎಂದು"

"ಹೌದು.... ಕೇಳಿದ್ದೇನೆ"

"ಅದು ನನ್ನ ಮಗಳು. ನನ್ನ ವಿದ್ಯೆ ಸಿಪಾಯಿಗಳ ಬಂದೂಕಿನ ಮುಂದೆ ವ್ಯರ್ಥವಾಯ್ತು. ನನ್ನ ಕಣ್ಮುಂದೆಯೇ ಮಗಳ ಹೆಣ ಬಿತ್ತು ನೋಡಿ.... ಆ ಮೇಲೆ ಎಲ್ಲವನ್ನೂ ಕೈ ಬಿಟ್ಟೆ ಹೆಗಡೆಯವರೆ...."

"ಅಯ್ಯೋ.... ಹೇಗೆ ಸತ್ತಳು ಸ್ವಾಮಿ... ಅದು ಹೇಗೆ ನಡೆಯಿತು" ಎಂದು ಹೆಗಡೆ ಉದ್ವೇಗದಿಂದ ಕೇಳಿದ.

"ಬನ್ನಿ... ಹೇಳುವುದಕ್ಕೆ ನನಗೂ ಕಷ್ಟವಾಗುತ್ತದೆ. ಆದರೆ ತಾವು ಆಸಕ್ತಿಯಿಂದ ಕೇಳುವುದಾದರೆ ಹೇಳುತ್ತೇನೆ. ಮನೆಗೆ ಬನ್ನಿ" ಎನ್ನುತ್ತಾ ಆಚಾರಿ ಮನೆಯ ದಾರಿ ಹಿಡಿದ.

ಹೆಗಡೆ ಅಂಗಳದ ಮಂಚದ ಮೇಲೆ ಕುಳಿತ. ಅವನಿಗೆ ತುಂಬಾ ವ್ಯಸನವಾಗಿತ್ತು. ಆಚಾರಿ ಮಂತ್ರ ಮಾಟ ಮಾಡುವುದನ್ನೆ ಬಿಟ್ಟಿದ್ದರೆ ಗಿರಿಜಳನ್ನು ಹೇಗೆ ಮಣ್ಣು ಮುಕ್ಕಿಸುವುದು ? ಎಂಬ ಚಿಂತೆ ಹೆಗಡೆಗೆ. ಆದರೆ ಆಚಾರಿ ಎಲೆ ಅಡಿಕೆ ಡಬ್ಬ ಹಿಡಿದು ಜಗಲಿ ಅಂಚಿನಲ್ಲಿ ಕುಳಿತಾಗ ಹೆಗಡೆ ವ್ಯಾವಹಾರಿಕವಾಗಿ,

"ಸಿಪಾಯಿಗಳು ಬಂದು ಹುಡುಗಿಯನ್ನು ಕೊಂದ ಸುದ್ದಿ ನನ್ನ ಕಿವಿಗೂ ಬಿದ್ದಿತ್ತು. ಆದರೆ ದೇವರಾಣೆ ಅದು ನಿಮ್ಮ ಮಗಳು ಎಂಬುದು ನನಗೆ ತಿಳಿದಿರಲಿಲ್ಲ...."

"ಅದೊಂದು ದೊಡ್ಡ ಕತೆ ಹೆಗಡೆಯವರೆ.... ಇಷ್ಟೊಂದು ಮಂತ್ರ ಮಾಟದ ವಿದ್ಯೆ ಕಲಿತೂ ಕೊನೆಯಲ್ಲಿ ನನ್ನ ಮಗಳನ್ನು ಉಳಿಸಿಕೊಳ್ಳುವುದು ನನ್ನಿಂದಾಗಲಿಲ್ಲ. ಆ ದಿನದಿಂದಲೇ ನನ್ನ ವಿದ್ಯೆಯನ್ನು ಒಳ್ಳೆಯ ಕೆಲಸಕ್ಕೆ ಮಾತ್ರ ಉಪಯೋಗಿಸುತ್ತಿದ್ದೇನೆ...." ಎಂದು ಹೇಳಿದ ಆಚಾರಿ ಕಣ್ಣು ಒದ್ದೆ ಮಾಡಿಕೊಂಡು ತನ್ನ ಮಗಳನ್ನು ಸಿಪಾಯಿಗಳು ಕೊಂದ ದುರಂತ ಘಟನೆಯನ್ನು ವಿವರಿಸಿದ.

ಂ ಂ ಂ ಂ

ಕುಂದಾಪುರದ ಸತ್ಯಾಗ್ರಹಿಗಳು ಬಿಳಿಯರ ವಿರುದ್ಧ ಚಳುವಳಿಯನ್ನೆಬ್ಬಿಸಿ ಅವರ ಧ್ವಜಕ್ಕೆ ಬೆಂಕಿ ಹಾಕಿದರು–ಎಂಬ ಸುದ್ದಿ ಮಂಗಳೂರಿನಲ್ಲಿದ್ದ ಅಂತೋನಿ ದೊರೆಯವರಿಗೆ ವರ್ತಮಾನ ತಲುಪಿದ್ದೇ ತಲುಪಿದ್ದು... ಎರಡು ಗಂಟೆಯಲ್ಲೆ ರಾಜಮಾರ್ಗದ ಕೆಂದೂಳಿನಲ್ಲಿ ಕರ್ಕಶವಾದ ಸದ್ದನ್ನು ಹುಟ್ಟಿಸಿಕೊಂಡು ನೂರಕ್ಕೂ ಮಿಕ್ಕಿದ ಹಸಿರು ಬಣ್ಣದ ವ್ಯಾನುಗಳು ಬಂದೂಕುಧಾರಿ ಸಿಪಾಯಿಗಳನ್ನು ಹೊತ್ತು ವಿಶಾಲ ಮೈದಾನದಲ್ಲಿ ಸಾಲಾಗಿ ನಿಂತುಬಿಟ್ಟವು. ಪರಿಸ್ಥಿತಿಯು ತೀರಾ ವಿಕೋಪಕ್ಕೆ ಹೋಗಿದ್ದುದರಿಂದ ಸಿಪಾಯಿಗಳನ್ನು ಕಳುಹಿಸುವ ಅವಶ್ಯಕತೆ ಅಧಿಕವಾಗಿತ್ತು. ಉಗ್ರ ಚಳುವಳಿಗಾರರು ತಂತಿ ಕಂಬಗಳನ್ನು ದಾರಿಯ ಸೇತುವೆಗಳನ್ನು ನೆಲಸಮ ಮಾಡುತ್ತಲೇ ಇದ್ದರು. ಸತ್ಯಾಗ್ರಹದ ರುದ್ರದರ್ಶನವಾಗುತ್ತಿದ್ದಂತೆ ಹಸಿರು ವ್ಯಾನಿನಿಂದ ಬಂದೂಕನ್ನು ಹೆಗಲಮೇಲಿರಿಸಿಕೊಂಡ ಸಿಪಾಯಿಗಳು ಮೈದಾನದತ್ತ ಧುಮುಕಿ ತಾವು ಬಂದಿರುವ ಸೂಚನೆ ಎಂಬಂತೆ ಎರಡು ಗುಂಡು ಹಾರಿಸಿದರು. ಸತ್ಯಾಗ್ರಹಿಗಳು ತಲೆಮರೆಸಿಕೊಂಡರು. ತಮ್ಮೂರಿಗೆ ಸಿಪಾಯಿಗಳು ಬಂದಿದ್ದಾರೆ ಎಂಬ ಸುದ್ದಿ ಹರಡಿದಾಗಲೇ ರಸ್ತೆಯಲ್ಲಿ ಜನಸಂಚಾರವೇ ಇಲ್ಲವಾಯ್ತು.

ಸಿಪಾಯಿಗಳು ಡೇರೆ ಕಟ್ಟಿಕೊಂಡಿರುವ ಮೈದಾನದ ತೆಂಕಿನ ಹೊಂಡದಲ್ಲಿ ಕಾಳಾಚಾರಿಯ ಮನೆ. ತೋಟದ ಕಿರು ದಾರಿಯಲ್ಲಿ ನಿಂತರೆ ಸಿಪಾಯಿಗಳ ಸಾಲು ಸಾಲು ವ್ಯಾನುಗಳು ಕಾಣಿಸುತ್ತವೆ. ನಡುವೆ ಅರ್ಧ ಆಳು ಎತ್ತರದ ಮಣ್ಣುದರೆ ಮಾತ್ರ. "ಸಿಪಾಯಿಗಳು ಬಂದಿದ್ದಾರೆ. ಮನೆಯಿಂದ ಹೊರಹೋಗಬೇಡ. ಹಾಗೆ ಕೆರೆಗೆ ಹೋಗುವುದಾದರೆ ಹಿಂದಿನ ಬಯಲು ದಾರಿಯಲ್ಲಿ ಹೋಗು" ಎಂದು ಆಚಾರಿ ತನ್ನ ಮಗಳಿಗೆ ಮುಂದಾಗಿ ಹೇಳಿದ್ದ. ಸಿಪಾಯಿಗಳು ಎಂದಾಗ ಚನ್ನಮ್ಮ ನಡುಗಿದಳು. "ಅಯ್ಯೋ... ಸಿಪಾಯಿಗಳು ಎಂದರೆ ನನಗೆ ಭಯ" ಎಂದು ಗಲ್ಲಗಲ್ಲ ಬಡಿದುಕೊಂಡಳು. ಮೈದಾನದ ಪಕ್ಕದಲ್ಲೆ ತನ್ನ ಮನೆಯಿರುವುದರಿಂದ ಕಾಳಾಚಾರಿ ಅವಳು ಇರುವುದನ್ನು ಸಿಪಾಯಿಗಳಿಗೆ ತಿಳಿಯದಂತೆ ಮಾಡುವ ಯತ್ನದಲ್ಲಿ ಕತ್ತಲಾದ ಮೇಲೆ ಒಂದು ದೀಪ ಕೂಡಾ ಹಚ್ಚಿರಲಿಲ್ಲ.

ಮಾರನೆಯ ಬೆಳಿಗ್ಗೆ ಬೆಳಕು ಹರಿದ ಅನಂತರವೇ ಚೆನ್ನಮ್ಮ ತೋಟದ ಕೆರೆಗೆ ಹೊರಟಳು. ದಾರಿಯಲ್ಲಿ ಬರುತ್ತಿದ್ದಂತೆ ಸಿಪಾಯಿಗಳ ಕಾಲಿನ

ಬೂಟ್ಸಿನ ವಿಚಿತ್ರ ಸದ್ದು ಅವಳ ಆಸಕ್ತಿಯನ್ನು ಕೆರಳಿಸಿತು. ಹೊನ್ನೆಮರದ ಮರೆಯಲ್ಲಿ ನಿಂತೇ ನಡಿಗೆಯ ಸದ್ದನ್ನು ಆಲಿಸಿದಳು. ಏಕೋ ಅದು ಅವಳಿಗೆ ಹಿತವಾಗಿ ಕಂಡಿತು. ಅಂತಹ ನಡಿಗೆಯ ಸಪ್ಪಳವನ್ನು ಆಕೆ ಎಂದೂ ಕೇಳಿರಲಿಲ್ಲ. ತಾನು ಒಮ್ಮೆಯಾದರೂ ಸಿಪಾಯಿಗಳನ್ನು ನೋಡಬೇಕು ಎಂಬ ಹಂಬಲದಿಂದ ಕೈಯಲ್ಲಿ ತಂಬಿಗೆ ಹಿಡಿದೇ ದರೆಯ ಬಳಿ ನಿಂತಳು. ಸಿಪಾಯಿಗಳು ಸಾಲಾಗಿ ನಿಂತು ಬಂದೂಕು ಹಿಡಿದು ಕವಾಯತು ಮಾಡುತ್ತಿದ್ದರು. ತುಂಬಾ ಆಕರ್ಷಕವಾಗಿತ್ತು ಆ ನೋಟ. ಇನ್ನೂ ದೀರ್ಘಕಾಲ ನೋಡುವ ಆಸೆ ಚೆನ್ನಮ್ಮನಿಗೆ. ಆಕೆಗೆ ಅದೊಂದೂ ಅರ್ಥವಾಗದಿದ್ದರೂ ಆ ಸೊಗಸಿನ ಸಿಪಾಯಿಗಳ ಉಡುಪನ್ನು ಕಂಡು ಆನಂದಿಸಿದಳು. ಸಿಪಾಯಿಗಳು ಮೈದಾನದ ಸುತ್ತ ಮಾರ್ಚ್ ಮಾಡುತ್ತಿದ್ದಂತೆ ಒಂದು ಸಾಲು ಚೆನ್ನಮ್ಮ ನಿಂತಿದ್ದ ದರೆಯ ಬಳಿಯಲ್ಲೇ ಬಂದು ನಿಂತಿತು. ಒಬ್ಬ ಸಿಪಾಯಿಯ ದೃಷ್ಟಿ ಚೆನ್ನಮ್ಮನ ಮೇಲೆ ಬಿತ್ತು. ಅವನು ಅವಳನ್ನು ಕಂಡ. ಆದರೆ ಚೆನ್ನಮ್ಮ ಅವನನ್ನು ಗಮನಿಸಿರಲಿಲ್ಲ. ಅರೆತಾಸು ಕಳೆಯಿತು. ಸಿಪಾಯಿಗಳ ಕವಾಯತು ಮುಗಿಯಿತು. ಸಿಪಾಯಿಗಳು ಚದುರಿದ್ದನ್ನು ಕಂಡ ಚೆನ್ನಮ್ಮ ಕೆರೆಗೆ ಹೋಗುವುದನ್ನು ಮರೆತು ಮನೆಗೆ ನಡೆದಳು. ಸಿಪಾಯಿ ಮಾತ್ರ ಆಗಲೇ ತಿಳಿದುಕೊಂಡಿದ್ದ... ಅದೇ ಚೆನ್ನಮ್ಮನ ಮನೆ ಎಂದು.

ರಾತ್ರಿ ಹತ್ತು ಗಂಟೆಯಾಗಿರಬೇಕು. ಆಚಾರಿ ಆಗತಾನೆ ಊಟ ಮುಗಿಸಿ ತಂಬಾಕಿನ ಉಂಡೆಯನ್ನು ದವಡೆಯ ಎಡೆಯಲ್ಲಿಟ್ಟು ಜಗಲಿಯಲ್ಲಿ ಕುಳಿತಿದ್ದ. ಚೆನ್ನಮ್ಮ ಹಾಸಿಗೆ ಕಂಡು ಹತ್ತು ನಿಮಿಷ ಕಳೆದಿತ್ತು. ಆಚಾರಿಯ ಹೆಂಡತಿ ಇನ್ನೂ ಅಡಿಗೆ ಮನೆಯಲ್ಲಿದ್ದಳು. ಸಿಪಾಯಿಗಳ ಠಾಣೆಯಿಂದ ಯಾವ ಗದ್ದಲವೂ ಕೇಳಿಸುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಬೂಟ್ಸಿನ ಸಪ್ಪಳ ಕೇಳಿಸಿತು. ಕಾಳಾಚಾರಿಗೆ ಎಲ್ಲಿಲ್ಲದ ಭಯ. ಕತ್ತಲೆಯಲ್ಲಿ ನೋಡುತ್ತಾನೆ, ಯಾರೋ ಇಬ್ಬರು ಅಂಗಣದಲ್ಲಿ ಬರುತ್ತಿರುವುದು ಕಂಡಿತು. "ಯಾರು...." ಎಂದ. ಯಾರದೂ ಮಾತಿಲ್ಲ. ಎರಡು ಬಂದೂಕಿನ ತುದಿ ಕಾಳಾಚಾರಿಯ ಮುಖದ ಮುಂದೆ ಗೋಚರಿಸಿತು. ಸಿಪಾಯಿಗಳು ಎಂಬುದು ತಿಳಿದಾಗ ಅವನೆದೆ ಒಡೆದೇ ಹೋಗಿತ್ತು. ಏನೇನೋ ಮಂತ್ರ ಪಠಿಸಿದ. ತನ್ನ ದೇವರನ್ನು ಮನಸಲ್ಲೇ ಪೂಜಿಸಿದ. ಗಟ್ಟಿಯಾಗಿ "ಏನು....?" ಎಂದ. ಸಿಪಾಯಿಗಳು

ಆಗಲೇ ಆಚಾರಿಯ ಬಾಯಿಗೆ ಅರಿವೆ ತುಂಬಿಸಿ ಅವನನ್ನೆಳೆದು ತಂದು ಜಗಲಿಯ ಕಂಬಕ್ಕೆ ಬಿಗಿದರು. ಕಟ್ಟು ಬಲವಾಗಿತ್ತು. ಸಿಪಾಯಿಗಳು ತಡ ಮಾಡಲಿಲ್ಲ. ಅಡಿಗೆ ಮನೆಯ ಒಳಹೊಕ್ಕರು. ಹೆಂಡತಿಯ ಗತಿ ಏನಾಗಿತ್ತೋ....ಅಡಿಗೆ ಮನೆಯ ದೀಪ ಆರಿತ್ತು. ಆಕೆಯ ಕೂಗಾಟವೂ ಇದ್ದಿರಲಿಲ್ಲ. ಮನೆ ತುಂಬ ಕತ್ತಲೆ. ನಡುಮನೆಯ ಬಾಗಿಲು ತೆರೆದು ಬೆಂಕಿ ಕಡ್ಡಿ ಗೀರಿದ ಸದ್ದು ಮಾತ್ರ ಆಚಾರಿಗೆ ಕೇಳಿಸಿತ್ತು. ಕಿರ್ರ್ರೋ ಎಂದಿತು ಮನೆಯ ಹಳೆಯ ಬಾಗಿಲು. ಅದನ್ನು ಹಿಂಬಾಲಿಸಿಕೊಂಡೇ ಅಯ್ಯೋ ಎಂದು ಕಿರುಚಿದ್ದಳು ಚೆನ್ನಮ್ಮ. ಆಚಾರಿಗೆ ಇದ್ದಕ್ಕಿದ್ದಂತೆ ಅಳು ಬಂತು. ನನ್ನ ಮಂತ್ರ ಮಾಟದ ವಿದ್ಯೆ ಸಿಪಾಯಿಗಳ ಮುಂದೆ ವ್ಯರ್ಥವಾಯ್ತಲ್ಲ ಎಂದು ಬಹುವಾಗಿ ದುಃಖಿಸಿದ. ನಡುಮನೆಯಲ್ಲಿ ಚೆನ್ನಮ್ಮನ ದೇಹ ಇಬ್ಬರು ಸಿಪಾಯಿಗಳಿಗೆ ಆಹುತಿಯಾಗಿತ್ತು. ಸಿಪಾಯಿಗಳ ರಸ ನಿಮಿಷಗಳು ಅವಳಿಗೆ ಸಾವಿನ ವಿಷಗಳಿಗೆಯಾಗಿ ಪರಿಣಮಿಸಿತ್ತು. ಅದನ್ನು ಆಚಾರಿ ನೋಡಿರಲಿಲ್ಲ. ಬಹಳ ಹೊತ್ತಿನ ಅನಂತರ ಇಬ್ಬರು ಸಿಪಾಯಿಗಳು ಹೊರಬಂದರು. ಕತ್ತಲೆಯಲ್ಲಿ ಅವಸರದ ಹೆಜ್ಜೆಯಿಂದ ತೋಟದ ದಾರಿಯಲ್ಲಿ ನಡೆದರು. ಮಗಳ ಗತಿ ಏನಾಗಿತ್ತೋ... ಹೆಂಡತಿಯನ್ನು ಏನು ಮಾಡಿದ್ದರೋ....ಬೆಳಗಾಯಿತು. ಮಗಳನ್ನು ಕರೆಯುವಂತಿಲ್ಲ. ಹೆಂಡತಿಯನ್ನು ಕೂಗುವಂತಿಲ್ಲ. ಬೆಳ್ಳಗೆ ಬೆಳಕು ಹರಿದರೂ ಚೆನ್ನಮ್ಮ ಹೊರಬಂದಿರಲಿಲ್ಲ. ಹೆಂಡತಿಯೂ ಅಡಿಗೆ ಮನೆಯಿಂದ ಯಾವ ಮಾತನ್ನೂ ಆಡಿರಲಿಲ್ಲ. ಹೊತ್ತು ಎರಡು ಜಾವ ಕಳೆಯುವಷ್ಟರಲ್ಲಿ ಕೆಳತೋಟದ ರಾಮಯ್ಯ ಆಚಾರಿಯ ಮನೆಗೆ ಬಂದ. ರಾಮಯ್ಯ ಆಚಾರಿಯ ಕಟ್ಟುಗಳನ್ನು ಬಿಚ್ಚಿ ಬಾಯಿಗೆ ತುಂಬಿಸಿದ್ದ ಅರಿವೆಯನ್ನು ಹೊರತೆಗೆದ ಮೇಲೆ ಆಚಾರಿ ಗಟ್ಟಿಯಾಗಿ ಕೂಗಿಕೊಂಡು ನಡುಮನೆಯತ್ತ ಧಾವಿಸಿದ. ಚೆನ್ನಮ್ಮ ಸತ್ತು ಬಿದ್ದಿದ್ದಳು. ಅಡಿಗೆ ಮನೆಯಲ್ಲಿ ಆಚಾರಿಯ ಹೆಂಡತಿಯನ್ನೂ ನಡುಕಂಬಕ್ಕೆ ಬಿಗಿದಿದ್ದರು. ಗಂಡಹೆಂಡತಿ ಇಬ್ಬರೂ ಒಂದೇ ಗಂಟಲಿನಿಂದ ರೋದಿಸಿದರು. ಆ ಮೇಲೆ ರಾಮಯ್ಯನಿಗೆ ತಿಳಿಯಿತು "ಸಿಪಾಯಿಗಳು ಹುಡುಗಿಯನ್ನು ಕೊಂದರು." ಎಂದು. ರಾಮಯ್ಯ ಮೈದಾನದತ್ತ ಧಾವಿಸಿದ. ಆದರೆ ಆಗಲೇ ಸಿಪಾಯಿಗಳ ಡೇರೆಗಳೆಲ್ಲವೂ ಮಾಯವಾಗಿದ್ದುವು. ವ್ಯಾನುಗಳು ಒಂದೊಂದಾಗಿ ಮಂಗಳೂರಿಗೆ ಹೋಗುವ ರಸ್ತೆಯಲ್ಲಿ ಹೊರಟ್ಟಿದ್ದುವು.

ಕಾಳಾಚಾರಿ ತುಂಬಿಬಂದ ಕಂಬನಿಯನ್ನು ಒರಸುತ್ತಾ ಆ ದುರಂತ ಯನ್ನು ಹೇಳಿ ಮುಗಿಸಿದ. ರುದ್ರನಿಗೂ ದುಖಃ ತಡೆಯುವುದಕ್ಕಾಗಲಿಲ್ಲ.

"ಛೆ . ಇದೆಂತಹ ಅನ್ಯಾಯ ಸ್ವಾಮಿ ..."ಎಂದ ಹೆಗಡೆ

"ನನ್ನ ಮಂತ್ರ ಮಾಟದ ವಿದ್ಯೆಯಿಂದ ಕೊನೆಗೆ ಯಾವ ಸಾರ್ಥಕತೆ ನನಗೆ ದೊರಕಿತು ಹೇಳಿ. ನನ್ನ ಮಗಳನ್ನು ಇಬ್ಬರು ಸಿಪಾಯಿಗಳು ನನ್ನ ಮುಂದೆಯೇ ಕೊಂದರು. ಆಮೇಲೆ ಅಭಿಪ್ರಾಯ ಬದಲಾಯಿಸಿದೆ ಹೆಗಡೆ ಯವರೆ... ಪಾಪ ಪುಣ್ಯದ ಬಗ್ಗೆ ಈಗ ಬಹಳವಾಗಿ ಯೋಚಿಸುತ್ತೇನೆ" ಎಂದ ಆಚಾರಿ.

* * * *

ಆಚಾರಿಯ ಕಣ್ಣು ಒದ್ದೆಯಾಗಿತ್ತು. ಮುಂದೆ ಇದ್ದಕ್ಕಿದ್ದಂತೆ ಬಿಕ್ಕ ಳಿಸತೊಡಗಿದ. ಹಳೆಯ ದುರಂತ ಘಟನೆಯು ಮನಸ್ಸಿನಲ್ಲಿ ಮರುಕಳಿಸಿ ದಾಗ....ಮುದ್ದು ಮಗಳು ತನ್ನ ಕಣ್ಣು ಮುಂದೆಯೇ ಸತ್ತು ಹುಲ್ಲಿನ ಚಾಪೆಯ ಮೇಲೆ ಬಿದ್ದ ಆ ಸನ್ನಿವೇಶವನ್ನು ನೆನಸಿಕೊಂಡ ಆಚಾರಿ ಮತ್ತೆ ಬಿಕ್ಕಳಿಸುತ್ತಾ ತುಂಡುವಸ್ತ್ರದಿಂದ ಮುಖ ಮುಚ್ಚಿಕೊಂಡು "ಬಂದೂಕಿನ ಮುಂದೆ ನನ್ನ ವಿದ್ಯೆ ಮಣ್ಣು ಮುಕ್ಕಿತು ಹೆಗಡೆಯವರೆ... ಶ್ರೀದೇವಿಯ ಆರಾಧಕನಾಗಿದ್ದರೂ ಸಿಪಾ ಯಿಗಳ ಅನಾಚಾರದಿಂದ ನನ್ನ ಮಗಳನ್ನು ಉಳಿಸಿಕೊಳ್ಳುವುದಕ್ಕೆ ನನ್ನಿಂದ ಆಗಲಿಲ್ಲ" ಎಂದು ಆಚಾರಿ ಅಂಗಳದ ಬದಿಯ ಹೊಯಿಗೆಯ ದಿಬ್ಬದ ಮೇಲೆ ಕಾಲು ಚಾಚಿ ಕುಳಿತುಬಿಟ್ಟ. ಹೆಗಡೆಗೆ ಕೆಲವು ಕಾಲ ಯಾವ ಮಾತು ಹೇಳಿ ಆಚಾರಿಯನ್ನು ಸಮಾಧಾನಿಸಬೇಕೆಂಬುದೇ ತಿಳಿಯಲಿಲ್ಲ. ಹತ್ತು ಸಾರಿ "ಅನ್ಯಾಯ ...ಅನ್ಯಾಯ..."ಎಂದು ಆಚಾರಿಗೆ ಕೇಳಿಸುವಂತೆ ಹೇಳಿದ್ದ. "ಆಗಬಾರದ ಕೆಲಸ ಆಚಾರ್ರೆ ...ನಿಜವಾಗಿಯೂ ಇದು ಸಹಿಸುವುದಕ್ಕೆ ಆಗದ ಕೆಲಸ" ಎಂದು ಮತ್ತೆ ಆಚಾರಿಯ ದುಃಖದ ಬೆಂಕಿಗೆ ಎಣ್ಣೆ ಸುರಿಯುವಂತಹ ಮಾತು ಹೆಗಡೆಯ ಬಾಯಿಂದ ಬಂತು. ಆದರೂ ಕೊನೆಯಲ್ಲಿ ತನ್ನ ಸ್ವಾರ್ಥ ವನ್ನು ನೆನಪಿಗೆ ತಂದುಕೊಂಡೇ "ಹೋಗಲಿ ಬಿಡಿ ಆಚಾರ್ರೆ....ಎಂದೋ ನಡೆ ದದ್ದು. ಇಂದೇಕೆ ನೆನಸಿಕೊಂಡು ಅಳುತ್ತೀರಿ. ಅವಳ ಹಣೆಯಲ್ಲಿ ಬರೆದದ್ದು. ಸಾವಿನ ಬಗ್ಗೆ ನಮ್ಮ ಯತ್ನ ಏನಿದೆ ? ನನ್ನ ಸೋದರಮಾವನ ಮಗ ಸಾಗರದ

ಆಗಸ್ತ್ರರ ರೈಲು ಕಂಬಿಗೆ ತಲೆ ಕೊಟ್ಟು ಸತ್ತ. ಆ ಹುಡುಗ ಹುಟ್ಟಿದ್ದು ಆರಡಿಯಲ್ಲಿ. ಬೆಳೆದದ್ದು ಬೇಳೂರಿನ ಮನೆಯಲ್ಲಿ. ಮದುವೆ ಆದಮೇಲೆ ದುಡಿಮೆ ಆರಂಭಿಸಿದ್ದು ಹಸಿಯುದ ಅಡಿಕೆ ತೋಟದಲ್ಲಿ. ಕೊನೆಯಲ್ಲಿ ಅವನು ಸತ್ತದ್ದು ಸಾಗರದ ಹತ್ತಿರದ ಒಂದು ಕಾಸಿನ ಜಾಗದಲ್ಲಿ. ಅವನ ಸಾವು ಅದೇ ಜಾಗದಲ್ಲಿ ಎಂದು ಬರೆದಿತ್ತೋ ಏನೋ...ಯಾರು ಯಾರಿಗೆ ಎಷ್ಟೆಷ್ಟು ದಿನ ಅನ್ನ ನೀರಿನ ಋಣ ಈ ಭೂಮಿಯ ಮೇಲೆ ಇದೆಯೋ....ಅಲ್ಲಿಯತನಕ ಬದುಕು. ಅದು ಮುಗಿಯಿತೆಂದರೆ ಸಾವು ನಿಶ್ಚಯ. ನಿಮ್ಮ ಮಗಳ ಆಯುಷ್ಯ ಅಂದಿಗೆ ಮುಗಿದಿತ್ತು. ಇಲ್ಲವಾದರೆ ಇಂತಹ ಸಾವು ಬರುವುದೆ ? ಯಾವೂರಿಂದಲೋ ಸಿಪಾಯಿಗಳು ಬರುವುದೆಂದರೇನು ? ನಿಮ್ಮ ಮನೆಯ ಪಕ್ಕದ ಮೈದಾನದಲ್ಲೆ ಅವರು ಬಿಡಾರ ಹೂಡುವುದೆಂದರೇನು ? ನಿಮ್ಮ ಮಗಳು ಆ ಪಾಪಿಗಳ ಕಣ್ಣಿಗೆ ಬೀಳುವುದೆಂದರೇನು ? ಇದೆಲ್ಲಾ ವಿಧಿವಿಚಿತ್ರ ಆಚಾರ್ರೆ. ಹೋಗಲಿ....ಆಗಿ ಹೋದದ್ದು....ಮರೆತು ಬಿಡಿ" ಎಂದು ಹೆಗಡೆ ಹಾಗೆ ಸಮಾಧಾನಿಸಿ ಆನೆ ಮಾರ್ಕಿನ ಒಂದು ಸಿಗರೇಟನ್ನು ಆಚಾರಿಯ ಕೈಯಲ್ಲಿಟ್ಟು ಬೆಂಕಿಪೊಟ್ಟಣ ಹೊರತೆಗೆದ. ಆದರೆ ಮಗಳನ್ನು ಕಳೆದುಕೊಂಡ ದುಃಖ ಆಚಾರಿಗೆ. ಅದು ನೆನಪಿಗೆ ಬಂತು ಎಂದರೆ ಮತ್ತೆ ಆ ದಿನವೆಲ್ಲಾ ಆವನ ಸ್ಥಿತಿ ಹದಗೆಡುತ್ತಿತ್ತು. "ಏನೇ ಅನ್ನಿ ಹೆಗಡೆಯವರೆ ನನ್ನ ಮಗಳಿಗೆ ಆ ಸಾವು ಬರಬಾರದಿತ್ತು. ಯಾರ ಹೆಣ್ಣು ಮಕ್ಕಳೇ ಆಗಲಿ ..ಆ ರೀತಿ ಮಾನ ಕಳೆದುಕೊಂಡು ಹೆಣವಾಗಿ ಬೀಳುವುದನ್ನು ನಾನು ನೋಡಬಾರದಿತ್ತು. ಆ ದಿನ ನನ್ನ ಮಗಳು ಚಾಪೆಯ ಮೇಲೆ ಬಿದ್ದದ್ದನ್ನು ನೀವು ನೋಡಿದ್ದರೆ ..." ಅರ್ಧದಲ್ಲೆ ಮಾತು ನಿಲ್ಲಿಸಿದ ಆಚಾರಿ ಗೋಳೋ ಅಳುತ್ತಾ ಮತ್ತೆ ಮುಖ ಮುಚ್ಚಿಕೊಂಡ. ಹೆಗಡೆಗೆ ದಿಕ್ಕೇ ತೋಚಲಿಲ್ಲ. ಅವನ ಗಮನವೆಲ್ಲಾ ಮಂತ್ರ ಮಾಟದಲ್ಲಿ....ಗಿರಿಜಳನ್ನು ಅವ ಮಾನಿಸುವುದರಲ್ಲಿ. ಆದರೆ ಆಚಾರಿ ಅವೆಲ್ಲವನ್ನೂ ಮರೆತು ಕಂಬನಿ ಸುರಿಸುವುದನ್ನೆ ಮುಂದುವರಿಸಿದ್ದ. "ಆಚಾರ್ರೆ .. ಸಮಾಧಾನ ಮಾಡಿಕೊಳ್ಳಿ. ಇನ್ನು ಅಳುವುದರಲ್ಲಿ ಏನು ಪ್ರಯೋಜನ. ಹೀಗೆ ಕಂಬನಿ ಸುರಿಸಿ ನಿಮ್ಮ ಮಗಳನ್ನು ಮರಳಿ ಪಡೆಯುವ ಆಸೆ ಇದ್ದರೆ ವರ್ಷಗಟ್ಟಲೆ ಅತ್ತರೂ ನನ್ನ ಅಡ್ಡಿಯಿಲ್ಲ. ಆದರೆ ವ್ಯರ್ಥ ಗೋಳಾಟ. ಅದರಿಂದ ನಿಮಗೂ ಶ್ರಮ. ನನ್ನ ಕಾರ್ಯಕ್ಕೂ ತೊಂದರೆ" ಎಂದ ಹೆಗಡೆ ಕೊಂಚ ಗಟ್ಟಿಯಾಗಿ. ಆಚಾರಿಗೆ ಅದು ಕೇಳಿಸಿತೋ

ಇಲ್ಲವ್ರೋ ಮತ್ತೆ ತನ್ನದನ್ನೆ ಹೇಳಿದ. "ಮುಖ್ಯ ನನ್ನ ಪಾಪ ಕರ್ಮ ಅನ್ನಿ. ನನ್ನ ವಿದ್ಯೆಯಿಂದ ನಾಲ್ಕು ಮಂದಿಗೆ ಉಪಯೋಗವಾಗಲಿಲ್ಲ. ಮಂತ್ರ ಶಕ್ತಿ ಕೆಲವರ ಕೆಡುಕನ್ನೆ ಬಯಸಿತು. ನಾನು ಒಳ್ಳೆಯದನ್ನೆ ಯೋಚಿಸಿದ್ದರೆ ದೇವರು ನನಗೂ ಒಳ್ಳೆಯದನ್ನೆ ಮಾಡುತ್ತಿದ್ದ. ಹೇಳುತ್ತೇನೆ ಹೆಗಡೆಯವರೆ ಎಷ್ಟೋ ಸಂಸಾರವನ್ನು ಹಾಳುಮಾಡುವುದಕ್ಕೆ ನನ್ನ ಮಂತ್ರ ಮಾಟ ಸಹಾಯ ಮಾಡಿದೆ. ಹಾಡಿಮನೆ ಸದಿಯನ ಹೆಂಡತಿಯನ್ನು ನನ್ನ ಮಂಚಕ್ಕೆ ಕರೆಯಿಸಲು ನನ್ನ ವಿದ್ಯೆಯೇ ಉಪಯೋಗವಾಯ್ತು. ಇನ್ನೊಬ್ಬರ ಹೆಂಡತಿಯನ್ನು ಬಯಸಿದ ದ್ರೋಹ ಅದು ನೋಡಿ. ಇದಾದರೂ ನನಗೆ ಅಷ್ಟೊಂದು ಪಾಪಕರ್ಮವಾಗಿ ಕಾಣುವುದಿಲ್ಲ. ಇದನ್ನೆಲ್ಲಾ ನಿಮ್ಮಲ್ಲಿ ಹೇಳಬಾರದು. ಆದರೂ ಹೇಳುತ್ತೇನೆ. ನೆರೆಹಳ್ಳಿಯ ಸೆಟ್ಟರ ಸೈಕಿಯ ಒಂದು ಹೆಂಗಸು. ಆಕೆ ತುಂಬಿದ ಬಸುರಿಯಾಗಿದ್ದಾಗಲೇ ನೆತ್ತರು ಕಾರಿಸಿ ಸಾಯಿಸಿದೆ ಸ್ವಾಮಿ. ಅಬ್ಬಾ ...ಅದನ್ನೆಲ್ಲಾ ಎಣಿಸಿಕೊಂಡರೆ ಇನ್ನು ಯಾವ ಶಿಕ್ಷೆ ನನಗೆ ಕಾದಿದೆಯೋ-ಅಂತೂ ಇನ್ನು ಅನುಭವಿಸಬೇಕಾದ್ದು ಏನೂ ಇರಲಿಲ್ಲ. ಮಗಳ ಹೆಣವನ್ನು ನಾನೇ ಹೊತ್ತು ಚಿತೆಯ ಮೇಲಿಟ್ಟು ಬೆಂಕಿ ಹೊತ್ತಿಸಿದೆ. ಅವಳ ಮೂಳೆಯನ್ನೆಲ್ಲಾ ನಾನೇ ಮಡಿಕೆಯಲ್ಲಿ ತುಂಬಿಸಿ ತೋಡಿನ ದಂಡೆಯ ಮಣ್ಣು ತೆಗೆದು ಹೂತು ಬಂದೆ. ಇನ್ನು ಬೇರೆ ಯಾವ ಶಿಕ್ಷೆ ಬೇಕು ? ಸಾಕು .. ನನ್ನ ಆಯುಸ್ಸು ಈಗಲೇ ಮುಗಿಯುತ್ತಾ ಬಂತು. ಇನ್ನು ಬದುಕಿರುವಷ್ಟು ದಿನ ಯಾವ ಪಾಪವನ್ನು ಎಸಗದಿದ್ದರೆ ಸಾಕು. ನೀವು ಬಂದದ್ದು ಮಂತ್ರ ಮಾಟ ಮಾಡಿಸುವ ಉದ್ದೇಶವಾಗಿದ್ದರೆ ಅದರ ಬಗ್ಗೆ ಯಾವ ಆಸೆಯನ್ನೂ ಇಟ್ಟುಕೊಳ್ಳಬೇಡಿ. ಬೇರೆ ಪ್ರಾಯಶ್ಚಿತ ಗೀಯಿತ ಮಾಡಿಸುವುದಿದ್ದರೆ ಹೇಳಿ....ಅದರಿಂದ ಒಂದು ಸಂಸಾರಕ್ಕೆ ಹಿತವಾಗುವುದಿದ್ದರೆ ಮಾಡಿ ಕೊಡುತ್ತೇನೆ. ಅದೂ ಒಳ್ಳೆಯ ಕೆಲಸವಾಗಬೇಕು. ಹೆಚ್ಚಿಗೆ ಒತ್ತಾಯ ಮಾಡಬೇಡಿ ಹೆಗಡೆಯವರೆ. ದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ-ಮಾಟದ ಸಾಮಗ್ರಿಗಳನ್ನು ತಿಪ್ಪೆಗೆ ಹಾಕಿದ್ದೇನೆ. ಬೇಕಿದ್ದರೆ ಮನೆಗೆ ಹೋಗಿ ನೋಡಿ-ಇರುವುದು ವಿಭೂತಿ ಕರಡಿಗೆ ಮತ್ತು ನಾಲ್ಕಾರು ಕವಡೆ" ಎಂದ ಆಚಾರಿ ಹೆಗಡೆಯನ್ನೆ ಪಿಳಿಪಿಳಿ ನೋಡುತ್ತಾ. ಹೆಗಡೆ ನಿರಾಶೆಯಿಂದ ಮುಖ ಸಿಂಡರಿಸಿಕೊಂಡೇ ಆಚಾರಿಯನ್ನು ನೋಡಿದ. ಬಂದ ಕಾರ್ಯ ಆಗುವಂತಿರಲಿಲ್ಲ. ಒಂದೇ ಮಾತಿನಲ್ಲಿ ಆಚಾರಿ ಅಭಿಪ್ರಾಯ ತಿಳಿ

ಸಿದ್ದ. ಒಳ್ಳೆಯ ಕೆಲಸವಾಗಿದ್ದರೆ ತಾಯಿತ ಮಾಡಿಕೊಡುತ್ತೇನೆ ಎಂದಿದ್ದಾನೆ. ಏನಿದೆ ಅಂತಹ ಒಳ್ಳೆಯ ಕಾರ್ಯ ? ತಟ್ಟನೆ ಉತ್ಸಾಹವನ್ನು ಕವುರಿಸಿಕೊಳ್ಳು ವುದಕ್ಕೆ ಹೆಗಡೆಯ ಕೆಚ್ಚು ಬಿಡಲಿಲ್ಲ. ಮಗಳನ್ನು ಕಳೆದುಕೊಂಡ ದುಃಖದಲ್ಲಿ ರುವಾಗ ಆಚಾರಿಯ ಬಾಯಿಂದ ನಾಲ್ಕು ಒಳ್ಳೆಯ ಮಾತು ಬಂದಿದ್ದರೂ ಅದು ಹೆಚ್ಚಲ್ಲ ಎಂಬುದು ಹೆಗಡೆಯ ಮನಸ್ಸಿಗೆ ಹೊಳೆದ ವಿಚಾರ. ದೇವರ ನೆನಪು ಬರುವುದು ಅಂತಹ ಸಂದರ್ಭದಲ್ಲೆ ಎಂದು ಹೆಗಡೆ ತನ್ನಲ್ಲೆ ಅಂದುಕೊಂಡ. ಮಂತ್ರ ಮಾಟ ಮಾಡಿಸಿ ಗಿರಿಜಳ ಬಾಳ್ವೆ ಹಾಳುಮಾಡುದಕ್ಕೆಂದೇ ಹೆಗಡೆ ಬಂದಿದ್ದ. ಆದರೆ ಅದು ಅಸಾಧ್ಯವೆಂದರೆ ತಾಯಿತದಿಂದ ತನ್ನವಳಾಗಿ ಮಾಡಿಕೊಳ್ಳುವುದು ಸುಲಭವಾಗಿದ್ದರೆ ಆ ಕಾರ್ಯವನ್ನೆ ಏಕೆ ಮಾಡಬಾರದು? ಎಂದು ಹೆಗಡೆ ಕೊನೆಯದಾಗಿ ನಿರ್ಧರಿಸಿದ. ಒಂದು ತಾಯಿತದ ಶಕ್ತಿಯೇ ಗಿರಿಜಳನ್ನು ತನ್ನ ಹಾಸಿಗೆಗೆ ಎಳೆಯುವಷ್ಟು ಮಹತ್ವದ್ದಾಗಿದ್ದರೆ ಆಚಾರಿಗೆ ಮತ್ತೆ ಕೈಮುಗಿಯುವುದೇ ಇರುವ ಉಪಾಯವಾಗಿತ್ತು. ಆಚಾರಿಯ ಮನ ಸ್ಸನ್ನು ಒಲಿಸಿಕೊಳ್ಳುವ ಯತ್ನದಲ್ಲೆ ಹೆಗಡೆ ಮಾತಿನ ರೀತಿಯನ್ನೆ ಬದಲಿಸಿದ.

"ಆಚಾರ್ರೆ... ತಾವು ನನ್ನ ಬಗ್ಗೆ ತಪ್ಪು ತಿಳಿದುಕೊಂಡಿರಾ ...?" ಎಂದ ಹೆಗಡೆ ಹುಸಿನಗೆಯನ್ನು ಮುಖತುಂಬ ಚೆಲ್ಲಿ.

"ಏಕೆ ತಪ್ಪು ತಿಳಿದುಕೊಳ್ಳುತ್ತೇನೆ."

"ಹಾಗಲ್ಲ... ಮಾಟ ಮಾಡಿಸುವ ಉದ್ದೇಶದಿಂದ ಇಲ್ಲಿಗೆ ಬಂದಿದ್ದೇನೆ ಎಂದು ನಿಮ್ಮ ಅಭಿಪ್ರಾಯವೆ ?"

"ಛೆ ! ಹಾಗೆಂದಿಗೂ ನಿಮ್ಮ ಬಗ್ಗೆ ಭಾವಿಸಿಲ್ಲ ಹೆಗಡೆಯವರೆ. ಆ ಉದ್ದೇಶ ನಿಮಗಿಲ್ಲವಾದರೆ ತುಂಬಾ ಸಂತೋಷ. ನನ್ನ ಕೆಲಸ ಇನ್ನೂ ಸುಲಭವಾಯ್ತು. ಏಕೆ ಮೊದಲೇ ಹೇಳಿದೆನೆಂದರೆ, ಬರುವವರೆಲ್ಲಾ ಅದೇ ಕಾರ್ಯದ ಮೇಲೆ ಬರು ತ್ತಾರೆ. ನೀವು ನಂಬಿದರೆ ನಂಬಿ....ಇಂದಿನವರೆಗೂ ಒಬ್ಬರಾದರೂ ಒಳ್ಳೆಯ ಕಾರ್ಯಕ್ಕಾಗಿ ನನ್ನ ಬಳಿ ಬಂದವರಿಲ್ಲ...."

"ಹಾಗೇನು... ಹಾಗಿದ್ದರೆ ನಾನು ಬಂದಿರುವುದು ತುಂಬಾ ಒಳ್ಳೆಯ ಕೆಲಸಕ್ಕಾಗಿ" ಎಂದು ಹೆಗಡೆ ತನ್ನ ಘನಸ್ತಿಕೆಯನ್ನು ಹಾಗೆ ಪ್ರದರ್ಶಿಸಿದ. ಅಂತೂ ರಹಸ್ಯವನ್ನು ಬಯಲು ಮಾಡಲು ಹೆಗಡೆಯ ಅಂತರ್ಯ ಸಮ್ಮತಿಸ ಲಿಲ್ಲ.

"ನಿಮ್ಮ ಪಾಲಿಗೆ ದೇವರ ಅನುಗ್ರಹವಿದೆ. ಅಂತಹ ಅವಕಾಶ ನನಗೆ ಸಿಕ್ಕಿದ್ದರೆ ಸಾಕಾಗಿತ್ತು. ಸಾಯುವ ಮೊದಲು ಹತ್ತು ಸಂಸಾರ ನನ್ನಿಂದ ನಗುವಂತಾದರೆ ಮತ್ತೆ ಚಿಂತೆಯೇ ಇಲ್ಲ. ತಾವು ಬಂದದ್ದು ಒಳ್ಳೆಯ ಕೆಲಸ ವಾಗಿದ್ದರೆ ಇಷ್ಟೆಲ್ಲಾ ನಾನು ಹೇಳಬೇಕಾದ ಪ್ರಸಂಗವೇ ಇರುತ್ತಿರಲಿಲ್ಲ"

"ಇದು ಇನ್ನೊಂದು ಸಂಸಾರದ ವ್ಯವಹಾರವೇ ಅಲ್ಲ ಸ್ವಾಮಿ. ನನ್ನದೇ ಸಂಸಾರ" ಎಂದು ಹೆಗಡೆ ವಿಷಯವನ್ನು ಜಾಣತನದಿಂದ ಹಾಗೆ ಆಚಾರಿಗೆ ತಿಳಿಸುವ ಮನಸ್ಸು ಮಾಡಿದ.

"ಹೇಳಿ ಹೆಗಡೆಯವರೆ .. ನನ್ನಿಂದಾದ ಸಹಾಯ ಮಾಡುತ್ತೇನೆ ..."

"ಅಷ್ಟೊಂದು ದೊಡ್ಡ ಬುದ್ಧಿ ತಮ್ಮದು ಎಂದು ಊರೇ ಹೇಳುತ್ತದೆ ನೋಡಿ. ಕಾಸಿಗೆ ಬಾಯಿಬಿಟ್ಟು ಆಚಾರಿ ತನ್ನ ವಿದ್ಯೆ ಮಾರಿಕೊಂಡಿಲ್ಲ ಎಂದು ಎಲ್ಲರೂ ಹೇಳುತ್ತಾರೆ ..." ಎಂದು ಹೆಗಡೆ ಹೊಗಳಿಕೆಯ ಮಾತಿನಿಂದ ಆಚಾರಿಯನ್ನು ಹಿಗ್ಗಿಸಿದ.

ಹೊಗಳಿಕೆ ಯಾರಿಗೆ ಬೇಡ ? ಆಚಾರಿಯ ಎದೆಗುಂಡಿಯೇ ಉಬ್ಬಿತೋ ಏನೋ....

"ಅದೇ ನನ್ನ ಸಂಪಾದನೆ ಸ್ವಾಮಿ .. ಇಷ್ಟೆಲ್ಲಾ ಆದರೂ ನನ್ನ ಮನೆ ಹಂಚು ಕಾಣಲಿಲ್ಲ. ಅಂಗಳ ಸಿಮೆಂಟು ನೋಡಲಿಲ್ಲ" ಎಂದ ಆಚಾರಿ ಹೊಗಳಿಕೆಯ ಉನ್ಮಾದದಿಂದ. ಮೊದಲೇ ತನ್ನ ಪಾಪವನ್ನು ಹೆಗಡೆಯಲ್ಲಿ ಒಪ್ಪಿಕೊಂಡಿದ್ದರೂ ಆಚಾರಿ "ಅದೇ ನನ್ನ ಸಂಪಾದನೆ ಸ್ವಾಮಿ" ಎಂದು ಹೇಳಿಕೊಳ್ಳುವ ಸ್ವಾರ್ಥವನ್ನು ಮಾತ್ರ ಇನ್ನೂ ಬಿಟ್ಟಿರಲಿಲ್ಲ. ಹಲವು ಸಂಸಾರವನ್ನು ಹಾಳುಮಾಡಿದ್ದೇನೆ ಎಂದು ಆಚಾರಿಯೇ ಹೇಳಿದ್ದನ್ನು ಹೆಗಡೆ ಕೇಳಿಸಿಕೊಂಡಿದ್ದರೂ ತನ್ನ ಕಾರ್ಯಸಾಧನೆಗಾಗಿ ಹೆಗಡೆ "ಅಷ್ಟೊಂದು ದೊಡ್ಡ ಬುದ್ಧಿ ಎಂದು ಊರೇ ಹೇಳುತ್ತದೆ" ಎಂದು ಹೇಳುವುದನ್ನು ಮರೆಯಲಿಲ್ಲ.

"ಬೇಡ ಆಚಾರ್ರೆ....ದುಡ್ಡಿನ ಗೌರವ ಕಟ್ಟಿಕೊಂಡು ಏನಾಗಬೇಕಾಗಿದೆ? ಸೂಳೆ ಹಣ ಸಂಪಾದಿಸುವುದಿಲ್ಲವೆ ? ಅದು ಮುಖ್ಯವಲ್ಲ. ಮನುಷ್ಯನಾಗಿ ಹುಟ್ಟಿದಮೇಲೆ ನಾಲ್ಕು ಜನರಲ್ಲಿ ಹೆಸರು ಸಂಪಾದಿಸುವುದು ಇದೆ ನೋಡಿ.... ಅದು ಮುಖ್ಯ. ಮನೆ ಹಂಚು ಕಾಣದಿದ್ದರೇನು ? ನಾಳೆ ಸಾಯುವಾಗ

ಮನೆ ನಮ್ಮ ಹಿಂದೆ ಬರುತ್ತದೆಯೆ ? ನಾನು ಕೂಡಾ ನಿಮ್ಮ ಹೆಸರು ಕೇಳಿಯೇ ಬಂದದ್ದು. ಅದೂ ನನ್ನ ಕುಟುಂಬದ ಹಿತಕ್ಕಾಗಿ. ದೊಡ್ಡ ಮನೆತನದಲ್ಲಿ ಹುಟ್ಟಿದ ನಾನು ಮಂತ್ರ ಮಾಟಕ್ಕೆ ಮನಸ್ಸುಮಾಡುತ್ತೇನೆಯೆ ? ಛೇ ! ನನ್ನ ಸಂಸಾರವೇ ಸರಿಯಿಲ್ಲ. ನನ್ನ ಮತ್ತು ಹೆಗ್ಗಡತಿಯ ನಡುವೆ ವಿರಸ ತಲೆ ಹಾಕಿದೆ ಆಚಾರ್ರೆ. ಇಬ್ಬರೂ ಒಂದೇ ಮನೆಯಲ್ಲಿದ್ದೇವೆ... ಆದರೆ ಮಾತು ಸಲೀಸಾಗಿಲ್ಲ."

"ಹೋ.... ನಿಮ್ಮಲ್ಲಿಯೇ ವಿರಸವಾಗಿದೆಯೆ ?"

"ಹೌದು ಆಚಾರ್ರೆ...."

"ಎಷ್ಟು ಸಮಯವಾಯ್ತು ?"

"ಹೆಚ್ಚು ಕಡಿಮೆ ಒಂದು ತಿಂಗಳು ಎಂದು ಇಟ್ಟುಕೊಳ್ಳಿ"

"ವಿರಸ ಎಂದರೆ.... ಏನಾಗಿದೆ ಹೆಗಡೆಯವರೆ ?"

"ಪ್ರೀತಿ ವಿಶ್ವಾಸ ಕಡಿಮೆ...."

"ಮಾತುಕತೆ ವ್ಯವಹಾರ...."

"ಅದೂ ಇಲ್ಲವಾಗಿದೆ. ನಾನು ಏನಾದರು ಅಂದರೆ ಗೋಡೆ ನೋಡುತ್ತಾ ಹೂಂ ಆಂ ಎನ್ನುತ್ತಾಳೆ"

"ಆ ದಿನದಿಂದ ಸಂಪರ್ಕ ಕೂಡಾ ಇಲ್ಲ ಅನ್ನಿ"

"ಸರಿಹೋಯ್ತು. ಮಾತೇ ಇಲ್ಲ ಎನ್ನುತ್ತೇನೆ–ಮತ್ತೆ ಸಂಪರ್ಕವಿರಲು ಸಾಧ್ಯವೆ ?"

"ಅದಕ್ಕೆ ಇಷ್ಟು ದೂರ ಬರಬೇಕೆ ಹೆಗಡೆಯವರೆ ? ಗಂಡ ಹೆಂಡಿರ ವ್ಯವಹಾರ. ನಡುವೆ ಏನಾಗಿದೆಯೋ ನನಗೆ ತಿಳಿಯದು. ಹೆಂಡತಿಯ ಮನಸ್ಸು ನೋಯುವಂತಹ ಕಾರ್ಯ ನಿಮ್ಮಿಂದ ಏನಾದರೂ ಆಗಿದ್ದರೆ.... ಅವರ ಪ್ರೀತಿಯನ್ನು ಮತ್ತೆ ಸಂಪಾದಿಸುವುದು ನಿಮಗೆ ಸೇರಿದ್ದು."

"ಅಂತಹ ಘಟನೆ ಏನೂ ನಡೆದಿಲ್ಲ ಆಚಾರ್ರೆ. ಅವಳ ಸ್ವಭಾವವೇ ಒಂದು ರೀತಿ ವಿಚಿತ್ರ. ಒಂದು ಮಾತಿಗೆ ಅರ್ಥವಾಗುವುದಿಲ್ಲ. ಎರಡು ಮಾತಿಗೆ ಹುಚ್ಚುಹುಚ್ಚಾಗಿ ವರ್ತಿಸುತ್ತಾಳೆ. ಈ ಗೋಳು ಬೇಡವೆಂದೇ ನಿಮ್ಮಲ್ಲಿಗೆ ಬಂದೆ. ಮುಂದೆ ಅವಳು ನನ್ನನ್ನು ಅಧಿಕವಾಗಿ ಪ್ರೀತಿಸಬೇಕು. ಸದಾ ನನ್ನ ಬಳಿಯಲ್ಲೇ ಇರುವಂತಾಗಬೇಕು. ಅದಕ್ಕೆ ಅಗತ್ಯವಿರುವುದನ್ನು ನೀವು

ಯೋಚಿಸಬೇಕು. ಆಕೆಯ ಸಂಪೂರ್ಣ ಒಲವನ್ನು ನಾನು ಪಡೆಯುವಂತೆ ತಾವು ಏನಾದರೂ ಒಂದು ಮಾಡಿಕೊಡಿ...." ಎಂದ ಹೆಗಡೆ. ಆಕೆಯ ಸಂಪೂರ್ಣ ಒಲವು ಎನ್ನುವ ಮಾತನ್ನು ಗಿರಿಜಳನ್ನು ನೆನಸಿಕೊಂಡೇ ಹೇಳಿದ್ದ. ಆದರೆ ಆಚಾರಿಯನ್ನು ನಂಬಿಸಲು ತನ್ನ ಹೆಂಡತಿ ಎಂದೇ ಸುಳ್ಳು ಹೇಳಿದ್ದ ಹೆಗಡೆ.

"ಆಗಲಿ... ಇದು ಒಂದು ಕುಟುಂಬದ ಹಿತದ ಕಾರ್ಯ. ನಿಜವಾಗಿಯೂ ನೀವು ಬರಬೇಕಾದ್ದೆ. ನಾನು ಖಂಡಿತವಾಗಿಯೂ ಮಾಡಬೇಕಾದ್ದೆ. ಏನೂ ಯೋಚಿಸಬೇಡಿ ಹೆಗಡೆಯವರೆ.... ನನಗೂ ತುಂಬಾ ಸಂತೋಷದ ಕೆಲಸವನ್ನೆ ಒಪ್ಪಿಸಿದ್ದೀರಿ. ಆದರೆ ಇದಕ್ಕೆ ಕೆಲವು ದಿನ ಬೇಕಾಗುತ್ತದೆ. ಈ ಹುಣ್ಣಿಮೆಯ ಒಳಗೆ ಖಂಡಿತಾ ತಾಯಿತ ಮಾಡಿಕೊಡುತ್ತೇನೆ. ಅದನ್ನು ತಯಾರಿಸುವುದಕ್ಕೆ ನನಗೂ ಕೆಲವು ಕಾಲಾವಕಾಶ ಬೇಕು. ನಿಮ್ಮ ಮತ್ತು ನಿಮ್ಮ ಹೆಂಡತಿಯ ನಕ್ಷತ್ರ ಗೊತ್ತಿದ್ದರೆ ಹೇಳಿ...."

"ಯಾರು ಬರೆದಿಟ್ಟಿದ್ದಾರೆ ಸ್ವಾಮಿ ನಕ್ಷತ್ರವನ್ನು...."

"ಹೋಗಲಿ, ನಿಮ್ಮ ಹೆಂಡತಿಯ ಹೆಸರು..."

"ಗಿರಿಜಮ್ಮ..." ಎಂದ ಹೆಗಡೆ ಏನೋ ಒಂದು ಆಸೆಯಿಂದ.

"ಆಗಲಿ....ಹುಣ್ಣಿಮೆಯ ದಿನ ನೀವು ಬನ್ನಿ, ತಾಯಿತ ಕೊಡುತ್ತೇನೆ. ನನ್ನ ಕೆಲಸ ನಿಮಗೆ ಸಮಾಧಾನವಾದರೆ ನಂತರ ಹಣ ಕೊಡಿ. ತಾಯಿತ ಮಾತ್ರ ಕಾಟಾಚಾರದಿಂದ ತಯಾರಿಸುವುದಿಲ್ಲ. ಅದನ್ನು ಅದೇ ದಿನ ಸಂಜೆ ಸೂರ್ಯ ಕಂತುವ ಮೊದಲು ನಿಮ್ಮ ಹೆಂಡತಿಯ ಕೊರಳಲ್ಲಿ ನೀವು ಕಟ್ಟಬೇಕು.."

ಹೆಗಡೆ ಕಂಗಾಲಾದ. ಅದನ್ನು ಹೆಂಡತಿಯ ಕೊರಳಲ್ಲಿ ಬಿಗಿಯುವುದಾಗಿದ್ದರೆ ಅವನು ಹೆದರುತ್ತಿರಲಿಲ್ಲ. ಆದರೆ ಗಿರಿಜಳ ಕೊರಳಿಗೆ ಕಟ್ಟಬೇಕು? ಆ ಕೆಲಸ ಸುಲಭವೆ? ತಬ್ಬಿಬ್ಬಾದ ಹೆಗಡೆ ಪ್ರಶ್ನೆ ಹಾಕಿದ.

"ಹೌದು ಸ್ವಾಮಿ... ನಾನೇ ಅವಳ ಕುತ್ತಿಗೆಗೆ ಕಟ್ಟಬೇಕೇನು?"

"ಹೌದು..ಹಾಗಿದ್ದರೆ ಮಾತ್ರ ಕಾರ್ಯ ಸಫಲವಾಗುತ್ತದೆ"

"ಅದು ಹೇಗಾಗುತ್ತದೆ ಆಚಾರ್ರೆ....ಇಬ್ಬರಿಗೂ ವಿಶ್ವಾಸ ಇಲ್ಲದಾಗ ನಾನು ಹೇಗೆ ಅವಳ ಹತ್ತಿರ ನಿಂತು ಕುತ್ತಿಗೆಗೆ ಕಟ್ಟುವುದು?"

"ಎಷ್ಟಾದರೂ ನಿಮ್ಮ ಹೆಂಡತಿ ಅಲ್ಲವೆ?"

"ಆದರೂ ನನಗೆ ಬಿಗುಮಾನವಿಲ್ಲವೆ ?"

"ಹೋಗಲಿ....ಅವರ ಬಲಗೈ ಗಂಟಿನ ಕೆಳಗೆ ಸುತ್ತಿ " ಎಂದ ಆಚಾರಿ. ಅವನ್ನೂ ಯೋಚಿಸಬೇಕಾಗಿತ್ತು ಹೆಗಡೆ. ಆದರೆ ಹೆಚ್ಚು ಪ್ರಶ್ನೆ ಹಾಕಿದರೆ ಎಲ್ಲಿ ಸಂದೇಹಕ್ಕೆ ಎಡೆಯಾಗುತ್ತದೋ ಎಂದು ಹೆಗಡೆ ಬೇರೆ ಮಾರ್ಗವಿಲ್ಲದೆ "ಸರಿ" ಎಂದು ಒಪ್ಪಿಕೊಂಡ.

"ಸರಿ....ನಿಮ್ಮ ಹೆಂಡತಿಯ ವಯಸ್ಸು "

ಗಿರಿಜಳ ವಯಸ್ಸನ್ನು ಹೇಳಿದ ಹೆಗಡೆ.

"ತುಂಬಾ ಚಿಕ್ಕವರು ನಿಮ್ಮ ಹೆಂಡತಿ...."

"ಅದೇ ಈಗ ತೊಂದರೆಯಾಗಿರುವುದು"

"ಎಲ್ಲಾ ಸರಿಹೋಗುತ್ತದೆ ಸ್ವಾಮಿ...."

"ಹಾಗಿದ್ದರೆ ನಾನು ಮತ್ತೆ....ಇನ್ನೊಮ್ಮೆ ಬರುವಂತಾಯ್ತು"

"ಬರಲೇಬೇಕು ಹೆಗಡೆಯವರೆ....ಇಂತಹ ಕೆಲಸಕ್ಕೆ ಉದಾಸೀನ ಮಾಡಲೇ ಬಾರದು"

"ಛೆ ! ಮುಖ್ಯ ನನ್ನ ಹಿತದ ಬಗ್ಗೆ ತುಂಬಾ ಯೋಚಿಸಿದ್ದೇನೆ. ಆಗಲಿ ....ಈ ಒಂದು ನೋಟು ನಿಮ್ಮಲ್ಲಿ ಇರಲಿ—ಮತ್ತೆ ಬಂದಾಗ ಕೊಡುತ್ತೇನೆ. ನಾನೀಗ ಜರೂರಾಗಿ ಮನೆಗೆ ಹೋಗಬೇಕಾಗಿದೆ." ಎನ್ನುತ್ತಾ ಐದು ರೂಪಾಯಿಯ ಒಂದು ನೋಟನ್ನು ಆಚಾರಿಯ ಕೈಯಲ್ಲಿಟ್ಟ.

"ಬರುತ್ತೇನೆ....ಹೇಳಿದ ಕೆಲಸ ಮಾತ್ರ ಮರೆಯಬೇಡಿ... ನಮಸ್ಕಾರ...." ಎನ್ನುತ್ತಾ ಹೆಗಡೆ ಹೆಜ್ಜೆಯನ್ನು ಎತ್ತಿ ಮುಂದಿಟ್ಟ.

"ಈ ಆಚಾರಿಯ ತಾಯಿತದ ಮಹತ್ವ ಮತ್ತೆ ನಿಮಗೆ ತಿಳಿಯುತ್ತದೆ. ಮುಂದೆ ಅರೆಕ್ಷಣ ಆಕೆ ನಿಮ್ಮನ್ನು ಬಿಟ್ಟಿದ್ದರೆ ಹೇಳಿ—ನಮಸ್ಕಾರ—ಹೋಗಿ ಬನ್ನಿ" ಎಂದ ಆಚಾರಿ ನೋಟನ್ನು ಉಡಿಯಲ್ಲಿ ಬಿಗಿಯುತ್ತಾ. ನೋಟನ್ನು ಕಂಡದ್ದೇ ಆಚಾರಿಗೆ ಎಲ್ಲಿಲ್ಲದ ಸಂಭ್ರಮ. "ಹಾರೆ ಹಿಡಿಯುವ ಕರ್ಮ ನನಗೇಕೆ ?" ಎನ್ನುತ್ತಾ ಹಾರೆಯನ್ನು ದಿಬ್ಬದತ್ತ ತಳ್ಳಿ ಮನೆಗೆ ಬಂದ.

"ಆಚಾರಿಯ ತಾಯಿತದ ಮಹತ್ವ ಮತ್ತೆ ನಿಮಗೆ ತಿಳಿಯುತ್ತದೆ. ಮುಂದೆ ಅರೆಕ್ಷಣ ಆಕೆ ನಿಮ್ಮನ್ನು ಬಿಟ್ಟಿದ್ದರೆ ಹೇಳಿ...." ಎಂದು ಆಚಾರಿ ಹೇಳಿದ ಮಾತು ನೆನಪಿಗೆ ಬಂದಾಗ ಹೆಗಡೆಗೆ ಎಷ್ಟೇ ಸಮಾಧಾನವಾಗಿದ್ದರೂ....ಆ

ತಾಯಿತವನ್ನು ಕಟ್ಟಬೇಕಾಗಿರುವುದು ಗಿರಿಜಳ ಕುತ್ತಿಗೆಗೆ. ಹೇಗೆ ಕಟ್ಟುವುದು ? ಹೋಗಲಿ....ಕೈಗಾದರೂ ಸುತ್ತುವುದು ಹೇಗೆ ಸಾಧ್ಯ ? ಹಾಗೆ ಗಿರಿಜಳ ಕುತ್ತಿಗೆಗೆ ಅದನ್ನು ಬಿಗಿಯುವುದಾಗಿದ್ದರೆ ಎಷ್ಟು ಒಳ್ಳೆಯದಿತ್ತು ? ಅರೆಕ್ಷಣವೂ ಆಕೆ ನನ್ನನ್ನು ಬಿಡುತ್ತಲೇ ಇರುತ್ತಿರಲಿಲ್ಲವಲ್ಲ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು ? ಹುಣ್ಣಿಮೆಯ ದಿನ ತಾಯಿತ ಕೈಗೆ ಬರುತ್ತದೆ. ಅದನ್ನು ತಂದು ಗಿರಿಜಳ ಕೈಗೆ ಕಟ್ಟಿದರೆ ? ಛೆ ! ಎಂತಹ ಅವಕಾಶ ? ಗಿರಿಜ ತನ್ನವಳಾಗುವುದಿಲ್ಲವೆ ? ಅದೇ ಹೆಗಡೆಗೆ ಉತ್ಸಾಹ ಹುಟ್ಟಿಸಿತು. ಹೆಜ್ಜೆಯ ವೇಗ ಹೆಚ್ಚಿತು. ಬಿಸಿಲಿನ ಕಾವನ್ನು ಗಮನಕ್ಕೆ ತಂದುಕೊಳ್ಳದೆ ಬರಾಕಿನಿಂದ ನಡೆದುಬಂದ. ಮೊಗೆಬೆಟ್ಟಿನ ಬಯಲು ದಾರಿಗೆ ಬಂದಾಗ ಮತ್ತೆ ಯೋಚಿಸಿದ....ತಾಯಿತವನ್ನು ಹೇಗೆ ಗಿರಿಜಳ ಕೊರಳಲ್ಲಿ ಕಟ್ಟುವುದು. ಬೇಡ .. ಕೈಗಾದರೂ ಸುತ್ತುವುದು ಹೇಗೆ ?

೧೬

ಮೊಗೆಬೆಟ್ಟಿನ ಬಯಲುದಾರಿಗೆ ಬಂದಾಗ ಎಲ್ಲಿಯೋ ಗಮನವಿಟ್ಟಿದ್ದ ಹೆಗಡೆಗೆ ತಟ್ಟನೆ ಆಚಾರಿಯ ಮಾತು ನೆನಪಿಗೆ ಬಂದು, ಅರೆಗಳಿಗೆ ಗದ್ದೆಯ ಅಂಚಿನ ಮೇಲೆ ನಿಂತು ಉಗುರು ಕಚ್ಚುತ್ತಾ ಯೋಚಿಸತೊಡಗಿದ. "ಛೆ! ಎಂತಹ ಕೆಲಸ ಆಗಿಹೋಯ್ತು. ಆಚಾರಿಯಲ್ಲಿ ತಾನು ಗುಟ್ಟುಮಾಡಿದ್ದೇ ಇಷ್ಟು ಕಷ್ಟಕ್ಕೆಬಂತು. ಇದ್ದ ವಿಚಾರ ಹೇಳಿ ಅವನ ಮನಸ್ಸನ್ನು ಒಲಿಸಿಕೊಂಡಿದ್ದರೆ ಈ ತಾಪತ್ರಯವೇ ಇರುತ್ತಿರಲಿಲ್ಲ. ನಮ್ಮೂರ ದೇವಾಲಯದ ಚಾಮರ ಬೀಸುವ ಹುಡುಗಿಯ ಮೇಲೆ ನನ್ನ ಕಣ್ಣು ಬಿದ್ದಿದೆ ಎಂದಿದ್ದರೆ ಆಚಾರಿ ಏಕೆ ತಪ್ಪು ತಿಳಿದುಕೊಳ್ಳುತ್ತಿದ್ದ. ಇದೇನು ಪ್ರಪಂಚದಲ್ಲಿ ನಡೆಯದ ವಿಚಾರವೆ? ಮೂಲೆಯರ ಹೆಣ್ಣುಗಳೇನು ಮಹಾ ಪತಿವ್ರತೆಯರೆ? ಹಾಗೆಂದುಕೊಳುವುದಕ್ಕೆ ಅವರಿಗೆ ತಾಳಿಕಟ್ಟಿದ ಗಂಡ ಎನ್ನುವವರು ಇದ್ದಿದ್ದರೆ ಆ ಮಾತು ಬೇರೆಯಿತ್ತು. ಅವರ ವೃತ್ತಿಯೋ ಇನ್ನೊಬ್ಬರ ಸೇವೆ ಮಾಡುವುದು. ಹಾಗಿರುವಾಗ ಇದನ್ನು ನಾನು ಆಚಾರಿಗೆ ಹೇಳಿದ್ದರೆ...ವಶೀಕರಣ ಮಂತ್ರವನ್ನಾದರೂ ಹೇಳುತ್ತಿದ್ದನೋ ಏನೋ....ಇದೇನು ಒಬ್ಬರ ಬದುಕನ್ನು ಹಾಳುಮಾಡುವ ಪಾಪ ಕಾರ್ಯವೇನೂ ಅಲ್ಲ....ಏನೋ ಮರ್ಯಾದಿಗಾಗಿ ಸುಳ್ಳು ಹೇಳಿದ್ದಾಯ್ತು. ಮತ್ತೆ ಆಚಾರಿಯನ್ನು ಕಂಡು ಸತ್ಯಸಂಗತಿ ಹೇಳಿದರೆ ತನ್ನ ದೊಡ್ಡಸ್ತಿಕೆಗೆ ಕುಂದು. ಮೊಗೆಬೆಟ್ಟಿನ ಹೆಗಡೆಯ ಮನೆತನದ ಗೌರವ ಏನು ಉಳಿಯುತ್ತದೆ?" ಎಂದು ಹೆಗಡೆ ತನ್ನನ್ನು ತಾನೇ ಹಳಿದುಕೊಂಡ. ನಿಜವಾಗಿಯೂ ಆತನ ಬುದ್ಧಿ ಮಂದವಾಗಿತ್ತು. ಗಿರಿಜಳ ಸಹವಾಸಕ್ಕಾಗಿ ಅವನ ಅಂತರ್ಯ

ಹಾತೊರೆಯುತ್ತಿದ್ದರೂ ದ್ವೇಷದ ಕಿಚ್ಚು ಮಾತ್ರ ಇನ್ನೂ ಉರಿಯುತ್ತಲೇ ಇತ್ತು. ಆಚಾರಿ ಬೇರೆ ಯಾವುದಾದರೂ ಒಂದು ಉಪಾಯ ಹೇಳಿದ್ದರೆ.... ಕೊರಳಿಗೆ ತಾಯಿತ ಬಿಗಿಯುವ ದೊಡ್ಡ ಕಷ್ಟದ ಕಾರ್ಯವನ್ನು ಅವನೇಕೆ ಹೇಳಿದ? ಹೋಗಲಿ—ಈ ತಾಯಿತವನ್ನು ಆಕೆಯ ಕೈಗೆ ಸುತ್ತುವುದಾದರೂ ತನ್ನಿಂದಾಗುತ್ತದೆಯೆ? ಬಲಾತ್ಕಾರದಿಂದ ಸುತ್ತಿದರೂ ಆಕೆ ನಾಳೆ ಅದನ್ನು ಕಿತ್ತು ಬಿಸಾಡಿದರೆ ...ಮತ್ತೆ ನನ್ನನ್ನು ಕಂಡು ಹೀಕರಿಸುವುದಿಲ್ಲವೆ? ತುಂಬಾ ತಲೆ ಬಿಸಿಯಾಗಿತ್ತು ಹೆಗಡೆಗೆ. ಎರಡು ಸಿಗರೇಟು ಸೇದಿದ. ಕಳೆದವಾರ ಗಿರಿಜಳನ್ನು ಕಂಡಾಗ ಮತ್ತಷ್ಟು ಮೈ ಕೈ ತುಂಬಿಕೊಂಡು ಬೆಳೆದಿದ್ದಳು. ಯಾರೋ ಅಂದ ನೆನಪು ...ಗಿರಿಜಮ್ಮ ಬಸುರಿ ಎಂದು. ಅದೇಕೋ ಹೆಗಡೆಗೆ ಅವಳನ್ನು ಮರೆಯುವುದಾಗಲಿಲ್ಲ. ತನಗೆ ಅವಳ ಒಲವು ಸಿಗದಿದ್ದರೂ ಚಿಂತೆಯಿಲ್ಲ, ಹೆಗಡೆಯಾಗಿ ಹುಟ್ಟಿದ್ದಕ್ಕೆ ಸೇಡು ತೀರಿಸಿಕೊಳ್ಳದೆ ಸಾಯುವುದಿಲ್ಲ ಎಂದು ಹೆಗಡೆ ಬಯಲು ಅಂಚಿನಲ್ಲಿ ನಿಂತೇ ತೀರ್ಮಾನಿಸಿದ. ಕೊನೆಯ ಪಕ್ಷ ರಾತ್ರಿಯೇ ಅವಳ ಮನೆಯ ಬಾಗಿಲು ಒಡೆದು ಬಾಯಿಗೆ ಬಟ್ಟೆ ತುರುಕಿಸಿ ಯಾದರೂ ತನ್ನ ಆಸೆಯನ್ನು ತೀರಿಸಿಕೊಳ್ಳುವ ಕೆಟ್ಟ ಯೋಚನೆಯಿಂದ ಹೆಗಡೆ ಮೀಸೆ ಹುರಿಮಾಡಿಕೊಂಡ. "ಒಂದೇ ಸಾರಿ....ಸಾಕು. ಈ ನನ್ನ ಮೈ ರಕ್ತ ಅವಳ ರಕ್ತಕ್ಕೆ ಸೇರಿಸಿಯೇ ಪ್ರಾಣಬಿಡುತ್ತೇನೆ" ಎಂದು ಎದೆ ತಟ್ಟಿಕೊಂಡ. ಏನು ಕಂಡಿತೋ . ಸೀದಾ ಸೀನನ ಮನೆಗೆ ಬಂದ. ಹೆಡಿಗೆಗೆ ದಾರ ಬಿಗಿಯುತ್ತಿದ್ದ ಸೀನನ ಬಾಯಲ್ಲಿ ಬೀಡಿಯ ಮುಂಡಿತ್ತು. ಕಚ್ಚಿ ಬಿಗಿದಿದ್ದ ಮಾತ್ರ. ತಲೆಯಮೇಲೆ ಅಡಿಕೆಯ ಹಾಳೆಯ ತಟ್ಟಿಯಿತ್ತು. ಹೆಡಿಗೆಗೆ ದಾರ ಬಿಗಿಯುತ್ತಿದ್ದಂತೆ ತೋಟಿನ ದಾರಿಯಲ್ಲಿ ಬಂದ ಹೆಗಡೆಯನ್ನು ದೂರದಿಂದಲೇ ಕಂಡ ಸೀನ. ಹೆಗಡೆಯ ರಾಸಿಗೆ ಹೆದರುತ್ತಿದ್ದ ಸೀನ ಬಾಯಲ್ಲಿದ್ದ ಬೀಡಿಯನ್ನು ಚಕ್ಕೆಂದು ತೆಂಗಿನ ಕಟ್ಟೆಯ ಆಚೆ ಉಗಿದು ...ಮೈಮೇಲೆ ಅಂಗವಸ್ತ್ರ ಹಾಕಿಕೊಂಡು "ನಮಸ್ಕಾರ ಬುದ್ಧಿ" ಎಂದು ಕೈಮುಗಿದ. ಹೆಗಡೆ ನಮಸ್ಕಾರ ಮಾಡುವ ಸಂಪ್ರದಾಯವನ್ನೇ ಇಟ್ಟುಕೊಂಡಿರಲಿಲ್ಲ.

"ಎಲ್ಲಿಯಪ್ಪ ಸುತ್ತಿದ್ದೆ ಇಷ್ಟು ದಿನ .." ಎಂದ ವ್ಯವಹಾರದ ಸಿಡುಕಿನಿಂದ. ಹೆಗಡೆಯ ಮಾತಿನ ರೀತಿಯೇ ಹಾಗೆಂದು ಸೀನನಿಗೆ ಚೆನ್ನಾಗಿ ಗೊತ್ತು. ಅವರನ್ನೆಲ್ಲಾ ಹೆಗಡೆ ಕರೆಯುವುದೇ "ಸೂ....ಮಗನೆ" ಎಂದು.

"ಇಲ್ಲೇ ಇದ್ದೆ ಬುದ್ಧಿ....ಎಂದ" ತಲೆ ಕೆರೆಯುತ್ತಾ.

"ಅರೆ....ಇದೇ ಊರಲ್ಲಿ...."

"ಮತ್ತೆಲ್ಲಿಗೆ ಹೋಗುತ್ತೇನೆ ದೇವರು...."

"ಥೂ... ನಿನ್ನ ಮುಖಕ್ಕೆ ಬೆಂಕಿಹಾಕ. ಏನಾಗಿತ್ತಯ್ಯ ಆ ಕಡೆ ಬರುವುದಕ್ಕೆ. ಮೊನ್ನೆ ಕೋಳಿಪಡೆಗೆ ಹೋಗುವಾಗ ಒಂದು ಜನವಾದರೂ ಬೇಡವೆ? ನೀನಾದರೂ ಬರುತ್ತಿ ಎಂದಿದ್ದೆ."

"ಕೈತುಂಬ ಕೆಲಸ ಬುದ್ಧಿ....ತೋಟದ ಮಣ್ಣು ಹದ ಮಾಡುವುದಕ್ಕೆ ಇಬ್ಬರು ಆಳುಗಳಿಗೆ ಹೇಳಿದ್ದೆ."

"ಹಾಳಾಗಿ ಹೋಗಲಿ....ನಿನ್ನ ರಾಮಾಯಣ ಕೇಳುವುದಕ್ಕೆ ನನಗೆ ಪುರುಸೊತ್ತಿಲ್ಲ. ನಾನು ಬಂದದ್ದು ನಿನ್ನಲ್ಲಿ ಒಂದು ವಿಚಾರ ಕೇಳುವುದಕ್ಕೆ. ಆ ಹೆಡಿಗೆಯನ್ನು ಆ ಕಡೆ ಬಿಸಾಡು. ನೀನು ಸ್ವಲ್ಪ ಈ ಕಡೆ ಬಾ" ಎನ್ನುತ್ತಾ ಹೆಗಡೆ ಹುಣಿಸೆಮರದ ಬೇರಿನ ಮೇಲೆ ಕುಳಿತ. ಸೀನ ತಾಟಿ ಪಿಟಕ್ಕೆನ್ನದೆ ಹೆಗಡೆಯ ಮುಂದೆ ಬಂದು ನಿಂತ.

"ಕುಳಿತುಕೊ . ಆ ಬೆಣಚುಕಲ್ಲಿನ ಮೇಲೆ...."

"ಬಿಡಿ ದೇವರು—ನಿಂತರೆ ಕಾಲು ಸವೆಯುವುದಿಲ್ಲ"

"ಹೇಳಿದಷ್ಟು ಮಾಡಯ್ಯ ..." ಎಂದು ಹೆಗಡೆ ಒಮ್ಮೆ ಕಣ್ಣು ಹೊರಳಿಸಿದ. ಬೆಣಚುಕಲ್ಲಿನ ಮೇಲೆ ಕುಳಿತ ಸೀನ. ಒಂದು ಸಿಗರೇಟನ್ನು ಆವನತ್ತ ಒಗೆಯುತ್ತಾ ಹೆಗಡೆ,

"ಏನೋ, ಅವಳನ್ನು ಮತ್ತೆ ಎಲ್ಲಿಯಾದರೂ ಕಂಡಿದ್ದಿಯಾ ?"

"ಯಾರು ದೇವರು....?"

"ಆ ಗಿರಿಜಳನ್ನು...."

"ಎಲ್ಲಿಯೂ ಕಂಡ ಹಾಗೆ ಇಲ್ಲ ಒಡೆಯಾ."

"ನೋಡು ಸೀನಾ . ಏನೋ ಒಂದು ಆಸೆ ಇಟ್ಟುಕೊಂಡು ಆಚಾರಿಯ ಹತ್ತಿರ ಹೋದೆ."

"ಯಾವ ಆಚಾರಿ ಬುದ್ಧಿ ..."

"ಆ ಮಂತ್ರ ಮಾಟ ಮಾಡುತ್ತಾನಲ್ಲ....ಆವನೆ"

"ಏಕೆ ದೇವರು ಹೋದದ್ದು ?"

"ಏನಾದರೂ ಕೆಲಸ ಆಗುತ್ತದೆಯೋ ಎಂದು ಹೋದೆ ನೋಡಪ್ಪ, ಅವ ನೀಗ ಪ್ರಚಂಡ ಧರ್ಮರಾಯನಾಗಿದ್ದಾನೆ. ಸತ್ಯ ಧರ್ಮ ಎಂದರೆ ಅವನಿಂದ ಕಲಿಯಬೇಕು."

"ಒಳ್ಳೆಯದೆ ಆಯ್ತು ದೇವರು. ಎಷ್ಟೋ ಮನೆ ಹಾಳಾಗುವುದು ತಪ್ಪಿತು. ಹಿತ್ತಲಮನೆ ಆಡಿಆರಿಸಿದ್ದು ಅವನೇ ಎನ್ನುತ್ತಾರೆ."

"ಥೂ ...ನಿನ್ನ ಬಾಯಿಗೆ ಮಣ್ಣು ಹಾಕ . ಈಗ ನನ್ನ ಗತಿ ಏನಯ್ಯ"

"ಅವನಿಂದ ನಿಮಗೇನಾಗಬೇಕು . "

"ಏನೋ, ತಿಳಿದೂ ಕೇಳುತ್ತೀಯಲ್ಲ ?"

"ಹೋ .. ಗಿರಿಜಮ್ಮನ ವಿಚಾರವೇನು ?

"ಹೂಂ... ಅಷ್ಟಕ್ಕೇ ಬಿಡುತ್ತೇನೆ ಎಂದುಕೊಂಡೆಯಾ ?"

"............"

"ಏಕೋ ಸುಮ್ಮನಾದೆ . ? "

"............"

"ಏಯ್ ಚೆಪ್ಪು ತಕ್ಕಡಿ....ಏನಾಗಿದೆ ನಿನ್ನ ಬಾಯಿಗೆ ?"

"ಅಯ್ಯ .. ಇನ್ನೂ ತಮಗೆ ಆ ಅಮ್ಮನ ಯೋಚನೆ ಬಿಟ್ಟಿಲ್ಲವೆ ? ಹೇಳು ತ್ತೇನೆ ಅಂತ ಏನೂ ತಿಳಿಯಬೇಡಿ. ನಿಮಗೆ ಹೇಳುವಷ್ಟು ಶಕ್ತಿ ದೇವರು ನನಗೆ ಕೊಟ್ಟಿಲ್ಲ."

"ಮತ್ತೆ ನೀನು ಬೊಗಳುವುದೇನು ?

"ಸಿಟ್ಟು ಮಾಡಬೇಡಿ ದೇವರು .."

"ನನಗೇ ಬುದ್ಧಿ ಹೇಳಲು ಬಂದರೆ ಕಪಾಲಕ್ಕೆ ಹೊಡೆಯುತ್ತೇನೆ ನೋಡು .."

"ಹಾಗಿದ್ದರೆ ನಾನು ಏನೂ ಅನ್ನುವುದಿಲ್ಲ ಒಡೆಯಾ "

"ಅರೆ . ಏನೋ ಹೇಳುವುದಕ್ಕೆ ಹೊರಟವನು ಅರ್ಧದಲ್ಲೇ ಏಕಯ್ಯ ನಿಲ್ಲಿಸಿದೆ ?"

"ತಾವು ಸಿಟ್ಟಾಗುತ್ತೀರ ಬುದ್ಧಿ...."

"ಗಿರಿಜಮ್ಮನ ಬಗ್ಗೆ ತಾನೆ ನೀನು ಹೇಳುವುದು"

"ಹೂಂ...."

"ಅಂದರೆ ಆಕೆಯ ಬಗ್ಗೆ ನಿನ್ನ ಶಿಫಾರಸ್ಸು ತಾನೆ ?"

"ಹಾಗಲ್ಲ ಒಡೆಯಾ....ಇನ್ನು ಬೇಡ ಅಂತ."

"ನಾಲಿಗೆ ಸೀಳುತ್ತೇನೆ ನೋಡು... ಮಗನೆ, ಹೇಳಿದಷ್ಟು ಕೆಲಸಮಾಡು. ಬೇಕು ಬೇಡ ಎನ್ನುವುದು ನನಗೆ ಗೊತ್ತು. ನಿನಗೇನಯ್ಯ ಹೋದದ್ದು. ಅವ ಮಾನಿಸಿಕೊಂಡವವನು ನಾನು. ಒಮ್ಮೆಯಾದರೂ ಗಿರಿಜಳ ಎದೆಯ ಮೇಲೆ ಕೈಯಿಟ್ಟೇ ತೀರುತ್ತೇನೆ" ಎಂದು ಹೆಗಡೆ ಹಲ್ಲು ಕಿರಿಯುತ್ತಾ ಇನ್ನೊಂದು ಸಿಗರೇಟಿಗೆ ಬೆಂಕಿ ಹಚ್ಚಿದ. ಸೀನ ತೆಪ್ಪಗಾದ.

"ಅಯ್ಯ .. ತಪ್ಪಾಗಿ ಅಂದಿದ್ದರೆ ಕ್ಷಮಿಸಿಬಿಡಿ. ನಿಮ್ಮ ಯೋಗ್ಯತೆಗೆ ಇದೆಲ್ಲ ಬೇಡ ಎಂದು ಹೇಳಿದೆ. ಯಾವ ಮಹಾ ಚಂದ ಎಂದು ಆ ಅಮ್ಮನಿಗಾಗಿ ಇಷ್ಟೆಲ್ಲಾ ಒದ್ದಾಡಬೇಕು."

"ಚಂದದ ಮನೆ ಮನೆ ಹಾಳಾಯ್ತು. ತಾನು ಮಹಾ ಪತಿವ್ರತೆ ಎಂದುಕೊಂಡಳು ನೋಡು....ಅದೇ ನನಗೆ ಸಿಟ್ಟು. ಬಿಡುತ್ತೇನೆಯೇ ? ನೀನೇ ನೋಡುತ್ತಿ, ಹೆಗಡೆಯ ಕಿತಾಪತಿ. ಸೋಮಯಾಜರ ಜುಟ್ಟು ಹಿಡಿದೇ ಕೇಳುತ್ತೇನೆ .. ಬಾಕಿ ವಿಚಾರ ಹಿಂದಿನಿಂದ."

"ಏಕೆ ಬುದ್ಧಿ....ಅವರ ಜುಟ್ಟು ಹಿಡಿಯುವುದು....?"

"ಅದೇ ಕೊನೆಯ ಪ್ರಯತ್ನ. ಗುಡಿಯ ಒಳನುಗ್ಗಿ ಸೋಮಯಾಜರಲ್ಲಿ ಹೇಳುತ್ತೇನೆ .. ಗಿರಿಜಳನ್ನು ನನ್ನ ಮನೆಗೆ ಕಳುಹಿಸಿ ಎಂದು. ಗುರುಗುರು ಎಂದರೆ ಕೈಕಾಲು ಮುರಿದು ಪಾತಾಳಗುಂಡಿ ಕಣಿವೆಗೆ ಎಸೆಯುತ್ತೇನೆ ನೋಡು ....ಹೇಗಿದೆ ಉಪಾಯ ? ನಾನು ಹೇಳಿದರೆ ಮತ್ತೆ ಮುಗಿಯಿತು. ಬರುತ್ತೇನೆ ಸೀನಾ. ಸಂಜೆ ಮನೆಕಡೆ ಬಾ. ನನ್ನ ಜೊತೆಯಲ್ಲಿ ನೀನಿದ್ದರೆ ಎಷ್ಟೋ ಹುರುಪು. ಹುಳಿ ಹೆಂಡ ನಾಲ್ಕು ಮಡಿಕೆಯಲ್ಲಿದೆ. ಬೇಕಿದ್ದರೆ ಉಪ್ಪಗರಿ ಮಾಡಿಸುತ್ತೇನೆ. ತಪ್ಪಿಸಿಕೊಳ್ಳಬೇಡ ಮಗನೆ .. " ಎನ್ನುತ್ತಾ ಹೆಗಡೆ ಮನೆಯ ಹಾದಿ ಹಿಡಿದ.

"ಸೋಮಯಾಜರ ಜುಟ್ಟು ಹಿಡಿಯುತ್ತೇನೆ...." ಎಂದಾಗ ಸೀನನಿಗೆ ತುಂಬಾ ದುಃಖವಾಯ್ತು. ಆದರೆ ಹುಳಿ ಹೆಂಡದ ನೆನಪಾದೊಡನೆ ತನ್ನ ಬಾಯನ್ನು ತಾನೇ ಚಪ್ಪರಿಸಿಕೊಂಡು "ಏನೇ ಆಗಲಿ ...ಹುಳಿ ಹೆಂಡ ಸಿಕ್ಕಿದರೆ ಸರಿ" ಎಂದುಕೊಂಡ.

೧೭

ಗುಡಿಯ ಬಾಗಿಲು ಹಾಕಿ ಕೈಯಲ್ಲಿದ್ದ ತೀರ್ಥಪ್ರಸಾದದ ಹರಿವಾಣ ಹಿಡಿದು ಅರ್ಚಕ ಸೋಮಯಾಜರು ಉತ್ತರೀಯವನ್ನು ಸರಿಪಡಿಸಿಕೊಳ್ಳುತ್ತಾ ಪಾವಟಿಗೆ ಇಳಿದು... ಹಕ್ಕಲದಾರಿಗೆ ಬಂದಿದ್ದರು. ಮನೆಯಿಂದ ಹೊರಟಾಗಲೇ ತಡವಾಗಿಹೋಗಿತ್ತು. "ನೋಡಿ. ಇನ್ನು ಮುಂದೆ ಆದಷ್ಟು ಬೇಗ ಪೂಜೆ ಮುಗಿಸಿ ಮನೆಗೆ ಬರುವಂತೆ ಮಾಡಿ. ತೀರಾ ಹೊತ್ತಾದರೆ ಹಕ್ಕಲದಾರಿ... ಕಲ್ಲುಸಂಕದ ಬಳಿ ದೆವ್ವ ಭೂತ ಇದೆಯಂತೆ" ಎಂದು ರುಕ್ಮಿಣಿ ಆಗಾಗ ಹೇಳುತ್ತಿದ್ದಳು. ಆದರೆ ಸೋಮಯಾಜರಿಗೆ ಆ ದಾರಿ ತೀರಾ ಪರಿಚಿತ. ಕಲ್ಲುಸಂಕದ ಬಳಿ ಯಾವ ಪ್ರೇತ ಪಿಶಾಚಿಯೂ ಅವರಿಗೆ ಕಂಡಿರಲಿಲ್ಲ. ಎಷ್ಟೋ ರಾತ್ರಿ ತಿಂಗಳ ಬೆಳಕಿನಲ್ಲಿ ಸಂಕದಮೇಲೆ ನಿಂತು ದೂರದ ಬರೆಯ ಸೌಂದರ್ಯವನ್ನು ದಿಟ್ಟಿಸುತ್ತಾ ಸ್ವೈಮರೆತಿದ್ದರು ಸೋಮಯಾಜರು. ಎಷ್ಟೋ ಬಾರಿ ರುಕ್ಮಿಣಿ "ನಾಳೆಯಿಂದಲಾದರೂ ಬೇಗ ಬನ್ನಿ" ಎಂದಿದ್ದರೂ ಸೋಮಯಾಜರು ನಾಲ್ಕು ಗಳಿಗೆ ಕಳೆದಮೇಲೆಯೇ ಬರುವುದು ವಾಡಿಕೆಯಾಗಿತ್ತು. ಆ ದಿನ ಹೊರಟಾಗ ಹೊತ್ತು ಗಂತಿ ಎರಡು ಗಳಿಗೆಯಾಗಿತ್ತು. ಗುಡಿಯ ಮುಂದಿನ ಕಲ್ಲುಚಪ್ಪಡಿಗಳ ದಾರಿಯನ್ನು ದಾಟಿ ಹಕ್ಕಲದ ಹೊನ್ನೆ ಮರದ ಬುಡಕ್ಕೆ ಬಂದಾಗ "ಸೋಮಯಾಜರೆ..." ಎನ್ನುತ್ತಾ ಹೆಗಡೆ ಮರದ ಮರೆಯಲ್ಲಿ ನಿಂತವನು ನಡುದಾರಿಗೆ ಬಂದ. ಉಟ್ಟಿದ್ದ ಬಿಳಿಯ ಪಂಚೆ ಮಾತ್ರ ಕತ್ತಲಲ್ಲಿ ಮಸುಕಾಗಿ ಕಾಣಿಸುತ್ತಿದ್ದರೂ ಸೋಮಯಾಜರಿಗೆ ಪಕ್ಕನೆ ಗುರುತು ಸಿಗಲಿಲ್ಲ. ಮಾತಿನ ಧ್ವನಿ ಎಲ್ಲಿಯೋ ಕೇಳಿದ ನೆನಪು. "ಯಾರು...?" ಎಂದರು ತಟ್ಟನೆ

ಹೆಜ್ಜೆಯನ್ನು ನಿಲ್ಲಿಸಿ. "ನಾನು....ಹೆಗಡೆ ಸ್ವಾಮಿ" ಎಂದ ರುದ್ರ. "ಹೋ.... ಹೆಗಡೆಯವರೇನು ? ತುಂಬಾ ಸಂತೋಷ. ಪೂಜೆಯ ಸಮಯಕ್ಕಾದರೂ ಬಂದಿದ್ದರೆ .. ತಮ್ಮ ಹೆಸರು ಹೇಳಿ ಕರ್ಪೂರದಾರತಿ ಎತ್ತುತ್ತಿದ್ದೆ. ಈಗ ತಾನೆ ಗುಡಿಯ ಬಾಗಿಲು ಹಾಕಿದೆ. ದೇವರ ದರ್ಶನವಾಗಬೇಕಿದ್ದರೆ ಹೇಳಿ....ಬಾಗಿಲು ತೆರೆಯುತ್ತೇನೆ" ಎಂದು ಸೋಮಯಾಜರು ವ್ಯವಹಾರ ನೀತಿ ಅನುಸರಿಸಿದರು.

"ಛೆ !....ಛೆ....ನಿಮ್ಮ ದರ್ಶನವಾದ ಮೇಲೆ ದೇವರನ್ನು ಕಂಡಂತೆ. ಹರಿವಾಣದಲ್ಲಿ ತೀರ್ಥವಿದ್ದರೆ ಕೊಡಿ. ದಕ್ಷಿಣೆ ಮಾತ್ರ ನಾಳೆ. ನನ್ನ ಜೋಬಲ್ಲಿ ಈಗ ಬಿಡಿಕಾಸೂ ಇಲ್ಲ..." ಎಂದ ಹೆಗಡೆ ಅಷ್ಟೇ ವ್ಯಾವಹಾರಿಕವಾಗಿ. "ಯಾರಪ್ಪ ನಿಮ್ಮಲ್ಲಿ ದಕ್ಷಿಣೆ ಕೇಳಿದರು. ನಾನೇನು ದುಡ್ಡಿನ ಮುಖ ನೋಡುತ್ತೇನೆಯೆ ? ಹಣ ಸಂಪಾದನೆ ಎಷ್ಟು ದಿನ ಉಳಿಯುತ್ತದೆ. ನಿಮ್ಮಂತಹ ಯೋಗ್ಯರ ಸಂಪಾದನೆ ಮುಖ್ಯ" ಎನ್ನುತ್ತಾ ಸೋಮಯಾಜರು ತೀರ್ಥವನ್ನು ಕತ್ತಲೆಯಲ್ಲಿ ಹೆಗಡೆಯ ಕೈಗೆ ಬಗ್ಗಿಸಿ....ಸಿಂಗಾರದ ಎಸಳನ್ನು ಕಿತ್ತು "ಹೆಗ್ಗಡತಿಗೆ ಕೊಡಿ" ಎಂದರು. "ಹೂಂ....ಆಗಲಿ" ಎಂದು ಹೆಗಡೆ ಸಿಂಗಾರದ ಎಸಗಳನ್ನು ಜೋಬಿನ ಒಳಬಿಟ್ಟ. ಸೋಮಯಾಜರಿಗೆ ಮುಂದೆ ಹೇಗೆ ಮಾತು ಬೆಳಸಬೇಕು ಎಂಬುದು ತಿಳಿಯಲಿಲ್ಲ. ನೇರವಾಗಿ "ಏಕೆ ಬಂದದ್ದು ?" ಎಂದು ಕೇಳುವುದಕ್ಕೆ ಭಯ. ಹೆಗಡೆಯಂತಹ ಕೆಟ್ಟ ಮನುಷ್ಯನಲ್ಲಿ ಹಾಗೆ ಕೇಳುವುದೂ ಕಷ್ಟ. ಅವನ ಮರ್ಜಿ ತಿಳಿದೇ ಮಾತನಾಡಬೇಕು. ಏನನ್ನೋ ಯೋಚಿಸಿಕೊಂಡ ಸೋಮಯಾಜರು ಹೆದರಿದರು. ಹೆಗಡೆ ಈ ಹೊತ್ತಿನಲ್ಲಿ ಏಕೆ ಬಂದ ? ಅದೂ ಅವನು ಕರೆದ ರೀತಿಯಲ್ಲೇ ಎಷ್ಟೊಂದು ಬಿಗುಮಾನವಿತ್ತು ? ಯಾವತ್ತೂ ಕತ್ತಲಾದಮೇಲೆ ದೇವಾಲಯಕ್ಕೆ ಬರುವ ರೂಢಿಯೇ ಅವನಿಗೆ ಇರಲಿಲ್ಲ. ಏನು ಉದ್ದೇಶ ಇಟ್ಟುಕೊಂಡು ಬಂದಿದ್ದಾನೋ . ಸೋಮಯಾಜರ ಗಂಟಲು ಆರಿಬಂತು. ಆ ಹೊತ್ತಿನಲ್ಲಿ ಎರಡು ಲೋಟ ನೀರು ಕುಡಿಯುವ ಆಸೆಯಾಯ್ತು. ಆದರೂ ಇದ್ದುದರಲ್ಲೇ ಎದೆ ಗಟ್ಟಿಮಾಡಿಕೊಂಡು "ಏನು ಹೆಗಡೆಯವರು ಈ ಹೊತ್ತಿನಲ್ಲಿ ..." ಎಂದರು ಅತಿ ವಿನಯದಿಂದ. ಹೆಗಡೆಯ ಬಾಯಿಂದ ಯಾವ ಮಾತು ಬರುತ್ತದೋ....ಅದನ್ನೇ ಕಾದಿದ್ದರು ಸೋಮಯಾಜರು.

“ಬನ್ನಿ ಸೋಮಯಾಜರೆ....ಏನೂ ಹೆದರಿಕೊಳ್ಳಬೇಡಿ. ತಾವೀಗ ಹೊರಟಿರುವುದು ಮನೆಗೆ ತಾನೆ. ಕಲ್ಲುಸಂಕದವರೆಗೆ ನಾನೂ ಬರುತ್ತೇನೆ. ಆ ಮೇಲೆ ನೀವು ಬಯಲುದಾರಿ ಹಿಡಿಯಿರಿ. ನಾನು ತೋಪಿನದಾರಿಯಲ್ಲಿ ಮನೆಗೆ ಹೋಗುತ್ತೇನೆ. ಬೆಳಿಗ್ಗೆಯೇ ನಿಮ್ಮಲ್ಲಿಗೆ ಬರಬೇಕಾಗಿತ್ತು. ಪುರಸೊತ್ತಾಗಲಿಲ್ಲ. ಎಷ್ಟಾದರೂ ನೀವು ಸಂಜೆಹೊತ್ತು ಗುಡಿಯಲ್ಲಿ ಇರುತ್ತೀರಿ ಎಂದೇ ಬಂದೆ. ನನ್ನ ಜೊತೆ ಸೀನ ಬೇರೆ ಬಂದಿದ್ದಾನೆ” ಎಂದು ಹೆಗಡೆ ಲಕ್ಷಣವಾಗಿಯೇ ಹೇಳಿದ. ಎಲ್ಲಿದ್ದಾನೆ ಎಂದು ಸೋಮಯಾಜರು ಸುತ್ತಲೂ ಕಣ್ಣು ಹೊರಳಿಸಿದರು. ಎಲ್ಲಿಯೂ ಕಾಣಿಸಲಿಲ್ಲ.

“ಎಲ್ಲಿದ್ದಾನೆ ಸ್ವಾಮಿ ಅವನು....”

“ಸೀನಾ ...” ಎಂದು ಕೂಗಿದ ಹೆಗಡೆ.

“ಬಂದೆ ಬುದ್ಧಿ....” ಎನ್ನುತ್ತಾ ಸೀನ ಹತ್ತಿರದ ಪೊದೆಯಿಂದ ಕೈಯಲ್ಲಿದ್ದ ಸೋಟಿಯನ್ನು ಬಗಲಮೇಲಿಡುತ್ತಾ ಹೆಗಡೆಯ ಮುಂದೆ ನಿಂತ. ಆಗ ಮಾತ್ರ ಸೋಮಯಾಜರು ಕೆಟ್ಟದ್ದನ್ನೇ ನೆನಸಿಕೊಂಡು ಹೆದರಿದರು. ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಅವರಿಂದಾಗಲಿಲ್ಲ. ಹೆಗಡೆಗೆ ಬರುವ ಅವಶ್ಯಕತೆ ಏನಿತ್ತು ? ಜೊತೆಯಲ್ಲಿ ಅವನ ತೈನಾತಿ ಏಕೆ ? ಅದೂ ಕೈಯಲ್ಲಿ ಬಲವಾದ ಉದ್ದನೆಯ ದೊಣ್ಣೆ ಏಕೆ ?”

“ಅದೇನು ಹೆಗಡೆಯವರೆ . ಸೀನನನ್ನು ಕರೆದುಕೊಂಡು ಬಂದದ್ದು . ” ಎಂದು ಸೋಮಯಾಜರು ಸಮಸ್ಯೆ ಬಗೆಬರಿಸಿಕೊಳ್ಳಲು ಪ್ರಯತ್ನಿಸಿದರು.

“ಹಕ್ಕಲದ ದಾರಿ ನೋಡಿ ...ಕೆಟ್ಟ ಪ್ರಾಣಿಗಳು ಓಡಾಡುವ ಜಾಗಬೇರೆ. ನಿನ್ನೆ ನೆರೆಗಾರನ ಮಗನನ್ನು ಕಲ್ಲುಸಂಕದ ತೊಡಮೆಯ ಬಳಿ ಕಾಡುಹಂದಿ ಅಡ್ಡ ಹಾಕಿತಂತಲ್ಲ. ರಾತ್ರಿಹೊತ್ತು ನಾನು ಒಂಟಿಯಾಗಿ ಎಲ್ಲಿಗೂ ಹೊರಡುವುದಿಲ್ಲ. ಸ್ವಾಮಿ ಹೆಗಲಲ್ಲಿ ಒಂದು ಸೋಟೆ .. ಬಗಲಿಲ್ಲಿ ಒಂದು ಕತ್ತಿ ಇರಲೇಬೇಕು”

“ರಾತ್ರಿಹೊತ್ತು... ಜಾಗ್ರತೆ ವಹಿಸುವುದು ಒಳ್ಳೆಯದು ಅನ್ನಿ....”

“ಕಾಲಸ್ಥಿತಿ ಚೆನ್ನಾಗಿಲ್ಲ ದೇವರು....ತಮಗಾದರೆ ಈ ದಾರಿ ಶೀರಾ ಸಲೀಸು”

"ಎಷ್ಟೋ ವರ್ಷದಿಂದ ತಿರುಗಿದ ದಾರಿ. ನನಗೆಲ್ಲಾ ಅಭ್ಯಾಸವಾಗಿದೆ. ಸೋಣೆ ತಿಂಗಳಲ್ಲಿ ಮನೆಗೆ ಹೋಗುವಾಗ ರಾತ್ರಿ ಆರು ಗಳಿಗೆಯ ಮೇಲಾಗುತ್ತಿತ್ತು. ಇಷ್ಟರವರೆಗೆ ದೇವರ ದಯದಿಂದ ಏನೂ ಆಗಿಲ್ಲ. ಒಮ್ಮೆ ಮಾತ್ರ ಬರೆಯ ತಪ್ಪಲಿನ ಬನಲಿಗೆ ಕಾಡುಕೋಣದ ಹಿಂಡು ನುಗ್ಗಿದಾಗ ಮಾತ್ರ ಹೆದರಿಕೊಂಡದ್ದು ನಿಜ. ಹೋಗಲಿ... ಈಗ ಅದೆಲ್ಲಾ ಏಕೆ... ಮಾತಿನ ಬರದಲ್ಲಿ ತಾವು ಬಂದ ಕಾರಣ ಕೇಳುವುದನ್ನೆ ಮರೆತುಬಿಟ್ಟೆ ..."

"ಚಿಂತೆಯಿಲ್ಲ...ತಾವು ಮರೆತರೂ ನಾನೇ ನೆನಪು ಮಾಡಿಕೊಡುತ್ತೇನೆ"

"ಹಾಗೆ ಮಾಡಿ ಸ್ವಾಮಿ...."

"ತಮ್ಮನ್ನೆ ನೋಡಬೇಕಾಗಿತ್ತು ದೇವರು"

"ನನ್ನನ್ನೆ....ಅಷ್ಟು ಜರೂರಾಗಿ...."

"ಹೌದು ಸ್ವಾಮಿ...."

"ಅಯ್ಯೋ....ಹಾಗಿದ್ದರೆ ಅಲ್ಲಿಗೇ ಬರಬಹುದಿತ್ತು"

"ಮನೆಗೆ ಬರುವಂತಹ ಕಾರ್ಯವಾಗಿದ್ದರೆ ಅಲ್ಲಿಗೇ ಬರುತ್ತಿದ್ದೆ. ಆದರೆ ಇದು ಬೇರೆ ವ್ಯವಹಾರ. ತುಂಬಾ ಗಹನವಾದ ವಿಚಾರ...."

ಸೋಮಯಾಜರ ಎದೆ ದಸಕ್ಕೆಂದಿತು. ನನ್ನಲ್ಲಿ ಇವನಿಗೇನು ಕೆಲಸ ? ಅದೂ ಇಲ್ಲಿಗೆ ಬಂದು ನೋಡುವಂತಹ ಕಾರ್ಯ ಏನಿದೆ ? ಅದೇನು ಗಹನವಾದ ವಿಚಾರ ?

"ಹೇಳಿ ಹೆಗಡೆಯವರೆ....ನನ್ನಿಂದ ಏನಾಗಬೇಕಿತ್ತು ? ಏನಾದರೂ ಕಾರ್ಯಕ್ಕೆ ಮುಹೂರ್ತ ನೋಡಬೇಕಾಗಿತ್ತೆ ?"

"ಇಲ್ಲ.. ಏನಿದೆ ಮಂಗಳ ಕಾರ್ಯ ಮೂಹೂರ್ತ ನೋಡುವುದಕ್ಕೆ"

"ಏನಾದರೂ ಅಭಿಷೇಕ ಪಾರಾಯಣ ಮಾಡಿಸುವುದಿದೆಯೇ ?"

"ಅದೇನೂ ಅಲ್ಲ ದೇವರು....ನಿಮ್ಮಿಂದ ಒಂದು ಸಹಾಯ ಆಗಬೇಕು."

"ಏಕೆ ನನ್ನನ್ನು ದೇವರು .. ದೇವರು ಅನ್ನುತ್ತೀರಿ"

"ಬ್ರಾಹ್ಮಣರನನ್ನು ದೇವರು ಎಂದು ಕರೆದರೆ ನನಗೆ ..ಸಮಾಧಾನ"

"ಬೇಡ .. ಗುಡಿಯಲ್ಲಿರುವವನು ಮಾತ್ರ ದೇವರು"

"ನಿಮ್ಮನ್ನು ಹಾಗೆ ಕರೆದರೆ—ಅದು ತಪ್ಪೆ ?"

"ಅಯ್ಯೋ... ತಪ್ಪು ಎಂದು ನಾನೇಕೆ ಹೇಳುತ್ತೇನೆ. ಅಷ್ಟು ದೊಡ್ಡ ಮಾತು ಬೇಡ ಎಂದು."

"ಹೋಗಲಿ ಬಿಡಿ. ಹೇಳಿದೆ ಅನ್ನಿ—ಈಗ ಪ್ರಪಂಚ ಮುಳುಗಿಹೋದದ್ದೇನು ?" ಎಂದ ಹೆಗಡೆ ಒರಟಾಗಿ.

ಆಗ ಮಾತ್ರ ಸೋಮಯಾಜರಿಗೆ ಏನೋ ನೆನಪಿಗೆ ಬಂತು. ಹೊತ್ತು ಚೆನ್ನಾಗಿರಲಿಲ್ಲ. ಹೆಗಡೆಗೆ ಕುಡಿಯುವ ಅಭ್ಯಾಸವಿದೆ. ಹಾಗಾಗಿ ಜಾಗ್ರತೆ ವಹಿಸಿದರು.

"ನೀವು ಏನೇ ಅನ್ನಿ ಹೆಗಡೆಯವರೆ—ನನಗೆ ಅದೇ ಸಂತೋಷ. ನನ್ನಿಂದಾದ ಉಪಕಾರ ಮಾಡಲು ಯಾವಾಗಲೂ ತಯಾರು. ಇನ್ನೊಬ್ಬರಿಗೆ ಸಹಾಯ ಮಾಡುವ ಅವಕಾಶವನ್ನು ನಾನು ಕಡೆಗಣಿಸುವುದಿಲ್ಲ. ಅದರಲ್ಲೂ ನಿಮ್ಮ ಬಗ್ಗೆ... ಇದು ಗಂಟಲ ಮೇಲಿನ ಮಾತಲ್ಲ. ನಿಮ್ಮ ವಿಶ್ವಾಸ ನನಗೆ ಬೇಕು"

"ಅಷ್ಟಿದ್ದರೆ ಸರಿ...."

"ಅದಕ್ಕೆ ಅನುಮಾನವೇ ಬೇಡ...."

"ಅನುಮಾನವಿದ್ದಿದ್ದರೆ ನಾನೇಕೆ ಬರುತ್ತಿದ್ದೆ ?"

"ಸಹಾಯಮಾಡುವ ಶಕ್ತಿ ನನಗಿದ್ದರೆ ನಿಶ್ಚಯವಾಗಿಯೂ ಮಾಡುತ್ತೇನೆ."

"ನಿಮಗೆ ದೇವರು ಆ ಶಕ್ತಿ ಕೊಟ್ಟಿದ್ದಾನೆ"

"ಆ ಭರವಸೆ ನಿಮಗಿದ್ದರೆ ಮತ್ತೆ ನನಗೆ ಯೋಚನೆಯಿಲ್ಲ"

"ಸೀನಾ...." ಎಂದ ಹೆಗಡೆ ಇದ್ದಕ್ಕಿದ್ದಂತೆ.

"ಅಯ್ಯಾ... ಇಲ್ಲಿದ್ದೇನೆ..." ಎನ್ನುತ್ತಾ ಸೀನ ಹೆಗಡೆಯ ಹಿಂದೆ ಬಂದು ನಿಂತ.

"ದಾರಿಯೇ ತಿಳಿಯುವುದಿಲ್ಲ ಬರುತ್ತಾ ಒಂದೆರಡು ಸೂಡಿ ತಂದಿದ್ದರೆ ..."

"ಮರತೆ ಬುದ್ಧಿ...."

"ನಿನ್ನ ಮನೆ ಹಾಳಾಗ ...ಹತ್ತು ಹೆಜ್ಜೆ ಮುಂದಿನಿಂದ ಹೋಗು. ಕೊರಕಲು ಹೊಂಡ ಇದ್ದರೆ ಅಯ್ಯನಿಗೆ ಹೇಳು."

"ಆಗಲಿ ಅಯ್ಯ...." ಎಂದು ಸೀನ ಮುಂದೆ ನಡೆದ.

"ಸೋಮಯಾಜರೆ " ಹೆಗಡೆ ಮಾತಿಗೆ ಆರಂಭಿಸಿದ. ಆಗಲೇ ಹಕ್ಕಲದ ನಡುವಿನ ಗೋಳಿಮರದ ಸಮೀಪಕ್ಕೆ ಬಂದಿದ್ದರು.

"ಹೇಳಿ ಸ್ವಾಮಿ...."

"ನನಗೆ ಸ್ವಾಮಿಗೀಮಿ ಎಂದು ಹೇಳಬೇಡಿ"

"ಗೌರವಿಸಬೇಕಾದ್ದು ನಮ್ಮ ಕರ್ತವ್ಯ"

"ಇರಬಹುದು....ಆದರೆ ನೀವು ಬ್ರಾಹ್ಮಣರು. ನನ್ನ ಹೆಸರು ಹೇಳಿ ಕರೆದರೂ ಚಿಂತೆಯಿಲ್ಲ."

"ನೀವು ನನ್ನನ್ನು ದೇವರು ಎನ್ನಬಹುದಂತೆ ...ನಾನು ಸ್ವಾಮಿ ಅನ್ನಬಾರದೆ ?"

"ಸರಿಹೋಯ್ತು....ಬಿಡಿ. ನಾನು ಬಂದದ್ದು ತುಂಬಾ ಆಶ್ಚರ್ಯವಾಯ್ತೆ ?"

"ಅದು ಸ್ವಾಭಾವಿಕ ತಾನೆ ?"

"ಏಕೆ ಈ ಹೊತ್ತಿನಲ್ಲಿ ಬಂದೆ ಎಂದು"

"ಎಂದೂ ಬಂದವರಲ್ಲ ನೋಡಿ ...ಅದೇ ಗೊತ್ತಾಗಲಿಲ್ಲ"

"ಬಂದ ಕಾರ್ಯವೇನೂ ಅಂತಹ ವಿಶೇಷದ್ದಲ್ಲ. ಆದರೆ ಬರಲೇಬೇಕಾದ ಪ್ರಸಂಗ ಬಂತು. ತಮ್ಮನ್ನೇ ಕಂಡರೆ ತುಂಬಾ ಅನುಕೂಲ ಎಂದೇ ಬಂದೆ. ಒಂದು ದೃಷ್ಟಿಯಿಂದ ಹೇಳುವುದಕ್ಕೆ ತುಂಬಾ ಸಂಕೋಚ. ಎಲ್ಲಿ ನಿಮಗೆ ದ್ರೋಹವಾಗುತ್ತದೋ ಎಂದು."

"ದ್ರೋಹ....ದ್ರೋಹ...." ತಡವರಿಸಿದರು ಸೋಮಯಾಜರು. ಹೆಗಡೆಯ ಬಾಯಿಂದ ದ್ರೋಹ ಎಂಬ ಮಾತು ಹೊರಬಂದಾಗ ಮಾತ್ರ ಕಂಗಾಲಾದರು.

"ತಮಗೆ ದ್ರೋಹವಾದರೆ ಎಂದು...." ಹೆಗಡೆ ಮತ್ತೆ ಅದನ್ನೇ ಹೇಳಿದ.

"ಏನು ಹೆಗಡೆಯವರೆ....ವಿವರವಾಗಿ ಹೇಳಿ"

"ಅವಸರ ಬೇಡ ಸ್ವಾಮಿ ...ಹೇಳಿಯೇ ಹೇಳುತ್ತೇನೆ. ಈ ಹೊತ್ತಿನಲ್ಲಿ ಅನ್ನುತ್ತೇನೆ ಎಂದು ಹೆದರಿಕೊಳ್ಳಬೇಡಿ"

"ನಿಮ್ಮ ಮಾತಿನ ಅರ್ಥವೇ ನನಗಾಗಲಿಲ್ಲ."

"ಅರ್ಥವಾಗುವಂತೆ ಹೇಳುತ್ತೇನೆ. ಹೇಳಿಯೇ ತೀರಬೇಕಾಗಿದೆ. ಅದಕ್ಕೆ ಇಷ್ಟು ದೂರ ಬಂದೆ. ಅದೂ ಈ ಹೊತ್ತಿನಲ್ಲಿ ಚಿಲ್ಲರೆಪಲ್ಲರೆ ಕೆಲಸವಾಗಿದ್ದರೆ ನಾನೇಕೆ ಬರುತ್ತಿದ್ದೆ? ಬಂದಮೇಲೆ ಹೇಳದೇ ಹೋಗುತ್ತೇನೆಯೆ? ಏನೂ ತಿಳಿಯಬೇಡಿ. ಇದರಿಂದ ನನಗೂ ಹಿತವಿದೆ. ನಿಮಗೂ ಹಿತವಿದೆ. ನನ್ನ ದಾಸರೂ ಬಿಡಿ. ಆದರೆ ನೀವು ಈ ಊರಲ್ಲಿ ನಾಲ್ಕು ಕಾಲ ಬದುಕಬೇಕು. ಅದೂ ಮಾನವಂತ ಬಾಳ್ವೆ ಮಾಡಬೇಕು. ನನಗೂ ಅದೇ ಅಭಿಪ್ರಾಯ. ನನ್ನಿಂದ ತಮಗೆ ಯಾವ ತೊಂದರೆಯೂ ಇಲ್ಲ. ಮುಂದೆ ಕೂಡಾ ಎರಡು ಬಗೆಯುವುದಿಲ್ಲ. ಹಿಂದಿನ ಪ್ರೀತಿವಿಶ್ವಾಸವನ್ನೇ ಕೊನೆತನಕ ಉಳಿಸಿಕೊಳ್ಳುತ್ತೇನೆ. ಆದರೆ ಈಗ ಮಾತ್ರ ತಮ್ಮಿಂದ ಒಂದು ಉಪಕಾರ ಆಗಬೇಕು."

"..........."

"ನನ್ನ ಮಾತಿಗೆ ಸುಮ್ಮನಾಗಬೇಡಿ .."

".... ......"

"ಅರೆ ... ಹೇಳುವ ಮುಂಚೆಯೇ ಬಾಯಿ ಮುಚ್ಚಿದಿರಲ್ಲ"

"ಈ ಬಡಬ್ರಾಹ್ಮಣನಿಂದ ತಮಗೆ ಏನಾಗಬೇಕಾಗಿದೆ?"

"ನಿಮ್ಮ ಗಿರಿಜಮ್ಮ ಇಲ್ಲವೆ ... ಅವರ ಮೇಲೆ ನನಗೆ ಮನಸ್ಸಾಗಿದೆ" ಹೆಗಡೆ ಅಂದೇಬಿಟ್ಟ.

ಸೋಮಯಾಜರ ಎದೆಗುಂಡಿ ಬಡಿದುಕೊಂಡಿತು. ಆಡುವುದಕ್ಕೆ ಉಸಿರೇ ಇಲ್ಲವಾಗಿತ್ತು.

"ಹೂಂ ... ಅವಳನ್ನು ಕಂಡಮೇಲೆ ನನ್ನ ಮನಸ್ಸು ಆಕೆಯನ್ನೆ ಬಯಸುತ್ತಿದೆ"

"..........."

"ಮರೆಯುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ನಮ್ಮ ನಿಮ್ಮ ವಿಶ್ವಾಸಕ್ಕೆ ದಕ್ಕೆ ಬಾರದ ಹಾಗೆ ವರ್ತಿಸಬೇಕು. ನನ್ನ ಮನಸ್ಸು ಮುರಿಯಬೇಡಿ. ವಿಶ್ವಾಸ ಕಳೆದುಕೊಳ್ಳಬೇಡಿ. ದ್ವೇಷ ಕಟ್ಟಿಕೊಂಡು ನಾಳೆ ಒದ್ದಾಡುವ ಕರ್ಮ ನಿಮಗೆ ಬೇಡ. ಕೊನೆಯದಾಗಿ ತೀರ್ಮಾನಿಸಿದ್ದೇನೆ. ಈ ಬಾಗದಲ್ಲಿ ನೀವು

ಅಡ್ಡಿ ಮಾಡಬಾರದು. ನನಗೂ ಹಠ ಬಂದಿದೆ. ನನ್ನ ಮರ್ಜಿ ತಮಗೆ ಸಂಪೂರ್ಣ ಗೊತ್ತು. ಇದಕ್ಕೆ ತಮ್ಮ ಅಭಿಪ್ರಾಯವೇನು?"

"..........."

"ಅಭಿಪ್ರಾಯ ಎಂದರೆ...ಅಲ್ಲ ಗಿಲ್ಲ ಎಂದರೆ ಮುಂದಕ್ಕೆ ವಿಪರೀತ ವಾಗುತ್ತದೆ. ಸಂತೋಷದಿಂದ ಆಗಲಿ ಎಂದುಬಿಡಿ"

"..........."

"ಹೇಳಿ ಸ್ವಾಮಿ...ಯೋಚಿಸುವುದಕ್ಕೆ ಏನೂ ಇಲ್ಲ. ನನ್ನ ನಿರ್ಧಾರದ ಮುಂದೆ ನಿಮ್ಮ ಯಾವ ಮಾತೂ ಬೇಡ. ತಾವು ಆಲೋಚಿಸುವುದಕ್ಕೆ ಏನೂ ಉಳಿದಿಲ್ಲ. ಅವಳೇನೂ ನಿಮ್ಮ ಹೆಂಡತಿಯಲ್ಲ. ನೀವೇನೂ ಕೊರಳಲ್ಲಿ ಕರಿ ಮಣಿ ಕಟ್ಟಿಲ್ಲ. ಎಷ್ಟಾದರೂ ಅದು ಸೂಳೆಯ ಜಾತಿ. ಯಾರಿಗೆ ಹುಟ್ಟಿ ದವಳೋ....ಶುಂಠಿಕೊಪ್ಪದಲ್ಲಿ ಯಾರ ಎಂಜಲು ತಿಂದು ಬಿದ್ದಿದ್ದಳೋ.... ನನಗಾದರೂ ಬೇಕಾಗಿತ್ತೇನು? ಹಠಕ್ಕಾಗಿ....ಕೇವಲ ಚಟಕ್ಕಾಗಿ. ಕಂಡವ ರಿಗೆ ಸೆರಗು ಹಾಸುವ ಹೆಣ್ಣನ್ನು ಬಯಸುವ ಹೆಗಡೆ ನಾನಲ್ಲ. ಆದರೆ ಒಂದು ಮಾತಿಗೋಸ್ಕರ ಅಷ್ಟು ಮುಂದುವರಿದಿದ್ದೇನೆ. ಮಾಲೆಯರ ಹುಡುಗಿ ನೋಡಿ. ಹಾಗಿರುವಾಗ ನಾನು ಬಯಸಿದರೂ ತಪ್ಪಿಲ್ಲ. ನಿಯತ್ತು ಬಿಟ್ಟು ಹೇಳಿಲ್ಲ. ಒಂದು ರೀತಿಯಲ್ಲಿ ತಾವೇ ದಾರಿ ತಪ್ಪಿದ್ದೀರಿ. ಬ್ರಾಹ್ಮಣರಾಗಿ...ದೇವಾಲ ಯದ ಅರ್ಚಕರಾಗಿ ತಾವು ಅವಳೊಂದಿಗೆ ಸಂಪರ್ಕ ಬೆಳೆಯಿಸಿದ್ದು ಮಹಾಪ ರಾಧ. ಹೋಗಲಿ....ತಮಗೂ ಬೇಕಿದ್ದರೆ ನನ್ನದೇನೂ ಅಡ್ಡಿಯಿಲ್ಲ. ನಿಮ್ಮ ಆಶ್ರಯದಲ್ಲೇ ಇರಲಿ....ನನಗೂ ಇರಲಿ....ನಿಮ್ಮ ಸೊತ್ತನ್ನು ದಾನಮಾಡಿ ಎನ್ನುವುದಿಲ್ಲ. ಆದರೆ ನನಗೂ ....ಹೂಂ .. " ಎಂದ ಹೆಗಡೆ.

ಅತ್ತೇಬಿಟ್ಟರು ಸೋಮಯಾಜರು. ಏನು ಹೇಳುತ್ತಾರೆ? ಎಲ್ಲವನ್ನೂ ಹೆಗಡೆಯೇ ಹೇಳಿಬಿಟ್ಟಿದ್ದ.

"ಛೇ!...ಅಳುವುದಕ್ಕೇನಾಯ್ತು ಸ್ವಾಮಿ...ಕಣ್ಣೀರು ಬರಿಸುವಂತಹ ಮಾತು ನಾನು ಏನು ಹೇಳಿದೆ? ಇದಕ್ಕೆಲ್ಲಾ ಹೆದರಿಕೊಂಡರೆ? ಮೊಗಜೆಟ್ಟಿಗೆ ಬರುವ ಮೊದಲು ಅವಳು ಏನಾಗಿದ್ದಳು? ಬಸವಿಯಾಗಿ ಬಯಲು ತೋಟ ಅಲೆಯುತ್ತಿದ್ದಳು ಎಂಬ ವರ್ತಮಾನ ನನ್ನ ಕಿವಿಗೆ ಬಿತ್ತು. ಹಿಂದೆ ಹಾಗಿದ್ದ

ವರು.. ಮುಂದೆ ಹಾಗಾದರು ಎಂದು ಇಟ್ಟುಕೊಳ್ಳಿ.. ನಿಮ್ಮದೇನು ಗಂಟು ಹೋಗುತ್ತದೆ..?"

"ಹೆಗಡೆಯವರೇ... ಇದಕ್ಕೆ ನಾನೇನು ಹೇಳುವುದು?" ಎಂದು ಸೋಮಯಾಜರು ಬಹು ಪ್ರಯಾಸದಿಂದ ಅಷ್ಟನ್ನು ಹೇಳಿ ಸುಮ್ಮನಾದರು.

"ಸ್ವಾಮಿ.. ನನ್ನ ಮುಂದೆ ಏಕೆ ನಾಟಕ ಆಡುತ್ತೀರಿ? ವೇದಪಾರಾಯಣ ಎಂದುಕೊಂಡು ಹೀಗೆ ಸೂಳೆಗಾರಿಕೆ ಮಾಡುವುದೆ? ಅದು ನಮ್ಮಂತಹ ಹೆಂಡಕುಡುಕರಿಗೆ. ಕುತ್ತಿಗೆಗೆ ಕೈ ಹಾಕಿ ನನ್ನ ಮನೆಯ ಅಂಗಳಕ್ಕೆ ದಬ್ಬಿ.... ಆ ಮುಂಡೆಯನ್ನು"

ದೇವರನ್ನು ಸ್ಮರಿಸಿದರು ಸೋಮಯಾಜರು. ಹೆಗಡೆಯ ಕಟು ಮಾತಿಗೆ ಅವರ ಎದೆಯಮೇಲೆ ಕೆಂಡ ಉದುರಿತ್ತು. ಗಿರಿಜಳನ್ನು ಹಾಗೆ ಅವಮಾನಿಸುವುದೇ? ಆದರೆ ಹೆಗಡೆಯ ಮುಂದೆ ಏನಿದೆ?

"ಸ್ವಾಮಿ.. ತಮ್ಮ ವಿಶ್ವಾಸ ಕಳೆದುಕೊಂಡು ಈ ಊರಲ್ಲಿ ನಾನು ಇರುವಂತಿಲ್ಲ. ನಿಮ್ಮ ಪ್ರೀತಿ ಆದರ ನನಗೆ ಬೇಕು. ತಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ಇದು ಅಂತರ್ಯದಿಂದ ಬಂದ ಮಾತು. ನಾನು ಬಡ ಬ್ರಾಹ್ಮಣ. ಇರುವುದು ದೇವಾಲಯದ ಜಾಗದಲ್ಲಿ. ನೀವು ಗಟ್ಟಿಯಾಗಿ ಉಸಿರು ಬಿಟ್ಟರೆ ನಿಲ್ಲುವ ಶಕ್ತಿ ನನಗಿಲ್ಲ. ನೀವು ತಿಳಿದವರು. ದೇವರು ನಿಮಗೂ ಬುದ್ಧಿ ಶಕ್ತಿ ಕೊಟ್ಟಿದ್ದಾನೆ. ತಾವು ಸಂಸಾರವಂದಿಗರು. ದೊಡ್ಡ ಮನೆತನದಲ್ಲಿ ಹುಟ್ಟಿದವರು....ಏನೋ ಯಾವ ಜನ್ಮದ ಋಣಾನುಬಂಧವೋ ....ಅವಳನ್ನು ಕರೆದುಕೊಂಡು ಬಂದೆ. ತಮ್ಮ ದೃಷ್ಟಿ ಅವಳಮೇಲೆ ಬಿದ್ದಿದೆ ಎಂದಾದರೆ...."

"ಹೌದು.. ಅದನ್ನೆ ಹೇಳಿದೆ"

"ನಾನೇನು ಹೇಳಲಿ ಇದಕ್ಕೆ..."

"ಒಪ್ಪಿಗೆ ಕೊಡಿ...."

"ನನ್ನ ಒಪ್ಪಿಗೆಯಿಂದ ಪ್ರಯೋಜನವೇನು?"

"ಮತ್ತೆ...."

"ಅವಳ ಒಪ್ಪಿಗೆ ಬೇಕಲ್ಲ"

"ಹೌದು...ಒಪ್ಪಿಸುವ ಹೊಣೆ ನಿಮ್ಮದು"

"ಹೇಗಾಗುತ್ತದೆ ಸ್ವಾಮಿ . ಅದು ಅವರವರಿಗೆ ಸಂಬಂಧಿಸಿದ್ದು."

"ಹಾಗೆ ಹೇಳಿ ತಪ್ಪಿಸಿಕೊಳ್ಳಬೇಡಿ... ಈ ವಿಚಾರದಲ್ಲಿ ನಾನು ಸೋತರೆ ನಿಮಗೂ ಉಳಿಗಾಲವಿಲ್ಲ"

"ಆಗಲಿ....ತಮ್ಮ ಅಭಿಪ್ರಾಯ ನನಗೂ ಅರ್ಥವಾಗಿದೆ. ಅವಳಲ್ಲಿ ಒಂದು ಮಾತು ಹೇಳಿ ನಾಳೆ ತಮಗೆ ಅಭಿಪ್ರಾಯ ತಿಳಿಸುತ್ತೇನೆ. ಒಂದೂ ರಾತ್ರಿಯಾದರೂ ನನಗೆ ಕಾಲಾವಕಾಶ ಕೊಡಿ"

"ಅದಕ್ಕೇನು? ಮಾತ್ರ ನನ್ನ ಮನಸ್ಸನ್ನು ರೊಚ್ಚಿಗೇಳಿಸಬೇಡಿ"

"ಅಯ್ಯೋ ದೇವರೆ....ಯಾವುದಕ್ಕೂ ನಾಳೆ ಸಂಜೆ ತಮ್ಮನ್ನು ಕಂಡು ಅಭಿಪ್ರಾಯ ಏನೆಂದು ತಿಳಿಸುತ್ತೇನೆ"

"ನಾಳೆ ಸಂಜೆ....ನಾನು ತಮ್ಮನ್ನು ಎಲ್ಲಿ ನೋಡಲಿ....?"

"ಬೇಡ....ನಾನೇ ಹೇಳಿಕಳುಹಿಸುತ್ತೇನೆ"

"ಅಷ್ಟು ಮಾಡಿ....ಇಲ್ಲವಾದರೆ ನಾನೇ ಅವಳ ಮನೆಗೆ ನುಗ್ಗ ಬೇಕಾಗುತ್ತದೆ....ಬರುತ್ತೇನೆ ಸ್ವಾಮಿ....ತೋಪಿನ ದಾರಿಯಲ್ಲೆ ನಾನು ಹೋಗುವುದು" ಎಂದ ಹೆಗಡೆ.

ಸೋಮಯಾಜರಿಗೆ ಏನು ಹೇಳುವುದಕ್ಕೂ ತೋಚಲಿಲ್ಲ. ಆಗಲೇ ಕಲ್ಲುಸಂಕದ ಕೈಮರದ ಬುಡಕ್ಕೆ ಬಂದಿದ್ದರು. ಒಂದೇ ಒದೆತದಿಂದ ಹೆಗಡೆಯ ಹೊಟ್ಟೆಯ ಮೇಲೆ ಒದ್ದು ಹೊಳೆಗೆ ಕೆಡವಿಬಿಡುವಷ್ಟು ಸಿಟ್ಟು ಬಂದಿತ್ತು. ಆದರೆ ಏನೂ ಮಾಡುವಂತಿರಲಿಲ್ಲ. ಸೀನನ ಕೈಯಲ್ಲಿ ಬಿದಿರು ಸೋಟೆಯಿತ್ತು. ಇಲ್ಲವಾಗಿದ್ದರೆ ಒಂದು ಕೈ ನೋಡುವುದಕ್ಕೂ ಹಿಂದೆಮುಂದೆ ನೋಡುತ್ತಿರಲಿಲ್ಲ. ಹೆಗಡೆ "ಬರುತ್ತೇನೆ" ಎಂದಾಗ "ಹೋಗಿಬನ್ನಿ" ಎನ್ನುವುದಕ್ಕೂ ಸೋಮಯಾಜರಿಗೆ ಸಿಡುಕು. ಬಯಲು ದಾರಿಯತ್ತ ಹೆಜ್ಜೆ ಕಿತ್ತರು. ಹೆಗಡೆ ಮತ್ತೆ ಗಟ್ಟಿಯಾಗಿ "ಸ್ವಾಮಿ....ನಾನೀಗ ಮನೆಗೆ ಹೋಗುತ್ತೇನೆ. ಹೇಳಿದ ಮಾತು ನೆನಪಿರಲಿ. ಉದಾಸೀನ ಮಾಡಬೇಡಿ. ಇಂವೇ ನನ್ನ ಆಸೆ ತೀರಿದ್ದರೆ ಚೆನ್ನಾಗಿತ್ತು. ಹೋಗಲಿ....ತಾವು ತಿಳಿದವರಾಗಿ ಒಂದು ಮಾತು ಹೇಳಿದಿರಿ. 'ಅಮ್ಮನ ಅಭಿಪ್ರಾಯ ಕೇಳುತ್ತೇನೆ' ಎಂದು ...ನೀವು ಕೇಳುವುದಕ್ಕಿಂತ ಒಪ್ಪಿಸಿಬಿಡುವುದೇ ಒಳ್ಳೆಯದು. ನಾಳೆ ಸಂಜೆ ತಮ್ಮನ್ನು ಗುಡಿಯ ಚಾವಡಿಯಲ್ಲಿ

ಕಾಣುತ್ತೇನೆ....ನಮಸ್ಕಾರ....ಪ್ರೀತಿಯಿರಲಿ" ಎನ್ನುತ್ತಾ ಹೆಗಡೆ ತೋಟದ ದಾರಿಯಲ್ಲಿ ಮುಂದೆ ನಡೆದ.

ಕಲ್ಲುಸಂಕದ ಮೇಲಿನಿಂದ ಕುಪ್ಪಳಿಸಿ ಬಯಲು ಅಂಚಿಗೆ ಬಂದರು ಸೋಮಯಾಜರು. ಹೆಗಡೆಯ ಮೇಲೆ ಎಲ್ಲಿಲ್ಲದ ಸಿಟ್ಟು ಬಂದಿತ್ತು. ದೇವರು ಏಕೆ ಸುಮ್ಮನೆ ಕುಳಿತಿದ್ದಾನೆ? ನಿತ್ಯ ಶಿವನಿಗೆ ಪೂಜೆ ಮಾಡುವ ನನಗೂ ಕೊನೆಗೆ ದೇವರ ಬೆಂಬಲವೇ ಇಲ್ಲವಾಯ್ತೇನು? ಹೋಗಲಿ....ಈ ಹೆಗಡೆಯ ದರ್ಪವನ್ನು ಮಣ್ಣುಮುಕ್ಕಿಸುವಷ್ಟು ಶಕ್ತಿ ನನಗೆ ದೇವರು ಕೊಡಬಾರದಿತ್ತೆ? ಈ ಪಾಪಿಗೆ ಹೆದರಿಕೊಂಡು ನನ್ನನ್ನು ನಂಬಿದ್ದ ಗಿರಿಜಳನ್ನು—"ಅಯ್ಯೋ ಎಂದಿಗೂ ಅದು ಸಾಧ್ಯವೇ ಇಲ್ಲ" ಎಂದುಕೊಂಡರು ಸೋಮಯಾಜರು "ಗಿರಿಜ ಎಲ್ಲಿದ್ದರೂ ಈ ಹೆಗಡೆಯ ಸಹವಾಸದಲ್ಲಿ ಬೀಳುವುದು ನನಗೆ ಇಷ್ಟವಿಲ್ಲ. ಇನ್ನು ಯಾರೇ ಆಕೆಗೆ ಆಶ್ರಯ ಕೊಡಲಿ.. ಆದರೆ ಹೆಗಡೆಗೆ ಅವಳ ಉಸಿರಿನ ಗಾಳಿ ಕೂಡಾ ತಗಲಬಾರದು ..ಇದು ನಿಶ್ಚಯ" ಎಂದು ಸೋಮಯಾಜರು ಯೋಚಿಸುತ್ತಲೇ ವೇಗದ ಹೆಜ್ಜೆ ಹಾಕಿದರು. ತೋಟದ ದಾರಿಗೆ ಬಂದಾಗಲೇ ಏನು ಕಂಡಿತೋ–"ಮೊದಲು ಗಿರಿಜಳನ್ನು ಕಂಡು ಮುಂದಿನ ಏರ್ಪಾಡು" ಎಂದು ಸೀದಾ ಗಿರಿಜಳ ಮನೆಗೆ ಬಂದರು.

೧೮

ಸೋಮಯಾಜರ ಅಂತಿಮ ನಿರ್ಧಾರಕ್ಕೆ ಗಿರಿಜ ಅತ್ತೇಬಿಟ್ಟಳು. ಎಷ್ಟೇ ಸಮಾಧಾನಿಸಿದರೂ "ನಿಮ್ಮನ್ನ ಬಿಟ್ಟು ನಾನು ಎಲ್ಲಿಗೂ ಹೋಗುವುದಿಲ್ಲ" ಎಂದು ಸೋಮಯಾಜರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಅವಳನ್ನು ಸಂತೈಸುವುದಕ್ಕೆ ಸೋಮಯಾಜರು ಬೆನ್ನ ಮೇಲೆ ಕೈ ಯಾಡಿಸಿ ತಲೆ ನೇವರಿಸುತ್ತಾ "ಎಂದಿಗೂ ನಿನ್ನ ಕೈ ಬಿಡುವುದಿಲ್ಲ ಗಿರಿಜ ....ನೀನು ಈಗ ಶುಂಠಿಕೊಪ್ಪಕ್ಕೆ ಹೋದರೂ ಮತ್ತೆ ಕರೆಯಲು ನಾನೇ ಬರುತ್ತೇನೆ. ಹೇಗಿದ್ದರೂ ಇನ್ನೆರಡು ತಿಂಗಳಲ್ಲಿ ನೀನು ಹೆರಿಗೆಗಾದರೂ ಹೋಗಲೇಬೇಕು. ಹಾಗಿರುವಾಗ ಏನೋ ಪರಿಸ್ಥಿತಿಯನ್ನು ನೋಡಿದರೆ ನನಗೂ ಭಯವಾಗುತ್ತದೆ. ನಾಳೆ ಸಂಜೆಯ ಹೊತ್ತಿಗೆ ಆ ಪಾಪಿ ಗುಡಿಗೆ ಬರುತ್ತಾನೆ. ಆಗ ನೀನು ಈ ಊರಲ್ಲಿ ಇದ್ದರೆ ನನಗೂ ಏನಾದರೂ ಹೇಳುವುದಕ್ಕೆ ಹೆದರಿಕೆ. ಅದನ್ನೆಲ್ಲಾ ಯೋಚಿಸಿಯೇ ಇಂದು ರಾತ್ರಿಯೇ ಶುಂಠಿಕೊಪ್ಪಕ್ಕೆ ಹೋಗುವ ಮನಸ್ಸು ಮಾಡಿದೆ" ಎಂದರು. ಅವರಿಗೂ ಗಿರಿಜಳನ್ನು ಬಿಟ್ಟಿರುವ ಮನಸ್ಸು ಇರಲಿಲ್ಲ. ಆದರೆ ಕಳುಹಿಸದೆ ಬೇರೆ ಯತ್ನವಿರಲಿಲ್ಲ. ತಾವೇ ಗಿರಿಜಳನ್ನು ಶುಂಠಿಕೊಪ್ಪಕ್ಕೆ ಕರೆದುಕೊಂಡುಹೋಗಿ ಬಿಟ್ಟು, ಅದೇ ಗಾಡಿಯಲ್ಲಿಯೇ ಮರಳಿ ಬರುವ ಯೋಚನೆ ಅವರದ್ದು. ಒಂದು ದಿನವಾದರೂ ಶುಂಠಿಕೊಪ್ಪದಲ್ಲಿ ನಿಲ್ಲುವಂತಿರಲಿಲ್ಲ. ಮಾರನೆಯ ದಿನ ಹತ್ತು ಗಂಟೆಗಾದರೂ ಅವರು ಸೋಗೆಬೆಟ್ಟಿಗೆ ಬಂದರೆ ಮಧ್ಯಾಹ್ನದ ಪೂಜೆಗೆ ಯಾವ ಅಡಚಣೆಯೂ ಇದ್ದಿರಲಿಲ್ಲ. ಹಾಗೆ ಬರುವುದಾಗಿದ್ದರೆ ಸೋಮಯಾಜರು ಶುಂಠಿಕೊಪ್ಪದಲ್ಲಿ ಗಿರಿಜಳನ್ನು ಬಿಟ್ಟು, ಕೂಡಲೇ

.. ಕೊನೆಯಪಕ್ಷ ಬೆಳಗಿನ ಜಾವದಲ್ಲಿ ಮರಳಿ ಹೊರಟರೆ ಮೊಗೆಬೆಟ್ಟಿಗೆ ಫ್ರಾಜೆಯ ಕಾಲಕ್ಕಾದರೂ ಬರುವುದು ಸಾಧ್ಯವಾಗುತ್ತದೆ. ಅವನ್ನೆ ಯೋಚಿಸಿದವರು ಗಿರಿಜಳಲ್ಲಿ "ಈಗ ಯಾವುದಕ್ಕೂ ಒಲ್ಲೆ ಎನ್ನಬೇಡ. ಊಟ ಮಾಡಿ ಗಾಡಿ ಹತ್ತುವುದು ನಿಶ್ಚಯ. ನನ್ನ ಮನಸ್ಸಿಗೆ ಇದು ಸರಿಕಂಡಿದೆ. ಇನ್ನು ಒಂದು ದಿನ ನೀನು ಈ ಊರಲ್ಲಿ ಇದ್ದರೆ ಮುಂದೆ ಏನಾಗುತ್ತದೋ....ಇದೇ ಒಳ್ಳೆಯ ಉಪಾಯ ಗಿರಿಜ. ಜೊತೆಯಲ್ಲಿ ನಾನೂ ಬರುತ್ತೇನೆ. ಅದೇ ಗಾಡಿಯಲ್ಲಿ ಹಿಂತಿರುಗುತ್ತೇನೆ. ಕಾರಣ ನಾಳೆಯ ಫ್ರಾಜೆಗೆ ಬೇರೆ ಯಾರನ್ನೂ ನೋಡುವಂತಿಲ್ಲ. ಏನಿದ್ದರೂ ಇದೆಲ್ಲಾ ಗುಟ್ಟಿನಲ್ಲಿ ಆಗಬೇಕಾದ ಕೆಲಸ. ಏನೂ ಯೋಚಿಸಬೇಡ. ಆಗುವುದೆಲ್ಲಾ ಒಳ್ಳೆಯದಕ್ಕೆ. ಒಂದು ದೃಷ್ಟಿಯಿಂದ ಅಮ್ಮನನ್ನ ಕಾಣುವ ಯೋಗ ಕೂಡಿ ಬಂತು. ನನಗೂ ವನಜಮ್ಮನನ್ನು ನೋಡುವ ಆಸೆ ತುಂಬಾ ಇತ್ತು. ಶುಂಠಿಕೊಪ್ಪದಲ್ಲಿ ನಾನಿರುವುದು ಅರ್ಧಗಳಿಗೆ ಹೊತ್ತಾದರೂ ಅವಳನ್ನು ಕಾಣುವ ಅವಕಾಶ ಸಿಕ್ಕಿತು. ಸುಮ್ಮನೆ ಹೋಗಬೇಕೆಂದರೆ ನೂರೆಂಟು ತಾಪತ್ರಯ. ನಿನ್ನನ್ನು ಬಿಟ್ಟಿರುವುದಕ್ಕೆ ನನಗಾದರೂ ಮನಸ್ಸಿದೆಯೆ ? ಹೆಗಡೆ ಇಷ್ಟು ಮುಂದುವರಿಯುತ್ತಾನೆ ಎಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ಲಜ್ಜೆ ನಾಚಿಕೆ ಬಿಟ್ಟು ಹೇಳಿದ. ಒಳ್ಳೆಯವನಾಗಿದ್ದರೆ ಒಂದು ಮಾತು ಹೇಳಬಹುದಿತ್ತು. ಆದರೆ ಅವನಿಗೆ ಹೇಳುವುದು ಒಂದೇ ಕಲ್ಲಿನ ಮೇಲೆ ನೀರು ಸುರಿಯುವುದೂ ಒಂದೇ. ನಿನ್ನನ್ನು ತವರಿಗೆ ಕಳುಹಿಸಿ ನಾಳೆ ನಾನು ಊರಲ್ಲಿ ಹಾಜರಿ ಇದ್ದರೆ ನನಗೂ ಹೇಳುವುದಕ್ಕೆ ಅನುಕೂಲ. ಆಕೆ ರಾತ್ರಿಯೇ ಶುಂಠಿಕೊಪ್ಪಕ್ಕೆ ಹೋದಳು ಎಂದರೆ ಮತ್ತೇನು ಮಾಡುತ್ತಾನೆ....ನೀನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಹೊಟ್ಟೆಯ ಬಸುರಿ ಬೇರೆ. ಇಂತಹ ಸಮಯದಲ್ಲಿ ಮನಸ್ಸಿಗೆ ನೆಮ್ಮದಿ ಬೇಕು. ದೇಹಕ್ಕೆ ವಿಶ್ರಾಂತಿ ಬೇಕು. ಈ ತರಲೆ ವ್ಯವಹಾರ ಹಚ್ಚಿಕೊಂಡರೆ ಮುಗಿದೇಹೋಯ್ತು. ಇದನ್ನು ಒಪ್ಪಿಕೊ ಗಿರಿಜಾ ..." ಎಂದರು ಸೋಮಯಾಜರು.

"ಇನ್ನೂ ಹೆರಿಗೆಗೆ ನಾಲ್ಕು ತಿಂಗಳು ಇದೆಯಲ್ಲ ..ಅಲ್ಲಿಯ ತನಕ ನಾನು ಒಬ್ಬಳೇ ಶುಂಠಿಕೊಪ್ಪದಲ್ಲಿ ಹೇಗೆ ಇರುವುದು ?" ಎಂದು ಗಿರಿಜ ಮತ್ತೆ ಪ್ರಶ್ನೆ ಹಾಕಿದಳು.

"ಏನು ಮಾಡುವುದು ? ನನಗೂ ಅದೇ ಚಿಂತೆ. ಆದರೆ ಬೇರೆ ಉಪಾಯವೇ ಇಲ್ಲವಲ್ಲ. ಈ ನರಕಯಾತನೆಗಿಂತ ಅಲ್ಲಿ ಅಮ್ಮನ ಸೇವೆಯನ್ನಾದರೂ ಮಾಡಿದರೆ ಪುಣ್ಯ ಬರುತ್ತದೆ"

"ರಾತ್ರಿ ಹೊತ್ತು ಗಾಡಿ ಪ್ರಯಾಣ ಮಾಡುವುದೆ?"

"ಏನು ಮಾಡಲಿ ಹೇಳು .., ಬೆಳಕು ಕಾಣುವ ಮೊದಲು ನೀನು ಶುಂಠಿಕೊಪ್ಪದಲ್ಲಿ ಇರಬೇಕು"

"ಈ ಹೊತ್ತಿನಲ್ಲಿ ಗಾಡಿ ಎಲ್ಲಿ ಸಿಗುತ್ತದೆ?"

"ಅದಕ್ಕೇನೂ ಯೋಚನೆಯಿಲ್ಲ. ಕೆಳಹಿತ್ತಲ ಮಂಜನಿಗೆ ನಾನೆಂದರೆ ತುಂಬಾ ಭಕ್ತಿ ಗೌರವ....ಯಾವ ಹೊತ್ತಿನಲ್ಲೇ ಹೇಳಿದರೂ ಗಾಡಿ ಕಟ್ಟುತ್ತಾನೆ...."

"ನೀವು ಒಂದು ದಿನವಾದರೂ ಶುಂಠಿಕೊಪ್ಪದಲ್ಲಿ ಇರುವಂತೆ ಮಾಡಿ .."

"ಅದು ಮಾತ್ರ ಆಗುವುದಿಲ್ಲ. ಪೂಜೆಯನ್ನು ನಿಲ್ಲಿಸುವುದು ಹೇಗೆ ಹೇಳು? ದೇವರ ಸೇವೆಯಲ್ಲಿ ಲೋಪವಾಗಬಾರದು. ಮತ್ತೆ ನಿನ್ನನ್ನು ನೋಡುವುದಕ್ಕೆ ಆಗಾಗ ಬರುತ್ತೇನೆ ಗಿರಿಜಾ .."

"ಯಾವಾಗ ಬರುತ್ತೀರಿ....?"

"ತಿಂಗಳಿಗೆ ಒಮ್ಮೆಯಾದರೂ ಬರುತ್ತೇನೆ"

"ನಾಳೆ ಆ ಹೆಗಡೆ ಮತ್ತೆ ಏನಾದರೂ ನಿಮಗೆ ತೊಂದರೆ ಮಾಡಿದರೆ ..."

"ಆ ಬಗ್ಗೆ ನಿನಗೆ ಯೋಚನೆ ಬೇಡ. ನನ್ನ ಮೇಲೆ ಕೈಮಾಡುವುದಕ್ಕೆ ಅವನಿಗೆಲ್ಲಿದೆ ಧೈರ್ಯ?"

"ಆ ಪಾಪಿ ಯಾವುದಕ್ಕೂ ಹಿಂಜರಿಯುವುದಿಲ್ಲ. ನಾನು ತವರಿಗೆ ಹೋದನೆಂದು ಸಿಟ್ಟಾದರೆ...."

"ಅವನ ಸಿಟ್ಟು ಅವನ ದವಡೆ ಮುರಿಯುತ್ತದೆ .."

"ಹೌದು....ಶುಂಠಿಕೊಪ್ಪಕ್ಕೆ ಬಂದರೆ...."

"ಯಾರು....?"

"ಹೆಗಡೆ...."

"ಅದನ್ನೂ ಯೋಚಿಸಿದ್ದೇನೆ ..ಹತ್ತು ದಿನ ನೀನು ಕಾನೂರಿನ ಅಜ್ಜಿ ಮನೆಗೆ ಹೋಗಿಬಿಡು. ಅದನ್ನೆಲ್ಲಾ ವನಜಳಿಗೆ ನಾನೇ ಹೇಳುತ್ತೇನೆ"

"ಅಂತೂ ನಾನು ಕೆಲವು ಕಾಲ ನಿಮ್ಮನ್ನು ಬಿಟ್ಟಿರಬೇಕು"

"ಹೌದು....ನಿನ್ನಷ್ಟೆ ನನಗೂ ವೇದನೆಯಾಗುತ್ತಿದೆ ..."

"ಸುಖವಾಗಿ ನಾಲ್ಕುದಿನ ಇರುವುದಕ್ಕೆ ಈ ಪಿಶಾಚಿಗಳು ಬಿಡುವುದಿಲ್ಲ"

"ಮತ್ತೆ ಮತ್ತೆ ಅದನ್ನೆ ನೆನೆಸಿಕೊಳ್ಳಬೇಡ....ಊಟಮಾಡಿ ಪಾತ್ರೆಗಳನ್ನೆಲ್ಲಾ ಅಡಿಗೆ ಮನೆಯಲ್ಲಿಡು. ನಿನ್ನ ಸೀರೆ ಕುಪ್ಪಸಗಳನ್ನೆಲ್ಲಾ ಒಂದು ಕೈಚೀಲದಲ್ಲಿ ತುಂಬಿಸಿಬಿಡು. ರಾತ್ರಿಹೊತ್ತು....ಗುಡ್ಡದ ದಾರಿಯಲ್ಲಿ ತಂಡಿ ಗಾಳಿ ಬೇರೆ. ಮೊನ್ನೆ ಉಡುಪಿಯಿಂದ ತಂದುಕೊಟ್ಟೆ ನೋಡು .. ಆ ಹೊದೆಯುವ ವಸ್ತ್ರವನ್ನು ಮಾತ್ರ ಮರೆಯಬೇಡ. ನಾನು ಒಂದಿಷ್ಟು ಊಟಮಾಡಿ ಕೆಳಹಿತ್ತಲಿಗೆ ಹೋಗಿಬರುತ್ತೇನೆ. ರುಕ್ಮಿಣಿಗೆ ಇನ್ನೂ ವಿಚಾರ ತಿಳಿಸಿಲ್ಲ.... ಬರುತ್ತೇನೆ" ಎನ್ನುತ್ತಾ ಸೋಮಯಾಜರು ಅವಸರ ಅವಸರವಾಗಿ ಮನೆಯಿಂದ ಹೊರನಡೆದರು. ಗಿರಿಜ ಒಂದು ನಿಮಿಷವೂ ತಡಮಾಡಲಿಲ್ಲ. ಅರ್ಧ ತಾಸಿನಲ್ಲಿ ತನ್ನ ಎಲ್ಲ ಕೆಲಸವನ್ನೂ ಮುಗಿಸುವ ಉತ್ಸಾಹದಿಂದ ಬಟ್ಟಲಿಗೆ ಅನ್ನ ಹಾಕಿಕೊಂಡಳು.

"ರುಕ್ಮಿಣಿ .. ಅನಿರೀಕ್ಷಿತವಾಗಿ ನಾನೀಗ ಶುಂಠಿಕೊಪ್ಪಕ್ಕೆ ಹೋಗಬೇಕಾಗಿದೆ" ಎಂದು ಕೈಯಲ್ಲಿದ್ದ ತೀರ್ಥಪ್ರಸಾದದ ಹರಿವಾಣವನ್ನು ಕೆಳಗಿಡುತ್ತಾ ಹೇಳಿದರು ಸೋಮಯಾಜರು. "ಈ ರಾತ್ರಿ ಹೊತ್ತು ಶುಂಠಿಕೊಪ್ಪಕ್ಕೆ ಹೋಗುವುದಾ? ಅದೇನಪ್ಪ ಅಂತಹ ಗರ್ಜು" ಎಂದು ದಂಗಾಗಿ ಕೇಳಿದಳು ರುಕ್ಮಿಣಿ. ವಿವರವಾಗಿ ತಿಳಿಸುವಷ್ಟು ಸಮಯ ಇಲ್ಲದ್ದರಿಂದ ನಾಲ್ಕು ಮಾತಿನಲ್ಲೆ ಹೇಳುವುದನ್ನು ಹೇಳಿ ಮುಗಿಸಿದರು ಸೋಮಯಾಜರು. "ಹೂಂ ... ಹೀಗಿದೆ ಪರಿಸ್ಥಿತಿ. ಅದಕ್ಕೆ ಈ ಏರ್ಪಾಡು" ಎಂದರು.

"ಗಿರಿಜಳನ್ನು ಅಲ್ಲೇ ಬಿಟ್ಟುಬರುತ್ತೀರಾ ...?" ಎಂದು ರುಕ್ಮಿಣಿ ಉದ್ವೇಗ ವ್ಯಕ್ತಪಡಿಸಿದಳು.

"ಕೆಲವು ಕಾಲ ಅವಳು ಶುಂಠಿಕೊಪ್ಪದಲ್ಲಿರುವುದು ಒಳ್ಳೆಯದು"

"ಕೆಲವು ಕಾಲ ಅಂದರೆ...."

"ಹೇಗೂ ಹೆರಿಗೆಗೆ ತವರಿಗೆ ಹೋಗಲೇಬೇಕು. ಅದನ್ನೂ ಪೂರೈಸಿ ಬರುತ್ತಾಳೆ... ತನ್ನ ಮಗುವಿನ ಜೊತೆಯಲ್ಲಿ"

“ಹೆಗಡೆಗೆ ಹೆದರಿಕೊಂಡು ರಾತ್ರಿ ಹೊತ್ತು ನೀವು ಗಾಡಿ ಮಾಡಿಕೊಂಡು ಹೋಗುವುದೆ? ಅದೂ ಗುಡ್ಡದ ದಾರಿ....ಮುಂದೆ ಕಾಡು ಬೇರೆ”

“ಏನು ಮಾಡುವುದು ರುಕ್ಮಿಣಿ? ದೇವರ ಮೇಲೆ ಭಾರ ಹಾಕಿ ಹೊರಡುವುದು. ಬೇರೆ ಮಾರ್ಗವಿಲ್ಲ. ಒಂದು ದಿನ ಪ್ರಯಾಣ ಮುಂದುವರಿಸುವುದೂ ನನಗೆ ಇಷ್ಟವಿಲ್ಲ”

“ಅಲ್ಲ....ಏನಿದು ಹುಡುಗಾಟ ಅಂತೀನಿ. ನೀವು ಅವಳನ್ನು ಕರೆದುಕೊಂಡು ಶುಂಠಿಕೊಪ್ಪಕ್ಕೆ ಹೋಗಿ ನಾಳೆ ಪೂಜೆಯ ಹೊತ್ತಿಗೆ ವಾಪಸು ಬರುವುದಕ್ಕಾಗುತ್ತದೆಯೆ?”

“ಆಗುತ್ತದೆ ...ಏನಾದರೂ ನಾಳೆ ಹತ್ತು ಗಂಟೆಗೆಲ್ಲಾ ಇಲ್ಲಿರಲು ಸಾಧ್ಯ”

“ಇದನ್ನು ಗಿರಿಜಳಿಗೆ ತಿಳಿಸಿದಿರಾ ?”

“ಅಲ್ಲಿಂದಲೇ ಈಗ ಬಂದೆ. ಅರ್ಧ ಗಂಟೆಯಲ್ಲಿ ಇಲ್ಲಿಗೆ ಬರುವುದಾಗಿ ಹೇಳಿದ್ದಾಳೆ”

“ಅಂತೂ ಆ ಕೆಟ್ಟವನಿಗೆ ಹೆದರಿಕೊಳ್ಳುವುದೇ ಆಯ್ತು ನಮ್ಮ ಕರ್ಮ”

“ಅದು ನಮ್ಮ ದುರಾದೃಷ್ಟ....”

“ಈ ಊರಲ್ಲಿ ಯಾರೂ ಅವನನ್ನು ಕೇಳುವವರಿಲ್ಲವೆ?”

“ಯಾರಿಗಿದೆ ಆ ಧೈರ್ಯ?”

“ಅವನು ಮಾಡಿದ್ದೇ ನ್ಯಾಯ ಅನ್ನುತ್ತಾರೆಯೇ ಜನರು?”

“ಎಲ್ಲರೂ ತಮಗೇಕೆ ಎಂದು ಸುಮ್ಮನಿದ್ದಾರೆ ...”

“ಸುಮ್ಮನಿದ್ದವರ ಮನೆಯ ಹೆಣ್ಣುಮಕ್ಕಳನ್ನು ರೇಗಿಸಿದ್ದರೆ ಅವರೇನು ಮಾಡುತ್ತಿದ್ದರು ಅಂತ ...?”

“ಅದೂ ನನ್ನ ಅನುಭವಕ್ಕೆ ಬಂದಿದೆ. ಸೆರೆಗಾರನಿಗೆ ಏನೂ ಮಾಡುವುದಕ್ಕಾಗಲಿಲ್ಲ. ದುರ್ಗಿ ಪ್ರಾಣ ಕಳೆದುಕೊಂಡರೂ ಅನಂತ ಶೆಟ್ಟಿಗೆ ಇಷ್ಟ ವಿಚಾರ ನಿನಗೆ ಗೊತ್ತು. ಹೀಗೆ ಎಷ್ಟೆಲ್ಲಾ ನಡೆದಿವೆಯೋ ಮರ್ಯಾದಿ ದೊಡ್ಡದು ನೋಡು. ಇರುವ ಮಾನವನ್ನು ಕಾಪಾಡಿಕೊಳ್ಳಲು ಸುಮ್ಮನೆ ಇದ್ದವರೂ ಇದ್ದಾರೆ....”

“ಹೋಗಲಿ....ದೇವರಿಗೆ ಅವನು ಮಾಡುವುದು ಸರಿಯಾಗಿ ಕಾಣುತ್ತದೆಯೆ?”

"ಅದೇ ಅರ್ಥವಾಗುವುದಿಲ್ಲ. ಒಳ್ಳೆಯತನಕ್ಕೆ ಬೆಲೆಯೇ ಇಲ್ಲವಾಗಿದೆ. ನಿತ್ಯ ದೇವರ ಮುಖ ನೋಡುವವನು ನಾನು. ಈಗ ನನಗೇ ಅವನ ಸಹಾಯ ಇಲ್ಲವಾಗಿದೆ."

"ಯಾರಾದರೂ ಹೆಗಡೆಯ ಹಾಳು ಬಯಸಿ ದೇವರಿಗೆ ಹರಕೆ ಹೊತ್ತಿದ್ದರೆ....?"

"ಯಾರು ಮಾಡುತ್ತಾರೆ ಆ ಕೆಲಸ?"

"ನೀವೇ ಮಾಡಿ ಅಂತ...."

"ಛೆ! ಛೆ!....ಆ ಪಾಪಕಾರ್ಯ ನನಗೇಕೆ? ಭಗವಂತ ಇಂದಲ್ಲ ನಾಳೆ ಯಾದರೂ ಕಣ್ಣು ತೆರೆಯುತ್ತಾನೆ"

"ವಿಚಿತ್ರ .. ನನಗೇನೂ ಇಲ್ಲ . ಒಂದು ರಾತ್ರಿ ಹೇಗಾದರೂ ಕಳೆಯುತ್ತೇನೆ. ಬೆಳಿಗ್ಗೆ ಮಾತ್ರ ಖಂಡಿತಾ ಬರುವಂತೆ ಮಾಡಿ. ಗಿರಿಜ ಕುಂತಿಕೊಪ್ಪಕ್ಕೆ ಹೋಗುವುದು ಅವಳ ಹಿತದೃಷ್ಟಿಯಿಂದ ನನಗೆ ಸಮ್ಮತಿ. ಆದರೆ ನೀವು ದೇವರ ಪೂಜೆಯನ್ನು ಮಾತ್ರ ತಪ್ಪಿಸಬೇಡಿ" ಎಂದು ರುಕ್ಮಿಣಿ ಎಚ್ಚರಿಸಿದಳು. ಹೆಚ್ಚು ಮಾತನಾಡುವುದಕ್ಕೆ ಸೋಮಯಾಜರಿಗೆ ಸಮಯದ ಅಭಾವ.

ಎರಡು ತುತ್ತು ಮಜ್ಜಿಗೆ ಅನ್ನ ಉಂಡಿದ್ದರು. ಹರಿವೆಯ ಸೊಪ್ಪಿನ ಹುಳಿ ಗಂಟಲ ಕೆಳಗೆ ಇಳಿಯಲೇ ಇಲ್ಲ. ಊಟಮಾಡಿದರು. ಸಾಲೇರ ಪಂಚೆಯನ್ನು ಮೈಮೇಲೆ ಹಾಕಿಕೊಂಡು "ಮುಂದಿನ ಬಾಗಿಲು ಹಾಕಿಕೊ .. ಗಿರಿಜ ಬಂದರೆ ಗಾಡಿ ತರುವುದಕ್ಕೆ ಹೋದ ವಿಚಾರ ತಿಳಿಸು. ಕೆಳಹಿತ್ತಲಿಗೆ ಹೋಗಿ ಬರುತ್ತೇನೆ ..." ಎಂದು ಸೋಮಯಾಜರು ಕೆಳಹಿತ್ತಲಿಗೆ ಹೋದರು.

ಕೆಳಹಿತ್ತಲಿಗೆ ಬಂದಾಗ ಆಗಷ್ಟೆ ಕುಂದಾಪುರದಿಂದ ಬಂದಿದ್ದ ಮಂಜ ಗಾಡಿಯನ್ನು ದರೆಯ ಬಳಿ ನಿಲ್ಲಿಸಿ ಎತ್ತುಗಳಿಗೆ ಹುಲ್ಲು ಹಾಕುತ್ತಿದ್ದ. ಮಂಜನ ಹೆಂಡತಿ ಮಕ್ಕಳ ಬಟ್ಟಲಿಗೆ ಕೂಳು ಹಾಕಿ ಬೇಯಿಸಿದ್ದ ಹುರುಳಿಯನ್ನು ಎತ್ತುಗಳ ಮುಂದಿದ್ದ ಮರಿಗೆಗೆ ಸುರಿದಿದ್ದಳು. ಸೋಮಯಾಜರನ್ನು ಕಂಡಾಗ ಮಂಜನಿಗೆ ಎಲ್ಲಿಲ್ಲದ ವಿಸ್ಮಯವಾಯ್ತು. "ಅಯ್ಯ ನನ್ನ ಮನೆಗೆ ಈ ಹೊತ್ತಿನಲ್ಲಿ ಬರುವುದೆಂದರೆ ..." ಅದೇ ಮಂಜನಿಗೆ ಆಶ್ಚರ್ಯ. ಕೈಯಲ್ಲಿದ್ದ ಸೂಡಿಯನ್ನೆತ್ತಿ "ಏನು ಬುದ್ಧಿ....ಇಷ್ಟು ದೂರ ಬಂದದ್ದು" ಎಂದು ಕೇಳಿದ. ಸೋಮಯಾಜರು ಒಂದೇ ಉಸಿರಿಗೆ ಕುಂತಿಕೊಪ್ಪದ ಪ್ರಯಾಣದ ಬಗ್ಗೆ

ವಿವರಣೆ ಹೇಳಿ "ನೋಡಪ್ಪ ಆಗುವುದಿಲ್ಲ ಎನ್ನಬಾರದು. ಎತ್ತುಗಳು ಹುಲ್ಲು ತಿನ್ನುತ್ತಿದ್ದಾವೆ. ನಿನ್ನ ಊಟ ಆಗಿದೆಯೋ ಇಲ್ಲವೋ....ಶುಂಠಿಕೊಪ್ಪಕ್ಕೆ ಈಗಲೇ ಗಾಡಿ ಕಟ್ಟಬೇಕು. ಒಂದಕ್ಕೆ ಎರಡು ಬಾಡಿಗೆ ಕೊಡುತ್ತೇನೆ" ಎಂದರು ಸೋಮಯಾಜರು. ಮಂಜನಿಗೆ ಅವರೆಂದರೆ ಎಲ್ಲಿಲ್ಲದ ಭಕ್ತಿ. ಅಲ್ಲ ಎನ್ನುವ ಕುಳವೇ ಅವನಲ್ಲ. "ಬಾಡಿಗೆ ಮನೆ ಹಾಳಾಯ್ತು. ಯಾರು ಸ್ವಾಮಿ ನಿಮ್ಮಲ್ಲಿ ದುಡ್ಡು ಕೇಳಿದರು? ನಿಮ್ಮ ಮುಖ ನೋಡುತ್ತೇನೆ ಅಯ್ಯ.... ನಿಮ್ಮ ಕೆಲಸ ಅಂದರೆ ನನಗೂ ಬಲು ಇಷ್ಟ" ಎನ್ನುತ್ತ ಮಂಜ ಎತ್ತುಗಳಿಗೆ ಹಾಕಿದ್ದ ಹುಲ್ಲನ್ನು ಗೋರತೊಡಗಿದ. "ತುಂಬಾ ಅವಸರವಾಯ್ತು. ಸಂಜೆ ಯವರೆಗೆ ಈ ಪ್ರಯಾಣದ ಯೋಚನೆಯಿರಲಿಲ್ಲ. ಏಕೆ? ಏನು? ಎಂದು ಆಮೇಲೆ ಹೇಳುತ್ತೇನೆ. ಗಾಡಿ ಈಗಲೇ ಕಟ್ಟಬೇಕು. ಶುಂಠಿಕೊಪ್ಪದಲ್ಲಿ ಗಿರಿಜಮ್ಮನನ್ನು ಬಿಟ್ಟು ಕೂಡಲೇ ಮೊಗೆಬೆಟ್ಟಿಗೆ ಮತ್ತೆ ಗಾಡಿ ಹೊಡೆಯ ಬೇಕು. ನನಗೂ ಅಲ್ಲಿ ಹೆಚ್ಚು ಹೊತ್ತು ನಿಲ್ಲುವಂತಿಲ್ಲ. ದೇವಾಲಯದ ಕೆಲಸ. ಪೂಜೆ ಪುನಸ್ಕಾರದಲ್ಲಿ ಉದಾಸೀನ ಮಾಡುವಂತಿಲ್ಲ. ಎತ್ತುಗಳಿಗೆ ಒಂದಿಷ್ಟು ಹುಲ್ಲು ಮೊದಲೇ ತಿನ್ನಿಸಿಬಿಡು. ಗಾಡಿಗೆ ಕುಳಿತುಕೊಳ್ಳುವ ಜಾಗ ದಲ್ಲಿ ಒಂದು ಚಾಪೆ ಹಾಕುವಂತೆ ಮಾಡು" ಎಂದರು.

"ಕುಂದಾಪುರಕ್ಕೆ ಹೋಗಿತ್ತು ಬುದ್ಧಿ ಗಾಡಿ....ಕಮ್ತಿಯವರ ಮನೆಯವ ರನ್ನು ಕರೆದುಕೊಂಡು ಹೋಗಿದ್ದೆ. ಎಲ್ಲಾ ಅನುಕೂಲವಾಗಿಯೇ ಇದೆ. ಈಗ ಕಟ್ಟುತ್ತೇನೆ ಎತ್ತುಗಳನ್ನು...."

"ನಿನ್ನ ಊಟ....?"

"ಆಗಲೇ ಮುಗಿಸಿದೆ...."

"ಎತ್ತುಗಳಿಗೆ ಅಕ್ಕಚ್ಚು ಬಾಯರು....?"

"ನನ್ನ ಹೆಂಡತಿ ಮೊದಲು ಆ ಕೆಲಸ ಪೂರೈಸಿದ್ದಾಳೆ"

ಮಂಜ ಎತ್ತುಗಳ ನೊಗದಲ್ಲಿ ಮೂಕಿಯಿಟ್ಟು ಸೋಮಯಾಜರಲ್ಲಿ ಕುಳಿತುಕೊಳ್ಳುವಂತೆ ಹೇಳಿದ . ಗಾಡಿಗೆ ಕಟ್ಟಿದ್ದ ಬಿದಿರೆಳೆಯ ಸಂದಿಯಲ್ಲಿದ್ದ ಬಾರುಕೋಲನ್ನೆಳೆದು....ಒಂದೇ ನೆಗೆತಕ್ಕೆ ಮೂಕಿಯಮೇಲೆ ಕುಳಿತ ಮಂಜ. "ಅಮ್ಮ ಎಲ್ಲಿದ್ದಾರೆ ಬುದ್ಧಿ ?" ಎಂದು ಕೇಳಿದ ಮಂಜ. ಸೋಮಯಾಜರು ಹೇಳಿದರು "ಮೊದಲು ಗಾಡಿ ನಮ್ಮ ಮನೆಗೆ ಹೋಗಲಿ" ಎಂದು. ಗಾಡಿ

ಸೋಮಯಾಜರ ಮನೆ ಮುಂದೆ ನಿಂತಾಗ ಗಿರಿಜ ಚಾವಡಿಯ ಕಂಬದ ಬಳಿ ನಿಂತಿದ್ದಳು.

ಗಾಡಿ ಮೊಗೆಬೆಟ್ಟಿನಿಂದ ಹೊರಟಾಗ ಎಷ್ಟು ಹೊತ್ತಾಗಿತ್ತೋ.... ಮಂಜನ ಎಣಿಕೆಯ ಪ್ರಕಾರ ಗಂಟೆ ಹತ್ತರ ಮೇಲಾಗಿತ್ತು. ರುಕ್ಮಿಣಿ ಮನೆಯ ಬಾಗಿಲು ಹಾಕಿದ್ದನ್ನು ಕಂಡ ಅನಂತರವೇ ಸೋಮಯಾಜರು ಗಾಡಿ ಹತ್ತಿದರು. ಯಾವ ಮಾರ್ಗ ಹೆಚ್ಚು ಅನುಕೂಲ ಎಂದು ಗಾಡಿಯವನನ್ನೇ ಕೇಳಿದರು. ಹೆಗಡೆಯ ಸರ್ವೆ ತೋಪಿನ ದಾರಿಯಲ್ಲಿ ಹೋಗುವುದು ಮಾತ್ರ ಅವರಿಗೆ ಬೇಡವಾಗಿತ್ತು. "ನೋಡಪ್ಪ....ಗಾಡಿಯನ್ನು ಕೆಳಹಿತ್ತಲಿನ ಕಾಲುದಾರಿಯಲ್ಲೆ ಬಿಡು. ತೋಪಿನ ದಾರಿಯಲ್ಲಿ ಬೇಡ" ಎಂದರು. "ಅದು ಸುತ್ತು ಬುದ್ದಿ. ಮಕ್ಕಿಮನೆಯ ಹಾದಿಯೇ ತುಂಬ ಹತ್ತಿರ" ಎಂದ ಮಂಜ. "ಅದು ನನಗೂ ಗೊತ್ತು. ಹೆಗಡೆಯ ತಾವಿನಲ್ಲಿ ಹೋಗುವುದು ನನಗೆ ಇಷ್ಟವಿಲ್ಲ" ಎಂದರು. ಒಪ್ಪಿದ ಮಂಜ. ಸ್ವಲ್ಪ ದೂರ ಯಾರದೂ ಮಾತಿಲ್ಲ. ತೋಟದ ತಿರುವನ್ನು ದಾಟಿದಾಗ ಸೋಮಯಾಜರು ಮೆಲ್ಲನೆ ಗಿರಿಜಳ ಅಂಗೈಯನ್ನು ತಮ್ಮ ಅಂಗೈಮೇಲಿಟ್ಟು ಕೇಳಿದರು,

"ಅನ್ನ ನೀರಿನ ಋಣ ಹೇಳುವುದಕ್ಕಾಗುವುದಿಲ್ಲ... ಸಂಜೆ ಈ ಪ್ರಯಾಣದ ಬಗ್ಗೆ ಕಲ್ಪನೆಯೂ ಇರಲಿಲ್ಲ"

"ಹೌದು....ತುಂಬಾ ವಿಚಿತ್ರ ."

"ನಿನ್ನ ಅಮ್ಮ ಏನು ತಿಳಿದುಕೊಳ್ಳುತ್ತಾಳೋ ಏನೋ. ಬೆಳಗಿನ ಜಾವ ಹೋಗಿ ಮನೆಯ ಬಾಗಿಲು ತಟ್ಟಿದಾಗ ಇನ್ನೆಷ್ಟು ಹೆದರಿಕೊಳ್ಳಬೇಕೋ...."

"ಮೊದಲೇ ಅವಳದ್ದು ಪುಕ್ಕಲುಜೀವ. ಅದೂ ಆ ಹೊತ್ತಿನಲ್ಲಿ ಬಂದರೆ ಹೆದರುವುದು ಸ್ವಾಭಾವಿಕ ಅನ್ನಿ...."

ಮಾತಿನ ಗತ್ತನ್ನೇ ಬದಲಿಸಿದರು ಸೋಮಯಾಜರು.

"ರುಕ್ಮಿಣಿ ಏನು ಹೇಳಿದಳು ...?"

"ತುಂಬಾ ನೊಂದುಕೊಂಡಿದ್ದಾರೆ...."

"ಈ ಪ್ರಯಾಣದ ಬಗ್ಗೆ ಏನನ್ನೂ ಹೇಳಲಿಲ್ಲವೆ?"

"ಏಕೆ ಹೆದರಿಕೊಳ್ಳಬೇಕಾಗಿತ್ತು ಎನ್ನುತ್ತಾರೆ."

"ಹೆಂಗಸರಿಗೆ ಒಂದೂ ಅರ್ಥವಾಗುವುದೇ ಇಲ್ಲ. ಬೆಂಕಿ ಎಂದು ತಿಳಿದೂ

ಕೈ ಚಾಚುವುದು ಹೇಗೆ ಸಾಧ್ಯ ಅಂತ? ನಾವಾಗಿ ಬೆಂಕಿಯಿಂದ ದೂರವಿರುವುದೇ ಒಳ್ಳೆಯದಲ್ಲವೆ? ಹೆಗಡೆಯ ಹತ್ತಿರ ಹೋರಾಡುವುದಕ್ಕೆ ನಿಂತಮೇಲೆ ನಾವು ಗೆಲ್ಲಬೇಕು. ಇಲ್ಲವಾದರೆ ಪುರುಷತ್ವಕ್ಕೆ ಏನು ಬಂತು ಗೌರವ? ಹೆದರಿಕೊಳ್ಳದೆ ಈ ವಿಚಾರದಲ್ಲಿ ಇನ್ನೇನು ಮಾಡುವುದಕ್ಕಾಗುತ್ತದೆ? ಅಂತೂ ರುಕ್ಮಿಣಿಗಿರುವ ಎದೆಗಟ್ಟಿ ನನಗಿಲ್ಲವೆಂದಾಯ್ತು. ಆಗಲಿ-ಯಾವಾಗ ಬರುತ್ತಿ ಎಂದು ಕೇಳಿದಳೆ?"

"ಹೌದು....ಹೇಳಿದೆ"

"ಯಾವಾಗ ಬರುವುದಾಗಿ ಹೇಳಿದೆ?"

"ಹೇಳಿದೆ....ನಿಮಗೆ ಗೊತ್ತೇ ಇದೆಯಲ್ಲ"

"ಏಕೆ? ನನ್ನ ಮುಂದೆ ಹೇಳುವುದಕ್ಕೆ ನಾಚಿಕೆಯೆ?"

"ನಾಚಿಕೆಯಿಲ್ಲ...."

"ಮತ್ತೆ....ಬರುತ್ತಾ ಮಗುವಿನ ಜೊತೆ ಬರುತ್ತಿ ಅಂದಿಯೇನು?"

ಗಿರಿಜ ಏನನ್ನೂ ಹೇಳಲಿಲ್ಲ. ಗಿರಿಜಳ ಮುಖದಲ್ಲಿ ಯಾವ ಭಾವವಿತ್ತು ಎಂದು ನೋಡುವುದಕ್ಕೆ ಕತ್ತಲೆಯಲ್ಲಿ ಸೋಮಯಾಜರಿಗೆ ಆಗಿರಲಿಲ್ಲ.

"ಅವರಿಗೆ ಅಷ್ಟು ದಿನ ನಾನು ಇಲ್ಲದಿರುವುದೇ ಬೇಸರ .."

"ಹೌದು....ನನ್ನಲ್ಲಿಯೂ ಅದನ್ನೆ ಹೇಳಿದಳು."

"ಒಮ್ಮೆ ಅವರನ್ನೂ ಕರೆದುಕೊಂಡು ಬನ್ನಿ ..."

"ಎಲ್ಲಿ ಆಗುತ್ತದೆ ಗಿರಿಜಾ ...? ಆ ಮಕ್ಕಳನ್ನ ಕಟ್ಟಿಕೊಂಡು ಹೊರಡುವುದೆಂದರೆ....ತುಂಬಾ ತೊಂದರೆ"

"ಅವರ ಋಣ ನಾನು ತೀರಿಸುವುದು ಯಾವಾಗಲೋ ಏನೋ....ಮಗಳಿಗಿಂತಲೂ ಹೆಚ್ಚಾಗಿ ನನ್ನನ್ನು ಕಂಡಿದ್ದಾರೆ. ಇನ್ನು ನನಗೆ ದಿನಾ ಅವರದ್ದೆ ನೆನಪಾಗುತ್ತದೆ. ಮಕ್ಕಳನ್ನು ನೆನಸಿಕೊಳ್ಳುವುದೇ ಆಯ್ತು. ಅಲ್ಲದೆ ನಿಮ್ಮ ಯೋಚನೆ ಬೇರೆ ..."

"ನನ್ನ ಬಗ್ಗೆ ಏನೂ ಯೋಚನೆ ಬೇಡ"

"ನೀವು ಹೇಳಿದರೆ ನನಗೆ ಸಮಾಧಾನವಾಗಬೇಕಲ್ಲ. ಎಲ್ಲಿ ಆ ಹೆಗಡೆ ಏನು ತೊಂದರೆ ಮಾಡುತ್ತಾನೋ....ಹಾಗೇನಾದರೂ ಆದರೆ ಆ ಸುದ್ದಿ ನನಗೆ ಹೇಗೆ ಗೊತ್ತಾಗಬೇಕು?" ಎಂದಳು ಗಿರಿಜ.

"ದೇವರಿದ್ದಾನೆ ಗಿರಿಜಾ… ಶಿವನಿಗೆ ನನ್ನ ಮೇಲೆ ಕರುಣೆ ಇರುವುದಾದರೆ ಖಂಡಿತಾ ಈ ಭಾಗದಲ್ಲಿ ನನಗೆ ದ್ರೋಹವಾಗುವುದಿಲ್ಲ. ಇಷ್ಟು ವರ್ಷ ನಾನು ದೇವರಿಗೆ ಸೇವೆ ಸಲ್ಲಿಸಿರುವುದಕ್ಕಾದರೂ ನನಗೆ ನ್ಯಾಯ ದೊರಕಬೇಡವೆ ? ನೀನು ಏನೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಡ. ನಾನು ಹೆದರಿಕೊಂಡಿರುವುದು ಮರ್ಯಾದೆಗೆ. ಅವನಿಗಲ್ಲ. ನನ್ನದು ಒಂದು ರೀತಿಯ ಸ್ವಭಾವ. ಸಿಟ್ಟುಬಂದರೆ ಇಂತಹ ನೂರು ಹೆಗಡೆ ಬಂದರೂ ಹೆದರುವುದಿಲ್ಲ…." ಎಂದರು ಸೋಮಯಾಜರು. ಆಗಲೇ ಗಾಡಿ ಮೊಗೆಬೆಟ್ಟಿನ ಕಲ್ಲುಸಂಕವನ್ನು ದಾಟಿ ಬರೆಯ ತಪ್ಪಲಿನ ದಾರಿಗೆ ಬಂದಿತ್ತು. ಚಕ್ರ ಕೊರಕಲಿನಲ್ಲಿ ಉರುಳಿ ಗಾಡಿ ವಾಲಿದಾಗ ಮಾತ್ರ ಸೋಮಯಾಜರು ಮಾತು ನಿಲ್ಲಿಸಿದರು. ಗಾಡಿಪ್ರಯಾಣ ಎಂದರೆ ಅವರಿಗೆ ಸಂಕಟ.

"ಈ ಗಾಡಿ ಪ್ರಯಾಣ ಎಂದರೆ ಮೂಳೆ ಎಲ್ಲಾ ಮುರಿಯುತ್ತದೆ" ಎಂದರು ಮಂಜನಲ್ಲಿ.

"ಈಗ ಎಷ್ಟೋ ವಾಸಿ ಬುದ್ಧಿ… ಕಳೆದ ವರ್ಷ ನೋಡಬೇಕಿತ್ತು ಈ ರಸ್ತೆಯನ್ನು. ಕೊರಕಲಲ್ಲಿ ಚಕ್ರ ಹೂತರೆ ಎತ್ತುವುದಕ್ಕೆ ಇಬ್ಬರು ಬೇಕಾಗಿತ್ತು. ಹೋದ ತಿಂಗಳು ಜಲ್ಲಿ ಹಾಕಿದ ಮೇಲೆ ಕೊಂಚ ಮೇಲು" ಎಂದು ಮಂಜ ಸೋಮಯಾಜರ ಮಾತಿಗೆ ಹೇಳಿದ.

"ಅದೇನು ಜಲ್ಲಿ ಹಾಕಿದ್ದಾರೋ… ಏರು ತಗ್ಗು ಹಾಗೇ ಇದೆ"

"ಸರಕಾರದ ದುಡ್ಡು ಅಯ್ಯ… ದೊರೆಗಳಿರುವುದು ಮಂಗಳೂರಿನಲ್ಲಿ. ಯಾರಿಗಾದರೂ ಗುತ್ತಿಗೆಗೆ ಕೊಡುತ್ತಾರೆ. ಎಷ್ಟಾದರೂ ಅಷ್ಟೆ ಅನ್ನಿ…."

"ಅದೂ ಸರಿ ಅನ್ನು… ಊರಿನ ರಸ್ತೆಯೇ ಹೀಗಿದ್ದರೆ ಮುಂದೆ ಗುಡ್ಡದ ದಾರಿಯ ಗತಿ ಏನು ಅಂತ ? ಗಾಡಿ ಇಷ್ಟು ಮೆಲ್ಲನೆ ಹೋದರೆ ನಾವು ಶುಂಠಿಕೊಪ್ಪಕ್ಕೆ ಹೋಗುವುದು ಯಾವಾಗ ?"

"ನಿಮಗೇಕೆ ಸ್ವಾಮಿ ? ಅಮ್ಮನನ್ನು ಅಲ್ಲಿ ಬಿಟ್ಟು ನಾಳೆ ಹತ್ತು ಗಂಟೆಗೆಲ್ಲಾ ಮೊಗೆಬೆಟ್ಟಿಗೆ ಬಂದರೆ ಸರಿತಾನೆ ? ಏನೂ ಹೆದರಬೇಡಿ. ಎತ್ತುಗಳು ನೋಡುವುದಕ್ಕೆ ಹೀಗಿವೆ. ಕಾಣುವುದಕ್ಕೆ ಬಡಕಲಾದರೂ ಕೆಲಸದಲ್ಲಿ ಅವುಗಳಿಗೆ ಕಳ್ಳತನವಿಲ್ಲ ಅಯ್ಯ."

"ಹಾಗಿದ್ದರೆ ಸರಿ ಮಂಜ. ಅವಸರ ಕಾರ್ಯ ಎಂದರೆ ಅಷ್ಟೆ. ಮುಖ್ಯ ನಾಳೆಯ ಪೂಜೆಗೆ ನಾನು ಊರಿನಲ್ಲಿದ್ದರೆ ಸರಿ"

"ಮತ್ತೆ ಅನುಮಾನವೇ ಬೇಡ ಬುದ್ಧಿ"

"ಅಮ್ಮನಿಗೆ ಕಷ್ಟವಾಗುತ್ತದೋ ಏನೋ....ನೀವು ಇನ್ನೂ ಮುಂದೆ ಕುಳಿತುಕೊಳ್ಳಿ. ಅವರಿಗೆ ಮಲಗುವುದಕ್ಕಾದರೂ ಒಂದಿಷ್ಟು ತಾವು ಸಿಕ್ಕುತ್ತದೆ"

"ಚಿಂತೆಯಿಲ್ಲ. ಗುಡ್ಡದ ದಾರಿ ಮುಗಿಯಲಿ....ಆಮೇಲೆ ನಿದ್ದೆಯ ಯೋಚನೆ. ಅದಿರಲಿ ಮಂಜ... ನನ್ನ ಪ್ರಯಾಣದ ಬಗ್ಗೆ ನಿನಗೆ ಹೇಳಲೇ ಇಲ್ಲ. ಇದೆಲ್ಲಾ ನಿಮ್ಮ ರುದ್ರಹೆಗಡೆಯ ಕೆಲಸ ನೋಡು. ನಮ್ಮ ಗಿರಿಜಮ್ಮನ ಮೇಲೆ ಅವನ ಕಣ್ಣು ಬಿದ್ದಿದೆ...." ಎಂದು ಸೋಮಯಾಜರು ಎಲ್ಲವನ್ನೂ ವಿವರಿಸಿದರು. ಬರೆಯನ್ನು ದಾಟಿ ಹೊಳೆ ಬುಡದ ಹೊಯಿಗೆ ದಾರಿಗೆ ಗಾಡಿ ಬಂದರೂ ಸೋಮಯಾಜರು ಹೇಳುವುದನ್ನು ಮುಗಿಸಿರಲಿಲ್ಲ. ಮಂಜನ ಬಾಯಿಂದ ಒಂದೇ ಮಾತು ಹೊರಬಂದಿತು "ಅಯ್ಯೋ ದೇವರೆ... ಆ ಹುಲಿಯನ್ನು ಸೀಳಿ ಕೇರಿಯಲ್ಲಿ ಬಿಸಾಡುವುದಕ್ಕೆ ಯಾರಿಗೂ ಧೈರ್ಯ ಇಲ್ಲ ನೋಡಿ" ಎಂದ.

೧೯

ಎತ್ತಿನಗಾಡಿ ಸೊಗೆಬೆಟ್ಟಿಗೆ ವಾಪಸು ಬಂದಾಗ ಸೂರ್ಯ ನಡುನೆತ್ತಿಗೆ ಬಂದಿದ್ದ. ಬಿಸಿಲಿನ ಜಳಕ್ಕೆ ಸೋಮಯಾಜರ ಮುಖ ಬಾಡಿಹೋಗಿತ್ತು. ತಪ್ಪಲಿನದಾರಿಗೆ ಬಂದಾಗಲಂತೂ ನೆತ್ತಿಯಿಂದ ಒಂದೇ ಸಮನೆ ಬೆವರಿಳಿಯುವುದಕ್ಕೆ ಆರಂಭವಾಯ್ತು. ಸುಡುಬಿಸಿಲಿಗೆ ಎತ್ತುಗಳೂ ಹೆಜ್ಜೆ ಹಾಕುವುದನ್ನು ನಿಧಾನಿಸಿದ್ದವು. ಯಾವ ಹೊತ್ತಿಗೆ ಮನೆಗೆ ಹೋಗಿ ನಾಲ್ಕು ಕೊಡ ನೀರನ್ನು ತಲೆಯ ಮೇಲೆ ಹಾಕಿಕೊಂಡು .. ನಾಲ್ಕು ತುತ್ತು ಅನ್ನ ಉಣ್ಣುವೆನೋ ಎಂದು ಅರ್ಧದಾರಿಗೆ ಬಂದಿದ್ದಾಗಲೇ ಮಂಜನಲ್ಲಿ ಪದೇಪದೇ "ಸ್ವಲ್ಪ ಬೇಗ ಹೊಡಿಯಪ್ಪ" ಎಂದು ಅವಸರಪಡಿಸಿದ್ದರು. ರಾತ್ರಿಯ ಪ್ರಯಾಣದಲ್ಲಿ ಮಂಜನ ಸಣಕಲು ಎತ್ತುಗಳು ದಣಿದಿದ್ದರಿಂದ ನೊಗೆಬೆಟ್ಟಿಗೆ ಮರಳುವಾಗ ಹೊತ್ತು ನೆತ್ತಿಏರಿಹೋಗಿತ್ತು. ಎಷ್ಟೇ ಪ್ರಯತ್ನಿಸಿದ್ದರೂ ಹನ್ನೆರಡು ಗಂಟೆಯ ಮೊದಲು ಬರುವುದಾಗಲಿಲ್ಲ. ಅಲ್ಲದೆ ಕುಂತಿಕೊಪ್ಪದಲ್ಲಿ ಆ ಮಾತು, ಈ ಮಾತು ಎಂದು ಸೋಮಯಾಜರು ಒಂದು ತಾಸು ಪಟ್ಟಾಂಗ ಹೊಡೆಯುವುದಕ್ಕೆ ಕುಳಿತಿರಬೇಕಾದ ಪ್ರಸಂಗ ಬಂತು. "ಅಯ್ಯ.. ಎತ್ತುಗಳಿಗೆ ಒಂದಿಷ್ಟು ಹುಲ್ಲು ಹಿಂಡಿ ತಿನ್ನಿಸಬೇಕು. ಮತ್ತೆ ಗಾಡಿ ಕಟ್ಟುವುದರಿಂದ ಅವುಗಳ ಹೊಟ್ಟೆ ತುಂಬಿಸದೆ ಹೊರಡುವಂತಿಲ್ಲ. ತಾವು ಹೇಗೂ ಅಮ್ಮನ ಮನೆಗೆ ಬಂದವ್ರು. ಅವಸರ ಮಾಡಬೇಡಿ. ನನಗೂ ಗಳಿಗೆಯ ಕೆಲಸವಿದೆ" ಎಂದು ಮಂಜ ಹೇಳಿದ್ದರಿಂದ ವನಜಮ್ಮನ ಜೊತೆ ಮಾತಿಗೆ ಕುಳಿತರು ಸೋಮಯಾಜರು. ಹೇಳು

ವುದನ್ನೆಲ್ಲಾ ಹೇಳಿದರು. ಸೂಕ್ಷ್ಮವಾಗಿ ಆಕೆಗೆ ನಾಲ್ಕು ಸಮಾಧಾನದ ಮಾತು ಹೇಳಿ ಕೊನೆಗೆ "ಆದಷ್ಟು ಬೇಗ ಆಕೆಯನ್ನು ಕಾಳೂರಿನಲ್ಲಿ ಬಿಟ್ಟು ಬಾ. ಸಾಧ್ಯವಾದರೆ ನಾಳೆಯೇ ಆ ಕೆಲಸ ಮಾಡು. ಶೇಷಗಿರಿಯಪ್ಪನಿಗೂ ವಿಚಾರ ತಿಳಿಸು. ಆ ಹೆಗಡೆ ಇಲ್ಲಿಗೂ ಬಂದಾನು. ಮರ್ಯಾದಿ ಬಿಟ್ಟವರ ಸಮಾಚಾರ. ಅವರೇ ಈಗಿನ ಕಾಲಕ್ಕೆ ದೊಡ್ಡವರು ನೋಡು. ಗಿರಿಜ ಕಾಳೂರಿನಲ್ಲಿದ್ದರೆ ಅವನಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ಬಾಕಿ ವಿಚಾರ ನಾನು ನೋಡಿಕೊಳ್ಳುತ್ತೇನೆ. ನನ್ನ ವಿಚಾರ ಹೆಗಡೆಗೆ ಏನೂ ತಿಳಿಯದು. ಸಿಟ್ಟು ಬಂದರೆ ಹೆಗಡೆಯಲ್ಲ....ಹೆಗಡೆಯ ಅಪ್ಪ ಬಂದರೂ ಹೆದರುವುದಿಲ್ಲ. ಅವನು ನಾಲ್ಕು ಹೊಡೆದರೆ ಒಂದು ಗುದ್ದನ್ನಾದರೂ ಅವನ ಮುಖದ ಮೇಲೆ ಗುದ್ದದೆ ಇರುತ್ತೇನೆಯೇ ? ಏನೋ ಬಡಬ್ರಾಹ್ಮಣ ಎಂದುಕೊಂಡಿದ್ದಾನೆ. ಹೆದರಬೇಡ ವನಜ....ಮಗಳ ಯೋಗಕ್ಷೇಮ ಕೆಲವು ಕಾಲ ನಿನಗೆ ಸೇರಿದ್ದು ..." ಎಂದರು ಸೋಮಯಾಜರು. ವನಜ ಅಷ್ಟೇನೂ ಹೆದರಿಕೊಳ್ಳಲಿಲ್ಲ. "ಇನ್ನು ಬಿಡಿ ಅಯ್ಯ....ನನಗೆ ಸಂಬಂಧಿಸಿದ್ದು. ಮಗಳು ಬಂದದ್ದೇ ನನಗೆ ಸಂತೋಷವಾಗಿದೆ ನೀವು ಒಂದು ದಿನ ಇದ್ದಿದ್ದರೆ ತುಂಬಾ ನೆಮ್ಮದಿಯಾಗುತ್ತಿತ್ತು. ಹೋಗಲಿ....ಹೇಗೂ ಬರುತ್ತೀರಲ್ಲ. ಪುರುಸೊತ್ತಾಗಿ ರುಕ್ಮಿಣಿ ಅಮ್ಮನನ್ನು ಒಮ್ಮೆ ಕರೆದುಕೊಂಡು ಬನ್ನಿ" ಎಂದಳು ವನಜ. ಗಾಡಿ ಹತ್ತಿದಾಗ ಮಾತ್ರ ಗಿರಿಜಳಿಗೆ ದುಃಖ ತಡೆಯುವುದಾಗಲಿಲ್ಲ. ಅಳುವುದಕ್ಕೆ ತೊಡಗಿದಳು. ಸೋಮಯಾಜರಿಗೆ ಸಮಾಧಾನಿಸುವುದೇ ಕಷ್ಟವಾಯ್ತು. ವನಜ ಕೂಡಾ ಬಹಳವಾಗಿ ಸಂತೈಸಿದರೂ ಗಿರಿಜಳ ಅಳು ಮಾತ್ರ ಕಡಿಮೆಯಾಗಲಿಲ್ಲ. "ಎಂದಿಗೂ ನಿನ್ನ ಕೈ ಬಿಡುವುದಿಲ್ಲ ಗಿರಿಜಾ!....ನನ್ನ ಎದೆಯ ಮೇಲೆ ಜನಿವಾರವಿರುವಾಗ ಸುಳ್ಳು ಹೇಳುತ್ತೇನೆಯೆ ?" ಎಂದರು. ಗಿರಿಜ ಬಿಕ್ಕಳಿಸುತ್ತಾ "ಆ ಹೆಗಡೆಯಿಂದ ನಿಮಗೇನಾದರೂ ತೊಂದರೆ ಆದರೆ....ಅದೇ ನನಗೆ ಯೋಚನೆಯಾಗಿದೆ. ನನ್ನ ಸುಖಕ್ಕೆ ಕಲ್ಲುಹಾಕಿ. ನೀವು ಅಲ್ಲಿ ಸುಖವಾಗಿರುವುದು ನನಗೆ ಬೇಕು" ಎಂದಳು. ಆಕೆಯ ಬೆನ್ನಮೇಲೆ ಕೈಯಾಡಿಸುತ್ತಾ "ಛೆ! ನನಗೆ ದೇವರ ಬೆಂಬಲವಿದೆ ಗಿರಿಜಾ....ಹಾಗಿಲ್ಲವಾದರೆ ನಾನು ಬ್ರಾಹ್ಮಣನಾಗಿ ಹುಟ್ಟಿ ಪ್ರಯೋಜನವೇನು ? ಇಷ್ಟು ದಿನ ದೇವರ ಸೇವೆ ಮಾಡಿದ್ದಕ್ಕೆ ಸಾರ್ಥಕವೇನು ? ನಾನೇನು ಅಂಜುಬುರುಕ ಎಂದು ನಿನ್ನ ಅಭಿಪ್ರಾಯವೆ ? ಹೆಗಡೆಯ ಮಟ್ಟಕ್ಕೆ

ನಾನು ಇನ್ನೂ ಇಳಿದಿಲ್ಲ. ಕುಂದಾಪುರದ ಕಾರ್ವಿಯರನ್ನು ಕರೆಯಿಸಿದರೆ ಈ ಮನೆಹಾಳನನ್ನು ಮಣ್ಣುಮುಕ್ಕಿಸುತ್ತೇನೆ" ಎಂದು ಧೈರ್ಯ ಹೇಳಿದ ಸೋಮಯಾಜರು ಊರಿಗೆ ಹೊರಟರು.

ಗಾಡಿಯನ್ನು ತೋಟದ ದರೆಯ ಬಳಿ ನಿಲ್ಲಿಸುವಂತೆ ಹೇಳಿದ ಸೋಮಯಾಜರು, "ಸಂಜೆ ಮನೆಕಡೆ ಬಾ... ಅವಸರದಲ್ಲಿ ಎಷ್ಟು ಬಾಡಿಗೆ ನಿನಗೆ ಕೊಡಬೇಕೆನ್ನುವುದು ನನಗೆ ಗೊತ್ತಾಗುವುದಿಲ್ಲ. ಈಗ ಸ್ನಾನಮಾಡಿ ಗುಡಿಗೆ ಹೋಗಬೇಕು. ನಿನ್ನ ಉಪಕಾರ ತುಂಬಾ ವಿಶೇಷವಾದದ್ದು. ಸಮಯಕ್ಕೆ ನಿನ್ನ ಸಹಾಯ ನನಗೆ ಅತಿ ಅಗತ್ಯ" ಎಂದು ಬಾಯಿತುಂಬ ಮಂಜನನ್ನು ಹೊಗಳಿ ಮನೆಗೆ ಬಂದರು.

ರುಕ್ಮಿಣಿಗೆ ಶುಂಠಿಕೊಪ್ಪದ ವರ್ತಮಾನ ತಿಳಿಯುವ ಆತುರ. ಹಲವು ಪ್ರಶ್ನೆ ಹಾಕಿದಳು. "ಮೊದಲು ಸ್ನಾನಮಾಡಿ ಗುಡಿಗೆ ಹೋಗಿಬರುತ್ತೇನೆ" ಎಂದು ಸೋಮಯಾಜರು ಬಾವಿಯ ಕಟ್ಟೆಗೆ ಹೋದರು.

ಪೂಜೆ ಮುಗಿಸಿ ಮನೆಗೆ ಬಂದಾಗ ಗಂಟೆ ಒಂದರಮೇಲಾಗಿತ್ತು. ತುಂಬಾ ಹಸಿವೆಯಾಗಿತ್ತು ಅವರಿಗೆ. ರಾತ್ರಿ ಕೂಡಾ ಸರಿಯಾಗಿ ಉಂಡಿರಲಿಲ್ಲ. ರುಕ್ಮಿಣಿ ಎಲೆ ಹಾಕಿ ಅನ್ನ ಬಡಿಸುತ್ತಾ "ಸರಿಯಾಗಿ ಊಟಮಾಡಿ... ರಾತ್ರಿ ಅವಸರದಲ್ಲಿ ಉಂಡದ್ದು. ತೊಪ್ಪೆ ಮತ್ತು ಹರಿವೆಯಸೊಪ್ಪಿನ ಹುಳಿ ಮಾಡಿದ್ದೇನೆ" ಎಂದಳು. ಹೊಟ್ಟೆಗೆ ಅನ್ನ ಬಿದ್ದ ಮೇಲೆ ಸೋಮಯಾಜರು ಗಟ್ಟಿಯಾಗಿ ಉಸಿರುಬಿಟ್ಟರು.

"ತುಂಬಾ ಹಸಿವೆಯಾಗಿತ್ತೋ ಏನೋ...." ಎಂದು ರುಕ್ಮಿಣಿ ಹಾಗೆ ಆರಂಭಿಸಿದಳು ಮಾತನ್ನು.

"ಹೌದು ... ಬೆಳಗಿನಿಂದ ಒಂದು ಲೋಟ ನೀರು ಕೂಡಾ ಕುಡಿದಿರಲಿಲ್ಲ"

"ಶುಂಠಿಕೊಪ್ಪದಲ್ಲಿ ಏನನ್ನೂ ತೆಗೆದುಕೊಳ್ಳಲಿಲ್ಲವೆ ?"

"ಬೆಳಗಿನಜಾಮದಲ್ಲಿ ಏನಿರುತ್ತದೆ–ತೆಗೆದುಕೊಳ್ಳುವುದಕ್ಕೆ ..?"

"ಎಷ್ಟು ಹೊತ್ತಾಗಿತ್ತು ಶುಂಠಿಕೊಪ್ಪಕ್ಕೆ ಹೋದಾಗ....?"

"ಬೆಳ್ಳಿ ಮೂಡಿತ್ತು...."

"ವನಜಮ್ಮ ಇದ್ದಿದ್ದಳು ಅಲ್ಲಿ...."

"ಇರದೆ ಮತ್ತೆಲ್ಲಿಗೆ ಹೋಗುತ್ತಾಳೆ...."

"ನೀವು ಬಾಗಿಲು ತಟ್ಟಿದಾಗ ಹೆದರಿಕೊಂಡಿರಬೇಕು"

"ನನ್ನ ಸ್ವರ ಕೇಳಿಯೇ ಕಂಗಾಲಾದಳಂತೆ...ಏಕೆ ಈ ಹೊತ್ತಿನಲ್ಲಿ ಬಂದರು ಎಂದು....?"

"ಸಹಜತಾನೆ ? ಬಾರದವರು ಅಕಾಲದಲ್ಲಿ ಬಂದರೆ ..."

"ಅಯ್ಯೊ... ನನಗೆ ಮೊದಲೇ ಗೊತ್ತಿತ್ತು ಹೀಗೆ ಹೆದರಿಕೊಳ್ಳುತ್ತಾಳೆ ಎಂದು. ಆದರೂ ಬಾಗಿಲು ತಟ್ಟಿದಾಗ ಆಕೆ ಯಾರು ಎಂದು ಕೇಳಿದಾಗಲೇ ನಾನು ಧೈರ್ಯ ಹೇಳಿದೆ. ಆ ಮೇಲೆ ಬಾಗಿಲು ತೆರೆದಳು. ಪಾಪ ಆ ಹೊತ್ತಿನಲ್ಲಿ ಏನನ್ನು ಎಣಿಸಿಕೊಂಡಳೋ....?"

"ಯಾರೂ ಹೆದರಿಕೊಳ್ಳುವುದೆ....ರಾತ್ರಿಹೊತ್ತು ಇದ್ದಕ್ಕಿದ್ದಂತೆ ಹಾಗೆ ಹೋಗುವುದೆ....?"

"ನಾನೊಂದು ಕೆಲಸ ಮಾಡಿದೆ ರುಕ್ಮಿಣಿ...ಆಕೆ ಒಳಗಿದ್ದಾಗಲೇ ಎಲ್ಲರೂ ಆರೋಗ್ಯವಾಗಿದ್ದಾರೆಂದು ಮೊದಲೇ ಹೇಳಿದೆ"

"ಏನೇ ಅನ್ನಿ....ಹೆಂಗಸರಿಗೆ ಅಷ್ಟೇ ಸಾಕಾಗುತ್ತದೆ. ಹೊತ್ತುಗೊತ್ತಿಲ್ಲದೆ ದೂರದವರು ಯಾರಾದರೂ ಬಂದರೆ ನನಗಾದರೂ ಅಷ್ಟೆ....ಆಮೇಲೆ...."

"ವಿಚಾರ ತಿಳಿಸಿದೆ...."

"ಏನು ಹೇಳಿದಳು ವನಜ....?"

"ಅಲ್ಲಿಯೂ ಈ ಗೋಳಿದೆಯೆ ? ಎಂದು ಕೇಳಿದಳು"

"ಅಂದರೆ....?"

"ಅಲ್ಲಿಯೂ ಇದೇ ತೊಂದರೆಯಂತೆ. ತಮ್ಮ ಜಾತಿಯವರನ್ನು ಕಂಡರೆ ಎಲ್ಲರಿಗೂ ಕಣ್ಣು ಎನ್ನುತ್ತಾಳೆ. ಅವಳೂ ಬೇಕಷ್ಟು ಅನುಭವಿಸಿದ್ದಾಳಂತೆ. ಅಲ್ಲದೆ ಅಲ್ಲಿಯ ಹೆಗಡೆಯೂ ನಮ್ಮ ರುದ್ರ ಹೆಗಡೆಯಷ್ಟೇ ಕೆಟ್ಟವನು ಎನ್ನುತ್ತಾಳೆ."

"ಆ ಜಾತಿಯಲ್ಲಿ ಹುಟ್ಟಿದವರಿಗೆ ಇದೊಂದು ಶಾಪವೋ ಏನೋ...."

"ಆದರೆ ಮಗಳನ್ನು ಕಂಡು ತುಂಬಾ ಸಂತೋಷಪಟ್ಟಳು. ನಿನ್ನನ್ನು ಬಹಳವಾಗಿ ಕೇಳಿದಳು. ನಿಮ್ಮ ಆಶ್ರಯದಲ್ಲಿ ಹುಡುಗಿ ಲಕ್ಷಣವಾಗಿ ಬೆಳೆದಿದ್ದಾಳೆ ಎಂದು ಬಾಯಿ ಮುಚ್ಚದೆ ನನ್ನನ್ನು ಹೊಗಳಿದಳು."

"ಶೇಷಗಿರಿಯಪ್ಪ ಸಿಕ್ಕಿದ್ದರೆ... ?"

"ಅವರನ್ನು ನೋಡುವುದಾಗಲಿಲ್ಲ. ನಾನು ಇದ್ದದ್ದೆ ಒಂದೆ ಗಂಟೆ ಕಾಲ...."

"ಗಿರಿಜಳಿಗೆ ಹೋಗುವುದಕ್ಕೆ ಒಂದಿಷ್ಟೂ ಮನಸ್ಸಿರಲಿಲ್ಲ"

"ನಿನಗೂ ಕಳುಹಿಸುವುದಕ್ಕೆ ಇಷ್ಟವಿರಲಿಲ್ಲ"

"ಬೇಸರಕ್ಕೆ ಅವಳಾದರೂ ಇರುತ್ತಿದ್ದಳು."

"ಗಾಡಿಯಲ್ಲಿ ನಿನ್ನನ್ನು ತುಂಬಾ ಹೊಗಳಿದಳು...ನಿನ್ನ ಋಣ ತೀರಿಸುವುದು ಯಾವಾಗ ಎಂದು ಕೇಳುತ್ತಾಳೆ"

"ಋಣ ತೀರಿಸುವುದಕ್ಕೆ ನಾನೇನು ಮಾಡಿದ್ದೆ ?"

"ನಿನ್ನ ಪ್ರೀತಿ ವಿಶ್ವಾಸವನ್ನು ಉರುಹಾಕುತ್ತಾ ಇರುತ್ತಾಳೆ"

"ಅವಳು ನನ್ನನ್ನು ಪ್ರೀತಿಸುತ್ತಾಳೆ. ನಾನೂ ಪ್ರೀತಿಸುತ್ತೇನೆ. ಒಳ್ಳೆಯ ಹುಡುಗಿ. ಮನೆ ಒಡೆಯುವ ಕೇಡುಬುದ್ಧಿಯಿಲ್ಲ. ಎಡಸಂಸಾರವಾದರೂ ನನ್ನ ಮನಸ್ಸನ್ನು ನೋಯಿಸಿದವಳಲ್ಲ. ಅಂತಹ ಹತ್ತು ಹುಡುಗಿಯರಿದ್ದರೂ ನಾನು ಹೊಂದಿಕೊಂಡು ಒಂದು ಮನೆಯಲ್ಲಿರುತ್ತೇನೆ" ಎಂದಳು ರುಕ್ಮಿಣಿ.

ಮಜ್ಜಿಗೆ ಸುರಿಯುತ್ತಾ ಸೋಮಯಾಜರು,

"ಮತ್ತೆ ಬರುತ್ತಾಳೆ ರುಕ್ಮಿಣಿ... ನಮ್ಮ ಗಿರಿಜ ಬಂದೇ ಬರುತ್ತಾಳೆ" ಎಂದರು ಮಿಡಿಮಾವಿನಕಾಯನ್ನು ದವಡೆಯಲ್ಲಿಟ್ಟು ಚಪ್ಪರಿಸುತ್ತಾ. ಊಟ ಮುಗಿಸಿ ಪಡಸಾಲೆಗೆ ಬಂದವರು ಚಾಪೆ ಬಿಡಿಸಿ ಮಲಗಿಕೊಂಡರು.

೦ ೦ ೦ ೦

ಗುಡಿಯ ಹೊರಭಾಗದಲ್ಲಿ ಏನೋ ಸದ್ದಾಯಿತು. ನೀಲಾಂಜನಕ್ಕೆ ಎಣ್ಣೆ ಸುರಿಯುತ್ತಿದ್ದ ಸೋಮಯಾಜರಿಗೆ ಮತ್ತಷ್ಟು ಕಳವಳವಾಯಿತು. ಹೆಗಡೆ ಬರುವ ನಿರೀಕ್ಷಣೆಯಿದ್ದರೂ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದರೂ ಭವಿಷ್ಯದ ಬಗ್ಗೆ ಯೋಚಿಸಿದಾಗ ಮಾತ್ರ ಹೆದರಿಕೆಯಾಯಿತು. ಹೆಗಡೆಯ ವ್ಯವಹಾರ ಹೇಗೆ ಕೊನೆಗೊಳ್ಳುತ್ತದೆ ಎಂಬುದನ್ನು ಮೊದಲೇ ಎಣಿಸುವಂತಿರಲಿಲ್ಲ. ಹೆಗಡೆ ಎಲ್ಲಿಯಾದರೂ ಕುಡಿದು ಬಂದಿದ್ದರೆ ಜೊತೆಯಲ್ಲಿ ಕೈನಾಶಿಗಳನ್ನು ಕರೆದುಕೊಂಡು ಬಂದಿದ್ದರೆ... ಸಿಟ್ಟು ಬಂದು ನನ್ನ ಕೈಕಾಲು

ಗಳನ್ನು ಮುರಿದು ಹಕ್ಕಲದ ಪೊದೆಯತ್ತ ಬಿಸಾಡಿದರೆ ? ಈ ಪಾಪಿಗಳಿಂದ ನನ್ನ ಮಾನವೇ ಹೋಗುವಂತಹ ಪ್ರಸಂಗ ಬಂದರೆ ! ಹೆಗಡೆ, ಪೂಜಾರಿ ಪುಕ್ಕಳಿಂದ ಮೈ ಮುಟ್ಟಿಸಿಕೊಂಡರೆ, ಅಪವಿತ್ರವಾಗುವಂತಹ ನನ್ನ ವೈದಿಕ ವೃತ್ತಿಯು ಗತಿಯೇನು ? ಎಂದು ಸೋಮಯಾಜರು ಬಹಳವಾಗಿ ಚಿಂತಿಸಿದರು. ಏನು ಕಂಡಿತೊ....ಗಟ್ಟಿಯಾಗಿ ಶಿವಲಿಂಗವನ್ನು ತಬ್ಬಿಕೊಂಡು "ನನ್ನ ವೈದಿಕ ವೃತ್ತಿಗೆ ಕಳಂಕ ತರಬೇಡ....ನನ್ನ ದೇಹ ಅಪವಿತ್ರವಾಗದಿರಲಿ....ನನ್ನ ಜೀವ ರಕ್ಷಣೆಗಿಂತ ನಾಳೆ ನಿನಗೆ ಆರತಿ ಎತ್ತುವ ಈ ನನ್ನ ಕೈ ಶುದ್ಧವಾಗಿರುವಂತೆ ಮಾಡು" ಎಂದು ಪ್ರಾರ್ಥಿಸಿಕೊಂಡರು. ತೂಗು ದೀಪದ ಬತ್ತಿಯನ್ನು ಮುಂದೆ ಮಾಡಿ .. ಲಿಂಗದ ಮೇಲಿದ್ದ ಗಂಧವನ್ನು ಹಣೆಗೆ ತೀಡಿ .. ಮಲ್ಲಿಗೆಯ ಹೂವನ್ನು ಜುಟ್ಟಿಗೆ ಸಿಕ್ಕಿಸಿ ...ತೀರ್ಥಪ್ರಸಾಧದ ಹರಿವಾಣವನ್ನು ಕೈಯಲ್ಲಿ ಹಿಡಿದು, ಗುಡಿಯ ಬಾಗಿಲನ್ನು ಮುಂದಕ್ಕೆಳೆದು ಹೊರಬಂದರು. ಯಾರೋ ಕೆಮ್ಮಿದ ಹಾಗಾಯ್ತು. ಹೆಗಡೆಯೇ ಬಂದಿರಬೇಕು ಎಂಬುದನ್ನು ಗಮನಿಸಿದ "ಸೋಮಯಾಜರು ಹೆಗಡೆಯವರೇನು....?" ಎಂದು ಕೇಳಿದರು.

"ಅರೆ....ಅಂತೂ ನಾನು ಬರುವುದನ್ನು ಮರೆತಿಲ್ಲ ಎಂದಹಾಗಾಯ್ತು" ಎಂದ ಹೆಗಡೆ ದೇವಾಲಯದ ಚಾವಡಿಯಲ್ಲಿ ಕುಳಿತಿದ್ದವನು.

"ಯಾವುದನ್ನು ಮರೆತರೂ ನಿಮ್ಮ ಕೆಲಸ ಮರೆಯುವುದಕ್ಕಾಗುತ್ತದೆಯೆ ?"

"ಅಷ್ಟೊಂದು ಅಭಿಮಾನವಿದ್ದರೆ....ಸಾಯುವವರೆ ನಿಮ್ಮ ತಂಟೆಗೆ ನಾನು ಬರುವುದಿಲ್ಲ"

"ಹಾಗಿದ್ದರೆ ನಾನು ನೆಮ್ಮದಿಯಾಗಿರುತ್ತೇನೆ"

"ಅಂತೂ ಏನೋ ಒಂದು ಆಸೆ ಕಾಣುತ್ತಿದೆ....ನಿಮ್ಮ ಮಾತಿನಲ್ಲಿ. ಗಿರಿಜಮ್ಮನ ವಿಚಾರ ಏನಾಯ್ತು ?"

"ಹೇಳುತ್ತೇನೆ....ಗುಡಿಯಲ್ಲಿ ಆ ವಿಚಾರ ಬೇಡ. ದಾರಿಯಲ್ಲಿ ಎಲ್ಲಾ ಹೇಳುತ್ತೇನೆ. ತಾವು ಬಂದು ಹೊತ್ತಾಯ್ತೆ ?"

"ಮನೆಯಿಂದ ಹೊರಟಾಗಲೇ ಕತ್ತಲಾಗಿತ್ತು ಅನ್ನಿ... ಬಂದಾಗ ತಾವು ಪೂಜೆಯ ಗಡಿಬಿಡಿಯಲ್ಲಿ ಇದ್ದಿರಿ. ನಾಲ್ಕಾರು ಜನ ಬೇರೆ ಇದ್ದರು. ಹೀಗೆ ಅಡ್ಡಾಡಿಕೊಂಡು ಸುತ್ತಿ ಬಂದೆ"

"ತಾವು ಒಬ್ಬರೇ ಬಂದಹಾಗಿದೆ ?"

"ಹೌದು...."

"ಸೀನ ಜೊತೆಯಲ್ಲಿ ಬರಲಿಲ್ಲವೆ ?"

"ಅವನಿದ್ದರೆ ತೊಂದರೆ....ಅವನ ಮುಂದೆ ಮಾತನಾಡುವಂತಹ ವಿಚಾರ ಇದಲ್ಲ ನೋಡಿ"

"ಒಳ್ಳೆಯ ಕೆಲಸ ಮಾಡಿದಿರಿ....ಬೇರೆಯವರಿದ್ದರೆ ನನಗೂ ಸಂಕೋಚ" ಎಂದರು ಸೋಮಯಾಜರು. ಅವರಿಗೂ ಸೀನ ಬಾರದಿರುವುದು ಹಲವು ದೃಷ್ಟಿಯಿಂದ ಒಳ್ಳೆಯದಾಗಿ ಕಂಡಿತು. ಹೆಚ್ಚು ಕಡಿಮೆಯಾದರೂ ಒಂದು ಕೈ ನೋಡುವ ಉತ್ಸಾಹ ಸೋಮಯಾಜರಿಗೆ.

"ಬನ್ನಿ ಹೆಗಡೆಯವರೆ...." ಎನ್ನುತ್ತಾ ಸೋಮಯಾಜರು ಹಕ್ಕಲದ ದಾರಿಯತ್ತ ಹೆಜ್ಜೆ ಹಾಕಿದರು. ಹೆಗಡೆ ಅವರ ಎಡದಲ್ಲೇ ನಡೆದುಬಂದ.

"ಗಿರಿಜಮ್ಮನನ್ನು ಯಾವಾಗ ಕಂಡದ್ದು ತಾವು ..."

"ನಿನ್ನೆ ರಾತ್ರಿಯೇ ಹೋಗಿದ್ದೆ ..."

"ವಿಚಾರ ತಿಳಿಸಿದಿರಾ ...?"

"ತಿಳಿಸದೆ ಇರುವುದಕ್ಕಾಗುತ್ತದೆಯೆ ?..."

"ಹೂಂ....ಅದು ಸರಿ ಅನ್ನಿ, ಏನು ಹೇಳಿದಳು ?"

"ಮೊದಲು ಮೊದಲು ಆಕೆ ನಂಬಲಿಲ್ಲ"

"ಯಾವುದನ್ನು ನಂಬಲಿಲ್ಲ ?"

"ನಾನು ತಿಳಿಸಿದ ವಿಚಾರವನ್ನು....ಹಾಸ್ಯಕ್ಕಾಗಿ ಹೇಳುತ್ತಿದ್ದೇನೆಂದು ಭಾವಿಸಿದ್ದಳು"

"ಆ ಮೇಲೆ...."

"ಹೆಗಡೆಯವರು ಹೀಗೆ ಹೇಳಿದ್ದಾರೆ ನಿನ್ನ ಅಭಿಪ್ರಾಯವೇನು ಎಂದು ಕೇಳಿದೆ."

"ಚಿಂತೆಯಿಲ್ಲ ನನ್ನ ಬಗ್ಗೆ ಅಷ್ಟು ಕೆಲಸ ಮಾಡಿದ್ದೀರಿ"

"ಹೌದು .. ಹೆಗಡೆಯವರಿಗೆ ನಿನ್ನ ಮೇಲೆ ಮನಸ್ಸಾಗಿದೆ ಗಿರಿಜಾ ಎಂದೆ"

"ಹೌದಾ....ಮನಸ್ಸಾಗಿದೆ ಎಂದೇ ಹೇಳಿದಿರಾ ?"

"ತಮ್ಮ ಅಭಿಪ್ರಾಯ ತಿಳಿಸಿದೆ ?"

"ಅದಕ್ಕೆ ಯಾವ ಉತ್ತರ ಕೊಟ್ಟಳು ?"

"ಸಿಕ್ಕಾಪಟ್ಟೆ ಅಳುವುದಕ್ಕೆ ತೊಡಗಿದಳು ನೋಡಿ."

"ಸಿಕ್ಕಾಪಟ್ಟೆ ಎಂದರೆ....?"

"ಅಷ್ಟು ಹೇಳಿದ್ದೇ ತಡ....ಇನ್ನು ನಾನು ಸಾಯುವುದು ಮೇಲು ಎಂದು ನೆಲದ ಮೇಲೆ ಬಿದ್ದು ಹೊರಳಾಡುತ್ತಾ ಅತ್ತಳು"

"ನೆಲದ ಮೇಲೆ ಬಿದ್ದು ಹೊರಳಾಡುವುದಕ್ಕೆ ಯಾರಾದರೂ ಸತ್ತರೇನು? ಆ ರಂಡೆಗೆ ಅಳುವುದಕ್ಕೆ ಏನಾಗಿತ್ತು ?"

"ಹೆಗಡೆಗೆ ಮನಸ್ಸಾಗಿದೆ ಎಂದ ಮೇಲೆ ನನ್ನ ಪ್ರಾಣವನ್ನು ನಾನೇ ತೆಗೆದುಕೊಳ್ಳುತ್ತೇನೆ ಎಂದು ಬೊಬ್ಬೆ ಹಾಕಿದಳು."

"ಥೂ....ಚಿಕನಾಸಿಗೆ ಪ್ರಾಣ ಎಂದರೆ ಮೂರು ಕಾಸಾಗಿದೆಯೆ? ಅದೆಲ್ಲಾ ಮೂದೇವಿಯ ನಾಟಕ ಸೋಮಯಾಜರೆ ?"

"ನಡೆದ ವಿಚಾರ ತಿಳಿಸುತ್ತೇನೆ ಸ್ವಾಮಿ... ಹೆಗಡೆಯ ಜೊತೆ ಹೋಗುವುದಕ್ಕೆ ದೇವರು ನನಗೆ ಹೆಣ್ಣು ಜನ್ಮ ಕೊಡಬೇಕಿತ್ತೆ ? ಎಂದು ಮತ್ತೆ ರಂಪಾಟ ಮಾಡಿದಳು" ಎಂದು ಸೋಮಯಾಜರು ಮತ್ತಷ್ಟು ರೇಗಿಸಿದರು ಹೆಗಡೆಯನ್ನು. ರುದ್ರನಿಗೆ ಸಿಟ್ಟು ನೆತ್ತಿ ಹತ್ತಿತ್ತು. ಹಲ್ಲು ಮೊಟ್ಟೆಗಿರಿಯುತ್ತಾ,

"ಅವಳ ನಾಲಿಗೆ ಸೀಳುತ್ತೇನೆ ನೋಡಿ....ನನ್ನ ಜೊತೆ ಬರುವುದಕ್ಕೆ ಮುಂದೆಗೆ ಏನಾಗುತ್ತದೆ ಎಂದಳು....ಅಬ್ಬಾ ! ಅವಳ ಸೊಕ್ಕೆ ? ಬ್ರಾಹ್ಮಣರ ಮನೆಯಲ್ಲಿ ಎಂಜಲು ತಿಂದುಕೊಂಡು ಬಿದ್ದವಳು ಇಷ್ಟು ದೊಡ್ಡ ಮಾತು ಹೇಳಿದಳೆ ? ಅವಳ ಅಮ್ಮನ ಹೊಟ್ಟೆಯಲ್ಲಿ ಹೋಗಿ ಕುಳಿತರೂ ನಾನು ಬಿಡುದಿಲ್ಲ" ಎಂದು ಹೆಗಡೆ ಆರ್ಭಟಿಸಿದ.

"ಹೀಗಿದೆ ಪರಿಸ್ಥಿತಿ ಸ್ವಾಮಿ...."

"ನೀವು ಒಂದು ಮಾತೂ ಹೇಳಿಲ್ಲವೆ ?"

"ಒಂದಲ್ಲ ಹೆಗಡೆಯವರೆ ...ಗಂಟೆಕಾಲ ಉಪದೇಶ ಮಾಡಿದೆ"

"ಅದೇನು ನಿಮ್ಮ ಉಪದೇಶ....?",

"ಹೋಗಿ ಹೆಗಡೆಯ ಮನಸ್ಸನ್ನು ಸಂತೋಷಪಡಿಸಿ ಬಾ ಎಂದು"

"ಸತ್ಯವಾಗಿಯೂ ನೀವು ಹಾಗೆ ಹೇಳಿದಿರಾ ?"

"ಸುಳ್ಳು ಎನ್ನುವುದು ನನ್ನ ಪರಮ ಶತ್ರು...."

"ಜನಿವಾರ ಮುಟ್ಟಿಕೊಂಡು ಆ ಮಾತು ಹೇಳಿ ..."

"ಸರಿ.... ಜನಿವಾರದ ಮೇಲೆ ಕೈಯಿಟ್ಟು ಹೇಳುತ್ತೇನೆ" ಎಂದರು ಸೋಮಪೂಜರು. ನಿಜವಾಗಿಯೂ ಅವರು ಸುಳ್ಳು ಹೇಳಿದ್ದರು. ಜನಿವಾರದ ಮೇಲೆ ಕೈಯಿಟ್ಟಿದ್ದೇನೆ ಎಂದಿದ್ದರು ಮಾತ್ರ. ಆದರೆ ಜನಿವಾರ ಮುಟ್ಟಿ ಸುಳ್ಳು ಹೇಳುವ ಸ್ವಭಾವ ಅವರದಲ್ಲ. ಕತ್ತಲೆಯಲ್ಲಿ ಹೆಗಡೆಗೆ ಅದು ತಿಳಿಯಲೂ ಇಲ್ಲ.

"ನಿಮ್ಮ ಮಾತಿಗೂ ಬೆಲೆ ಕೊಡಲಿಲ್ಲವೆ ?"

"ನನ್ನ ಕಾಲು ಹಿಡಿದುಕೊಂಡು ಕುತ್ತಿಗೆ ಹಿಸಿದು ಕೊಂದು ಬಿಡಿ ಎಂದಳು ನೋಡಿ."

"ಒಟ್ಟಾರೆ ಕೊನೆಗೆ ಅವಳ ಅಭಿಪ್ರಾಯವೇನು ?"

"ಅವಳಿಗೆ ಮನಸ್ಸಿಲ್ಲ ಹೆಗಡೆಯವರೆ...."

"ಏನು....ಮನಸ್ಸಿಲ್ಲವೆಂದಳೆ ?"

"ಹೌದು...."

"ನೀವು ಒಪ್ಪಿಸಬಾರದಿತ್ತೆ ?"

"ಬಲಾತ್ಕಾರದ ಒಪ್ಪಿಗೆ ಏನು ಪ್ರಯೋಜನ ? ಅದು ಅವಳಿಗೆ ಸಂಬಂಧಿಸಿದ ವಿಚಾರ"

"ಸ್ವಾಮಿ ... ನನ್ನ ಮುಂದೆ ನಾಟಕ ಆಡುತ್ತೀರಾ ? ನೀವು ಕರೆದುಕೊಂಡು ಬಂದ ಹುಡುಗಿ. ನಿಮ್ಮ ಮಾತಿಗೆ ಬೆಲೆ ಕೊಡುವುದಿಲ್ಲ ಎಂದರೆ...."

"ಅಲ್ಲ ಹೆಗಡೆಯವರೆ... ಅವಳನ್ನು ನಾನು ಹೊತ್ತು ತಂದು ನಿಮ್ಮ ಮಂಚದ ಮೇಲೆ ಕೆಡವುವುದಕ್ಕಾಗುತ್ತದೆಯೆ ? ನಿಮ್ಮ ಬಗ್ಗೆ ಹೇಳುವಷ್ಟು ಹೇಳಿದೆ. ಸಾಯುವುದಕ್ಕೆ ತಯಾರಿದ್ದಾಳೆ ಅವಳು. ಕೊನೆಗೆ ಏನು ಕಂಡಿತೋ .. ರಾತ್ರಿಯೇ ತುಂಗಿಕೊಪ್ಪಕ್ಕೆ ಹೋದಳು ನೋಡಿ...."

"ಏನು .. ತುಂಗಿಕೊಪ್ಪಕ್ಕೆ ಹೋದಳೆ—?"

"ಹೌದು...."

"ಹೇಗೆ ರಾತ್ರಿ ಹೊತ್ತು ಹೋಗುತ್ತಾಳೆ ?"

"ಶಿವನ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಗಿರಿಜ ನಿನ್ನೆ ರಾತ್ರಿಯೇ ಶುಂಠಿಕೊಪ್ಪಕ್ಕೆ ಹೋದಳು."

"ಹಾಳಾಗಿ ಹೋಗಲಿ... ಆದರೆ ಹೇಗೆ ರಾತ್ರಿ ಹೊತ್ತು ಹೋದಳು ಅಂತ....?" ಹೆಗಡೆಯು ಕೋಪದ ಕಾವು ಮಾತಿನ ದಾಟಿಯನ್ನೆ ಬದಲಾಯಿಸಿತ್ತು.

"ಹೊರಟೇ ಹೋದಳು ಹೆಗಡೆಯವರೆ... ನನ್ನ ಒತ್ತಾಯ ಯಾವುದು ಪ್ರಯೋಜನ ವಾಗಲಿಲ್ಲ. ಹೆಗಡೆಯ ಜೀವಕ್ಕೆ ಬೆಂಕಿ ಹಾಕ....ಅವನಿರುವ ಊರೇ ನನಗೆ ಸುಡುಗಾಡು....ಈ ಊರಲ್ಲಿ ಅರ್ಥಗಳಿಗೆ ಇರುವುದು ನನಗೆ ಬೇಡವಾಗಿದೆ ಎಂದು ರಾತ್ರಿಯೇ ಒಂದಕ್ಕೆರಡು ಬಾಡಿಗೆ ಮಾತನಾಡಿ ಕೆಳಹಿತ್ತಲಿನಿಂದ ಗಾಡಿ ತರಸಿದಳು. ರಾತ್ರಿ ಹೊತ್ತು ಬೇಡ – ಬೆಳಿಗ್ಗೆ ಹೋಗು ಎಂದೆ. ಶುಂಠಿಕೊಪ್ಪದ ಮಾರ್ಗ ಎಂದರೆ ಕೆಟ್ಟಪ್ರಾಣಿಗಳು ಇರುವುದುಂಟು ಎಂದೆ. ಹೆಗಡೆಗಿಂತ ಕೆಟ್ಟಪ್ರಾಣಿ ಈ ಜಗತ್ತಿನಲ್ಲಿದೆಯೇ ? ನನಗೇನೂ ಭಯವಿಲ್ಲ ಎಂದು ಗಾಡಿ ಹತ್ತಿದಳು."

"ಅಬ್ಬಾ ! .. ಈ ಪ್ರಪಂಚದಲ್ಲೇ ನನ್ನಷ್ಟು ಕೆಟ್ಟಪ್ರಾಣಿ ಇಲ್ಲವೆಂದಳೇನು? ಎದೆ ಬಗೆದು ರಕ್ತ ಕುಡಿಯುತ್ತೇನೆ ...ಹೂಂ... ಏನೋ ಅಂದುಕೊಂಡಿರಬೇಕು. ಶುಂಠಿಕೊಪ್ಪವೇನು ಮಹಾದೂರವೆ ? ನನ್ನ ಕಾಲಡಿ ಹಾಕಿ ಆಕೆಯ ಎದೆಯನ್ನು ಮೆಟ್ಟದಿದ್ದರೆ ಮತ್ತೆ ನೋಡಿ...."

"ಅದಕ್ಕೆ ಹೆದರುವ ಹೆಂಗಸು ಅವಳಲ್ಲ ಸ್ವಾಮಿ.. "

"ಯಾವ ಭರವಸೆಯಿಂದ ನೀವು ಹೇಳುವುದು ?"

"ಅವಳ ಜೊತೆಯಲ್ಲಿ ಇದ್ದವನು ನಾನು....ಆಕೆಯ ಸ್ವಭಾವ ನನಗೆ ತಿಳಿಯದೆ ? ಯಾರಿಗೂ ಬಗ್ಗುವ ಹುಡುಗಿ ಅದಲ್ಲ."

"ಬಿಡಿ....ಆಮೇಲೆ ಗೊತ್ತಾಗುತ್ತದೆ ನನ್ನ ರಾಪು ...ಅಂತೂ ಮುಂಡೆ ರಾತ್ರಿಯೇ ಹೋದಳೆ....ಅಲ್ಲ .ಸೋಮಯಾಜರೆ....ಆಗ ನೀವೇನು ಸತ್ತು ಬಿದ್ದಿದ್ದಿರಾ... ಒಂದು ಹೆಂಗಸನ್ನು ಗಾಡಿಯಿಂದ ಇಳಿಸುವುದಕ್ಕೆ ನಿಮಗಾಗಲಿಲ್ಲವೆ ?"

"ಅಲ್ಲ ಸ್ವಾಮಿ....ಹೋಗತ್ತೇನೆ ಎನ್ನುವಾಗ ನಾನು ಹೇಗೆ ಬೇಡ ಅನ್ನಲಿ. ಈ ಊರಲ್ಲಿ ನ್ಯಾಯ ಸತ್ತುಹೋಗಿದೆ ಎನ್ನುತ್ತಾಳೆ. ಯಾವಾಗ

ಸತ್ಯ ಧರ್ಮ ಮೊಗೆಬೆಟ್ಟಿಗೆ ತಲೆಹಾಕುತ್ತದೋ ...ಆ ದಿನ ಖಂಡಿತಾ ನನ್ನ ಮನೆಗೆ ಬರುವುದಾಗಿ ಹೇಳಿದ್ದಾಳೆ .."

"ಸೋಮಯಾಜರೆ .. ಸುಮ್ಮನೆ ನನ್ನ ಸಿಟ್ಟನ್ನು ಕೆರಳಿಸಬೇಡಿ. ನನ್ನ ಮುಂದೆ ಕಪಟದ ಮಾತು ಹೇಳುತ್ತೀರಾ ? ತಮ್ಮ ಕೈವಾಡವಿಲ್ಲದೆ ಅವಳು ಹೇಗೆ ಹೋಗುತ್ತಾಳೆ ? ರಾತ್ರಿ ಹೊತ್ತು ಅವಳು ಒಂಟಿಯಾಗಿ ಹೋಗುವು ದೆಂದರೆ ...ಸತ್ಯ ಹೇಳಿ – ಇದಕ್ಕೆಲ್ಲಾ ನಿಮ್ಮ ಬೆಂಬವಿಲ್ಲವೆ ?"

"ನನ್ನ ಮೇಲೆ ಸುಮ್ಮನೆ ಸಿಟ್ಟಾಗಬೇಡಿ ಹೆಗಡೆಯವರೆ .. ನಾನು ಮಾಡು ವಷ್ಟು ಕೆಲಸ ಮಾಡಿದ್ದೇನೆ .. "

"ಕಳ್ಳರನ್ನಾದರೂ ನಂಬುತ್ತೇನೆ .. ಈ ಕುಳ್ಳ ಬ್ರಾಹ್ಮಣರನ್ನು ನಂಬುವು ದಿಲ್ಲ ನಾನು ...ಬನ್ನಿ... ಶಿವದೇವರ ತಲೆಯಮೇಲೆ ಕೈಯಿಟ್ಟು ಇದರಲ್ಲಿ ನನ್ನ ಕೈವಾಡವಿಲ್ಲವೆಂದು ಹೇಳಿ. ನನ್ನನ್ನು ವಂಚಿಸಿದ ಹಾಗಲ್ಲ. ದೇವರನ್ನು ವಂಚಿಸುವ ಎದೆಗಟ್ಟಿ ನಿಮಗಿದೆಯೆ ?"

"ದೇವರ ತಲೆಯಮೇಲೆ ಕೈಯಿಟ್ಟು ಹೇಳುವಂತಹ ಅಪರಾಧ ನಾನು ಮಾಡಿಲ್ಲ. ನೀವು ನಂಬಿದರೆ ನಂಬಿ. ಇಲ್ಲವಾದರೆ ಬಿಟ್ಟುಬಿಡಿ"

"ಬಿಡುತ್ತೇನೆಯೇ ? ಜೆಣ್ಣೆಯ ಹಾಗೆ ಮಾತನಾಡಿ ನನ್ನ ಕಣ್ಣಿಗೆ ಮಣ್ಣು ಹಾಕುತ್ತೀರಾ ? ನಿಮ್ಮ ಠಕ್ಕು ಬುದ್ಧಿ ನನಗೆ ತಿಳಿಯದೆ ? ಅವಳನ್ನು ಊರಿಗೆ ಕಳುಹಿಸಿ ಈಗ ನನ್ನ ಮುಂದೆ ಗಪ್ಪಳಾಸು ಬಿಡುತ್ತೀರಾ... ನಿಮ್ಮ ಜುಟ್ಟು ಹಿಡಿದು ಮುಖದಮೇಲೆ ಗುದ್ದುತ್ತೇನೆ ...ನಿಜ ವಿಚಾರ ತಿಳಿಸಿ. ನೀನೇ ತಾನೆ ಅವಳನ್ನು ಶುಂಠಿಕೊಪ್ಪಕ್ಕೆ ಕಳುಹಿಸಿದ್ದು ...?" ಎಂದು ಹೆಗಡೆ ಸೋಮಯಾಜರ ಮೇಲೆ ಕೋಪಿಸಿಕೊಂಡ. ಸೋಮಯಾಜರು ಆಗ ಮಾತ್ರ ಹೆದರಿದರು. ಹೆಗಡೆ ಎಲ್ಲವನ್ನು ಅರ್ಥಮಾಡಿಕೊಂಡಿದ್ದ.

"ಹೇಳಿ ಸ್ವಾಮಿ .. ಎದೆಯಮೇಲೆ ಕೈಯಿಟ್ಟು ಹೇಳಿ. ನನ್ನ ಪರವಾಗಿ ನೀವು ಅವಳಲ್ಲಿ ಏನಾದರೂ ಹೇಳಿದ್ದುಂಟೆ ?"

"ನಾನು ಏನೂ ಹೇಳಿಲ್ಲ...."

"ಮತ್ತೆ ಬ್ರಾಹ್ಮಣರಾಗಿ ಹಾಗೇಕೆ ಹೇಳಿದಿರಿ....?"

"ಪ್ರಿಯವಾದ ಸುಳ್ಳು ಅಪರಾಧವಲ್ಲ...."

"ಮುಸುಡಿಗೆ ಗುದ್ದುತ್ತೇನೆ ನೋಡಿ   ಅಷ್ಟು ಜೋಗಳೆಬರುವುದೇ

ನನ್ನಲ್ಲಿ. ಅದೂ ಒಂದೆರಡು ಸುಳ್ಳೆ ? ಅಷ್ಟು ಸುಳ್ಳು ಹೇಳಿ ನನ್ನನ್ನು ನಂಬಿಸುವುದಕ್ಕೆ ನಿಮ್ಮಿಂದ ಸಾಧ್ಯವೆ ? ನಿಮ್ಮ ಮಾತಿಗೆ ಬೆಲೆ ಕೊಡದೆ ಕೆಳಹಿತ್ತಲಿನಿಂದ ಗಾಡಿ ತರಿಸಿ ಹೊರಟುಹೋದಳೆ ? ಸ್ವಾಮಿ – ಈ ಬುರುಡೆಯನ್ನು ಯಾರಲ್ಲಿ ಬಿಚ್ಚುತ್ತೀರಿ ? ನೀವೇ ತಾನೆ ಶುಂಠಿಕೊಪ್ಪಕ್ಕೆ ಕಳುಹಿಸಿದ್ದು...."

"ಹೌದು.... ನಾನೇ ಕಳುಹಿಸಿದೆ"

"ಮತ್ತೆ....ಈ ನಾಟಕ ಏಕೆ ಆಡಿದ್ದು ...?"

"............ ..."

"ಹೇಳಿ ಸ್ವಾಮಿ....?"

"ಏನು ಹೇಳುವುದು....?

"ನನ್ನನ್ನು ಹೀಗೆ ವಂಚಿಸುವುದೆ ?"

"ನಾನೇನೂ ವಂಚಿಸಿಲ್ಲ ..."

"ಅವಳ ಮೇಲೆ ತಪ್ಪುಹೊರಿಸಿ ನೀವು ತಪ್ಪಿಸಿಕೊಳ್ಳುವುದು ಎಂದು ನಿಮ್ಮ ಅಭಿಪ್ರಾಯವೆ ?"

"ಅವಳ ಮೇಲೆ ನಾನೇಕೆ ತಪ್ಪುಹೊರಿಸುತ್ತೇನೆ"

"ಮತ್ತೆ .. ಹೆಗಡೆಗಿಂತ ಕೆಟ್ಟಪ್ರಾಣಿ ಜಗತ್ತಿನಲ್ಲಿ ಇಲ್ಲ ಎಂದಳೇನು ? ನಾನಿರುವ ಊರು ಅವಳಿಗೆ ಸುಡುಗಾಡು ಎಂಬ ಮಾತು ಅವಳ ಬಾಯಿಂದ ಬಂತೆ ? ಇದೆಲ್ಲಾ ನೀವು ನನ್ನನ್ನು ಅವಮಾನಿಸುವುದಕ್ಕೆ ಹೇಳಿದ ಮಾತುಗಳಲ್ಲವೆ ? ಹೇಳಿ....ಈಗ ನಿಮ್ಮನ್ನೇನು ಮಾಡಲಿ ?"

"ತಮಗೆ ಹೇಗೆ ಕಾಣುತ್ತದೆ ?"

"ನೀವೇ ಹೇಳಿ . ಏನು ಮಾಡುವುದು ?"

"ಏನು ಮಾಡಬೇಕೆಂದು ನಿಮ್ಮ ಮನಸ್ಸಿಗೆ ತೋಚಿದೆ ?"

"ಮೊದಲು ಗಿರಿಜಳನ್ನು ಶುಂಠಿಕೊಪ್ಪದಿಂದ ಕರೆಯಿಸಿ ...ಆಮೇಲೆ ಒಂದು ಕೈ ನೋಡಿಕೊಳ್ಳುತ್ತೇನೆ"

"ಅದನ್ನು ಮಾತ್ರ ಕನಸಿನಲ್ಲಿಯೂ ಎಣಿಸಬೇಡಿ"

"ಯಾವುದನ್ನು....?"

"ಗಿರಿಜಳನ್ನು ಕರೆಯಿಸುವ ವಿಚಾರ...."

"ಖಂಡಿತಾ ನಿಮ್ಮಿಂದ ಸಾಧ್ಯವಿಲ್ಲವೆ ?"

"ಒಮ್ಮೆ ಮಾತು ಹೇಳಿದೆ ಎಂದರೆ ಮುಗಿಯಿತು. ಬದಲಾಯಿಸುವ ಮನೋಭಾವ ನನಗಿಲ್ಲ...."

"ನಿಶ್ಚಯವಾಗಿಯೂ ಇದು ನಿಮ್ಮ ಕೊನೆಯ ನಿರ್ಧಾರವೆ ?"

"ಹೌದು...."

"ನೋಡಿ....ನನಗೆ ಸಿಟ್ಟುಬರುತ್ತದೆ"

"ಬರಲಿ... ಅದಕ್ಕೆ ನಾನೇನು ಮಾಡುವುದು ?"

"ಸುಮ್ಮನೆ ಮುಂದೆ ಅನರ್ಥಕ್ಕೆ ದಾರಿ ಮಾಡಬೇಡಿ"

"ಯಾವ ಅನರ್ಥವೂ ಆಗುವುದಿಲ್ಲ...."

"ಅರೆ....ಅದನ್ನು ಹೇಗೆ ಹೇಳುತ್ತೀರಿ ?"

"ಅನರ್ಥವಾಗುವುದು ಯಾರಿಗೆ ?"

"ನಿಮಗೆ ...ಮುಂದೆ ತೊಂದರೆ ಎಂದು ಹೇಳಿದೆ"

"ಏನೂ ಆಗುವುದಿಲ್ಲ. ಅಂತಹ ಸಂದರ್ಭ ಬಂದರೆ ನಾನು ನೋಡಿಕೊಳ್ಳುತ್ತೇನೆ"

"ಅಷ್ಟು ಧೈರ್ಯ ನಿಮಗಿದೆಯೆ ?"

"ಮತ್ತೆ ಹೆದರಿಕೊಂಡರೆ ಬದುಕುವುದು ಹೇಗೆ ?"

"ನನ್ನ ಮುಂದೆ ಆ ಮಾತು ಹೇಳುತ್ತೀರಾ ?"

"ಯಾರೇ ಇರಲಿ... ನ್ಯಾಯಕ್ಕೆ ಶರಣು ಬರುತ್ತೇನೆ. ಅನ್ಯಾಯಕ್ಕೆ ತಲೆ ತಗ್ಗಿಸುವ ಹೇಡಿ ನಾನಲ್ಲ ಹೆಗಡೆಯವರೆ ? ನಿಮ್ಮ ದರ್ಪಕ್ಕೆ ನಾನು ಬಗ್ಗುವುದಿಲ್ಲ. ಗಿರಿಜ ನನ್ನನ್ನು ನಂಬಿ ಬಂದವಳು. ಅವಳಿಗೆ ಮನಸ್ಸಿಲ್ಲದ ಮೇಲೆ ನೀವು ಬಲಾತ್ಕಾರದ ಬೆದರಿಕೆ ಹಾಕುವುದು ಯಾವ ನ್ಯಾಯ ? ಅದೂ ನನ್ನ ಹತ್ತಿರ ಆಕೆಯ ಮೇಲೆ ಮನಸ್ಸಿದೆ ಎಂದು ಹೇಳುವುದೆ ? ನಾನೇ ಅವಳನ್ನು ಕುಂತಿಕೊಪ್ಪಕ್ಕೆ ಕರೆದುಕೊಂಡು ಹೋಗಿ ಬಿಟ್ಟು ಬಂದೆ. ಈಗಲಾದರೂ ನಂಬಿಕೆ ಬಂತೆ ? ಏಕೆ ಸುಮ್ಮನೆ ಮಾತು. ಬರುತ್ತೇನೆ" ಎಂದು ಸೋಮಯಾಜರು ಕಲ್ಲುಸಂಕದ ಎಡಕ್ಕೆ ತಿರುಗಿದರು.

"ನಿಲ್ಲಿ ..." ಎಂದು ಕೂಗಿದ ಹೆಗಡೆ.

"ಏಕೆ... ನಾನು ಮನೆಗೆ ಹೋಗಬೇಕು"

"ನಿಮ್ಮನ್ನು ಅಷ್ಟಕ್ಕೆ ಬಿಡುತ್ತೇನೆಯೆ ?"

"ಮತ್ತೇನು ಮಾಡುತ್ತೀರಿ...?"

"ಒದ್ದು ಹೊಳೆಗೆ ದಬ್ಬುತ್ತೇನೆ ಈಗ...."

"ಹೋ....ದೇವರು ನನಗೂ ಕಾಲು ಕೊಟ್ಟಿದ್ದಾನೆ. ನಿಮ್ಮನ್ನು ಒದ್ದು ಹೊಳೆಗೆ ನೂಕುವುದಕ್ಕೆ ನನ್ನ ಶಕ್ತಿ ಸಾಕು ..."

"ತಥ್....ನಿಮ್ಮ ಉಡಾಪಿಯೇ ? ಏನೋ ಬ್ರಾಹ್ಮಣನು ಎಂದು ಗೌರವಿಸಿದರೆ....ಛೆ....!... ನನ್ನ ಬಾಯನ್ನು ನಾನೇ ಹೊಲಸು ಮಾಡಿಕೊಂಡೆ. ಇವನನ್ನೇಕೆ ನೀವು ಎಂದು ಕರೆಯಬೇಕು. ಏ ಬ್ರಾಹ್ಮಣ....ಓಡಿದೆ ಎಂದಾವರೆ ನಾಳೆ ಮನೆಗೆ ಬೆಂಕಿ ಹಾಕುತ್ತೇನೆ"

"ನಾನೇಕೆ ಓಡುತ್ತೇನೆ....ಮನೆಗೆ ಬೆಂಕಿ ಹಾಕುವ ಮೊದಲು ನಿನ್ನ ಮನೆಗೆ ಹೆಂಚು ಹಾಕಿಸಿಕೊಳ್ಳು. ಹಿಂದೆ ನಿನ್ನ ಮನೆಗೆ ಬೆಂಕಿ ಬಿದ್ದದ್ದು ಮರೆತುಹೋಯ್ತೆ ? ಬೆಂಕಿ ಇರುವುದು ನಿನ್ನ ಕೈಯಲ್ಲಿ ಮಾತ್ರವಲ್ಲ. ನನ್ನ ಮನೆಯಲ್ಲೂ ಬೆಂಕಿಪೆಟ್ಟಿಗೆ ಇದೆ" ಎಂದು ಸೋಮಯಾಜರು ಅಷ್ಟೇ ಬಿರುಸಿನಿಂದ ಹೇಳಿದರು.

ಆಗ ನೋಡಬೇಕಿತ್ತು ಹೆಗಡೆಯ ಸಿಟ್ಟನ್ನು. ಕತ್ತಲೆಯಾದ್ದರಿಂದ ಸೋಮಯಾಜರಿಗೆ ಅವನ ಕೆಂಪಡರಿಂದ ಕಣ್ಣನ್ನು ನೋಡುವುದಾಗಲಿಲ್ಲ. ಇಲ್ಲವಾಗಿದ್ದರೆ ಸೋಮಯಾಜರು ಖಂಡಿತವಾಗಿಯೂ ಹೆದರಿಕೊಳ್ಳುತ್ತಿದ್ದರು. ಆದರೂ ಅವನ ಮಾತಿನ ಗತ್ತಿನಿಂದಲೇ ತಿಳಿದುಕೊಂಡರು .. ಏನೋ ಅನಾಹುತ ಕಾದಿದೆ ಎಂದು. ಸರಕ್ಕನೆ ಸರಿದು ಸೇತುವೆಯ ನಡುವಿಗೆ ಬಂದರು. ಸಂಕದ ಇಬ್ಬದಿಯಲ್ಲೂ ಬಿಗಿದಿದ್ದ ಸರಳು ಮುರಿದಿದ್ದರಿಂದ ಎಲ್ಲಿಯಾದರೂ ಹೆಗಡೆ ತಳ್ಳಿದರೆ ಸುಲಭವಾಗಿ ಹೊಳೆಯ ನೀರಲ್ಲಿ ಕಂತಬೇಕಾಗಿತ್ತು. ಅದನ್ನು ಯೋಚಿಸಿಯೇ ಸೋಮಯಾಜರು ಸಂಕದ ಮೇಲೆ ಬಂದಾಗ ತುಂಬಾ ಗಮನವಿಟ್ಟಿದ್ದರು. ಹೊಳೆಗೆ ಬಿದ್ದರೂ ಮುಳುಗುವಷ್ಟು ನೀರಿಲ್ಲದಿದ್ದರೂ ತಲೆ ಎತ್ತಿ ನಿಂತಿದ್ದ. ಬಂಡೆಯ ಮೇಲೆ ಬಿದ್ದರೆ ಮಾತ್ರ ಪ್ರಾಣಕ್ಕೆ ಅಪಾಯ. ಅದು ಇಬ್ಬರಿಗೂ ತಿಳಿದಿರುವ ವಿಚಾರ. ಹೆಗಡೆಯೂ ಹೊಳೆಯ ಕರಿಕಲ್ಲಿನ ಬಂಡೆಯನ್ನು ನೆನಸಿಕೊಂಡು ಆದಷ್ಟು ಮುಂಜಾಗ್ರತೆಯಿಂದಲೇ ವರ್ತಿಸಿದ್ದ. ಸೋಮಯಾಜರ ಜುಟ್ಟನ್ನು ಹಿಡಿದು ಹೊಟ್ಟೆಯಮೇಲೆ ತನ್ನ ಕಾಲಿನಿಂದ ಒದ್ದು ಸಂಕದಿಂದೆ ಕೆಳ ಉರುಳಿಸುವ ಯೋಚನೆ ಹೆಗಡೆಯದು. ಗಟ್ಟಿಯಾಗಿ

ಕೂಗಿದ "ನಿಲ್ಲೋ ಮಗನೆ" ಎಂದದು. ಅಷ್ಟರತನಕ ಸೋಮಯಾಜರಿಗೆ ಒಂದು ರೀತಿಯ ತಾಳ್ಮೆ ಇತ್ತು. ಯಾವಾಗ ಹೆಗಡೆ ಮಗನೆ ಎಂದು ಅವಮಾನಿಸಿದನೋ....ಅವರಿಗೂ ಸಿಟ್ಟು ಬಂತು. "ನೋಡು... ಮಗನೇ ಎಂದು ಹೀಯಾಳಿಸಿ ಕರೆದರೆ ನಾನು ಸುಮ್ಮನಿರುವುದಿಲ್ಲ....ಬಾಯಿ ಇರುವುದು ನಿನಗೆ ಮಾತ್ರವಲ್ಲ....ನನಗೂ ಇದೆ. ನೀನು ಗೌರವಿಸಿದರೆ ನಾನೂ ಗೌರವಿಸುತ್ತೇನೆ. ಆ ಯೋಗ್ಯತೆ ಬೇಡ ಅನ್ನು... ನಿನಗಿಂತ ಚೆನ್ನಾಗಿ ಕೆಟ್ಟಮಾತಿನಿಂದ ಅವಮಾನಿಸುವ ರೀತಿ ನನಗೆ ಗೊತ್ತು...." ಎಂದು ಸೋಮಯಾಜರು ಆರ್ಭಟಿಸಿದರು. "ಹೋ....ಕಬ್ಬಕ್ಕಿ ಹುಳಿ ತಿನ್ನುವ ಬ್ರಾಹ್ಮಣಾ....ತೋರಿಸುತ್ತೇನೆ ನನ್ನ ಕೋಳಿಪಲ್ಯ ತಿಂದು ಬೆಳೆದ ಕಾಲಿನ ಒದೆತವನ್ನು .. ಮಗನೆ ಇಂದು ನೀನು ಮನೆಗೆ ಹೋಗುವುದು ಅಷ್ಟರಲ್ಲೇ ಇದೆ" ಎನ್ನುತ್ತಾ ಹೆಗಡೆ ಬಲಗಾಲನ್ನೆತ್ತಿದ್ದ. ಕಾದಿದ್ದರು ಸೋಮಯಾಜರು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಎರಡೂ ಕೈಯಿಂದ ಹೆಗಡೆಯ ಕಾಲನ್ನು ಗಟ್ಟಿಯಾಗಿ ಹಿಡಿದು ಹಿಂದಕ್ಕೆ ತಳ್ಳಿ....ಸಂಕದಿಂದ ಬಯಲುದಾರಿಗೆ ಕುಪ್ಪಳಿಸಿ....ಏನಾಗಿದೆ ಎಂದು ಹಿಂತಿರುಗಿ ಕೂಡಾ ನೋಡದೆ....ತೋಟ ಬರುವ ತನಕ ಓಡತೊಡಗಿದರು. ಹೆಗಡೆಗೆ ಅಷ್ಟೇ ಸಾಕಾಗಿತ್ತು - ಹೊಳೆಯ ಬಂಡೆಯಮೇಲೆ ಉರುಳದಿದ್ದರೂ....ಸೇತುವೆಯ ಕಂಬಕ್ಕೆ ಅರಚಿಕೊಂಡೇ ಹೆಗಡೆ ಹೊಳೆಗೆ ಬಿದ್ದಿದ್ದ... ನಾಲ್ಕು ಗುಟುಕು ನೀರು ಕುಡಿದಿದ್ದ.

೨೦

ಹೊಳೆಯಲ್ಲಿ ತಲೆ ಎತ್ತಿ ನಿಂತಿದ್ದ ಬಂಡೆಯ ಪಕ್ಕದ ಹೊಂಡಕ್ಕೆ ದೊಪ್ಪನೆ ಬಿದ್ದ ಹೆಗಡೆಯ ಎಡಗಾಲೇ ಉಳುಕಿಹೋಗಿತ್ತು. ಮುರಿದ ಪಾದವನ್ನು ಎತ್ತಿ ಹೆಜ್ಜೆ ಇಡುವುದೇ ಕಷ್ಟವಾಗಿತ್ತು. ಹೆಗಡೆ ಮೈ ಕೈ ತುಂಬಿಕೊಂಡು ಬೆಳೆದಿದ್ದರೂ ಆ ನೋವನ್ನು ತಡೆಯುವುದಕ್ಕೆ ತೀರಾ ಅಸಮರ್ಥನಾದ. ಒಂದು ಹೆಜ್ಜೆ ನಡೆಯುವುದಕ್ಕೆ ಪಟ್ಟ ಪ್ರಯಾಸ... ಆಗುವ ವೇದನೆ ಅವನ ರೊಚ್ಚನ್ನು ಮತ್ತಷ್ಟು ಕೆರಳಿಸಿತು. ಆ ಸಮಯದಲ್ಲಿ ಸೋಮಯಾಜರು ಮುಂದಿದ್ದರೆ ಅವರ ಆಯುಷ್ಯವೇ ಮುಗಿಯುತ್ತಿತ್ತೊ ಏನೋ. ತಲೆ ಕಡಿದು ಹಳ್ಳಕ್ಕೆ ಎಸೆಯುವಷ್ಟು ಹೆಗಡೆಯ ಮನಸ್ಸು ಕಟುವಾಗಿತ್ತು. "ಬಿಡುತ್ತೇನೆಯೆ? ನನ್ನ ಎಡಗಾಲು ಮುರಿದುಹೋದರೂ ಚಿಂತೆಯಿಲ್ಲ. ಒಂದೇ ಕಾಲು ಶಕ್ತಿ ಉಳಿಸಿಕೊಂಡರೆ ಸಾಕು....ಆ ಬ್ರಾಹ್ಮಣನನ್ನು ಕೊಚ್ಚಿ ಕೊಚ್ಚಿ ಹದ್ದು ನಾಯಿಗಳಿಗೆ ಅವನ ದೇಹವನ್ನು ತಿನ್ನುವುದಕ್ಕೆ ಬಿಸಾಡುತ್ತೇನೆ" ಎಂದು ತನ್ನಲ್ಲೆ ಅಂದುಕೊಂಡ. ಏನಾದರೂ ಹೊಂಡದಿಂದ ಮೇಲೆ ಬರುವುದಕ್ಕೆ ಪಟ್ಟ ಶ್ರಮ ಅಷ್ಟಿಷ್ಟಲ್ಲ. ತೊಟ್ಟಿದ್ದ ಬಟ್ಟೆ ಎಲ್ಲಾ ಒದ್ದೆಯಾಗಿತ್ತು. ಎಡಗಾಲನ್ನು ನೆಲಕ್ಕೆ ಊರುವಂತಿಲ್ಲ. ಬಲಗಾಲು ಒಂದನ್ನೆ ಆಶ್ರಯಿಸಬೇಕಾಗಿತ್ತು ಹೆಗಡೆ. ಎಂತಹ ಅವಮಾನ? ಬ್ರಾಹ್ಮಣನ ಹೊಟ್ಟೆಯ ಮೇಲೆ ತುಳಿಯುವುದಕ್ಕೆ ತಾನು ಕಾಲು ಎತ್ತಿದ್ದೇ ಅಪರಾಧವಾಯ್ತು ಎಂದು ಹೆಗಡೆ ಮತ್ತೆ ಚಿಂತಿಸಿದ. ಜುಟ್ಟು ಹಿಡಿದು ಮುಸುಡಿನ ಮೇಲೆ ಗುದ್ದಿ ಬಂಡೆಯ ಮೇಲೆ ದೂಡಿದ್ದರೆ ...ಈ ಅನಾಹುತವೇ ಇರುತ್ತಿರಲಿಲ್ಲ ಎಂದು ಆಮೇಲೆ ದುಃಖಿಸಿದ.

ಅಂತೂ ಮೆಲ್ಲನೆ ಸಾವರಿಸಿಕೊಂಡು ಸೇತುವೆಯ ದಾರಿಗೆ ಬಂದ. ಮನೆ ಅಷ್ಟೇನೂ ದೂರವಿರಲಿಲ್ಲ. ಬಯಲು ದಾಟಿದರೆ ಸರ್ಪೆಯ ತೋಪು ಬರುತ್ತದೆ. ತೋಪಿನ ಪಕ್ಕದಲ್ಲೇ ತೆಂಗಿನ ತೋಟ. ಆ ತೋಟದ ಮೂಡಿಗೆ ಅವನ ಮನೆ. ಹೇಗೋ ಏನೋ .. ಮನೆಗೆ ಬರುವಷ್ಟರಲ್ಲಿ ಹನ್ನೊಂದು ಗಂಟೆಯಾಗಿತ್ತು. ಎರಡು ಗಂಟೆ ಕಾಲ ಬೇಕಾಯ್ತು, ಹೆಗಡೆಗೆ ಮನೆಯ ಹೆಬ್ಬಾಗಿಲ ಕಡೆಗೆ ಬರುವುದಕ್ಕೆ. ಗೋಡೆಯಲ್ಲಿ ಯಾವಾಗಲೂ ಉರಿಯುತ್ತಿದ್ದ ದೀಪ ಕೂಡಾ ಅಂದಿರಲಿಲ್ಲ. ಹೆಗ್ಗಡತಿ ಎಲ್ಲಿ ಮಲಗಿದ್ದಳೋ . ಕರೆಯುವುದಕ್ಕೂ ಹೆಗಡೆಗೆ ನಾಚಿಕೆ. ಅವಳಿಗೆ ಏನು ಹೇಳುವುದು ? ಕಾಲು ಮುರಿದುಕೊಂಡದ್ದೇಕೆ ಎಂದರೆ ಯಾವ ಉತ್ತರ ಹೇಳುವುದು ? ಅದೇ ಹೆಗಡೆಗೆ ತಲೆನೋವು.

ಅಷ್ಟೊಂದು ಅವಮಾನವನ್ನು ಎಂದೂ ಅನುಭವಿಸಿರಲಿಲ್ಲ. ಹತ್ತು ನಿಮಿಷ ಕಾಲ ಹೆಬ್ಬಾಗಿಲ ಅಂಕಣದಲ್ಲಿ ಸುಮ್ಮನೆ ಕುಳಿತ. ಅಷ್ಟು ದೂರ ನಡೆದು ಬಂದದ್ದರಿಂದ ಉಳುಕಿನ ನೋವು ಅಧಿಕವಾಗಿತ್ತು. ಎಲ್ಲಿ ಕಾಲಿನ ಗಂಟಿನ ಮೂಳೆಯೇ ಮುರಿದಿದೆಯೋ ಎಂಬ ಭಯ ಹೆಗಡೆಗೆ. ಬಹಳ ಹೊತ್ತಿನ ಅನಂತರ ಹೆಂಡತಿಯನ್ನು ಕರೆದ. ಕಾದು ಕಾದು ಮಲಗಿದ್ದಳು, ಹೆಗ್ಗಡತಿ. ಹೆಗಡೆ ಮನೆಗೆ ಬರುವುದಕ್ಕೆ ಸ್ವಲ್ಪ ಹೊತ್ತಿನ ಮುಂಚೆ ಅವಳು ಗೋಣು ಚಾಚಿದ್ದಳು. ದಿನವೂ ಗಂಡನಿಗಾಗಿ ಚಾವಡಿಯಲ್ಲಿ ಕುಳಿತಿರುತ್ತಾಳೆ. ಒಂದೊಂದು ದಿನ ಮಲಗುವ ಕ್ರಮವಿದೆ. ಅಂತೂ ಹೆಗಡೆ ಬಾರದೆ ಅವಳು ಊಟ ಮಾಡುವುದಿಲ್ಲ. ಅಷ್ಟೊಂದು ನೀತಿ ನಿಯತ್ತನ್ನು ಅವಳು ಕಾಪಾಡಿಕೊಂಡು ಬಂದಿದ್ದಳು. ನಾಲ್ಕನೆಯ ಕೂಗಿಗೆ ಹೆಗ್ಗಡತಿ "ಬಂದೆ" ಎಂದಳು ಪಡಸಾಲೆಯಿಂದ. "ಗೋಡೆಯ ದೀಪ ಆರಿದೆ.... ಚಿಮಣಿ ದೀಪ ತಾ" ಎಂದು ಹೆಗಡೆ ಮೊದಲೇ ಸೂಚನೆ ಕೊಟ್ಟ. ಎದ್ದು ಹೊರಬಂದಳು ಹೆಗ್ಗಡತಿ. ಹೊಗೆ ಕಾರುತ್ತಿದ್ದ ಚಿಮಣಿಯ ಬೆಳಕಿನಲ್ಲಿ ಗಂಡನ ಮುಖ ಕಾಣುತ್ತಾಳೆ... ಅರಚಿದ ಕಪಾಲದಲ್ಲಿ ಇನ್ನೂ ರಕ್ತದ ಹೆಪ್ಪಿತ್ತು. ಗಾಬರಿಯಿಂದ ಕೇಳಿದಳು, "ಅದೇನು ಮುಖದಲ್ಲಿ ರಕ್ತ...." ಎಂದು.

"ಸಂಕದ ಮೇಲೆ ಬರುತ್ತಿದ್ದಾಗ ಬಿದ್ದು ಬಿಟ್ಟೆ" ಎಂದ ಹೆಗಡೆ ತಗ್ಗಿದ ಧ್ವನಿಯಲ್ಲಿ.

"ಸಂಕದ ಮೇಲೆ ಬಿದ್ದರೆ ಇಷ್ಟೊಂದು ಗಾಯ ಹೇಗಾಗುತ್ತದೆ ?"

"ಗಾಯ ಮಾತ್ರವಲ್ಲ ರುಕ್ಕು... ...ಎಡಗಾಲೇ ಉಳುಕಿಹೋಗಿದೆ. ಬಿದ್ದದ್ದು ಹೊಳೆಗೆ; ಪುಣ್ಯಕ್ಕೆ ಬಂಡೆಯ ಮೇಲೆ ಬೀಳಲಿಲ್ಲ. ಹಾಗೇನಾದರೂ ಆಗಿದ್ದರೆ...."

"ಒಳಿತು ಅನ್ನಿ....ರಾತ್ರಿ ಹೊತ್ತು ಏಕೆ ಆ ಮಾತು. ದೇವರಿಗೆ ನನ್ನ ಮೇಲೇಕೆ ಬೇಸರ ? ಹೌದು .. ಹೇಗಪ್ಪ ನೀವು ಬಿದ್ದದ್ದು. ಸಂಕ ಅಷ್ಟು ಚೆನ್ನಾಗಿದೆ... ಬೀಳುವುದಕ್ಕೆ ನಿಮಗೇನಾಗಿದೆ ?"

"ಅದೃಷ್ಟ ನೆಟ್ಟಗಿರಲಿಲ್ಲ ..."

"ಅಲ್ಲ....ನೀವೇನು ಚಿಕ್ಕ ಮಗುವೆ ? ನಿತ್ಯ ನೂರು ಬಾರಿ ತಿರುಗುತ್ತೀರಿ ಆ ದಾರಿಯಲ್ಲಿ. ಹಾಗಿರುವಾಗ...."

"ಏಕೋ ನನಗೂ ಸಂದೇಹ. ಸೇತುವೆಯ ಮೇಲೆ ಬಂದಾಗ ತಲೆ ತಿರುಗಿದ ಹಾಗಾಯ್ತು."

"ಆಮೇಲೆ...."

"ಮೈ ವಾಲಿತು....ಹಿಡಿದುಕೊಳ್ಳುವ ಅಂದರೆ ಯಾವ ಆಧಾರವೂ ಇರಲಿಲ್ಲ...."

"ಅಷ್ಟು ಹೆಚ್ಚಾಗಿ ಕುಡಿಯುವುದೆ ?"

"ಯಾರು ಹೇಳಿದರು ನಾನು ಕುಡಿದೆ ಎಂದು"

"ಮತ್ತೆ ತಲೆ ತಿರುಗುವುದಕ್ಕೆ ನಿಮಗೇನಾಗಿದೆ ?"

"ಕುಡಿದರೆ ಮಾತ್ರ ತಲೆ ತಿರುಗುತ್ತದೆಯೆ ?"

"ಹೇಳಿ....ಬೇರೆ ಯಾವ ಕಾರಣದಿಂದ ತಲೆ ತಿರುಕು ಬಂತು."

"ಪಿತ್ತ ಕೆದರಿದರೆ ಹಾಗಾಗುತ್ತದೆ."

"ನಿಮಗೀಗ ಆದದ್ದೇನು....?"

"ಹೇಳಿದರೆ ನೀನು ನಂಬಬೇಕಲ್ಲ....ಮಾತಿಗೆ ಕುಡಿತ ಅನ್ನುತ್ತಿ"

"ಆ ಅಭ್ಯಾಸ ನಿಮಗಿದೆ... ಅದಕ್ಕೆ ಹೇಳಿದೆ."

"ದೇವರಾಣೆ ಇವತ್ತು ನಾನು ಹನಿ ಹೆಂಡ ಕುಡಿದಿಲ್ಲ."

"ಮತ್ತೇಕೆ ಹಾಗಾಯ್ತು....?"

"ಏಕೋ ತಲೆ ತಿರುಕು. ಸೇತುವೆಯ ಮೇಲೆ ಬಂದಾಗ ಒಂದೂ

ಗೊತ್ತಾಗಲಿಲ್ಲ. ಎಲ್ಲಿಯೋ ನೋಡುತ್ತಾ ಹೋಗುತ್ತಿದ್ದೆ. ಇದ್ದಕ್ಕಿದ್ದಂತೆ ತಲೆಸುತ್ತು ಬಂದು ಬಿದ್ದೆ ನೋಡು"

"ದೇವರೆ....ಎಂತಹ ಅನಾಹುತ ಆಗಿ ಹೋಗುತ್ತಿತ್ತು ..."

"ಈಗ ಅನಾಹುತ ಕಡಿಮೆ ಆದದ್ದೇನು...? ಎಡಗಾಲಿನ ಮೂಳೆಯೇ ಮುರಿದುಹೋಗಿದೆ ರುಕ್ಕು. ಹೆಜ್ಜೆ ಇಡುವುದಕ್ಕೂ ಆಗುವುದಿಲ್ಲ"

"ಪಂಜುರ್ಲಿಗೆ ಹರಕೆ ಒಪ್ಪಿಸುತ್ತೇನೆ .. ನಿಮ್ಮ ಕಾಲಿಗೆ ಏನೂ ಆಗದಿರಲೆಂದು. ಬೇಗ ಗುಣವಾದರೆ ದೆವ್ವದ ಮನೆಗೆ ಒಂದು ಬೆಳ್ಳಿಯ ಕಾಲು ಮಾಡಿಸಿ ಒಪ್ಪಿಸುತ್ತೇನೆ"

"ತುಂಬಾ ನೋವು... ಒದ್ದೆಬಟ್ಟೆ ತಂದು ಕಟ್ಟು...." ಎಂದ ಹೆಗಡೆ. ಉಪಚರಿಸಿದಳು ಹೆಗ್ಗಡತಿ. ಮೂಳೆ ಮುರಿದ ಭಾಗಕ್ಕೆ ಒದ್ದೆಬಟ್ಟೆಯನ್ನು ಸುತ್ತಿ ಹುಳಿ ಅನ್ನವನ್ನು ತಂದುಕೊಟ್ಟಳು.

"ಇನ್ನು ರಾತ್ರಿಯೆಲ್ಲಾ ನಿದ್ದೆ ಬರುವುದಿಲ್ಲ ನೋಡು....ಅಕ್ಕಿ ಕೋಣೆಯಲ್ಲಿ ಹೆಂಡದ ಮಡಿಕೆಯಿದೆ. ಅದನ್ನಾದರೂ ತಂದುಕೊಡು" ಎಂದ ಹೆಗಡೆ.

"ಸರಿಹೋಯ್ತು .. ಒಂದುದಿನ ಕುಡಿಯದೆ ಇರುವುದಕ್ಕಾಗುವುದಿಲ್ಲವೆ?"

"ಬೇಡ ರುಕ್ಕು....ಹಾಗೆ ಇರುವುದಕ್ಕೆ ಸಾಧ್ಯವಿಲ್ಲ ಎಂದಲ್ಲ. ನೋವ ಸಹಿಸುವುದಕ್ಕೆ ಸಾಧ್ಯವಿಲ್ಲ. ಕುಡಿದರೆ ಬೇಗ ನಿದ್ದೆ ಬರುವ ಆಸೆಯಾದರೂ ಇರುತ್ತದೆ ..."

"ಹೋಗಲಿ ಆಮೇಲೆ ತಂದುಕೊಡುತ್ತೇನೆ. ಹೌದು ಸಂಜೆ ಎಲ್ಲಿಗೆ ಹೋಗಿತ್ತು ನಿಮ್ಮ ಸವಾರಿ ?"

"ಏಕೆ...."

"ಕತ್ತಲಾದಮೇಲೆ ಮನೆಯಿಂದ ಹೊರಟದ್ದು....ಅದಕ್ಕೆ ಕೇಳಿದೆ"

"ಎಲ್ಲಿಗೂ ಹೋಗಿಲ್ಲ....ತೋಪಿನ ಹತ್ತಿರ ಸುತ್ತಾಡಿಕೊಂಡು ಬರುವುದಕ್ಕೆ ಹೊರಟೆ."

"ಕತ್ತಲಾದ ಮೇಲೆ ಏಕೆ ಮನೆಯಿಂದ ಹೊರಹೋಗುತ್ತೀರಿ ?"

"ಏಕೋ ಬೇಸರವಾಯ್ತು"

"ಜೊತೆಯಲ್ಲಿ ಸೀನನನ್ನಾದರೂ ಕರೆದುಕೊಂಡು ಹೋಗಿದ್ದರೆ...."

"ಅವನು ಎಲ್ಲಿ ಸತ್ತಿದ್ದನೋ...."

"ಮತ್ತೆ ನೋಡಿ ನಿಮ್ಮ ಬಾಯಿಂದ ಕೆಟ್ಟಮಾತು ಬರುವುದು....ಅವನ ಸಾವನ್ನೇಕೆ ನೀವು ಬಯಸುತ್ತೀರಿ"

"ಅದು ನನ್ನ ಮಾತಿನ ಕ್ರಮ....ಹಾಗೆ ಹೇಳಿ ಹೇಳಿ ಅಭ್ಯಾಸವಾಗಿದೆ"

"ಅದೇ ತಪ್ಪು....ಸತ್ತಿದ್ದ ಎಂದು ಏಕೆ ಹೇಳಬೇಕು? ನಿಂತರೆ ಕುಳಿತರೆ ಅವನ ಸಹಾಯ ನಿಮಗೆ ಬೇಕು. ನಿಮ್ಮ ಕೆಲಸವೆಂದರೆ ಅವನಿಗೆಷ್ಟು ವಿಶ್ವಾಸ...."

"ನೋವು... ನೋವು" ಎಂದು ಹೆಗಡೆ ಇದ್ದಕ್ಕಿದ್ದಂತೆ ಬೊಬ್ಬೆ ಹಾಕಿದ.

"ಸುಮ್ಮನೆ ಮಲಗಿಕೊಳ್ಳಿ. ಏನೂ ಆಗುವುದಿಲ್ಲ" ಎಂದು ಹೆಗ್ಗಡತಿ ಸಮಾಧಾನಿಸಿದಳು.

"ಇಲ್ಲ ರುಕ್ಕು....ಏನೋ ಆಗಿಹೋಗಿದೆ. ಪಾದದ ಮೂಳೆಯೇ ಮುರಿದು ಹೋಗಿದೆ. ಇನ್ನು ಎಷ್ಟುದಿನ ಬೇಕಾಗುತ್ತದೋ ಏನೋ–ಗುಣವಾಗುವುದಕ್ಕೆ...."

"ದೇವರಿದ್ದಾನೆ....ಏನೂ ಭಯ ಬೇಡ. ನಾಳೆ ಪಂಡಿತರನ್ನು ಕರೆಯಿಸಿ ತೈಲ ಹಾಕಿಸಿ ಉಜ್ಜಿಸಿದರೆ ಸರಿ. ಮತ್ತೆ ಮೂಳೆ ಕೂಡಿಕೊಳ್ಳುತ್ತದೆ. ಈಗ ಮಲಗಿಕೊಳ್ಳಿ...." ಎಂದು ಹಾಸಿಗೆ ತರಲು ಒಳನಡೆದಳು.

ಹಾಸಿಗೆ ಬಿಡಿಸುತ್ತಿದ್ದಂತೆಯೇ ಹೆಂಡತಿಗೆ ನೆನಪು ಕೊಟ್ಟ ...

"ಹೆಂಡದ ಮಡಿಕೆ ತಾ ರುಕ್ಕು " ಎಂದು. ಗಂಡನನ್ನು ಮಲಗಿಸಿ, ಮೈತುಂಬ ವಸ್ತ್ರವನ್ನು ಹೊದೆಯಿಸಿ ಹೆಂಡದ ಕುಡಿಕೆ ತಂದಳು ಹೆಗ್ಗಡತಿ.

"ಆಗಲಿ ರುಕ್ಕು ...ಎಷ್ಟೋ ಸಮಧಾನವಾಯ್ತು. ನಾಳೆ ಒಂದು ಕೆಲಸಮಾಡಬೇಕು. ಪಂಡಿತರನ್ನು ಕರೆಯಿಸುವ ಮೊದಲು ಸೀನನನ್ನು ಬರುವಂತೆ ಹೇಳಿಕಳುಹಿಸು" ಎಂದ ಹೆಗಡೆ.

"ಆಗಲಿ... ನಾನು ಪಡಸಾಲೆಯಲ್ಲಿ ಮಲಗಿರುತ್ತೇನೆ. ಏನಾದರೂ ಬೇಕಿದ್ದರೆ ಕರೆಯಿರಿ...." ಎಂದಳು ಹೆಗ್ಗಡತಿ.

o o o o

ಬಾಗಿಲನ್ನು ದೂಡಿದ ಅಬ್ಬರಕ್ಕೆ ಸಾರಿಗೆ ಒಗ್ಗರಣೆ ಹಾಕುತ್ತಿದ್ದ ರುಕ್ಮಿಣಿ ಬೆಚ್ಚಿಬಿದ್ದಳು. ನೋಡುತ್ತಾಳೆ... ಸೋಮಯಾಜರು ಎದೆಯ ಮೇಲೆ ಕೈಯಿಟ್ಟು

ಉಬ್ಬಸ ಬಿಡುತ್ತಾ "ಅಂತೂ ಬದುಕಿಕೊಂಡೆ" ಎಂದು ಉದ್ಗರಿಸಿದಾಗ ರುಕ್ಮಿಣಿಗೆ ಒಂದೂ ಅರ್ಥವಾಗಲಿಲ್ಲ. ಏಕೆ ? ಏನಾಯ್ತು ? ಎಂದು ಹೆಂಡತಿ ಹತ್ತು ಬಾರಿ ಕೇಳಿದರೂ ಸೋಮಯಾಜರು ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಸೇತುವೆಯಿಂದ ಮನೆಯ ಜಾವಡಿಯ ತನಕ ಓಡಿಬಂದಿದ್ದ ಅವರಿಗೆ ಮಾತನಾಡುವುದಕ್ಕೆ ದಮ್ಮೇ ಇರಲಿಲ್ಲ. "ಇರು ಹೇಳುತ್ತೇನೆ" ಎನ್ನುವ ಅರ್ಥ ಬರುವಂತೆ ಸನ್ನೆಯಿಂದಲೇ ಕೈ ಹಾರಿಸಿದ್ದರು ಮಾತ್ರ. ಎದೆಗುಂಡಿಯ ಬಡಿತ ಜೋರಾಯಿತು. ರಕ್ತದ ಕಾವು ಮುಖದ ಬಣ್ಣವನ್ನೇ ಬದಲಾಯಿಸಿತ್ತು. ಗಂಡನ ವರ್ತನೆಗೆ ಹೆದರಿಕೊಂಡ ರುಕ್ಮಿಣಿಗೆ ಸ್ಥಿಮಿತವೇ ಇರಲಿಲ್ಲ. ಅಷ್ಟೇ ಉದ್ವೇಗದಿಂದ "ಏಕೆ ಹೆದರಿಕೊಂಡದ್ದು... ಹಕ್ಕಲಿನ ದಾರಿಯಲ್ಲಿ ಹುಲಿ ಬಂತೇ ?" ಎಂದು ತನ್ನ ಸಮಾಧಾನಕ್ಕಾಗಿ ಕೇಳಿದಳು. "ಒಂದು ಲೋಟ ನೀರು ..." ಎಂದರು ಬಲವಾಗಿ ಉಸಿರೆಳೆದುಕೊಂಡು. ತಂಬಿಗೆ ತುಂಬ ನೀರು ಕೊಟ್ಟಳು ರುಕ್ಮಿಣಿ. ಗಟಗಟ ನೀರು ಕುಡಿದ ಮೇಲೆ ಅಂಗೈಗೆ ನೀರು ಹಾಕಿಕೊಂಡು ನೆತ್ತಿಯ ಮೇಲೆ ಚೆಲ್ಲಿದ ಸೋಮಯಾಜರು ಮತ್ತೆ ಚೇತರಿಸಿಕೊಂಡು ... ಅಡಿಗೆ ಮನೆಯ ಕಂಬಕ್ಕೆ ಬೆನ್ನು ಮಾಡಿ ಕುಳಿತವರು "ರುಕ್ಮಿಣಿ.... ಎಂತಹ ಕೆಲಸ ಆಗಿಹೋಯ್ತು... ಹೆಚ್ಚುಕಡಿಮೆ ಆಗಿದ್ದಿದ್ದರೆ..." ಎಂದಾಗ ಹೆಂಡತಿಯ ಎದೆಯೇ ಒಡೆದುಹೋಗಿತ್ತು. ಪಾಪ...ರುಕ್ಮಿಣಿಯ ಹೆಣ್ಣು ಹೃದಯ ಒಡೆದುಹೋಗುವುದಕ್ಕೆ ಸಾಕಾಗಿತ್ತು ಆ ಮಾತು. ಆಗಲೇ ಅವಳ ಕಣ್ಣು ಒದ್ದೆಯಾಗಿತ್ತು.

"ಏನೆಂದು ಹೇಳಬಾರದೆ ? ಸುಮ್ಮನೆ ನನ್ನನ್ನೇಕೆ ಹೆದರಿಸುತ್ತೀರಿ ?" ಎಂದು ಕೇಳಿದಳು ರುಕ್ಮಿಣಿ.

"ಇಲ್ಲ ರುಕ್ಮಿಣಿ .. ನಿನ್ನಲ್ಲಿ ಹೇಳುವುದಕ್ಕೆ ನನಗೂ ಆತುರ. ಆದರೆ ಅರ್ಧ ಮೈಲಿ ಒಂದೇ ಸಮನೆ ಓಡಿದ್ದು. ಇನ್ನೂ ಎದೆ ಕುಣಿತ ನಿಂತಿಲ್ಲ ನೋಡು ... ಸ್ವಲ್ಪ ಸುಧಾರಿಸಿಕೊಳ್ಳುತ್ತೇನೆ" ಎಂದು ಸೋಮಯಾಜರು ಬಾಯಿಂದಲೇ ಎದೆಗೆ ಗಾಳಿ ಬೀಸಿಕೊಂಡರು.

"ಅಡಿಗೆ ಮನೆಯ ಬಾಗಿಲು ಹಾಕು ..." ಎಂದರು ಕೊಂಚ ಕಾಲದ ತರುವಾಯ. ಎಂದೂ ಹಾಗೆ ಹೇಳಿದವರಲ್ಲ. ಏಕೋ ರುಕ್ಮಿಣಿಗೂ ಗಂಡನ ಚರ್ಯೆ ಕಂಡು ಸಂದೇಹ ಬಂತು. "ಏನೋ ನಡೆದಿದೆ... ಹೆಗಡೆಯಿಂದಲೇ

ಏನೋ ಆಗಿರಬೇಕು. ಅದಕ್ಕೆ ಇಷ್ಟು ಹೆದರಿಕೊಂಡಿದ್ದಾರೆ" ಎಂಬುದು ರುಕ್ಮಿಣಿಗೆ ಸುಳಿವು ಸಿಕ್ಕಿದಾಗ ಬಾಗಿಲು ಹಾಕಿದಳು.

"ಹೆಗಡೆ....ರುದ್ರನಿಂದ ಇಷ್ಟೆಲ್ಲಾ ರಂಪಾಟವಾಯ್ತು..." ಎಂದರು ಸೋಮಯಾಜರು.

ಎದೆಯ ಮೇಲೆ ಕೆಂಡ ಸುರಿದಷ್ಟು ವೇದನೆಯಾಯ್ತು ರುಕ್ಮಿಣಿಗೆ.

"ದೇವರೆ....ಆ ಪಾಪಿಗೂ ನಿಮ್ಮ ಮೇಲೆ ಕಣ್ಣು ಬಿತ್ತೆ ?"

"ಅಬ್ಬಾ ! ಎಂತಹ ಪರಿಸ್ಥಿತಿಯಲ್ಲಿ ಸಿಲುಕಿದೆ ಅಂತಿ.. ಹೆಚ್ಚು ಕಡಿಮೆ ಆಗಬಾರದ ಕೆಲಸವೇ ಆಗಿಹೋಗಿದೆ..."

"ಹಾಗಂದರೆ... ಏನಾಯ್ತು ಆಗಬಾರದ ಕೆಲಸ ?"

"ನನಗೂ ಕೆಟ್ಟಬುದ್ಧಿ ಬಂತು ರುಕ್ಮಿಣಿ.. ಕೆಲಸ ಮುಂದುವರಿಸಿಬಿಟ್ಟೆ"

"ರಾಮರಾಮ ...ಕೆಲಸ ಮುಂದುವರಿಸಿದಿರಿ ಅಂದರೆ .ಸರಿಯಾಗಿ ಹೇಳಿ"

"ಹೆಗಡೆಯ ಗತಿ ಏನಾಗಿದೆಯೋ....ಸಂಕದ ಮೇಲಿಂದ ಕೆಳ ಉರುಳಿದ್ದನ್ನು ಕಂಡಿದ್ದೆ. ಆಮೇಲೆ ಏನಾಯ್ತೋ . ನಾನು ಓಡುವುದಕ್ಕೆ ಆರಂಭಿಸಿದೆ. ನನಗೆ ಇನ್ನೇನೂ ಇಲ್ಲ ರುಕ್ಮಿಣಿ. ಎಲ್ಲಿ ಬಂಡೆಯ ಮೇಲೆ ಬಿದ್ದು ಅವನ ತಲೆ ಗಿಲೆ ಒಡೆದುಹೋಗಿದ್ದರೆ...."

"ಅಯ್ಯೋ ದೇವರೆ....ಎಂತಹ ಕೆಲಸ ಮಾಡಿದಿರಿ. ಹೋಗಿ ಹೋಗಿ ಅವನ ಹತ್ತಿರ ಜಗಳ ಕಾಯುವುದೆ ? ಬ್ರಾಹ್ಮಣರಾಗಿ ಅವನನ್ನು ಬಂಡೆಯ ಮೇಲೆ ತಳ್ಳುವುದೆ ? ಎಲ್ಲಿಯಾದರೂ ಅವನು ಸತ್ತಿದ್ದರೆ " ಎಂದು ರುಕ್ಮಿಣಿ ಗೊಳ್ಳೆಂದು ಅತ್ತೇಬಿಟ್ಟಳು. ಎಲ್ಲಿಯಾದರೂ ಹೆಗಡೆಯ ಹೆಣ ನದಿಯಲ್ಲಿ ತೇಲುತ್ತಿದ್ದರೆ....ಅದೇ ಅವಳಿಗೆ ಭಯ. ಆ ಪಾಪಿ ಹಾಗೆಲ್ಲಾ ಸಾಯುವ ಆಸಾಮಿಯಲ್ಲ ಎಂದು ರುಕ್ಮಿಣಿಗೆ ಹೇಗೆ ತಿಳಿಯಬೇಕು ?

"ಛೆ ! ಸಾಯುವಷ್ಟು ಪುಣ್ಯ ಮಾಡಿತ್ತೆ ಆ ಜೀವ. ಇನ್ನು ಎಷ್ಟು ಜನರ ಕಾಲಿನ ಒದೆತ ತಿನ್ನಬೇಕೋ... ಅವನು ಸಾಯುವುದಿರಲಿ....ಎಲ್ಲಿ ಆ ಬಂಡೆಯೇ ಒಡೆದಿದೆಯೋ ಎಂದು ನನಗೆ ಭಯ. ಅವನ ತಲೆಯಮೇಲೆ ಬಂಡೆ ಕಲ್ಲಲ್ಲ ..ಬೆಟ್ಟವನ್ನೇ ಇಟ್ಟರೂ ಸಾಯುವ ಪ್ರಾಣಿ ಅವನಲ್ಲ. ನನಗೆ ಆ ಭಯ ವಿಲ್ಲ. ಆದರೆ...."

"ಹೌದು....ಆದದ್ದೇನು....?"

ಹೇಳಿದರು ಸೋಮಯಾಜರು.

"ಆದರೆ ಎಂದು ಮಧ್ಯ ಮಾತನ್ನೇಕೆ ನಿಲ್ಲಿಸಿದಿರಿ ?"

"ಕೆಟ್ಟವನ ಸಹವಾಸ... ಅವನಲ್ಲಿ ಪ್ರೇಮ ಕಟ್ಟಿಕೊಂಡ ಹಾಗಾಯ್ತು."

"ಹಾಳಾಗಿ ಹೋಗಲಿ ಎಂದು ಸುಮ್ಮನಿರಬಾರದಿತ್ತೆ ?"

"ಹೇಗೆ ಸುಮ್ಮನಿರುವುದು ?"

"ಅವನ ನಡತೆ ಗೊತ್ತಿದ್ದಮೇಲೆ ಸುಮ್ಮನಾಗಬೇಕಿತ್ತು"

"ಹೌದು....ನನಗೂ ಅಭಿಮಾನವಿಲ್ಲವೆ ? ದೇವರು ನನಗೂ ಗಂಡಸುತನ ಕೊಟ್ಟಿದ್ದಾನೆ ನೋಡು"

"ಅವನು ಬೊಗಳಿದರೂ ನಿಮ್ಮ ಗೌರವಕ್ಕೆ ಕುಂದೇನು ?

"ಹಾಗಲ್ಲ ರುಕ್ಮಿಣಿ ...ನಾಲಿಗೆ ಎಲ್ಲಿಯವರೆಗೆ ಹೋಯಿತು ನೋಡು"

"ಏನೇ ಅನ್ನಲಿ... ನಾಯಿ ಬೊಗಳುತ್ತೆ ಎಂದು ಕಿವಿ ಕೊಡಬೇಕಿತ್ತು"

"ಮಗನೆ ಎಂದರೆ ನಾನು ಹೇಗೆ ಸುಮ್ಮನಿರುವುದು ?"

"................"

"ಹೋಗಲಿ ಅವನ್ಯಾದರೂ ಹೇಳಲಿ....ನಾನು ಹೆದರಿಕೊಂಡಿದ್ದರೆ ನನ್ನನ್ನೇ ಎತ್ತಿ ಹೊಳೆಗೆ ಹಾಕುತ್ತಿದ್ದ. ಒದೆಯುತ್ತೇನೆ ಎಂದು ಕಾಲನ್ನೆತ್ತಿದ. ನನಗೂ ಅನುಕೂಲವಾಯ್ತು"

"ಅಯ್ಯೋ ದೇವರೆ....ಮುಂದೆ ಅವನಿಂದ ಏನೇನು ಅನುಭವಿಸ ಬೇಕೋ....?"

"ಮತ್ತೆ ಹೇಳಿದ್ದಾನೆ ...ನಮ್ಮ ಮನೆಗೆ ಬೆಂಕಿ ಹಾಕುತ್ತಾನಂತೆ"

"ಅಯ್ಯೋ ಶಿವಶಿವಾ ...ಅದಕ್ಕೂ ಅಂಜದ ಪ್ರಾಣಿ ಅದು. ಬೆಂಕಿ ಹಾಕಿದ ಅನ್ನಿ....ಮುಂದೇನು ಗತಿ ?"

"ಥೂ .. ನಿನಗೂ ಬುದ್ಧಿಯಿಲ್ಲವಲ್ಲ .. ಹೇಳಿದೆ – ನನ್ನ ಮನೆಗೆ ಬೆಂಕಿ ಬೀಳಲಿ . ನಿನ್ನ ಮನೆಗೂ ಬೆಂಕಿ ಬೀಳುತ್ತದೆ ಎಂದು. ಎಷ್ಟು ದಿನ ಅಂತ ಸುಮ್ಮನಿರುವುದು ? ನಾನು ಜನಿವಾರ ಹಾಕಿದ್ದು ನಿಜವಾದರೆ ಈ ಹೆಗಡೆಗೆ ಹೆದರುವುದಿಲ್ಲ. ಊಟ ಹಾಕು. ಅವನು ಸತ್ತಿದ್ದರೆ ಪೀಡೆ ಮುಗಿಯಿತು. ಬದುಕಿದ್ದರೆ ಬಾಕಿ ವಿಚಾರ"

ರುಕ್ಮಿಣಿಗೆ ಮಾತ್ರ ಸಮಾಧಾನವಾಗಿರಲಿಲ್ಲ.

"ಮನೆಗೆ ಬೆಂಕಿ ಹಾಕುತ್ತೇನೆ ಅಂದನಲ್ಲ...." ಎಂದಳು ಮತ್ತೆ.

"ಹೌದು....ಹೇಳಿದ"

"ಹಾಗೆ ಮಾಡಿದರೆ....?"

"ಅದು ಅಷ್ಟು ಸುಲಭವೆ ?"

"ಆ ಪಾಪಿಗೆ ಯಾವುದು ಕಷ್ಟ ?"

"ಅಷ್ಟು ಎದೆಗಟ್ಟಿ ಅವನಿಗಿದೆಯೆ ?"

"ನಾವು ರಾತ್ರಿ ಮಲಗಿದ್ದಾಗ ಒಂದು ಕೆಂಡ ಮಾಡಿನ ಮೇಲೆ ಹಾಕಿದರೆ ಆಯ್ತಲ್ಲ"

"ಮಾಡಿದಾಗ ತಾನೆ....ನಾನು ನೋಡಿಕೊಳ್ಳುತ್ತೇನೆ"

"ಬೆಂಕಿ ಬಿದ್ದಮೇಲೆ ಏನು ಮಾಡುವುದು ?"

"ನನ್ನ ಮೂರಂಕಣದ ಮನೆ ಸುಟ್ಟರೂ ಚಿಂತೆಯಿಲ್ಲ. ಅವನ ಹೆಬ್ಬಾಗಿಲ ಮನೆಯನ್ನು ಸುಟ್ಟೇ ಸುಡುತ್ತೇನೆ. ಆ ಭರವಸೆ ನನಗಿಗಿದೆ. ಕೆಂಡ ನನ್ನ ಮನೆಯ ಒಲೆಯಲ್ಲೂ ಇದೆ. ನೀನು ಯಾವುದಕ್ಕೂ ಹೆದರಿಕೊಳ್ಳಬೇಡ. ಮೊದಲು ಎಲೆ ಹಾಕಿ ನನಗೆ ಅನ್ನ ಬಡಿಸು...." ಎಂದರು ಸೋಮಯಾಜರು. ರುಕ್ಮಿಣಿ ಎಲೆ ಹಾಕಿದಳು. ಸೋಮಯಾಜರು ಹೆಂಡತಿಯನ್ನು ಎಷ್ಟೇ ಸಮಾಧಾನಿಸಿದರೂ ರುಕ್ಮಿಣಿ ಮಾತ್ರ ತುಂಬಾ ಹೆದರಿಕೊಂಡಿದ್ದಳು.

೨೧

ಪಂಡಿತನ ಮಾತು ಕೇಳಿದಾಗ ರುದ್ರನ ಕಣ್ಣಿನಿಂದ ಬಳಬಳ ನೀರಿಳಿಯಿತು. ಎಂದೂ ಅಷ್ಟೊಂದು ಕಣ್ಣೀರು ಸುರಿಸಿದವನಲ್ಲ. ಅಳದೆ ಎಷ್ಟು ವರ್ಷವಾಗಿತ್ತೋ.... ಹೆಗ್ಗಡತಿ ಹಾಸಿಗೆಯ ಮೇಲೆ ಕುಳಿತು ಉಪಚರಿಸುತ್ತಿದ್ದಾಗಲೇ ಅವಳ ಸೀರೆಯ ಸೆರಗಿನಿಂದ ಮುಖ ಮುಚ್ಚಿಕೊಂಡು ಬಿಕ್ಕಳಿಸತೊಡಗಿದ್ದ. ಗಂಡನ ಒಪ್ಪಳಿಕೆಯನ್ನು ಕಂಡು ಹೆಗ್ಗಡತಿಗೂ ಕಸಿಕರ ಹುಟ್ಟಿತು. "ದೆವ್ವದ ಕೃಪೆಯಿಂದ ಏನೂ ಆಗುವುದಿಲ್ಲ. ಒಂದಲ್ಲ ಹತ್ತು ಹರಕೆ ಹೊತ್ತಿದ್ದೇನೆ. ನಮ್ಮ ಮನೆ ದೆವ್ವ ಪಂಜುರ್ಲಿಗೆ ಬೆಳ್ಳಿಯ ಕಾಲು ಮಾಡಿಸಿ ಒಪ್ಪಿಸುತ್ತೇನೆ ಎಂದಿದ್ದೇನೆ. ಖಂಡಿತಾ ಬೇಗ ಗುಣವಾಗುತ್ತದೆ" ಎಂದು ರುಕ್ಕು ಹೇಳಿದ್ದರೂ ರುದ್ರನ ಕಂಬನಿ ಮಾತ್ರ ಅವಳ ಸೆರಗನ್ನು ಒದ್ದೆ ಮಾಡಿತ್ತು. ಪಚ್ಚೆ ತೈಲ ಹಾಕಿ ಮೂಳೆಯನ್ನು ಸೇರಿಸುವ ಯತ್ನದಲ್ಲಿ ಗಂಟೆಕಾಲ ಉಜ್ಜಿದ ಪಂಡಿತನ ಅಭಿಪ್ರಾಯ "ಮೂಳೆ ಕೂಡುವುದು ಕಷ್ಟ ಹೆಗಡೆಯವರೆ ..ಸಂದಿ ತಪ್ಪಿದ್ದರೆ ಹೇಗಾದರೂ ಕೂಡಿಸಬಹುದಿತ್ತು. ಆದರೆ ಕೀಲಿ ಎಲುಬೇ ತುಂಡಾಗಿಹೋಗಿದೆ. ಮುಂದೆ ಒಂದು ಕಾಲೇ ವ್ಯರ್ಥವಾಗುವ ಸಂಭವವೇ ಕಾಣುತ್ತದೆ" ಎಂದು. ಅದನ್ನು ಮೊದಲೇ ಹೇಳಿಬಿಟ್ಟಿದ್ದ. ಹೆಗಡೆಯ ಮನಸ್ಸನ್ನು ಸಂತೋಷಪಡಿಸುವುದಕ್ಕೆ ಅವನ ಮನಸ್ಸು ಒಪ್ಪಿರಲಿಲ್ಲ. ಪಂಡಿತನಿಗೂ ಹೆಗಡೆಯ ಮೇಲೆ ಏನು ದ್ವೇಷವಿತ್ತೋ.... ಯಾವ ಪ್ರತಿಫಲವನ್ನೂ ಅವನಿಂದ ನಿರೀಕ್ಷಿಸದ ಪಂಡಿತ ಒಂದಿಷ್ಟು ತೈಲ ಉಜ್ಜಿ.... ಮೇಲೆ ಒದ್ದೆ ಬಟ್ಟೆ ಕಟ್ಟಿ "ಸಂಜೆ ಬರುತ್ತೇನೆ"

ಎಂದು ಹೇಳಿ ಹೋಗಿದ್ದ. ಅವನ ಉದಾಸೀನವನ್ನು ಗಮನಿಸಿದವಳು ಹೆಗ್ಗಡತಿ. ಮುಗಿದೇ ಹೋಗಿತ್ತು ಹೆಗಡೆಯ ಉದ್ಧಟತನ. ಇನ್ನು ದರ್ಪ ಗೌಜಿ ಎಂಬ ಮಾತೇ ಅವನ ಪಾಲಿಗೆ ಇಲ್ಲವಾಗಿತ್ತು. ಸದ್ಯ ಹಾಸಿಗೆ ಬಿಟ್ಟೇಳುವ ಶುಭ ಸೂಚನೆಯೂ ಕಂಡುಬರಲಿಲ್ಲ. ಗಿರಿಜಳನ್ನು ಹತ್ತೋಟಿಗೆ ತರುವಷ್ಟು ದಿನ ವಾದರೂ ತನಗೆ ದೇವರು ಆರೋಗ್ಯ ಕೊಡಬಾರದಿತ್ತೆ? ಎಂದು ಆಗ ದೇವ ರನ್ನು ನೆನಸಿಕೊಂಡ. ಹೆಗ್ಗಡತಿಗೂ ಮತ್ತೆ ಅರ್ಥವಾಗಿತ್ತು "ಇದೆಲ್ಲಾ ಮಾಡಿದ ಪಾಪವನ್ನು ಅನುಭವಿಸುವುದು" ಎಂದು. ಎಂತಹ ಶಿಕ್ಷೆ ದೇವರು ಕೊಟ್ಟ ? ದೇವರಿಗೆ ನಿತ್ಯ ಪೂಜೆ ಮಾಡುವ ಬ್ರಾಹ್ಮಣರನ್ನು ಒದೆಯುವುದಕ್ಕೆ ಕಾಲನ್ನೆತ್ತು ವುದೆ? ಗಿರಿಜಮ್ಮನ ಬಾಗಕ್ಕೆ ದೇವರ ಬೆಂಬವಿದೆಯೋ ಏನೋ ...ಅಲ್ಲವಾ ದರೆ ತನ್ನ ಗಂಡನ ಗತಿ ಹೀಗಾಗುತ್ತಿತ್ತೆ? ಎಂದು ಹೆಗ್ಗಡತಿ ತನ್ನಲ್ಲೆ ಯೋಚಿಸಿ ಕೊಂಡಳು.

ಪಂಡಿತ ಹೋಗಿ ಅರ್ಧಗಳಿಗೆಯಾಗಿತ್ತು. ಗಂಡನಿಗೆ ಹುರಿವಕ್ಕಿ ಗಂಜಿಯ ನೀರು ಕುಡಿಸುತ್ತಿದ್ದಾಗಲೇ ಸೀನ ಬಂದ. ಹೆಗಡೆಯ ಒಪ್ಪಿಗೆಯಿಲ್ಲದೆ ಮನೆಯ ಒಳಪ್ರವೇಶ ಮಾಡುವ ಕ್ರಮ ಸೀನನಲ್ಲಿಲ್ಲ. ಚಾವಡಿಯ ಕಂಬದ ಬಳಿಯಲ್ಲೆ ಕುಳಿತಿರುತ್ತಾನೆ. ರಾತ್ರಿಯೇ ಅವನಿಗೆ ಸಮಾಚಾರ ತಿಳಿದಿತ್ತು. ಯಾರೋ ಓಣಿಯಲ್ಲಿ ಹೋಗುತ್ತಿದ್ದವರು ಹೆಗಡೆ ಬಯಲಲ್ಲಿ ಕುಂಟುತ್ತಾ ಮನೆಯ ಕಡೆ ಹೋದದ್ದನ್ನು ಕಂಡು ಸೀನನಿಗೆ ವಿಚಾರ ತಿಳಿಸಿದ್ದರು. ಅವನು ಅಷ್ಟಾಗಿ ಗಮನಿಸಲಿಲ್ಲ. ಹೆಗಡೆಯ ಹೆಣ ಬಿದ್ದಿದೆ ಎಂದರೂ ಅವನಿಗೆ ನೋಡಬೇಕೆಂಬ ಅವಸರ ಏನೂ ಇರಲಿಲ್ಲ. ಹೆಚ್ಚು ಕಡಿಮೆಯಾಗಿದ್ದರೂ ಅವರ ಹಣೆಬರಹ ಎಂದು ಸುಮ್ಮನಾಗುತ್ತಿದ್ದ ಸೀನ. ಹೆಗಡೆಯ ಕೆಟ್ಟತನಕ್ಕೆ ಅವನು ಹೆದರಿ ದ್ದನೇ ಹೊರತು ಒಳ್ಳೆಯತನಕ್ಕೆ ತಲೆಬಾಗಿಸಿದವನೂ ಅವನಲ್ಲ.

ಹೆಗ್ಗಡತಿ ಹೊರಬಂದಾಗಲೇ ಸೀನ ಎದ್ದುನಿಂತು "ಅಮ್ಮ....ನಾನು ಬಂದಿದ್ದೇನೆ ಎಂದು ಅಯ್ಯನಿಗೆ ಹೇಳಿ" ಎಂದ. ಬೆಳಕು ಹುಟ್ಟುವ ಮೊದಲೇ ತೋಟದ ಆಳು ಬಂದು "ಹೆಗಡೆಯವರು ಬರಹೇಳಿದ್ದಾರೆ" ಎಂದು ಹೇಳಿ ಹೋಗಿದ್ದರೂ ಸೀನ ತಡವಾಗಿಯೇ ಬಂದಿದ್ದ. ಹೆಗ್ಗಡತಿ ಒಂದೇ ಮಾತಿನಲ್ಲಿ ನಡೆದ ಘಟನೆಯ ಬಗ್ಗೆ ಸೀನನಲ್ಲಿ ಹೇಳಿ "ಕಾಲು ಬಾತುಹೋಗಿದೆ. ರಾತ್ರಿ ಎಲ್ಲಾ ನಿದ್ದೆಯಿಲ್ಲದೆ ಒದ್ದಾಡಿದರು" ಎಂದಳು. ಅಂತರ್ಯದಲ್ಲೆ ಹಿಗ್ಗಿದ ಸೀನ.

"ಕಾಲಿನ ಮೂಳೆ ಮುರಿದಿದ್ದರೆ ಇನ್ನು ಊರಲ್ಲಿ ಎಲ್ಲರಿಗೂ ನೆಮ್ಮದಿ" ಎಂದು ಸೀನ ಹಿಗ್ಗಿ ಹೋದ. ಆದರೆ ಹೆಗ್ಗಡತಿಯ ಮುಂದೆ ಒಂದನ್ನೂ ತೋರಿಸದೆ "ಅಯ್ಯೋ, ರಾತ್ರಿಯೇ ನನಗೆ ಹೇಳಿಕಳುಹಿಸಬಾರದಿತ್ತೆ? ಎಂತಹ ಅನ್ಯಾಯ ಆಗಿ ಹೋಯ್ತು" ಎಂದು ನಟನೆಯ ಅನುಕಂಪ ವ್ಯಕ್ತಪಡಿಸಿದ.

"ಎಲ್ಲಿದ್ದಾರೆ ತಾಯಿ ಹೆಗಡೆಯವರು...?"

"ಪಡಸಾಲೆಯಲ್ಲಿ ಮಲಗಿದ್ದಾರೆ..."

"ಎಷ್ಟು ಹೊತ್ತಿಗೆ ರಾತ್ರಿ ಮನೆಗೆ ಬಂದರು...?"

"ಗಂಟೆ ಗೊತ್ತಾಗಲಿಲ್ಲ ಸೀನ....ಸಂಕದ ಮೇಲಿನಿಂದ ಮನೆಗೆ ಬರುವುದಕ್ಕೆ ಎರಡು ಗಂಟೆ ಹಿಡಿಯಿತಂತೆ..."

"ಅಬ್ಬಾ... ಹಾಗಿದ್ದರೆ ಕಾಲಿಗೆ ತುಂಬಾ ಪೆಟ್ಟಾಗಿರಬೇಕು....ಹೋಗಲಿ-ನಾನು ಬಂದಿದ್ದೇನೆ ಎಂದು ಹೇಳಿ."

ಹೆಗ್ಗಡತಿ ಒಳಹೋದಳು.

ಸೀನ ಬಂದಿದ್ದಾನೆ ಎಂದಾಗ ಹೆಗಡೆಗೆ ಆ ವೇದನೆಯಲ್ಲೂ ಹುರುಪು ಹುಟ್ಟಿತು. ಪಡಸಾಲೆಯಿಂದಲೇ ಕೂಗಿದ "ಒಳಗೆ ಬಾ" ಎಂದು. ಕರೆಯುವ ರೀತಿಯಿಂದಲೇ ಸೀನ ತಿಳಿದುಕೊಂಡ, ಆಸಾಮಿ ಸಂಪೂರ್ಣ ಬದಲಾಯಿಸಿದೆ ಎಂದು. ಪಡಸಾಲೆಯ ಹೊಸಿಲಬಳಿ ಬಂದು ನಿಂತ.

"ಕೇಳಿದೆ ಬುದ್ಧಿ... ಬಲು ಸಂಕಟವಾಯ್ತು" ಎಂದು ಮೊದಲೇ ತನಗಾದ ದುಃಖವನ್ನು ಪ್ರದರ್ಶಿಸಿದ ಸೀನ.

"ನೋಡಪ್ಪ ಕೊನೆಗೂ ನನ್ನ ಗತಿ ಹೀಗಾಯ್ತು" ಎಂದು ಹೆಗಡೆ ಮತ್ತೆ ಕಣ್ಣು ಒದ್ದೆ ಮಾಡಿಕೊಂಡ.

"ಕೊನೆಗೂ ಅನ್ನಬೇಡಿ ಅಯ್ಯ....ಕಾಲು ಮತ್ತೆ ಹೊಂದಿಕೊಳ್ಳುತ್ತದೆ" ಎಂದು ಸೀನ ತಾತ್ಕಾಲಿಕ ಸಮಾಧಾನದ ಮಾತು ಹೇಳಿದ. ಹೆಗಡೆಯ ಒಳಿತನ್ನು ಬಯಸಿ ಆ ಮಾತು ಹೇಳಲಿಲ್ಲ. ಆದರೆ ಬಹಿರಂಗದಲ್ಲಿ ಹೆಗಡೆಯ ಶ್ರೇಯಸ್ಸನ್ನು ಬಯಸುವ ನಟನೆ ತೋರಿಸಿದ್ದ.

"ನೀನು ನನ್ನ ಒಳಿತನ್ನೆ ಯೋಚಿಸಿ ಆ ಮಾತು ಹೇಳಿದ್ದಿ ಸೀನ. ಆದರೆ ಪಂಡಿತನ ಅಭಿಪ್ರಾಯ-ನನ್ನ ಒಂದು ಕಾಲೇ ವ್ಯರ್ಥ ಎನ್ನುತ್ತಾನೆ"

"ಬಿಡಿ ಬುದ್ಧಿ...ಆ ಪಂಡಿತನ ಬಾಯಿಗೆ ಮಣ್ಣು ಹಾಕಿ. ಕಾಲು

ಉಳುಕಿದರೆ ಮುರಿದೇ ಹೋಗುತ್ತದೆ ಎಂದು ಯಾರು ಹೇಳಿದರು ನಿಮಗೆ. ಆ ಪಂಡಿತನ ತಲೆಯಲ್ಲಿರುವುದು ಸೆಗಣಿ ಮುದ್ದೆ. ಅವನಿಗೇನು ಮಹಾ ಗೊತ್ತಿರುವುದು...." ಎಂದು ಸೀನ ಲಕ್ಷಣವಾಗಿ ಹೆಗಡೆಯ ಮುಂದೆ ಬುರುಡೆ ಬಿಚ್ಚಿದ.

ಆ ಮಾತು ಎಷ್ಟು ಹಿತವಾಗಿತ್ತೋ.... ಹೇಳಿದ,

"ನಿಜವಾಗಿಯೂ ಪಂಡಿತನ ಮಾತಿನಲ್ಲಿ ನಂಬಿಕೆ ಇಲ್ಲವೇನು?"

"ಅಯ್ಯೋ....ಅವನು ಹೇಳುತ್ತಾನೆ ಎಂದು ನೀವು ನಂಬುವುದೇ? ನಮ್ಮ ಪೂಜಾರಿ ಮಂಜ ತೆಂಗಿನ ಮರ ಹತ್ತಿ ಬಿದ್ದರೂ ಅವನ ಕಾಲು ಮುರಿದಿಲ್ಲ ನೋಡಿ. ಅದು ತಮಗೂ ಗೊತ್ತಿದೆ."

"ಅವನು ಬಿದ್ದದ್ದು ಉಸುಬಿನ ರಾಶಿಯ ಮೇಲೆ. ಹಾಯಾಗಿ ಎಲುಬು ಮುರಿಯಲಿಲ್ಲ. ನನ್ನದು ಹಾಗಲ್ಲ ಮಹರಾಯ... ಬಂಡೆಯ ಎಡುಕಿನಲ್ಲಿ ಕಾಲು ಮರಡಿತು ನೋಡು ..."

"ಏನೇ ಅನ್ನಿ ಅಯ್ಯ....ಬಾತು ನಾಲ್ಕು ದಿನ ಇರುತ್ತದೆ. ಆಮೇಲೆ ಮೂಳೆ ತಾನಾಗಿಯೇ ಕೂಡಿಕೊಳ್ಳುತ್ತದೆ."

"ಮತ್ತೆ ಖಂಡಿತಾ ನನ್ನ ಮೂಳೆ ಕೂಡುತ್ತದೆಯೆ?"

"ನನ್ನ ಮಾತಿನಲ್ಲಿ ವಿಶ್ವಾಸವಿಡಿ . "

"ನಿನಗೆ ಆ ಭರವಸೆ ಕಾಣುತ್ತದೆಯೆ?"

"ನಿಮಗೆ ದೇವರು ಎಂದಿಗೂ ದ್ರೋಹ ಬಗೆಯುವುದಿಲ್ಲ."

"ಸತ್ಯವಾಗಿಯೂ ನನಗೆ ದೇವರ ಬೆಂಬಲವಿದೆಯೆ?" ಹೆಗಡೆಗೆ ಅನುಮಾನ ಬಂತು.

"ಹಿಂದೆ ನಿಮಗೆ ದೇವರ ಮೇಲೆ ಭಕ್ತಿ ವಿಶ್ವಾಸವಿಲ್ಲದಿದ್ದರೆ ಮುಂದಾದರೂ ಅವನನ್ನು ನಂಬಿ ಬುದ್ಧಿ .. ನಿಮಗೆ ಒಳ್ಳೆದಾಗುತ್ತದೆ."

"ಏನೋ ಸೀನ ...ಬಡಬ್ರಾಹ್ಮಣ ನನ್ನ ಮಾತಿಗೆ ಹೆದರಿಕೊಂಡು ಸಾಯುತ್ತಾನೆ ಎಂದುಕೊಂಡಿದ್ದೆ."

"ನಿಮ್ಮ ಶಕ್ತಿ ಎಲ್ಲಿಗೆ ಹೋಗಿತ್ತಪ್ಪ ...ಒದ್ದು ಹೊರಹಾಕುತ್ತಿದ್ದರೆ ..." ಎಂದು ಸೀನ ಮತ್ತೆ ಮತ್ತೆ ಹೆಗಡೆಯನ್ನು ಕೆರಳಿಸಿದ.

"ಏನೋ ಅಚಾತುರ್ಯ ನಡೆಯಿತು ನೋಡು. ಒದೆಯುವುದಕ್ಕೆ ಕಾಲೂ ಎತ್ತಿದೆ. ಗಟ್ಟಿಯಾಗಿ ಹಿಡಿದುಕೊಂಡುಬಿಟ್ಟ. ಬಿಡಿಸಿಕೊಳ್ಳುವ

ದಕ್ಕೆ ಯಾವ ಆಧಾರವೂ ಇರಲಿಲ್ಲ. ಒಂದು ಕಾಲು ಅವನ ಕೈಯಲ್ಲಿತ್ತು ನೋಡು ...ನನಗೂ ಆಯತಪ್ಪಿತು...." ಎಂದು ಹೆಗಡೆ ವಿವರವಾಗಿ ಎಲ್ಲವನ್ನೂ ಸೀನನ ಮುಂದೆ ಹೇಳಿ ಅಳತೊಡಗಿದ. ಹೆಗಡೆಯ ಕಣ್ಣೀರನ್ನು ಕಂಡಾಗ ಸೀನನಿಗೆ ಎಷ್ಟೋ ಸಮಾಧಾನವಾಯ್ತು. ಎಷ್ಟು ಮಂದಿಯ ಕಣ್ಣೀರನ್ನು ಸುರಿಸಿದ ಪಾಪವೊ ...ಕೊನೆಗೆ ಅವನಿಗೂ ಆ ಪ್ರಾಯಶ್ಚಿತ್ತ ತಪ್ಪಲಿಲ್ಲ ಎಂದು ಸೀನನ ಒಳಮನಸ್ಸು ನುಡಿಯಿತು. ಮೂಗಿನಿಂದ ಇಳಿಯುತ್ತಿದ್ದ ಸಿಂಬಳವನ್ನು ಒರಸುತ್ತಾ ಹೆಗಡೆ ಹೇಳಿದ,

"ನೀನು ಬಂದ ಮೇಲೆ ಎಷ್ಟೋ ಸಮಧಾನವಾಯ್ತು ನನಗೆ. ನಿನ್ನನ್ನು ಕಾಣುವ ಹಂಬಲ ಅಷ್ಟಿಷ್ಟಲ್ಲ. ನಿನ್ನ ವಿಶ್ವಾಸ ಒಂದಿದ್ದರೆ ಸಾಕು ಸೀನ.... ನನ್ನ ಎರಡು ಕಾಲು ಮುರಿದರೂ ಹೆದರುವುದಿಲ್ಲ."

"ನನಗೆ ವಿಚಾರವೇ ತಿಳಿದಿರಲಿಲ್ಲ ಬುದ್ಧಿ....ಬೇಗ್ಗೆ ಕಮ್ತಿಯವರ ಮನೆಯ ತೋಟದ ಕೆಲಸ ಒಪ್ಪಿಕೊಂಡಿದ್ದೆ. ಆಮೇಲೆ ನಿಮ್ಮ ಜನ ಬಂದ ಮೇಲೆ ಮತ್ತೆ ತಡಮಾಡಲಿಲ್ಲ ..."

"ಆ ವಿಶ್ವಾಸವೇ ನನಗೆ ಸಾಕು. ಅಂತೂ ಬಂದೆಯಲ್ಲ"

"ಬರದೆ ಏನು ಬುದ್ಧಿ ...ರಾತ್ರಿಯೇ ನನ್ನನ್ನು ಕರೆದಿದ್ದರೆ ಆ ಬ್ರಾಹ್ಮಣ ನನ್ನ ಕೊಂಡ ತೆಗೆದು ಹುಗಿಯುತ್ತಿದ್ದೆ."

"ಇನ್ನಾದರೂ ಹುಗಿಯಬಹುದಲ್ಲ... ಅದಕ್ಕೆ ನಿನ್ನೆ ರಾತ್ರಿಯೇ ಆಗ ಬೇಕೇನು? ನಾಳೆ ರಾತ್ರಿಯಾದರೂ ಆ ಕೆಲಸ ಮಾಡುವುದಕ್ಕೆ ಅಡ್ಡಿಯೇನು?" ಎಂದು ಹೆಗಡೆ ಹೇಳಿದ.

"ಮಾತಿಗೆ ಹೇಳಿದೆ ಅಯ್ಯ ...ಆ 'ಪಾಪ ನನಗೇಕೆ ಹೇಳಿ" ಎಂದು ತಟ್ಟನೆ ಮಾತು ಬದಲಾಯಿಸಿದ ಸೀನ.

"ಅರೆ.. ಏಕಯ್ಯ ಅಭಿಪ್ರಾಯ ಬದಲಾಯಿಸಿದೆ"

"ಏಕೋ ನಿಮ್ಮ ಅವಸ್ಥೆ ಕಂಡು ಸೋಮಯಾಜರ ಮೇಲೆ ಸಿಟ್ಟು ಬಂದು ಹಾಗೆ ಹೇಳಿದೆ...."

"ಆ ಮಾತನ್ನೆ ನಾನು ನಿನ್ನಿಂದ ನಿರೀಕ್ಷಿಸುತ್ತೇನೆ."

"ಬೇಡ ಸ್ವಾಮಿ ...ಆ ಹೊಲಸು ಕಾರ್ಯ ನನಗೇಕೆ?"

"ಹೊಲಸು ಎನ್ನಬೇಡ ಸೀನ.. ನನ್ನನ್ನು ಮೆಚ್ಚಿಸುವ ಯಾವ

ಕಾರ್ಯವೇ ಆಗಲಿ ...ಸ್ವಾಮಿಸ್ವೇವೆ ಎಂದು ಭಾವಿಸಿಕೊ. ಆ ಬ್ರಾಹ್ಮಣನನ್ನು ಹೊಂಡ ತೆಗೆದು ಹುಗಿಯುವ ಮೊದಲು ಇನ್ನೊಂದು ಕೆಲಸ ನಿನ್ನಿಂದ ಆಗ ಬೇಕು. ಅದಕ್ಕೆ ನಿನ್ನನ್ನು ಕರೆಯಿಸಿದ್ದು .."

"ಏಕೆ ನನ್ನನ್ನು ಕರೆಯಿಸಿದ್ದು .. ?

"ತುಂಬಾ ರಹಸ್ಯದ ವಿಚಾರ ಸೀನ ..."

"ಹೇಳಿ ಅಯ್ಯ ...ಅವೆಂತಹ ರಹಸ್ಯ ನನ್ನಲ್ಲಿ .. ?"

"ಹಾಗಲ್ಲ....ಆಗ ಹೇಳಿದೆ ನೋಡು-ಬ್ರಾಹ್ಮಣನನ್ನು ಹೊಂಡ ತೆಗೆದು ಹುಗಿಯುತ್ತಿದ್ದೆ ಎಂದು. ಅಷ್ಟೊಂದು ದೊಡ್ಡ ಕೆಲಸ ಸದ್ಯ ಬೇಡ."

"ಮತ್ತೆ ಆ ಮಾತನ್ನೆ ಹೇಳುತ್ತೀರಲ್ಲ. ಆಗ ಹೇಳಿದ್ದು ಹಾಗೆ ಮಾಡು ತ್ತೇನೆ ಎಂದಲ್ಲ. ಸಿಟ್ಟಿನ ಭರದಲ್ಲಿ ಹಾಗೆ ಮಾತು ಬಂತು."

"ಅದೇನೆ ಇರಲಿ ಸೀನ....ಈಗ ಮಾತ್ರ ನೀನು ಒಂದು ಕೆಲಸ ಮಾಡ ಬೇಕು...."

"ಏನು ಬುದ್ದಿ....?"

"ಖಂಡಿತಾ ಮಾಡುತ್ತೇನೆ ಎಂದು ಭರವಸೆ ಕೊಡು...."

"ಮೊದಲು ಹೇಳಿ, ಆಮೇಲೆ ಭರವಸೆಯ ಮಾತು."

"ಆಮೇಲೆ ಎನ್ನುವ ಪ್ರಶ್ನೆಯೇ ಇಲ್ಲ. ಮೊದಲು ನನ್ನ ಕೈ ಮೇಲೆ ಕೈ ಹಾಕಿ ವಚನಕೊಡು....ವಿಚಾರ ತಿಳಿಸುತ್ತೇನೆ."

"ವಿಚಾರ ತಿಳಿಸದೆ ಹೇಗೆ ಸ್ವಾಮಿ ವಚನಕೊಡುವುದು?"

"ನನ್ನ ಮೇಲೆ ಅಷ್ಟು ವಿಶ್ವಾಸವಿಲ್ಲವೆ?"

"ಭರವಸೆ ಕೊಟ್ಟಮೇಲೆ ಆಡಿದ ಮಾತಿಗೆ ತಪ್ಪಬಾರದು. ಆ ಕಾರ್ಯ ನನ್ನಿಂದ ಆಗುತ್ತದೆಯೆ?"

"ಆ ಧೈರ್ಯ ನನಗಿದ್ದೇ ಹೇಳಿದೆ."

"ಅದು ಒಳ್ಳೆಯ ಕಾರ್ಯವಾಗಿದ್ದರೆ ಹೇಳಿ...."

"ಒಳ್ಳೆಯದು ಎಂದರೆ ನನಗೆ ಹಿತವಾದ ಕೆಲಸ ಅದು."

"ನಿಮಗೆ ಹಿತವಾದರೂ ನನಗೆ ಹಿತವಾಗಬೇಕಲ್ಲ...."

"ಸ್ನೇಹ ದೊಡ್ಡದು. ನನ್ನ ನಿನ್ನ ಗೆಳೆತನದಲ್ಲಿ ನನ್ನ ಹಿತವೂ ನಿನಗೆ ಮುಖ್ಯ."

"ಆದರೆ ಅನ್ಯಾಯವನ್ನು ಮಾತ್ರ ನಾನು ಮಾಡುವುದಿಲ್ಲ."

"ಅಂದರೆ... ಏನದು ನಿನ್ನ ಮಾತು ?"

"ನನ್ನಿಂದ ಯಾವ ಸಹಾಯ ತಮಗೆ ಬೇಕಿದ್ದರೂ... ಅದು ನ್ಯಾಯವಾಗಿದ್ದರೆ ಸರಿ...."

"ನಿನಗೆ ಯಾವುದು ನ್ಯಾಯ....ಯಾವುದು ಅನ್ಯಾಯ ಎಂದು ನನಗೆ ಹೇಗೆ ತಿಳಿಯಬೇಕು ?"

"ತಮಗೆ ಏನಾಗಬೇಕೆಂದು ಹೇಳಿ... ಮುಂದಿನ ಮಾತನ್ನು ನಾನೇ ಹೇಳುತ್ತೇನೆ"

"ಹಾಗಲ್ಲ ಸೀನ... ಈಗತಾನೆ ಆ ಬ್ರಾಹ್ಮಣನನ್ನು ಹೊಂಡ ತೆಗೆದು ಹುಗಿಯುತ್ತಿದ್ದೆ ಎಂದು ಕೊಚ್ಚಿಕೊಂಡವನು ನೀನು. ಅಷ್ಟು ಬೇಗ ಅಭಿಪ್ರಾಯ ಬದಲಾಯಿಸಿದ್ದೇಕೆ ?"

"ಏಕೋ ಮಾತಿಗೆ ಸಿಟ್ಟು ಬಂದು ಹೇಳಿದೆ. ತಮಗೆ ಈ ಗತಿ ಬರಬಾರದಿತ್ತು ಎಂದು ಮನ ನೊಂದು ಹೇಳಿದ ಮಾತದು. ಎಷ್ಟಾದರೂ ನಿಮ್ಮ ಹಿಡಿ ಅನ್ನವನ್ನಾದರೂ ತಿಂದಿದ್ದೇನೆ. ಋಣಸಂದಾಯ ಮಾಡಬೇಕಾದ ಕರ್ತವ್ಯ ಇನ್ನೂ ಬಾಕಿಯಿದೆ. ಆದರೆ ಅದನ್ನು ತೀರಿಸುವ ಮಾರ್ಗ ಹಾಗಲ್ಲ!...."

"ಮತ್ತೆ ಹೇಗೆ ತೀರಿಸುತ್ತಿ ...?"

"ಸಮಯ ಬರಲಿ... ನಿಮ್ಮ ಸೇವೆ ಮಾಡುವುದಕ್ಕೆ ನಾನು ತಯಾರು...."

"ಅದನ್ನೆಲ್ಲಾ ನಿನ್ನಲ್ಲಿ ಹೇಳುವುದಿಲ್ಲ. ಆದರೆ ಒಂದು ಕಾರ್ಯ ಮಾತ್ರ. ಅದೂ ಅಷ್ಟೇನೂ ಕಷ್ಟವಲ್ಲ ...ಸೋಮಯಾಜರ ಮನೆಗೆ ಬೆಂಕಿಹಾಕುವ ಕಾರ್ಯ ನಿನಗೆ ಒಪ್ಪಿಸಿದ್ದೇನೆ. ಅವರ ಮನೆ ಸುಟ್ಟುಹೋಗಬೇಕು ..."

"ಏನು ಹೆಗಡೆಯವರೆ....ಅವರ ಮನೆಗೆ ನಾನು ಬೆಂಕಿ ಹಾಕಬೇಕೆ ?"

"ಹೌದು... ಬೆಂಕಿ ಹಾಕುತ್ತೇನೆ ಎಂದು ಎದೆ ತಟ್ಟಿಕೊಂಡಿದ್ದೆ"

"ಅಂತಹ ಕೆಲಸಕ್ಕೆ ಏಕೆ ತಟ್ಟಿಕೊಳ್ಳಬೇಕು ?"

"ಸಿಟ್ಟು ಬಂದು ಏನೋ ಅಂದುಬಿಟ್ಟೆ...."

"ತಾವು ಅಂದರೆ ...ಆ ಕಾರ್ಯ ನನ್ನಿಂದ ಆಗಬೇಕೇನು ?"

"ಇನ್ನು ಯಾರಿದ್ದಾರೆ ಸೀನಾ .. ?"

"ನಿಮ್ಮ ಕೈಯಿಂದಲೇ ಆಗಲಿ ಸ್ವಾಮಿ ಈ ಸಾಹಸ."

"ನಾನು ಹೇಗಪ್ಪ ಮನೆಯಿಂದ ಹೊರಹೋಗಲಿ. ನೋಡು ನನ್ನ ಅವಸ್ಥೆಯನ್ನು...."

"ಹಾಗಿದ್ದರೆ ಬಿಟ್ಟುಬಿಡಿ ...ಹೇಗೂ ತಾವು ಹಾಸಿಗೆ ಹಿಡಿದಿದ್ದೀರಿ.... ದೇವರ ಹೆಸರು ಹೇಳುತ್ತಾ ಕುಳಿತುಬಿಡಿ ಬುದ್ಧಿ. ಇನ್ನು ತಮಗೆ ಏನಾಗ ಬೇಕಾಗಿದೆ? ಆಗಬೇಕಾದ್ದನ್ನೆಲ್ಲಾ ತಾವು ಮುಗಿಸಿದ್ದೀರಿ ..."

"ಏನಪ್ಪ....ನನಗೇ ಹೇಳುವುದಕ್ಕೆ ಆರಂಭಿಸಿದೆಯಾ?"

"ಹಾಗಲ್ಲ ಸ್ವಾಮಿ ...ದ್ವೇಷ ಕಟ್ಟಿಕೊಂಡವರು ನೀವು. ಹಾಗಿರುವಾಗ ಬ್ರಾಹ್ಮಣರ ಮನೆಗೆ ಬೆಂಕಿ ಹಚ್ಚುವ ಪಾಪ ಕಾರ್ಯ ನನಗೇಕೆ? ನನಗೇನು ಮಾಡಿದ್ದಾರೆ ಸೋಮಯಾಜರು?"

"ಏನಯ್ಯ....ವಿಶ್ವಾಸಕ್ಕಾದರೂ ಬೆಲೆ ಕೊಡಬೇಡವೆ?"

"ಯಾರ ವಿಶ್ವಾಸಕ್ಕೆ .. ?"

"ನನ್ನ ಮತ್ತು ನಿನ್ನ ವಿಶ್ವಾಸ ಎಷ್ಟು ದೊಡ್ಡದು ಎಂಬುದು ನಿನಗೆ ಗೊತ್ತು. ಹಾಗಿರುವಾಗ ನನಗಾಗಿ ಈ ಕೆಲಸ ಮಾಡುವುದು ತಪ್ಪೆ?"

"ಅಯ್ಯ ...ನಿಮಗೆ ದೇವರು ಇನ್ನೂ ಒಳ್ಳೆಯ ಮನಸ್ಸು ಕೊಡಲಿಲ್ಲವಲ್ಲ ....ಅದೇ ನನಗೆ ಬೇಸರ. ಇನ್ನಾದರೂ ಕೆಟ್ಟದ್ದನ್ನು ಯೋಚಿಸಬೇಡಿ. ಬ್ರಾಹ್ಮಣರ ಮನೆಗೆ ಬೆಂಕಿ ಹಚ್ಚಿದರೆ ನಿಮ್ಮ ಹುಲ್ಲು ಮನೆ ಉಳಿಯುತ್ತದೆಯೆ? ಸೋಮಯಾಜರು ದೇವರಂತಹ ಮನುಷ್ಯರು. ಆ ಗಿರಿಜಮ್ಮ ಬಂಗಾರದಂತಹ ಹೆಂಗಸು. ಸುಮ್ಮನೆ ನಿಮಗೆ ಭ್ರಮೆ. ನಾನು ಹಿಂದೆಯೇ ಹೇಳಿದ್ದೆ....ಈ ಸಹವಾಸ ಬೇಡ ಎಂದು. ಹೋಗಲಿ....ಏನೋ ಆದದ್ದು ಆಗಿಹೋಯ್ತು. ಇನ್ನು ಆ ವಿಚಾರದಲ್ಲಿ ಮತ್ಸರ ಇಟ್ಟುಕೊಳ್ಳಬೇಡಿ. ಮೊದಲೇ ಊರಿನವರಿಗೆ ನಿಮ್ಮನ್ನು ಕಂಡರೆ ಆಗುವುದಿಲ್ಲ. ಈಗಂತೂ ನಿಮ್ಮ ಈ ದುರವಸ್ಥೆಯನ್ನು ಕಂಡು ಎಷ್ಟು ಜನ ಹಾಲು ಕುಡಿದಿದ್ದಾರೋ...." ಎಂದ ಸೀನ.

"ಎಲಾ ಮಗನೆ....ಯಾರಯ್ಯ ನಿನಗೆ ಉಪದೇಶ ಮಾಡಿದ್ದು?"

"ತಾವೆ ಬುದ್ಧಿ...."

"ಯಾವಾಗ ನಿನಗೆ ಉಪದೇಶ ಮಾಡಿದ್ದೆ... ?"

"ತಮ್ಮ ಜೊತೆಯಲ್ಲಿ ಇದ್ದವನು ನಾನಲ್ಲವೆ? ಬೇಡವೆಂದರೂ ಉಪ ದೇಶದ ಬಗ್ಗೆ ಮಾಹಿತಿ ಬರುತ್ತದೆ."

"ಹೋ! ಹಾಗೇನು ? ಏನು ಮಾಡಲಿ ಹೇಳು. ಎದ್ದು ನಿಲ್ಲುವುದಕ್ಕೆ ನನ್ನ ಕಾಲಿಗೆ ಶಕ್ತಿಯಿಲ್ಲ. ಇಲ್ಲವಾಗಿದ್ದರೆ ನಿನ್ನ ಕೈ ಕಾಲು ಮುರಿಯುತ್ತಿದ್ದೆ. ಹೋಗು. ಇಷ್ಟು ದಿನ ಹೆಂಡ ಕೋಳಿಪಲ್ಯ ಎಂದು ನನ್ನ ಹಿಂದೆ ಬಿದ್ದೆ. ಈಗ ನನಗೇ ಹಿತಮಾತು ಹೇಳುತ್ತಿ. ಆ ಕಾರ್ಯ ಮಾಡುವುದಕ್ಕೆ ನಿನ್ನಿಂದ ಆಗುವುದಿಲ್ಲ ತಾನೆ...." ಹೆಗಡೆ ಮತ್ತೆ ಗಟ್ಟಿಯಾಗಿ ಕೇಳಿದ.

"ಅದನ್ನು ಮಾತ್ರ ನನ್ನಲ್ಲಿ ಕೇಳಬೇಡಿ ."

"ಸರಿ ಹಾಳಾಗಿ ಹೋಗು. ಮತ್ತೆ ಮನೆ ಕಡೆ ಬಂದು ನಿನ್ನ ಮುಖ ತೋರಿಸಬೇಡ... ಆಗಲಿ... ನನಗೆ ಒಂದು ಕಾಲಿಲ್ಲ ಎಂದು ನಿನ್ನ ಬಾಯಿಗೂ ಶಕ್ತಿ ಬಂತು... ನಿನ್ನ ಮನೆ ಹಾಳಾಗ...." ಎನ್ನುತ್ತಾ ಹೆಗಡೆ ಪಕ್ಕಕ್ಕೆ ಹೊರಳಿ ಮುಸುಕೆಳೆದುಕೊಂಡ.

"ಬರುತ್ತೇನೆ ಬುದ್ಧಿ...." ಎನ್ನುತ್ತಾ ಸೀನ ಪಡಸಾಲೆಯಿಂದ ಹೊರ ಬಂದ.

"ಸೀನಾ..., ಇಲ್ಲಿ ಬಾ..." ಎಂದು ಹೆಗಡೆ ಮತ್ತೆ ಕೂಗಿದ. ಜಾವಡಿಯ ಮೆಟ್ಟಿಲು ಇಳಿದು ಸೀನ ಆಗಲೇ ಅಂಗಳಕ್ಕೆ ಬಂದಿದ್ದ. ಕೇಳಿಸಿಕೊಂಡಿದ್ದರೂ ಮರಳಿ ಬರುವ ಮನಸ್ಸು ಅವನಿಗಿರಲಿಲ್ಲ. ಆದರೆ ಹೆಗಡೆ ಮತ್ತೆ "ಸೀನಾ... ಎರಡು ನಿಮಿಷ ಇಲ್ಲಿಗೆ ಬಂದು ಹೋಗು" ಎಂದು ಗಟ್ಟಿಯಾಗಿ ಕೂಗಿದಾಗ ಸೀನನಿಗೆ ಏನು ಕಂಡಿತೋ.. ಪಡಸಾಲೆಯ ಹೊಸಿಲ ಬಳಿ ನಿಂತು "ಏನು ಹೆಗಡೆಯವರೆ. ಏನಾಗಬೇಕಿತ್ತು" ಎಂದ. ಹೆಗಡೆಗೆ ಅವನ ವರ್ತನೆಯಿಂದ ತುಂಬಾ ದುಃಖವಾಗಿತ್ತು. ತನ್ನ ದುರವಸ್ಥೆಯನ್ನು ಕಂಡು ಸೀನ ಕೂಡಾ ಜಬರದಸ್ತಿನ ಮಾತು ಹೇಳುವುದನ್ನು ಹೆಗಡೆ ನಿರೀಕ್ಷಿಸಿರಲಿಲ್ಲ. ಅವನ ಕಣ್ಣು ಮುಂದೆಯೇ ಬೆಳೆದ ನಪಿಳ್ಳೆಯದು. ಎಷ್ಟೋ ದಿನ ಬೀಡಿಗೆ ಕಾಸಿಲ್ಲದೆ ಕಾಸು ಬಕ್ಷೀಸಿಗೆ ಮನೆ ಮುಂದೆ ಬಂದು ತಲೆ ತುರಿಸಿಕೊಳ್ಳುತ್ತಾ ನಿಲ್ಲುತ್ತಿದ್ದ ದರಿದ್ರ ಹುಡುಗ ಅವನಾಗಿದ್ದ. ಹೆಂಡ, ಕೋಳಿಪಲ್ಯದ ಆಸೆಗೆ ದಿನವೂ ಹೆಗಡೆಯ ಹಿಂದೆಯೇ ಇದ್ದು ಪುಕ್ಕಟೆ ತಿಂದು ಕುಡಿದು ಸುಖ ಪಡೆದ ಜೀವ ಅದು. ಅದೇ ಹೆಗಡೆಗೆ ಸಿಟ್ಟು. ಸೀನನ ಮುಖವನ್ನೇ ದುರುಗುಟ್ಟಿ ನೋಡುತ್ತಾ,

"ಏನಯ್ಯ ಅಷ್ಟು ಅವಸರ ?" ಎಂದ ಏರಿದ ಧ್ವನಿಯಲ್ಲಿ.

"ತೆಂಗಿನ ತೋಟದ ಕೆಲಸ ಗುತ್ತಿಗೆಗೆ ತೆಗೆದುಕೊಂಡಿದ್ದೇನೆ...."

"ನನಗಿಂತ ಆ ಕೆಲಸ ನಿನಗೆ ಹೆಚ್ಚೆ?"

"ಹೊಟ್ಟೆಯ ಪಾಡು ಸ್ವಾಮಿ....ಕೇತರೆ ಬಟ್ಟಲಿಗೆ ಅನ್ನ ಬರು ತ್ತದೆಯೆ....?"

"ಹೋ....ಯಾವಾಗಿನಿಂದ ಈ ಒಳ್ಳೆಯ ಬುದ್ಧಿ. ಹಿಂದೆ ವಾರ ಎರಡು ವಾರ ನನ್ನ ಮನೆಯ ಅಂಗಳದಲ್ಲೇ ಬಿದ್ದಿರುತ್ತಿದ್ದಿ. ಹೆಂಡ, ಕೋಳಿಪಲ್ಯ ಎಂದು ಮನೆ ಕಡೆ ಮುಖ ಕೂಡಾ ಹಾಕುವುದೆಂದರೆ ಆಗ ನಿನಗೆ ಆಗುತ್ತಿರ ಲಿಲ್ಲ. ಈಗ ಹೊಟ್ಟೆಯ ಪಾಡಿನ ನೆನಪಾಗುತ್ತದೆಯೆ? ನಿನಗೇನಾಗಿದೆ ಸೀನಾ ... ಇದ್ದಕ್ಕಿದ್ದಂತೆ ಹೀಗಾದೆಯಲ್ಲ...."

"ಏನಾಗಿದ್ದೇನೆ ಸ್ವಾಮಿ...."

"ನೀನು ಮೊದಲಿನ ಹಾಗಿಲ್ಲವಲ್ಲ...."

"ಏನೂ ಆಗಿಲ್ಲ ಹೆಗಡೆಯವರೆ, ಇದ್ದ ಹಾಗೆ ಇದ್ದೇನೆ."

"ನಾನು ನಂಬುವುದಿಲ್ಲ. ಮೊನ್ನೆ ಮೊನ್ನೆಯವರೆಗೆ ನನ್ನೊಂದಿಗೆ ನೀನು ಮಾತನಾಡುತ್ತಿದ್ದ ರೀತಿಯೇ ಬೇರೆಯಾಗಿತ್ತು. ಇಂದು ನಿನ್ನ ಮಾತಿನ ಗತ್ತೇ ಬದಲಾಗಿದೆ. ನನಗೂ ಅರ್ಥವಾಗುತ್ತದೆ. ಹೆಗಡೆಯ ಕಾಲು ಮುರಿದಿದೆ ಎಂದು ನಿನಗೂ ಸೊಕ್ಕು ಬಂತೆ? ನೀನು ಏನೇ ಅಂದರೂ ನಾನು ಸುಮ್ಮನಿರು ತ್ತೇನೆ ಎಂದು ನಿನ್ನ ಅಭಿಪ್ರಾಯವೆ? ಮಗನೆ ನನ್ನ ಮುಂದೆ ನಿಲ್ಲುವ ಯೋಗ್ಯತೆ ನಿನಗೆಲ್ಲಿದೆ ಹೇಳು? ಬೀಡಿಗೆ ಕಾಸಿಲ್ಲದಾಗ ಕಾಸು ಕೊಟ್ಟವನು ನಾನು. ಹುಳಿ ಹೆಂಡ ಕುಡಿಸಿದವನು ನಾನು. ತುಪ್ಪದ ಅನ್ನ ತಿಂದು ಈಗ ನನ್ನನ್ನೇ ಅವಮಾನಿಸುತ್ತೀಯಾ? ಹೇಳಿದ್ದೇನೆ ಸೀನಾ ...ದಿನಗಳು ಹೀಗೆಯೇ ಇರುವು ದಿಲ್ಲ. ಒಂದಲ್ಲ ಒಂದು ದಿನ ನಿನ್ನ ಕೆನ್ನೆಗೆ ತಪರಾಕಿ ಕೊಡದಿದ್ದರೆ ಆಮೇಲೆ ಹೇಳು. ಈಗ ನಾನು ಹಾಸಿಗೆ ಹಿಡಿದಿರಬಹುದು. ನಿನಗೂ ಸ್ವಲ್ಪ ದಿಮಾಕು ತಲೆಗೆ ಹತ್ತಿದೆ...."

"ಅಯ್ಯ ...ಮತ್ತೆ ಮತ್ತೆ ಏಕೆ ಆ ವಿಚಾರ ಹೇಳುತ್ತೀರಿ. ನಾನೇನೂ ನಿಮ್ಮನ್ನು ಅವಮಾನಿಸಿಲ್ಲ. ನಿಮ್ಮ ಗೌರವಕ್ಕೆ ಕುಂದು ಬರುವಂತಹ ಯಾವ ಮಾತನ್ನೂ ನಾನು ಹೇಳಿಲ್ಲ. ಒಳ್ಳೆಯ ಕೆಲಸ ಇದ್ದರೆ ಹೇಳಿ....ಸ್ವಾಮಿಕಾರ್ಯ

ಎಂದು ಮಾಡುತ್ತೇನೆ. ಸುಮ್ಮನೆ ಅವರನ್ನು ಕೊಲ್ಲು, ಆ ಮನೆಗೆ ಬೆಂಕಿಹಾಕು ಎಂದರೆ ನನ್ನಿಂದ ಆಗುವುದಿಲ್ಲ. ಆ ಬಗ್ಗೆ ಖಂಡಿತಾ ನನ್ನ ವಿರೋಧವಿದೆ. ಹಿಂದೆಲ್ಲಾ ನಾನು ನಿಮ್ಮಿಂದ ತಿಂದದ್ದು ನಿಜ. ಎಷ್ಟೋ ಬಾರಿ ನೀವು ದುಡ್ಡು ಕಾಸು ಕೊಟ್ಟಿದ್ದೀರಿ. ಆದರೆ ನಾನು ಅಷ್ಟೇ ಬಿಟ್ಟಿ ಚಾಕರಿ ಮಾಡಿದ್ದೇನೆ. ನಿಮ್ಮ ಬೆನ್ನು, ಕಾಲು ಒತ್ತಿ ಒತ್ತಿ ಋಣ ಸಂದಾಯ ಮಾಡಿದ್ದೇನೆ. ಮುಂದೆ ಕೂಡಾ ಏನಾದರೂ ಆಗಬೇಕಿದ್ದರೆ ಹೇಳಿ.. ಅದು ಒಳ್ಳೆಯ ಕೆಲಸವಾಗಿದ್ದರೆ ಸರಿ. ಮಾತ್ರ ಈ ಹಾಳು ಯೋಚನೆಯ ಬಿಟ್ಟುಬಿಡಿ ಅಯ್ಯಾ. ಇನ್ನು ಆ ಬಗ್ಗೆ ತಾವು ನನ್ನಲ್ಲಿ ಏನನ್ನೂ ಹೇಳಬೇಡಿ. ಬರುತ್ತೇನೆ...ನಾಳೆ ಆದರೆ ತಮ್ಮನ್ನು ಕಾಣುತ್ತೇನೆ. ಹುಳಿ ಹೆಂಡ ಬೇಕಿದ್ದರೆ ಹೇಳಿ...ತಂದುಕೊಡುತ್ತೇನೆ" ಎನ್ನುತ್ತಾ ಸೀನ ಮತ್ತೆ ಹೆಗಡೆಯ ಮುಖ ಕೂಡಾ ನೋಡದೆ ನಡೆದು ಬಿಟ್ಟ.

"ಎಲಾ ಮಗನೆ...ಎಷ್ಟು ಚೆನ್ನಾಗಿ ಮಾತು ಕಲಿತೆಯಲ್ಲ. ನನಗೆ ಹುಳಿ ಹೆಂಡ ತರುವಷ್ಟು ಯೋಗ್ಯತೆ ನಿನಗೆ ಬಂತೆ? ಆಗಲಿ, ದೇವರ ದಯವು ನನಗಿದ್ದರೆ ನಿನ್ನನ್ನು ಹೊಳೆಯ ಬಂಡೆಯ ಮೇಲೆ ನಾನು ಎಸೆಯದಿದ್ದರೆ ನನ್ನ ಹುರಿಮೀಸೆಯನ್ನು ಕೀಳಿಸುತ್ತೇನೆ" ಎಂದು ಹೆಗಡೆ ತನ್ನಲ್ಲೇ ಅಂದುಕೊಂಡ. ಬಾತು ಹಸಿದು ಕಟ್ಟಿದ್ದ ಪಾದವನ್ನು ದಿಂಬಿನ ಮೇಲಿಟ್ಟು ಮತ್ತೆ ಹಾಸಿಗೆಯಲ್ಲಿ ಹೊರಳಿದ. ಆ ದಿನವೆಲ್ಲಾ ಹೆಗಡೆಗೆ ನೆಮ್ಮದಿಯಿರಲಿಲ್ಲ. ಸೀನ ಹೇಳಿದ ಮಾತುಗಳನ್ನೆ ನೆನಸಿಕೊಂಡು ನಿದ್ದೆಯಿಲ್ಲದೆ ಒದ್ದಾಡಿದ.

* * * *

"ರುಕ್ಮಿಣಿ...ಒಂದು ಲೋಟ ಹಾಲು ಕೊಡು...." ಎಂದು ಸೋಮಯಾಜರು ತೀರ್ಥ ಪ್ರಸಾದದ ಹರಿವಾಣವನ್ನು ಕೈಯಲ್ಲಿ ಹಿಡಿದುಕೊಂಡೇ ಕೇಳಿದರು.

"ಏಕೆ....ಅಷ್ಟು ಹೊಟ್ಟೆ ಸಂಕಟವೆ?" ಎಂದು ಕೇಳಿದಳು ರುಕ್ಮಿಣಿ.

"ಛಿ.. ಹೊಟ್ಟೆಯಲ್ಲಿ ಸಂಕಟವಾಗುವುದಕ್ಕೆ ನನಗೇನಾಗಿದೆ?, ಸಂಕಟವೆಲ್ಲಾ ಪರಿಹಾರವಾಯ್ತು ರುಕ್ಮಿಣಿ...ಅದಕ್ಕೆ ಕೇಳಿದೆ"

"ಹಾಗೆಂದರೆ...ಸರಿಯಾಗಿ ಅರ್ಥವಾಗುವಂತೆ ಹೇಳಿ"

"ಹೆಗಡೆಯ ಒಂದು ಕಾಲೇ ಮುರಿದುಹೋಗಿದೆ ಎಂದು ಸುದ್ದಿ ಬಂತು"

"ಹೌದಾ...ಯಾರು ಹೇಳಿದರು....?"

"ಸೀನನೆ ಗುಡಿಗೆ ಬಂದು ಹೇಳಿದ ..."

"ಅದು ಸುಳ್ಳು .. ಅವನೇ ಏಕೆ ಬಂದು ಹೇಳುತ್ತಾನೆ"

"ಮೊದಲು ನನಗೂ ಆಶ್ಚರ್ಯವಾಯ್ತು. ಕೊನೆಗೆ ಇರುವ ವಿಚಾರ ತಿಳಿಸಿದ ಮೇಲೆ ನಂಬಿಕೆ ಬಂತು. ಹೆಗಡೆಯ ಮೇಲೆ ಅವನಿಗೂ ಸಿಟ್ಟು ಬಂದಿದೆ."

"ಯಾರಿಗೆ....?"

"ಸೀನನಿಗೆ...."

"ಅಬ್ಬಾ ! ಯಾವುದನ್ನಾದರೂ ನಂಬುತ್ತೇನೆ ...ಇದನ್ನು ನಂಬುವುದಿಲ್ಲ"

"ನಾನು ನಂಬಲಿಲ್ಲ ರುಕ್ಮಿಣಿ. ಆದರೆ ಸೀನನ ಹೃದಯ ತುಂಬಾ ಒಳ್ಳೆಯದು. ಹೆಗಡೆಯ ಯಾವುದೋ ಒಂದು ಮಾತಿಗೆ ಜಗಳವಾಡಿದನಂತೆ."

"ಸುಳ್ಳು....ಅವರಿಬ್ಬರದೂ ಒಂದೇ ಜೀವ. ಆ ಕೆಟ್ಟವನ ಮಾತನ್ನು ನೀವು ನಂಬಬೇಡಿ."

"ಛೆ! ಅವನ ಬಗ್ಗೆ ನಾನು ತಪ್ಪಾಗಿ ತಿಳಿದುಕೊಂಡಿದ್ದೆ ತುಂಬಾ ಸರಳಸ್ವಭಾವ ಅವನದ್ದು. ಬೆಳಗ್ಗೆ ಹೆಗಡೆ ಅವನನ್ನು ಮನೆಗೆ ಕರೆಯಿಸಿದ್ದನಂತೆ."

"ಏಕೆ...."

"ಸೋಮಯಾಜರ ಮನೆಗೆ ಬೆಂಕಿ ಹಾಕು ಎನ್ನುವುದಕ್ಕೆ...."

"ಯಾರಲ್ಲಿ...."

"ಸೀನನಿಂದ ಆ ಕೆಲಸ ಮಾಡಿಸುವ ಪ್ರಯತ್ನ ಹೆಗಡೆಯದು."

"ಅಯ್ಯೋ ಪಾಪಿ...ಕಾಲುಮುರಿದುಕೊಂಡರೂ ಪಾಪ ಮಾಡುವುದನ್ನು ಬಿಟ್ಟಿಲ್ಲ ನೋಡಿ. ಸೀನನ ಹತ್ತಿರ ಬೆಂಕಿ ಹಾಕುವಂತೆ ಹೆಗಡೆ ಹೇಳಿದನೆ?"

"ಅದಕ್ಕೆ ಸೀನನಿಗೆ ಸಿಟ್ಟು ಬಂತು...."

"ಚಿಂತೆಯಿಲ್ಲ...ನಿಜವಾಗಿಯೂ ಸೀನ ಅಷ್ಟು ಒಳ್ಳೆಯವನೆ? ಯಾವಾಗ ನೋಡಿದರೂ ಹೆಗಡೆಯು ಜೊತೆಯಲ್ಲೆ ಇರುತ್ತಾನಲ್ಲ.."

"ಏನೇ ಇದ್ದರೂ ನಮ್ಮ ಬಗ್ಗೆ ಅವನಿಗೆ ತುಂಬಾ ಗೌರವ. ಸಂಜೆ

ಗುಡಿಗೆ ಬಂದು ಗಂಟೆ ಕಾಲ ಎಲ್ಲಾ ವಿಚಾರ ತಿಳಿಸಿದ. ಹೆಗಡೆಗೆ ಮುಂದೆ ಕಾಲು ಬರುವುದೇ ಸಂದೇಹ ಎನ್ನುತ್ತಾನೆ. ಏನೂ ಭಯಬೇಡ.. ಹೋಗಿ ಗಿರಿಜಮ್ಮನನ್ನು ಕರೆದುಕೊಂಡು ಬನ್ನಿ ಎಂದು ಅವನೇ ಧೈರ್ಯ ಹೇಳಿದ."

"ಮತ್ತೆ ಶುಂಠಿಕೊಪ್ಪಕ್ಕೆ ಹೋಗುತ್ತೀರಾ....?

"ಹೌದು....ಆದರೆ ಕರೆದುಕೊಂಡು ಬರುವುದಕ್ಕಲ್ಲ"

"ಹೋಗುವುದಾದರೆ ಕರೆದುಕೊಂಡೇ ಬನ್ನಿ...."

"ಅದು ಹೆರಿಗೆಯ ಅನಂತರದ ಮಾತು...."

"ಹಾಗಿದ್ದರೆ ಮತ್ತೇಕೆ ಹೋಗುವುದು?"

"ಈ ಸಂತೋಷದ ಸುದ್ದಿಯನ್ನು ತಿಳಿಸುವುದಕ್ಕೆ...."

"ಅಷ್ಟೇನು ಅವಸರ...ಹಿಂದಿನಿಂದ ಹೋದರಾಯ್ತು."

"ಇಲ್ಲ ರುಕ್ಮಿಣಿ....ಹೆಗಡೆಯಿಂದ ನನಗೇನು ತೊಂದರೆ ಆಗಿದೆಯೋ ಎಂದು ಅವಳಿಗೆ ಯೋಚನೆ. ಗಾಡಿ ಹತ್ತುವಾಗ ಹತ್ತು ಬಾರಿ ಹೇಳಿದ್ದಳು.... ಆಗಾಗ ಸುದ್ದಿ ಕಳುಹಿಸಿ ಎಂದು. ಇವನ್ನು ಬೇರೆಯವರ ಹತ್ತಿರ ಹೇಳಿ ಕಳುಹಿಸುವುದಕ್ಕಿಂತ ನಾನೇ ಹೋದರೆ ಆಕೆಗೆ ಇನ್ನೂ ಸಂತೃಪ್ತಿ. ಬೇಕಿದ್ದರೆ ನೀನೂ ನನ್ನ ಜೊತೆಯಲ್ಲಿ ಬಾ...."

"ಸರಿ ಹೋಯ್ತು...ನೀವು ಬೇಕಿದ್ದರೆ ಹೋಗಿ ಬನ್ನಿ. ಈ ಪಿಳ್ಳೆಗಳನ್ನು ಕಟ್ಟಿಕೊಂಡು ನಾನು ಎಲ್ಲಿಗೂ ಹೊರಡುವುದಿಲ್ಲ."

"ಸುಮ್ಮನೆ ಮಾತಿಗೆ ಹೇಳಿದೆ....ನಾನು ಮಾತ್ರ ನಾಳೆ ಒಂದು ದಿನದ ಮಟ್ಟಿಗೆ ಶುಂಠಿಕೊಪ್ಪಕ್ಕೆ ಹೋಗಿ ಬರುತ್ತೇನೆ..."

"ಹಾಗೆ ಮಾಡಿ. ಮಾತಿನ ಬರದಲ್ಲಿ ಹಾಲು ಕೊಡಲೇ ಇಲ್ಲ" ಎಂದು ರುಕ್ಮಿಣಿ ದೊಡ್ಡ ಲೋಟದಲ್ಲಿ ಹಾಲು ತುಂಬಿಸಿ ಗಂಡನಿಗೆ ಕೊಟ್ಟಳು. ಇನ್ನೂ ನಾಲ್ಕು ಲೋಟ ಹಾಲು ಇದ್ದಿದ್ದರೆ ಕುಡಿಯುತ್ತಿದ್ದರೋ ಏನೋ. ಅಷ್ಟು ಸಂತೋಷವಾಗಿತ್ತು ಸೋಮಯಾಜಿಗೆ.

೨೨

ಹೊತ್ತು ಕಂತಿ ನಾಲ್ಕುಗಳಿಗೆ ಕಳೆದಿತ್ತು....ಸೋಮಯಾಜರು ಪೂಜೆ ಮುಗಿಸಿ ಐತಾಳರನ್ನು ಜೊತೆಯಲ್ಲಿ ಕರೆದುಕೊಂಡು ಮನೆಗೆ ಹೊರಟಾಗ. ಅಮವಾಸ್ಯೆಯ ಹಿಂದಿನ ದಿನವಾದ್ದರಿಂದ ಕಣ್ಣಿಗೆ ಕಣ್ಣು ತಾಗಿಸಿದರೂ ಏನೂ ಕಾಣದಷ್ಟು ಕತ್ತಲೆ ಆವರಿಸಿತ್ತು. ಗುಡಿಯಿಂದ ಹೊರಟಾಗಲೇ ಹೊತ್ತಾಗಿತ್ತು. ಭಕ್ತರಿಗೆ ತೀರ್ಥಪ್ರಸಾದ ಹಂಚಿ...ಗರ್ಭಗುಡಿಯ ಬಾಗಿಲು ಹಾಕಿ ಸೋಮಯಾಜರು ಪದ್ಮಾವತಿಯ ಸಾವಿನ ಬಗ್ಗೆ ವಿವರಣೆ ಕೇಳುತ್ತಾ ಮೆಲ್ಲನೆ ಹಜ್ಜೆ ಹಾಕಿದ್ದರು. ತೋಟದ ತಿರುವಿಗೆ ಬಂದಾಗ ಐತಾಳರಲ್ಲಿ 'ನೀವು ಒಮ್ಮೆ ಗಿರಿಜಳನ್ನು ಕಂಡುಬರುವುದು ಒಳ್ಳೆಯದು. ನಾನೂ ನಿಮ್ಮ ಜೊತೆ ಬರಬಹುದಿತ್ತು. ಆದರೆ ಮತ್ತೆ ಮಗಳನ್ನು ನೆನಪಿಸಿಕೊಂಡು ಗೋಳಾಡುವುದನ್ನು ನೋಡುವುದು ನನಗೆ ವೇದನೆಯಾಗುತ್ತದೆ. ನೀವೇ ನಾಲ್ಕು ಸಮಾಧಾನದ ಮಾತು ಹೇಳಿ. ಆಕೆ ಮುಂದೆ ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಕೊರಗುವುದನ್ನು ನೋಡುವಷ್ಟು ತಾಳ್ಮೆ ನನಗಿಲ್ಲ. ನೀವು ನಾಳೆ ಹೊರಡುವ ವಿಚಾರ ತಿಳಿಸಿ ಸಂತೈಸುವ ಭಾರ ನಿಮ್ಮದು. ನಾನು ಮನೆಗೆ ಹೋಗುತ್ತೇನೆ. ಬೇಗ ಬಂದುಬಿಡಿ" ಎಂದು ಸೋಮಯಾಜರು ಮನೆಗೆ ಬಂದಿದ್ದರು.

ಕೋಟಿ ಐತಾಳರು ಹೊರಬಾಗಿಲಲ್ಲಿ ನಿಂತು ಎರಡು ಬಾರಿ ಗಿರಿಜಳನ್ನು ಕರೆದಿದ್ದರು. ಹಳೆಯ ನೆನಪುಗಳು ಮರುಕಳಿಸಿದಾಗ ಗಿರಿಜಳಿಗೆ ಎರಡು ಗಂಟೆ ಕಾಲ ಕಳೆದುಹೋಗಿರುವುದು ತಿಳಿಯಲೇ ಇಲ್ಲ. ಐತಾಳರು ಬಾಗಿಲು ತಟ್ಟಿದಾಗ... ಗಿರಿಜಳ ಮನಸ್ಸು ಶಾಂತಿಕೆರಿಪ್ಪದಲ್ಲಿತ್ತು. ಸೋಮಯಾಜರು ಇನ್ನ

ಕ್ಕಿದ್ದಂತೆ ಒಂದು ದಿನ ಬಂದು "ನಿನ್ನ ಹೆಗಡೆಯ ಒಂದು ಕಾಲು ಮುರಿದೇ ಹೋಗಿದೆ ಗಿರಿಜ" ಎಂದಾಗ ಅವಳು ಬೆಚ್ಚಿಬಿದ್ದುದನ್ನು ನೆನಸಿಕೊಂಡಳು. ಕೆಲವು ಕಾಲ ಪೈತ್ಯವಿಡಿದಿದ್ದಳು. ತಾನು ಎಲ್ಲಿದ್ದೇನೆ ಎನ್ನುವುದನ್ನು ಮರೆತಿದ್ದಳೋ ಏನೋ. ಆ ದಿನ ಸೋಮಯಾಜರ ಜೊತೆ ಕಳೆದ ಆ ರಾತ್ರಿಯ ನಿಮಿಷನಿಮಿಷ ಕಡಲಲ್ಲಿ ತೇಲುತ್ತಿದ್ದಳು. ಹಾಗಾಗಿ ಏಕಾಂಗಿ ಎಷ್ಟೋ ಗಟ್ಟಿಯಾಗಿ ಕೂಗಿದರೂ ಅವಳಿಗೆ ಕೇಳಿಸಲೇ ಇಲ್ಲ. ಮೂವತ್ತು ವರ್ಷಗಳ ಹಿಂದಿನ ಆ ಘಟನೆಯ ಸ್ಮರಣೆಯ ಕೊನೆಯಲ್ಲಿ ಸೋಮಯಾಜರ ಬಾಯಿಂದ ಹಿತವಾದ ಒಂದು ಮಾತು ಬಂದಿತ್ತು. "ನಿನ್ನ ಹೆಗಡೆಯ ಅವತಾರ ಮುಗಿಯಿತು. ಮನೆಯಿಂದ ಹೊರಬರುವುದಕ್ಕೆ ಅವನಿಗೆ ಎಲ್ಲಿದೆ ಕಾಲು?" ಎಂದು ಸೋಮಯಾಜರು ಎಷ್ಟು ಸಂಭ್ರಮದಿಂದ ಆ ಮಾತು ಹೇಳಿದ್ದರು. ಅಷ್ಟೇ ಸಂಭ್ರಮದ ನಗು ಮುಖದಲ್ಲಿ ಚೆಲ್ಲುತ್ತಿದ್ದಂತೆ ಮೂರನೆಯ ಬಾರಿ ಏಕಾಂಗಿ ಕರೆದಿದ್ದರು. ಆಗ ಗಿರಿಜಳಿಗೆ ಎಚ್ಚರವಾಯಿತು. ಕಣ್ಣು ತೆರೆದು ನೋಡುತ್ತಾಳೆ ಮನೆ ತುಂಬ ಕತ್ತಲೆ. ಒಂದು ದೀಪ ಕೂಡಾ ಹಚ್ಚಿರಲಿಲ್ಲ. ಏಕಾಂಗಿ "ಗುಡಿಗೆ ಹೋಗಿ ಬರುತ್ತೇನೆ" ಎಂದು ಹೊರಟುಹೋದಾಗ ಇನ್ನೂ ಹಗಲಿತ್ತು. ಎಷ್ಟು ಹೊತ್ತಾಗಿತ್ತೋ ಅದೆಷ್ಟು ಕಾಲ ಗತಸ್ಮರಣೆಯ ಸಾಗರದಲ್ಲಿ ಸಿಲುಕಿ ಒದ್ದಾಡಿದ್ದಳೋ. ಏಕಾಂಗಿಯ ಧ್ವನಿ ಕೇಳಿದಾಗಲೇ ವಾಸ್ತವತೆಯ ಚಿಟ್ಟು ನಾವನ್ನು ಮತ್ತೆ ನೆನಸಿಕೊಂಡು ದುಃಖದಿಂದಲೇ ದೀಪ ಹಚ್ಚಿದಳು. ಬಿಡಿಸಿದ ಚಾಪೆಯನ್ನು ಆಕೆ ಮಡಚಿರಲಿಲ್ಲ. ಏಕಾಂಗಿಗಂತೂ ತಬ್ಬಿಬ್ಬು. ಗಿರಿಜ ತುಟಿಗೆ.... ಬೆಲ್ಲದ ತಟ್ಟೆ....ಏಕಾಂಗಿಯನ್ನು ಆಗಾಗ ಸೆರೆಯಾಳುವುದನ್ನೇ ಮರೆತಿದ್ದಳು. ಅವಳೂ ಬಾಗಿಲು ತೆರೆದಳು. "ಬನ್ನಿ... ಚಾವಡಿಯಲ್ಲಿ ಕುಳಿತವಳಿಗೆ ಏಕೋ ಜೊಂಪು ಹಿಡಿಯಿತು ....." ಏಕಾಂಗಿಯನ್ನು ಬಿನ್ನೈಸಿ ಮೇಲೆದ್ದಳು. ಏಕಾಂಗಿಗೆ ಏನೂ ಅರ್ಥವಾಗಲಿಲ್ಲ. ಗುಡಿಗೆ ಹೊರಟಾಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿ ಮತ್ತೆ ಬಂದಾಗ ಅವರು ನೋಡುವಂತಾಯಿತು. ಹಾಸಿದ್ದ ಚಾಪೆಯನ್ನು ಮತ್ತೆ ಕೊಡವಿ ಗಿರಿಜ ಹೇಳಿದಳು.

"ಅಯ್ಯೋ... ಕುಳಿತುಕೊಳ್ಳಿ. ತಾವು ಹೋದಮೇಲೆ ಕುಳಿತ ಜಾಗದಿಂದ ಏಳಲೇ ಇಲ್ಲ" ಎಂದಳು.

"ಅದೇ ಹಾಗೂ ಸಂತೋಷ ಬಂತು. ನಾನು ಬಂದಾಗ ಬಡಿಸಿದ ಬಟ್ಟ

ಚಾಪೆ ಇದ್ದ ಹಾಗೆ ಇದೆ. ಹೋಗಲಿ....ಗಂಗಾಮೃತದ ಪಾತ್ರೆಗಳನ್ನೂ ತೆಗೆದಿಲ್ಲ ವಲ್ಲ. ಇಷ್ಟು ಹೊತ್ತು ಏನು ಮಾಡುತ್ತಿದ್ದೆ ಗಿರಿಜಾ...."

"ನೀವು ಹೋದಮೇಲೆ ಇಲ್ಲಿಯೇ ಕುಳಿತಿದ್ದೆ...."

"ಅರೆ... ಅಷ್ಟು ಹೊತ್ತು ಹೇಗೆ ಸುಮ್ಮನೆ ಕುಳಿತಿದ್ದೆ..."

"ಸುಮ್ಮನೆ ಕುಳಿತುಕೊಂಡಿಲ್ಲ ಸ್ವಾಮಿ ...ಮಗಳ ಬಂಗಾರದ ಪೆಟ್ಟಿಗೆ ಯನ್ನು ಕಂಡಾಗ ಏನೋ ನನ್ನ ಹಿಂದಿನ ಜೀವನದ ದಿನಗಳೆಲ್ಲಾ ನೆನಪಿಗೆ ಬಂತು. ಅದನ್ನೇ ಯೋಚಿಸುತ್ತಾ ಕುಳಿತೆ. ನಾನೂ ಬೇಕಾದಷ್ಟು ಅನುಭವಿ ಸಿದವಳು. ನನ್ನ ಯಜಮಾನರನ್ನು ಕೇಳಿ ಈ ಊರಲ್ಲಿ ಒಬ್ಬ ಹೆಗಡೆ ಇದ್ದಾನೆ. ಅವನು ಕೊಟ್ಟ ಉಪಟಳ ಅಷ್ಟಿಷ್ಟಲ್ಲ ಅಯ್ಯ. ಈಗ ಒಂದು ಕಾಲು ಕಳೆದುಕೊಂಡು ಮನೆಯಲ್ಲೇ ಇದ್ದಾನೆ ಅನ್ನಿ. ಅವನು ಎಷ್ಟೇ ತೊಂದರೆ ಕೊಟ್ಟರೂ ನನ್ನ ಮಗಳಿಗೆ ಬಂದ ದುರ್ಗತಿ ನನಗೆ ಬರಲಿಲ್ಲ. ಅದನ್ನು ನೆನಸಿಕೊಂಡಾಗ ಮತ್ತೆ ಕಣ್ಣೀರು ಬರುತ್ತದೆ" ಎಂದು ಗಿರಿಜ ಸೆರಗಿನ ಅಂಚನ್ನು ಕಣ್ಣಿನ ರೆಪ್ಪೆಯ ಮೇಲಿಟ್ಟಳು.

"ಹಳೆಯದನ್ನು ಮತ್ತೇಕೆ ನೆನಸಿಕೊಳ್ಳುತ್ತಿ. ಆದದ್ದು ಆಗಿಹೋಯ್ತು"

"ಹಾಗಲ್ಲ ಅಯ್ಯ. ಮಾಲೆಯವರ ಜಾತಿಯಲ್ಲಿ ಹುಟ್ಟಿದ ನಾನಾದರೂ [illegible]ನಾಗಿ ಈ ಊರಲ್ಲಿ ಬದುಕಿದ್ದೇನೆ ಎಂದು ಭಾವಿಸಬೇಡಿ. ಆದರೆ ಪದ್ಮಾ ವತಿ ಬಂದಷ್ಟು ಕೆಟ್ಟ ಸಾವು ನನಗೆ ಬರಲಿಲ್ಲ. ಮಗಳನ್ನು ಕೊಂದು ನನಗೆ ಕಾಣಿಸಿದಂತೆ ನನ್ನನ್ನು ಯಾರೂ ಕೊಲೆಮಾಡುವ ಮನಸ್ಸು ಮಾಡಲಿಲ್ಲ ನೋಡಿ. ಅಂತೂ ನಾವು ದೇವರನ್ನು ಮದುವೆ ಮಾಡಿಕೊಂಡು ನಿಮ್ಮಂತಹ ಯೋಗ್ಯರ ಆಶ್ರಯದಲ್ಲಿದ್ದರೂ ಸುಖವಾಗಿ ನಾಲ್ಕು ಕಾಲ ಬಾಳುತ್ತೇವೆ ಎಂಬ ನಂಬಿಕೆ ಇತ್ತು. ನನ್ನನ್ನು ಶುಂಠಿಕೊಪ್ಪದಿಂದ ಕರೆದುಕೊಂಡು ಬಂದ ಮೇಲೆ ನನ್ನ ಅಯ್ಯನಿಗೂ ಹೆಗಡೆಯಿಂದ ಸುಖ ಸಿಕ್ಕಲಿಲ್ಲ. ನನ್ನ ಮಗಳನ್ನು ನೀವು ಶಿವಮೊಗ್ಗಕ್ಕೆ ಕರೆದುಕೊಂಡು ಹೋದಮೇಲೆ ನಿಮಗೂ ಸುಖ ಸಿಕ್ಕಲಿಲ್ಲ. ಪದ್ಮಾವತಿಯನ್ನು ನಾನು ಹೆತ್ತದ್ದು ಶುಂಠಿಕೊಪ್ಪದಲ್ಲಿ. ಅದೂ ತುಂಬಿದ ಬಸುರಿಯಾಗಿದ್ದಾಗಲೇ. ಹೆಗಡೆಗೆ ಹೆದರಿಕೊಂಡು ಯಜಮಾನರು ರಾತ್ರಿಯೇ ನನ್ನ ದೂಡಿ ಶುಂಠಿಕೊಪ್ಪಕ್ಕೆ ಕಳುಹಿಸಿದರು. ಅಂತೂ ಪದ್ಮಾವತಿಗೆ ಜನ್ಮ ಕೊಡುವ ಯೋಗ ನನ್ನದಾಗಿತ್ತು. ಆದರೆ ಉಳಿಸಿಕೊಳ್ಳುವ ಭಾಗ್ಯ ನನಗಿಲ್ಲ

ವಾಯ್ತು. ನಿಮಗಾದರೂ ಆ ಭಾಗ್ಯವಿತ್ತೆ ? ಮೊಗೆಬೆಟ್ಟಿನಿಂದ ಅವಳನ್ನು ತಾವು ಕರೆದುಕೊಂಡು ಹೋಗಬೇಕಾದರೆ ಎಷ್ಟು ಕಷ್ಟವಾಯ್ತು ಎನ್ನುವುದು ನಿಮಗೆ ಗೊತ್ತಿದ್ದ ವಿಚಾರ. ದೇವರಿಗೆ ನಮ್ಮ ಜಾತಿಯ ಮೇಲೆ ವಿಶ್ವಾಸವೇ ಇಲ್ಲವೆಂದು ಕಾಣುತ್ತದೆ .. ಏಕೆ ನಮಗೆ ಹೆಣ್ಣು ಜನ್ಮ ಕೊಟ್ಟನೋ .. ಹೋಗಲಿ- ನನ್ನ ಹೊಟ್ಟೆಯಲ್ಲಿ ಒಂದು ಗಂಡಾದರೂ ಹುಟ್ಟಿದ್ದರೆ ..” ಎಂದು ಗಿರಿಜ ಸೆರಗಿನಿಂದ ಮುಖ ಮುಚ್ಚಿಕೊಂಡು ಅಳತೊಡಗಿದಳು.

“ನೋಡು ದೇವರ ಮೇಲೆ ಆಣೆಯಿಟ್ಟು ಹೇಳುತ್ತೇನೆ. ನೀನು ಅಳುವುದಾದರೆ ನಾನು ಹೊರಟುಹೋಗುತ್ತೇನೆ” ಎಂದು ಐತಾಳರು ಕೊಂಚ ಏರಿದ ಧ್ವನಿಯಲ್ಲಿ ಹೇಳಿದರು.

“ನನ್ನದು ಹೆತ್ತ ಕರಳು... ನಿಮ್ಮನ್ನು ಕಂಡಾಗ ಮಗಳ ನೆನಪು ಬರುತ್ತದೆ. ಮರೆಯುವುದಕ್ಕೆ ಹೇಗೆ ಸಾಧ್ಯ ?”

“ಮರೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನಗೂ ಗೊತ್ತಿದೆ. ಇದರಲ್ಲಿ ನನ್ನದೇ ಅಪರಾಧ ಹೆಚ್ಚಾಗಿ ಕಾಣುತ್ತದೆ”

“ರಾಮರಾಮ....ಆ ಮಾತು ಹೇಳಿ ನಾನು ಯಾವ ನರಕಕ್ಕೆ ಹೊಗಲಿ....”

“ಯಾವ ಮಾತು ?”

“ತಮ್ಮದು ಅಪರಾಧ ಎಂದು ಯಾವ ಬಾಯಿಂದ ಹೇಳಲಿ ?”

“ನಿಜವಾಗಿಯೂ ಇದರಲ್ಲಿ ತಪ್ಪು ನನ್ನದೆ ..”

“ಛೇ ! ತಾವು ದೇವರಂತಹ ಮನುಷ್ಯರು ಎಂದು ಮಗಳ ಬಾಯಿಂದಲೇ ಕೇಳಿದ್ದೆ....ಆ ಮಾತನ್ನು”

“ಏನು ಬಂತು ಸಾರ್ಥಕ ...ಅವಳಿಗೆ ಸುಖ ಕೊಡುತ್ತೇನೆ ಎಂದು ಕರೆದುಕೊಂಡು ಹೋದವನು ನಾನಲ್ಲವೆ ? ಹಿಂದೆ ಈ ಊರಲ್ಲಿ ಅವಳನ್ನು ಕಂಡು ಯಾರು ಆಸೆ ಪಟ್ಟಿದ್ದರೋ ...ಅವರ ಆಶ್ರಮದಲ್ಲಿಯೇ ಪದ್ಮಾವತಿ ಇದ್ದಿದ್ದರೆ....”

“ಏಕೆ ಅಯ್ಯ ಆ ಮಾತು ಹೇಳುತ್ತೀರಿ .. ಪದ್ಮಾವತಿ ಇಲ್ಲಿಯೇ ಇರುತ್ತಿದ್ದರೆ ಸಾವು ತಪ್ಪುತ್ತಿತ್ತು ಎಂದು ಯಾವ ಭರವಸೆಯಿದೆ ? ಎಲ್ಲಿದ್ದರೂ ಆ ಯೋಗ ತಪ್ಪಿದ್ದಲ್ಲ”

"ಆದರೆ ಈ ಭಾಗದಲ್ಲಿ ನಾನು ಮಾತ್ರ ಒಂದಿಷ್ಟು ಪಾಪ ಕಟ್ಟಿಕೊಂಡೆ ಆಗಲಿ ಗಿರಿಜಾ....ಹೆಚ್ಚಿಗೆ ಮಾತನಾಡುವುದಕ್ಕೆ ಸಮಯವಿಲ್ಲ. ಸೋಮಯಾಜರು ಕಾಯುತ್ತಿದ್ದಾರೋ ಏನೋ .. ಅವರೇ ನನ್ನನ್ನು ಕಳುಹಿಸಿದರು...... ಹೋಗುವ ಮೊದಲು ಒಮ್ಮೆ ಮಾತನಾಡಿ ಬನ್ನಿ ಎಂದು. ನಾಳೆ ಬೆಳಿಗ್ಗೆ ನಾನ ಕೋಟೇಶ್ವರಕ್ಕೆ ಹೋಗುತ್ತೇನೆ. ನೀನು ಒಮ್ಮೆ ಸಮಯಮಾಡಿಕೊಂಡು ಈ ಕಡೆ ಬಾ .. ಪದ್ಮಾವತಿಯ ಸಾವಿನ ಬಗ್ಗೆ ಮಾತ್ರ ಮುಂದೆ ವಿಪರೀತವಾ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಎಷ್ಟಾದರೂ ಅವಳು ದೇವರ ಹೆಂಡತಿ. ಶಿವನನ್ನು ಮದುವೆಯಾದ ಹುಡುಗಿ. ನಿಶ್ಚಯವಾಗಿಯೂ ಅವಳ ಆತ್ಮಕ್ಕೆ ತೃಪ್ತಿಯಾಗು ವಂತೆ ಮುಂದೆ ಸದ್ಗತಿ ಕಾರ್ಯದ ವ್ಯವಸ್ಥೆ ನಾನು ಮಾಡುತ್ತೇನೆ. ಆ ಬಗ್ಗೆ ಏನೂ ಯೋಚನೆ ಬೇಡ. ಕೊಡಿ ತಿಂಗಳ ಜಾತ್ರೆಯ ಅನಂತರ ನಾನೇ ಸೋ ಬೆಟ್ಟಿಗೆ ಬಂದು ನಿನ್ನನ್ನು ಮಾತನಾಡಿಸಿಕೊಂಡು ಹೋಗುತ್ತೇನೆ. ಮೊದಲಿನ ಪ್ರೀತಿ ವಿಶ್ವಾಸ ಮುಂದೆಯೂ ಇರಲಿ ಎಂದೇ ನನ್ನ ಮನದಾಸೆ ...ಬರುತ್ತೇನೆ ...." ಎಂದು ಐತಾಳರು ಎದ್ದುನಿಂತರು.

ಗಿರಿಜಳಿಗೆ ದುಃಖ ತಡೆಯುವುದಕ್ಕಾಗಲಿಲ್ಲ. ಸೆರಗಿನಿಂದ ಮುಖ ಮುಚ್ಚಿಕೊಂಡು ಬಿಕ್ಕಳಿಸುತ್ತಾ "ಹೋಗಿ ಬನ್ನಿ ಅಯ್ಯ ...ದೇವರು ನಿಮಗೆ ಒಳ್ಳೆಯದನ್ನು ಮಾಡಲಿ " ಎಂದಳು. ಐತಾಳರು ಆಗಲೇ ಹೊಸಿಲುದಾಟಿ.... ಮೆಟ್ಟಲು ಇಳಿದು .. ಅಂಗಳಕ್ಕೆ ಬಂದಿದ್ದರು.

ಏಕೋ....ಅರೆತೆರೆದ ಬಾಗಿಲ ಬಳಿ ನಿಂತ ಗಿರಿಜ ಮತ್ತೆ ಐತಾಳರಿಗೆ ಕೇಳಿಸುವಂತೆ,

"ಅಯ್ಯ ರಾತ್ರಿ ಯಜಮಾನರು ಈ ಕಡೆ ಬರುತ್ತಾರೆಯೆ?" ಎಂದು ಕೇಳಿದಳು.

"ಏಕೆ? ಏನಾದರೂ ಹೇಳಬೇಕಿದ್ದರೆ ಹೇಳು....ತಿಳಿಸುತ್ತೇನೆ"

"ಹೇಳುವುದಕ್ಕೆ ಏನಿದೆ ಅಯ್ಯ. ಅವರು ಬಂದರೆ ನನಗೂ ರಾತ್ರಿ ಹೊತ್ತು ಎಷ್ಟೋ ಧೈರ್ಯ" ಎಂದಳು ಗಿರಿಜ.

"ಹೇಗೆ ಬರುತ್ತಾರೆ ಗಿರಿಜಾ,...ನಾನು ಬಂದಿರುವುದೇ ಅಪರೂಪಕ್ಕೆ. ನನ್ನನ್ನು ಬಿಟ್ಟು ಇಲ್ಲಿಗೆ ಬರುತ್ತಾರೆಯೆ?"

"ಹೌದು... ನನ್ನ ಮಂಕುಬುದ್ಧಿಗೆ ಅದು ಹೊಳೆಯಲೇ ಇಲ್ಲ. ನೀವು

ವಾಗ ಅವರಾದರೂ ಹೇಗೆ ಬರುತ್ತಾರೆ. ಬೇಡ ಅಯ್ಯ....ಒಂದು ಕೆಲಸ ಮಾಡಿ. ಈ ಬಂಗಾರದ ಪೆಟ್ಟಿಗೆಯನ್ನು ಅಲ್ಲಿಯೇ ಕೊಟ್ಟುಬಿಡಿ"

"ಏಕೆ?....ಅದು ನಿನ್ನಲ್ಲಿಯೇ ಇರಲಿ ..."

"ಈ ಹುಲ್ಲು ಜೋಪಡಿಯಲ್ಲಿ ನಾನು ಬಂಗಾರ ಇಡುವುದಿಲ್ಲ."

"ಸರಿ... ಹಾಗಿದ್ದರೆ ಕೊಡು" ಎಂದರು ಐತಾಳರು

ಒಡನೆಯೆ ಪೆಟ್ಟಿಗೆಯನ್ನು ತಂದು ಐತಾಳರಿಗೆ ಕೊಡುತ್ತಾ,

"ಅಂತೂ ನನ್ನ ಹಣೆಯಲ್ಲಿ ಬರೆದದ್ದು ...ಮಗಳ ಬಂಗಾರ ಈ ಮನೆಗೆ ಬರುವಂತಾಯ್ತು ..." ಎಂದಳು ತಗ್ಗಿದ ಧ್ವನಿಯಲ್ಲಿ.

"ಅದು ವಿಧಿವಿಚಿತ್ರ ಗಿರಿಜ ."

"ಅವಳು ಸಾಯುವ ಮೊದಲು ನಾನಾದರು ಕಣ್ಣು ಮುಚ್ಚಿದ್ದರೆ "...

"ಒಳಿತು ಕೆಟ್ಟ ...ಆಯುಷ್ಯವನ್ನು ಬರೆದದ್ದು ನಾವಲ್ಲ. ದೇವರ ಮನಸ್ಸಿನಲ್ಲಿ ಏನಿದೆಯೋ ನಾವು ನಾವು ಬಯಸಿದರೂ ವಿಧಿ ಬಿಡಬೇಕಲ್ಲ "

"ಯಾವ ಸುಖಕ್ಕೆಂದು ನಾನು ಬದುಕಬೇಕು?" ಎಂದು ಗಿರಿಜ ಮತ್ತೆ ಹಳಿಯುವದನ್ನು ನೆನಸಿಕೊಂಡು ಕಣ್ಣು ಒದ್ದೆ ಮಾಡಿಕೊಂಡಳು.

"ಹಿಂದೆ ನಡೆದದ್ದನ್ನು ಮರೆತುಬಿಡು. ಇನ್ನು ಇರುವುದು ಮುಂದಿನ ದಿನಗಳು. ಆಗಿಹೋದದ್ದರ ಮೇಲೆ ಚಿಂತಿಸುವುದರಲ್ಲಿ ಯಾವ ಸಾರ್ಥಕವೂ ಇಲ್ಲ. ಕೆಟ್ಟದಿನಗಳು ನಿನ್ನ ಪಾಲಿಗೆ ಕಳೆದುಹೋಯ್ತು. ಉಳಿದ ದಿನಗಳಾದರೂ ನಿನ್ನ ಭಾಗ್ಯಕ್ಕೆ ಸುಖದಾಗಲಿ ಬರುತ್ತೇನೆ" ಎಂದು ಐತಾಳರು ಹೊರಟು ಹೋದರು.

ಮನಸ್ಸಿಲ್ಲದ ಮನಸ್ಸಿನಿಂದ ಮನೆಯ ಬಾಗಿಲು ಹಾಕಿದಳು ಗಿರಿಜ.

ನಮ್ಮ ಪ್ರಕಟಣೆಗಳು

ರಾಗಸುಧಾ	ಎ. ಪಂಕಜ	4	00
ಇಂದ್ರಿ–ಸುಂದ್ರಿ	ದಾಶರಥಿ ದೀಕ್ಷಿತ್	3	00
ಮಧುರಜಾಲ	ಉಷಾದೇವಿ	4	00
ಜೀವರಥ	ವಸಂತಾದೇವಿ ಅ.ನ.ಕೃ.	3	00
ಅನುರಾಗ ಬಂಧನ	ಎ. ಪಂಕಜ	4	00
ಎಲ್ಲಾ ಅವನ ಹೆಸರಿನಲ್ಲೆ (೧)	ತ. ರಾ. ಸು.	4	00
ಎಲ್ಲಾ ಅವನ ಹೆಸರಿನಲ್ಲೆ (೨)	ತ. ರಾ. ಸು.	3	00
ಬಯಲುದಾರಿ	ಭಾರತೀಸುತ	8	00
ಹೆಣ್ಣಿನ ಹಂಬಲ	ನಾಡಿಗೇರ ಕೃಷ್ಣರಾಯ	4	00
ಮನತುಂಬಿದ ಮಡದಿ	ಎಂ. ಕೆ. ಇಂದಿರಾ	4	00
ಎಡಕಲ್ಲು ಗುಡ್ಡದ ಮೇಲೆ	ಭಾರತೀಸುತ	5	00
ವಸುಮತಿ	ವಿಶಾಲಾಕ್ಷಿ ದಕ್ಷಿಣಾಮೂರ್ತಿ	6	00
ಚಿನ್ನದ ಹೂವು	ಪ್ರೇಮಲತಾ ಸುಂದರೇಶನ್	5	00
ಪ್ರೇಮದ ಕಣ್ಣು	ಮ. ನ. ಮೂರ್ತಿ	5	00
ಅನುರಾಗ-ಸುಧಾ	ದಾಶರಥಿ ದೀಕ್ಷಿತ್	4	00
ಕಾರ್ತೀಕ ಸೋಮವಾರ	ರಾ. ಶಿ.	5	00
ಸಾಕಿದ ಅಳಿಯ	ಅ.ನ.ಕೃ. (ಕೊನೆ ಕಾದಂಬರಿ)	5	00
ಶೋಭನ	ಗೀತಾ ಕುಲಕರ್ಣಿ	6	00

ಕೈಲಾಸಂರವರ ಸ್ಮರಣೆ	ಕೆ. ವಿ. ಅಯ್ಯರ್	4	00
ಹೊಸ ಹಾದಿಯಲ್ಲಿ	ಎ. ಪಂಕಜ	5	00
ಗಾಂಪಾಯಣ	ದಾಶರಥಿ ದೀಕ್ಷಿತ್	4	00
ಬ್ರಹ್ಮಚಾರಿ	ಎಂ. ಕೆ. ಇಂದಿರಾ	5	00
ಹೊಂಬಿಸಿಲು	ಉಷಾ ನವರತ್ನರಾವ್	6	00
ಮಂಜು ಕರಗಿತು	ಎಂ. ಸಿ. ಪದ್ಮಾ	6	00
ಸಂಶಯದ ಸುಳಿ	ಮ. ನ. ಮೂರ್ತಿ	5	00
ಕ್ಷಮೆ ಇರಲಿ ಪ್ರಭುವೆ	ಸೂರ್ಯನಾರಾಯಣ ಚಡಗ	8	00
ಮೋಡಮ್ಮನ ಗಂಡ	ಬೀಚಿ	5	00
ಸುಪ್ರಭಾತ	ಎಂ. ಸಿ. ಪದ್ಮಾ	6	00
ಬೆಂಕಿಯ ಮಳೆ	ಭಾರತೀಸುತ	8	00
ಮನೆತನದ ಗೌರವ	ಬೀಚಿ	6	00
ಹೂವು ಕಾವು	ಬಿ. ಪುಟ್ಟಸ್ವಾಮಯ್ಯ	8	00
ಸಕ್ಕರೆ ಮೂಟೆ	ಬೀಚಿ	6	00
ಮಂಗಳ ಯಾತ್ರೆ	ಎಂ. ಸಿ. ಪದ್ಮಾ	6	00
ಕಲಾದರ್ಶಿ	ಎಂ. ಕೆ. ಇಂದಿರಾ	6	00
ಗೃಹಿಣಿ	ಶ್ರೀನಿವಾಸರಾವ್ ಕೊರಟಿ	7	00
ಅನುಕಂಪ	ಮ. ನ. ಮೂರ್ತಿ	4	00
ಒಲವಿನ ಬದುಕು	ಉಷಾ ನವರತ್ನರಾವ್	5	00
ದೈವಚಿತ್ತ	ವಸಂತಾದೇವಿ ಅ. ನ. ಕೃ.	4	00
ಬೆಸುಗೆ	ಅಶ್ವಿನಿ	8	00
ಕಣ್ಮಣಿ	ಶಾರದೆ	8	00

ಹರಿದ ಉಯಿಲು	ರಾ. ಶಿ.	8	00
ಪ್ರೇಮಮಯಿ	ಎಂ. ಸಿ. ಪದ್ಮಾ	8	00
ಜೇನು ನಂಜು	ಎಚ್. ಎಸ್. ಗೋಪಾಲರಾಯ	6	00
ತಪೋವನದಲ್ಲಿ	ಎಂ. ಕೆ. ಇಂದಿರಾ	6	00
ಬಂಗಾರದ ಸರಪಣಿ	ಪುಷ್ಪಾ ಎಂ. ರಾವ್	6	00
ಬೇಡದ ಸೊಸೆ	ಮ. ನ. ಮೂರ್ತಿ	6	00
ದೇವರ ಹೆಂಡತಿ	ಸೂರ್ಯನಾರಾಯಣ ಚಡಗ	6	00

ಬರಲಿರುವ ಕಾದಂಬರಿಗಳು

ಆಂದೋಲನ	ಉಷಾ ನವರತ್ನರಾಮ್
ಅನುರಾಗಿಣಿ	ವಿಶಾಲಾಕ್ಷಿ ದಕ್ಷಿಣಾಮೂರ್ತಿ
ನರ್ತಕಿ	ಉಷಾದೇವಿ
ಮಣ್ಣಿನ ತಿಲಕ	ಗೀತಾಪ್ರಿಯ
ಅಮ್ಮನವರ ಇಚ್ಛಾ	ಬೀಚಿ
ಪ್ರೇಮ ವಸಂತ	ಎಂ. ಸಿ. ಪದ್ಮಾ
ಮನೋನಂದನ	ಡಾ|| ಎಂ. ಶಿವರಾಂ
ವಜ್ರದುಂಗುರ	ನಾ. ರಾಜಣ್ಣ
ಬೆಳುವಲದ ಮಡಿಲಲ್ಲಿ	ಹೆಚ್. ದೇವೀರಪ್ಪ
ಸುವರ್ಣ ಸೇತುವೆ	ಹೆಚ್. ಜಿ. ರಾಧಾದೇವಿ

ವಿ ತ ರ ಣೆ ಗಾ ರ ರು

ಗೀ ತಾ ಏ ಜ ನ್ಸೀ ಸ್

ಸಗಟು ಪುಸ್ತಕ ವ್ಯಾಪಾರಿಗಳು

ಬಳೇಪೇಟೆ ಚೌಕ, ಬೆಂಗಳೂರು 560053